
# ಮುನಿಶಾಮಿ ಮತ್ತು ಮಾಗಡಿ ಚಿರತೆ

ಕೆ.ಪಿ.ಪೂರ್ಣಚಂದ್ರ ತೇಜಸ್ವಿ



894.814 301
TEJ N98
ಗ್ರಂಥ ಸ್ವಾಮ್ಯ ವಿಭಾಗ

11,060 1998

# ಮುನಿಶಾಮಿ ಮತ್ತು ಮಾಗಡಿ ಚಿರತೆ

(ಕಾಡಿನ ಕಥೆಗಳು ಭಾಗ ೪)

(ಆಂಡರ್ಸನ್ ಕಥೆಗಳ ಭಾವಾನುವಾದ)

ಕೆ.ಪಿ.ಪೂರ್ಣಚಂದ್ರ ತೇಜಸ್ವಿ

ಪುಸ್ತಕ ಪ್ರಕಾಶನ
೯೧, ೯ನೇ ಮೇನ್ ರೋಡ್
ಸರಸ್ವತಿಪುರಂ ಮೈಸೂರು ೫೭೦ ೦೦೯

META ENTERED

**Munishami mattu magadi chirate** : Translitaration of **Anderson's** Real life Experiances By Sri K.P.Purnachandra Tejasvi, Hand Post, Mudigere -577 132, Chikmagalur Dist. KARNATAKA St.

ಹಕ್ಕುಗಳು:
ಲೇಖಕರವು

**ಬೆಲೆ ರೂ 45/=**

ಮೊದಲನೆಯ ಮುದ್ರಣ ೧೯೯೮

ಪ್ರಕಾಶಕರು:-
ಪುಸ್ತಕ ಪ್ರಕಾಶನ
೯೧, ೯ನೇ ಮೇನ್
ಸರಸ್ವತಿ ಪುರಂ
ಮೈಸೂರು - ೫೭೦ ೦೦೯
ಫೋನ್ ನಂ. 545774, std.0821

87119 CR

ಪೋಸ್ಟ್ ಮುಖಾಂತರ ಪುಸ್ತಕಗಳನ್ನು ತರಿಸಿಕೊಳ್ಳುವವರಿಗೆ:
ಪುಸ್ತಕ ಪ್ರಕಾಶನ
ಬುಕ್ ಪೋಸ್ಟ್ ಸರ್ವಿಸ್
ಪೋಸ್ಟ್ ಬಾಕ್ಸ್ ನಂ.೫೮
ಮೂಡಿಗೆರೆ - ೫೭೭ ೧೩೨
ಚಿಕ್ಕಮಗಳೂರು ಜಿಲ್ಲೆ. ಫೋನ್ ನಂ. 20353,50202 std.08263

ಟೈಪ್ ಸೆಟ್ಟಿಂಗ್ ಮತ್ತು ಪುಸ್ತಕ ವಿನ್ಯಾಸ:-
ಪುಸ್ತಕ ಪ್ರಕಾಶನ.
ತಂತ್ರಜ್ಞರು:-
ಕುಮಾರಿ ಅನುಪ
ಶ್ರೀಮತಿ ರಾಜೇಶ್ವರಿ
ರಾಘವೇಂದ್ರ
ಬಾಪು ದಿನೇಶ್

894.814 301

Software Support By S.R.G

ಮುದ್ರಣ:-
ಸ್ಕಂದ ಆಫ್‌ಸೆಟ್ ಮುದ್ರಣಾಲಯ
ಮೈಸೂರು - ೫೭೦ ೦೦೯

# ಪರಿವಿಡಿ


| ಹೆಸರು | ಪುಟಸಂಖ್ಯೆ |
| --- | --- |
| ಮುನಿಶಾಮಿ ಮತ್ತು ಮಾಗಡಿ ಚಿರತೆ | ..........೧ |
| ಅಲ್ಲಾಭಕ್ಷಿಯ ಪುಂಡುಕರಡಿ | ..........೨೭ |
| ಬಾಳೆತೋಟದ ಸ್ವಾಮಿ | ..........೪೪ |
| ರಾಂಪುರದ ಒಕ್ಕಣ್ಣ | ..........೮೨ |

# ಮುನಿಶಾಮಿ ಮತ್ತು ಮಾಗಡಿ ಚಿರತೆ

## ೧



ನಾನೀಗ ವಾಸ ಮಾಡುತ್ತಿರುವ ಬೆಂಗಳೂರು ಬಂಗಾಳ ಕೊಲ್ಲಿ ದಡದಲ್ಲಿರುವ ಮದರಾಸಿನಿಂದ ಅರಬ್ಬೀಸಮುದ್ರದ ದಡದಲ್ಲಿರುವ ಮಂಗಳೂರಿನವರೆಗೆ ಒಂದು ನೇರ ಗೀರೆಳೆದರೆ ಆ ಗೀರಿನ ನಡು ಮಧ್ಯೆ ಈ ಊರು ಬರುತ್ತದೆಂದು ಹೇಳಬಹುದು. ಭಾರತದ ದಕ್ಷಿಣ ಪ್ರಸ್ಥಭೂಮಿಯ ಮೇಲಿರುವ ಬೆಂಗಳೂರು ಸಮುದ್ರಮಟ್ಟದಿಂದ ಮೂರು ಸಾವಿರ ಅಡಿಗೂ ಕೊಂಚ ಮೇಲಿರುವುದರಿಂದ ಇಲ್ಲಿ ಕೊಂಚ ಕಾಲ ವಾಸ ಮಾಡಿದ ಯಾವನೂ ಇಲ್ಲಿನ ಆಪ್ಯಾಯಮಾನ ಹವಾಗುಣದಿಂದಾಗಿ ಈ ಊರನ್ನು ಎಂದಿಗೂ ಮರೆಯುವುದಿಲ್ಲ. ಅಷ್ಟು ಸೆಖೆಯೂ ಇಲ್ಲದ ಅಷ್ಟು ಚಳಿಯೂ ಇಲ್ಲದ ಈ ಊರಿನ ಚಳಿಗಾಲದ ಮಂಜು ಕವಿದ ಮುಂಜಾವುಗಳೂ ವರ್ಣರಂಜಿತ ಸಂಜೆಗಳೂ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿಯುತ್ತವೆ. ಬೇಸಗೆಯಲ್ಲಿ ಸಹ ನಡು ಮಧ್ಯಾಹ್ನ ಬಿಟ್ಟರೆ ಮಿಕ್ಕೆಲ್ಲಾ ಕಾಲವೂ ತಣ್ಣಗಿರುತ್ತದೆ. ಹಾಗಾಗಿ ಮಳೆಯೂ ಹೆಚ್ಚಿಲ್ಲದ, ಬಿಸಿಲೂ ಹೆಚ್ಚಿಲ್ಲದ, ಚಳಿಯೂ ಹೆಚ್ಚಿಲ್ಲದ ಹವಾ ನಿಯಂತ್ರಿತ ಊರು ಇದು. ಕನ್ನಡ ಭಾಷೆಯ 'ಬೆಂಗಾಳು ಊರು' ಎನ್ನುವ ಪದವೇ ಇಂಗ್ಲಿಷಿನವರ ಬಾಯಲ್ಲಿ 'ಬ್ಯಾಂಗಲೂರ್' ಆಗಿರುವುದು. ಬೆಂಗಳೂರು ಎನ್ನುವ ಪದದ

ಅರ್ಥ 'ಕಾಳುಗಳ ಊರು' ಎಂದು. ಇಲ್ಲಿ ದೊರೆಯುವ ತಾಜಾ ವಿದೇಶೀ ಮತ್ತು ಸ್ವದೇಶೀ ತರಕಾರಿಗಳನ್ನು ತಿಂದವರೆಲ್ಲರೂ ಈ ಊರಿನ ಅನ್ವರ್ಥ ನಾಮವೇ ಅಂಕಿತ ನಾಮವಾಗಿರುವುದನ್ನು ಅರಿಯುತ್ತಾರೆ

ಎರಡನೇ ಮಹಾ ಯುದ್ಧ ಮುಗಿಯುವವರೆಗೂ ಬೆಂಗಳೂರು 'ನಗರ' ಎಂದು ಹೇಳಿಸಿಕೊಳ್ಳುವಂತಿರಲಿಲ್ಲ. ರಕ್ಷಣಾ ದೃಷ್ಟಿಯಿಂದ ಇದಕ್ಕಿರುವ ಮಹತ್ವ ಮತ್ತು ಕೈಗಾರಿಕೆಗಳಿಗೆ ಇಲ್ಲಿರುವ ಸೌಲಭ್ಯ ಎಲ್ಲವನ್ನೂ ಸರ್ಕಾರ ಮನಗಂಡ ಮೇಲೆ ಬೆಂಗಳೂರು ಇದೀಗ ಭಾರತದಲ್ಲೇ ಜನಪ್ರಿಯ ನಗರವಾಗಿ ರೂಪುಗೊಳ್ಳುತ್ತಿದೆ. ಮಹಾಯುದ್ಧ ಸಮಯದಲ್ಲಿ ಹಾಗೂ ಅನಂತರ ಭಾರತದ ಎಲ್ಲೆಡೆಗಳಿಂದ ಇಲ್ಲಿಗೆ ನಾನಾ ಕಾರಣಕ್ಕಾಗಿ ವಲಸೆ ಬಂದ ಜನಗಳಿಂದ ಈ ಊರಿನ ಜನಸಂಖ್ಯೆ ಮೂರರಷ್ಟಾಗಿ, ಕೈಗಾರಿಕೆಗಳೂ ವಿಪರೀತ ಹೆಚ್ಚುತ್ತಿವೆ. ಬೆಂಗಳೂರು ಈಗ ಬೆಳೆಯುತ್ತಿರುವ ನಗರ.

ಆದರೆ ಇದೆಲ್ಲ ಬೆಂಗಳೂರನ್ನು ವರ್ಣಿಸುವ ಸರಿಯಾದ ವಿವರಣೆಯಲ್ಲ ಬಿಡಿ! ನಾನೊಂದು ಸುಂದರವಾದ ಬೆಂಗಳೂರೆಂಬ ಊರಲ್ಲಿ ಬದುಕಿದ್ದೇನೆ ಎಂದಿದ್ದರಾಗಿತ್ತು. ಬೆಂಗಳೂರು ಅಸಂಖ್ಯಾತ ಬೆಟ್ಟಗುಡ್ಡಗಳಿಂದ ಸುತ್ತುವರಿದಿರುವ, ಬೆಟ್ಟಗುಡ್ಡಗಳ ಮೇಲೇ ಇದೆ. ಈ ಊರಿನ ಯಾವುದೇ ಎತ್ತರದ ದಿಣ್ಣೆಯ ಮೇಲೆ ನಿಂತು ನೀವು ಸುತ್ತಮುತ್ತ ವೀಕ್ಷಿಸಿದರೆ ಪಶ್ಚಿಮ ಪೂರ್ವ ದಕ್ಷಿಣ ದಿಕ್ಕುಗಳಲ್ಲೆಲ್ಲ ಎತ್ತರವಾದ ಪರ್ವತಗಳನ್ನು ನೋಡಬಹುದು. ಇವೆಲ್ಲ ಹೆಚ್ಚು ಕಡಿಮೆ ಬೆಂಗಳೂರಿಂದ ಮುವ್ವತ್ತೈದು ಮೈಲಿ ಸುತ್ತಳತೆಯೊಳಗೇ ಬರುತ್ತವೆ. ಈ ಬೆಟ್ಟಗಳಲ್ಲಿ ಕೆಲವು ಸಮುದ್ರ ಮಟ್ಟದಿಂದ ನಾಲ್ಕುಸಾವಿರ ಅಡಿ ಎತ್ತರದವರೆಗೂ ಇವೆ. ಉತ್ತರದಲ್ಲಿರುವ ಬೆಟ್ಟವೇ ಇದರಲ್ಲಿ ಅತ್ಯಂತ ಎತ್ತರವಾದುದು. ಈ ಎರಡುಮೂರು ಬೆಟ್ಟಗಳ ಸಮುಚ್ಚಯವನ್ನೇ 'ನಂದೀದುರ್ಗ' ಎಂದು ಕರೆಯುತ್ತಾರೆ ದುರ್ಗ ಅಂದರೆ ಬೆಟ್ಟದ ಮೇಲಿನ ಕೋಟೆ ಎಂದು ಅರ್ಥ. ಈ ಬೆಟ್ಟಗಳಲ್ಲಿ ಉತ್ತರಕ್ಕಿರುವ ಬೆಟ್ಟದ ಶಿಖರದ ಮೇಲೆ ಹಳೆಯದೊಂದು ಶಿಥಿಲವಾದ ಕೋಟೆಯ ಅವಶೇಷಗಳಿವೆ. ಇದನ್ನು ಸುಲಭವಾಗಿ ದುರಸ್ತಿ ಮಾಡಿ ಸರಿಪಡಿಸಬಹುದು. ಇದು ಮೈಸೂರನ್ನಾಳಿದ ಮುಸ್ಲಿಂ ದೊರೆ 'ಮೈಸೂರು ಹುಲಿ' ಟಿಪ್ಪೂ ಸುಲ್ತಾನ್ ಕಟ್ಟಿದ್ದೆಂದು ಹೇಳುತ್ತಾರೆ. ಅಲ್ಲೊಂದು ಕಡಿದಾದ ಕಮರಿ ಇದೆ. ಏನಿಲ್ಲೆಂದರೂ ಅದು ಕನಿಷ್ಠ ಆರುನೂರು ಅಡಿ ಆಳದ ಪ್ರಪಾತ. ಇದಕ್ಕೆ 'ಟಿಪ್ಪೂ ಡ್ರಾಪ್' ಎಂದು ಹೆಸರು. ಟಿಪ್ಪೂ ಸುಲ್ತಾನ್ ಈ ಪ್ರಪಾತದ ಅಂಚಿನಲ್ಲೊಂದು ಉದ್ದವಾದ ಹಲಗೆ ಇಟ್ಟು, ತನಗೆ ತೊಂದರೆ ಕೊಟ್ಟ ಖೈದಿಗಳನ್ನೂ ವೈರಿಗಳನ್ನೂ ಕಣ್ಣಿಗೆ ಬಟ್ಟೆ ಕಟ್ಟಿ ಆ ಹಲಗೆ ಮೇಲೆ ನಡೆದು ತುದಿವರೆಗೆ ಹೋಗಿ ವಾಪಸ್ ಬರಲು ಹೇಳುತ್ತಿದ್ದನಂತೆ. ತುದಿವರೆಗೂ ಹೋಗಿ ಹಿಂದಿರುಗಿ ಬಂದವರನ್ನು ಸೆರೆಯಿಂದ ಬಿಡುಗಡೆ ಮಾಡುತ್ತಿದ್ದನಂತೆ. ಆದರೆ ಹಾಗೆ ಹೋಗಿಬಂದು ಜೀವ ಉಳಿಸಿಕೊಂಡವರ ದಾಖಲೆ ಯಾವುದೂ ಚರಿತ್ರೆಯಲ್ಲಿ ಸಿಕ್ಕುವುದಿಲ್ಲ. ಅತ್ತಿತ್ತ ತುಯ್ದಾಡುತ್ತಿದ್ದ, ಅಥವಾ ತುಯ್ದಾಡುವಂತೆ ಮಾಡುತ್ತಿದ್ದ ಆ ಹಲಗೆ ಮೇಲೆ ನಡೆದುಹೋಗಿ ಕ್ಷೇಮವಾಗಿ ಹಿಂದಿರುಗುವುದು ಯಾರಿಗೂ ಸಾಧ್ಯವೇ ಇರಲಿಲ್ಲೇನೋ!

ಈ ಪ್ರತೀತಿಯ ಬಗ್ಗೆ ಇತಿಹಾಸಕಾರರು ಸಮರ್ಥಿಸಲಾಗದಷ್ಟು ಗೊಂದಲದಲ್ಲಿದ್ದಾರೆ.

ಬೆಂಗಳೂರಿನ ಪೂರ್ವಕ್ಕಿರುವ ಬೆಟ್ಟಗಳ ಸಮುಚ್ಚಯಕ್ಕೆ ಶಿವನಗಂಗಾ ಎಂದು ಹೆಸರು. ಅದರ ನೆತ್ತಿಯಲ್ಲಿ ಒಂದು ಚಿಕ್ಕ ದೇವಸ್ಥಾನ ಇದೆ. ಹಿಂದೂಗಳಿಗೆ ಇದೊಂದು ಪವಿತ್ರ ಯಾತ್ರಸ್ಥಳ. ಆದರ ನೆತ್ತಿಯಲ್ಲೊಂದು ಬಾವಿ ಇದೆ. ಅದೆಷ್ಟು ಆಳ ಇದೆಯೆಂದರೆ ಅದಕ್ಕೆ ತಳವೇ ಇಲ್ಲವೆಂದು ಹೇಳುತ್ತಾರೆ. ಕೆಲವರು ಅದು ಅಲ್ಲಿಂದ ಮುವತ್ತೈದು ಮೈಲಿ ದೂರವಿರುವ ಬೆಂಗಳೂರುವರೆಗೂ ಇರುವ ಭೂಮ್ಯಂತರ್ಗತ ಸುರಂಗ ಎಂದು ಹೇಳುತ್ತಾರೆ. ಇವುಗಳ ಸತ್ಯಾಸತ್ಯಗಳನ್ನು ಪರೀಕ್ಷೆ ಮಾಡುವವರು ಯಾರು?

ಪಶ್ಚಿಮಕ್ಕಿರುವ ಬೆಟ್ಟಗಳ ಶ್ರೇಣಿಯೇ ಮಾಗಡಿ ಬೆಟ್ಟಗಳ ಸಮುಚ್ಚಯ. ದೂರದಿಂದ ನೋಡಲು ನುಣ್ಣಗಿರುವ ಒಂದೇ ಗುಡ್ಡದಂತೆ ಕಾಣುವ ಇದು ಹತ್ತಿರ ಹೋದರೆ ಒಂದರ ಹಿಂದೊಂದು ಇರುವ ಗುಡ್ಡ ಎಂದು ಗೊತ್ತಾಗುತ್ತದೆ. ಇವೆರಡರ ನಡುವೆ ಇರುವ ಕಣಿವೆಯಲ್ಲಿ ಬಹು ದಟ್ಟವಾದ ಕಾಡಿದೆ. ಎಷ್ಟು ದಟ್ಟವಾದ ಕಾಡೆಂದರೆ ಒಳನುಸುಳಲು ಅಸಾಧ್ಯವಾದಷ್ಟು ನಿಬಿಡವಾಗಿದೆ. ಅಲ್ಲದೆ ಈ ಪ್ರಯತ್ನದಲ್ಲಿ ಅಲ್ಲಿರುವ ಪಾಚಿಗಟ್ಟಿದ ಕಲ್ಲುಬಂಡೆಗಳ ಮೇಲೆ ನಿಮ್ಮ ಕಾಲೇನಾದರೂ ಜಾರಿದರೆ ಟಿಪ್ಪೂ ಡ್ರಾಪ್‌ನಲ್ಲಿ ಕಾಲು ಜಾರಿದವರಿಗಾದ ಗತಿಯೇ ನಿಮಗೆ ಗ್ಯಾರೆಂಟಿ!

ಈ ಬೆಟ್ಟಗಳೇ ನಾನು ಹೇಳಹೊರಟಿರುವ ಕಥೆಯ ಹಿನ್ನೆಲೆ ಹೊರತು ಬೆಂಗಳೂರಲ್ಲ. ಮಾಗಡಿ ಊರಿನ ಜನರನ್ನೆಲ್ಲಾ ಭಯಭ್ರಾಂತರನ್ನಾಗಿ ಮಾಡಿದ ಚಿರತೆ ಇಲ್ಲೇ ಗವಿಯಲ್ಲಿ ಅಡಗಿಕೊಂಡು ಕುಳಿತಿದ್ದು.

ಮಾಗಡಿ ಬೆಟ್ಟಗಳು ದಟ್ಟವಾದ ಕುರುಚಲು ಕಾಡಿನಿಂದ ಕೂಡಿದ ಚಿಕ್ಕಪುಟ್ಟ ಬೆಟ್ಟಗುಡ್ಡಗಳಿಂದ ಸುತ್ತುವರಿದಿದೆ. ಮಾಗಡಿ ದಕ್ಷಿಣಕ್ಕೆ ಸುಮಾರು ಎಪ್ಪತ್ತು ಮೈಲಿ ದೂರ ಕಾವೇರಿ ನದಿವರೆಗೆ, 'ಸಂಗಮ' ಎನ್ನುವ ಜಾಗದವರೆಗೂ ಹಬ್ಬಿರುವ ಸರ್ಕಾರಿ ಮನ್ನಾ ಜಂಗಲ್ ಇದೆ. ಇದರ ಇನ್ನೊಂದು ಪಾರ್ಶ್ವದಲ್ಲಿ ಕ್ಲೋಸ್‌ಪೇಟೆ ಕಾನಕಾನಹಳ್ಳಿವರೆಗೂ ಒತ್ತೊತ್ತಾದ ಕಲ್ಲುಗುಡ್ಡಗಳಿಂದ ಕೂಡಿದ ದಟ್ಟವಾದ ಕುರುಚಲು ಕಾಡಿದೆ. ಈ ಜಾಗವಂತೂ ಲೆಕ್ಕವಿಲ್ಲದಷ್ಟು ಚಿರತೆಗಳ ತವರು ಮನೆ. ಶಿಕಾರಿದಾರರ ಸ್ವರ್ಗವೆಂದೇ ಹೇಳಬಹುದು. ಚಿಕ್ಕ ಹುಡುಗನಾಗಿರುವ ನನ್ನ ಮಗನೇ ಇಲ್ಲಿ ನಲವತ್ತು ಚಿರತೆ, ಒಂದು ಡಜನ್ ಕರಡಿಗಳನ್ನು ಹೊಡೆದಿದ್ದಾನೆಂದರೆ ಮತ್ತೇನು!

ಮಾಗಡಿ ಬೆಟ್ಟಗಳ ಪಶ್ಚಿಮಕ್ಕೆ ಅನೇಕ ಚದರಮೈಲು ವಿಸ್ತಾರದ ಕುರುಚಲು ಕಾಡಿದೆ. ಇಲ್ಲಿ ಕೃಷ್ಣಮೃಗಗಳು, ನವಿಲು, ಗವುಜಲು ಹಕ್ಕಿಗಳು, ಕಾಡುಕೋಳಿ ಚಿಟ್ಟುಕೋಳಿಗಳು ಬೇಕಷ್ಟು ಇವೆ. ಈ ಬೆಟ್ಟಗುಡ್ಡಗಳಿಂದಾವೃತವಾದ ಪ್ರದೇಶದಿಂದ ಒಂದು ಚಿಕ್ಕ ನದಿ ಮುವತ್ತೈದು ಮೈಲು ದೂರದಲ್ಲಿರುವ ಬೆಂಗಳೂರಿನ ಕಡೆಗೆ ಹರಿಯುತ್ತದೆ. ಬೆಂಗಳೂರಿನಿಂದ ಇಪ್ಪತ್ತಮೂರನೆ ಮೈಲಿಕಲ್ಲಿನ ಹತ್ತಿರ ರಸ್ತೆ ಅಡ್ಡ ಹಾಯುವ ಈ ನದಿಯ ಹೆಸರು 'ಅರ್ಕಾವತಿ.' ಈ ನದಿಗೆ ಅಲ್ಲೊಂದು ಅಣೆಕಟ್ಟೆ ಕಟ್ಟಿದ್ದಾರೆ. ಅದೇ ತಿಪ್ಪೆಗೊಂಡನಹಳ್ಳಿ

ಜಲಾಶಯ. ಈ ಜಲಾಶಯದ ಜಲಾನಯನ ಪ್ರದೇಶ ಸಾಕಷ್ಟು ವಿಸ್ತಾರವಾಗಿರುವುದರಿಂದ ಬೆಂಗಳೂರಿಗೆ ಇದು ವರ್ಷವಿಡೀ ನೀರು ಪೂರೈಸುತ್ತದೆ. ಬೆಂಗಳೂರಿಗೆ ಎಂಥ ಬರಗಾಲದಲ್ಲೂ ಈವರೆಗೆ ನೀರಿನ ತೊಂದರೆಯಾಗಿಲ್ಲ. ಈ ಅಣೆ ಪಕ್ಕ ಇರುವ ಭೀಮಾಕಾರದ ಪಂಪುಗಳು ಇಪ್ಪತ್ಮೂರು ಮೈಲು ದೂರವಿರುವ ಬೆಂಗಳೂರಿಗೆ ಸತತವಾಗಿ ನೀರು ಪಂಪ್ ಮಾಡುತ್ತವೆ.

ಈ ಚಿರತೆ ನಾಟಕ ಶುರುವಾಗುವ ವೇದಿಕೆಯ ಪರಿಸರವನ್ನೆಲ್ಲಾ ಸಮಗ್ರವಾಗಿ ನಿಮಗೆ ವಿವರಿಸಿದ್ದೇನಲ್ಲವೆ! ನಾನು ಚಿರತೆ ಎನ್ನುವ ಪದ ಉಪಯೋಗಿಸಿರುವುದರಿಂದ ಇದರಲ್ಲೇನೋ ವಿಶೇಷವಿದೆಯೆಂದು ನೀವು ಭಾವಿಸ ಬೇಡಿ. 'ಲೆಪರ್ಡ' 'ಪ್ಯಾಂಥರ್' 'ಚಿರತೆ,' 'ಕುರ್ಕ' ಎಲ್ಲಾ ಹೆಸರುಗಳೂ ಇಂಡಿಯಾ ದೇಶದಲ್ಲಿ ಒಂದೇ ಪ್ರಾಣಿಗೆ ಅನ್ವಯಿಸುತ್ತದೆ.

ನಾನು ಮುಂದೆ ಹೇಳುವ ಘಟನಾವಳಿಗಳು ಎರಡನೇ ಮಹಾಯುದ್ಧ ಶುರುವಾಗುವುದಕ್ಕೂ ಮೊದಲು ಶುರುವಾಗಿದ್ದು.

ಈ ಚಿರತೆ ಮೊದಲು ಮಾಗಡಿ ಬೆಟ್ಟಗಳ ತಪ್ಪಲಿನಲ್ಲಿದ್ದ ಒಂದೆರಡು ಹಳ್ಳಿಗಳ ಕೆಲವಾರು ಕುರಿಗಳನ್ನೂ ಒಂದೆರಡು ನಾಯಿಗಳನ್ನೂ ಹಿಡಿದು ತಿಂದುಹಾಕಿತು. ಗ್ರಾಮಸ್ಥರು ಯಾರೂ ಇದನ್ನು ಗಂಭೀರವಾಗಿ ಪರಿಗಣಿಸದೆ ಗೊಣಗಾಡಿಕೊಂಡರು. ಏಕೆಂದರೆ ಶತಮಾನಗಳಿಂದ ಚಿರತೆಗಳು ಗ್ರಾಮಸ್ಥರ ಕುರಿಗಳನ್ನೂ ನಾಯಿಗಳನ್ನು ಆಗೀಗ ಹೊತ್ತೊಯ್ಯುವ ಕಿಡಿಗೇಡಿ ಕೆಲಸ ನಡೆಸುತ್ತಲೇ ಇದ್ದುವು. ರೈತರೂ ಚಿರತೆಗಳೂ ಆ ಪರಿಸರದಲ್ಲಿ ಒಟ್ಟೊಟ್ಟಿಗೇ ವಿಕಾಸವಾಗಿ ಸಹ ಬಾಳ್ವೆ ನಡೆಸುತ್ತಿದ್ದವರು.

ಕಾಲ ಕಳೆಯಿತು! ನಿಧಾನವಾಗಿ ಆ ಚಿರತೆಗೆ ಧೈರ್ಯ ಹೆಚ್ಚಾಯ್ತು! ಕೆಲವು ದಿನಗಳ ಮೇಲೆ ಆ ಚಿರತೆ ಒಂದೆರಡು ಎತ್ತುಗಳನ್ನೂ ಕೆಲವು ಹಸುಗಳನ್ನೂ ಹಿಡಿದು ತಿಂದುಹಾಕಿತು. ಇದು ಮಾತ್ರ ಸ್ವಲ್ಪ ಗಂಭೀರವಾದ ಕ್ರಿಮಿನಲ್ ಅಪರಾಧವೇ ಸರಿ! ಏಕೆಂದರೆ ಬಸವ ಹಿಂದೂಗಳಿಗೆ ಪೂಜ್ಯ ವಸ್ತು. ಅವರು ಮಾಂಸಾಹಾರ ಮಾಡುವವರಾದರೂ ದನದ ಮಾಂಸ ಮಾತ್ರ ಮುಟ್ಟುವವರಲ್ಲ. ಅಷ್ಟೇ ಅಲ್ಲ, ಎತ್ತುಗಳೂ ಹೋರಿಗಳೂ ರೈತರ ಅನೇಕ ಕಷ್ಟಕರವಾದ ಕೆಲಸಗಳಲ್ಲಿ ಭಾಗಿಗಳಾಗಿ ದುಡಿಯುತ್ತವೆ. ಅವು ಅವರ ಹೊಲ ಗದ್ದೆಗಳನ್ನು ಉಳುಮೆ ಮಾಡುತ್ತವೆ. ಅವರ ಗಾಡಿಗಳನ್ನು ಎಳೆದು ಸಾಮಾನು ಸರಂಜಾಮು ಸಾಗಿಸುತ್ತವೆ. ಮನೆ ಕಟ್ಟುವಾಗ ಗಾರೆ ಅರೆಯಲು ಕಲ್ಲು ಎಳೆಯುತ್ತವೆ. ಹೀಗಾಗಿ ಎತ್ತುಗಳಿಗೆ ಪೂಜ್ಯ ಸ್ಥಾನವಲ್ಲದೆ ರೈತರ ಆರ್ಥಿಕ ಸ್ಥಿತಿಗತಿಗಳಲ್ಲಿ ಮಹತ್ವದ ಪಾತ್ರ ಸಹ ಇದೆ. ಇಷ್ಟಾದರೂ ಅವರು ಚಿರತೆ ತಪ್ಪನ್ನು 'ತಿಳಿಯದೆ ಮಾಡಿದ ಅಪರಾಧ'ವೆಂದು ಕ್ಷಮಿಸುತ್ತಿದ್ದರೋ ಏನೋ! ಆದರೆ ಹಸುವನ್ನು ಕೊಲ್ಲುವುದು ಎಂದರೇನು! ಹಾಲು, ಮೊಸರು, ಮಜ್ಜಿಗೆ, ಬೆಣ್ಣೆ, ಅಡಿಗೆಗೆ ಬಳಸುವ ತುಪ್ಪ ಮೊದಲಾದ ಇಷ್ಟೊಂದು ಅಮೂಲ್ಯ ವಸ್ತುಗಳನ್ನಿತ್ತು ಸಲಹುವ ಗೋಮಾತೆಯನ್ನು ಕೊಂದು ತಿಂದಿದೆಯಲ್ಲಾ ಈ ಅಕ್ಷಮ್ಯ ಅಪರಾಧ ಎಲ್ಲಾದರೂ ಕ್ಷಮಿಸುವುದುಂಟೆ! ಇದಕ್ಕೇನಾದರೂ ಮಾಡಲೇಬೇಕು ಎಂದು ನಿಶ್ಚೈಸಿದರು.

ಬೆಂಗಳೂರಿನಲ್ಲೊಬ್ಬ ಮುನಿಶಾಮಿ ಎನ್ನುವ ಹಳಬ ಇದ್ದ. ಇದ್ದ ಏನು! ಈ

ಮಹಾನುಭಾವ ಈಗಲೂ ಈ ಕತೆ ಬರೆಯುವ ಕಾಲಕ್ಕೂ ಇದ್ದಾನೆ. ಇವನು ತನ್ನನ್ನು ಜಂಟಲ್‌ಮನ್ ಶಿಕಾರಿದಾರರ ಗೈಡು ಎಂದು ಕರೆದುಕೊಳ್ಳುತ್ತಾನೆ. ಜಂಟಲ್‌ಮನ್ ಶಿಕಾರಿದಾರರು ಎಂದರೆ ಇನ್ನೇನಲ್ಲ, ಕೋವಿ ಲೈಸನ್ಸು, ಶಿಕಾರಿ ಲೈಸನ್ಸು ಪಡೆದು ಕಾನೂನು ಬದ್ಧವಾಗಿ ಶಿಕಾರಿ ಮಾಡುವ ತೆವಲಿನವರು ಎಂದರ್ಥ. ಆದರೆ ಇವನು ಮಾತ್ರ ಖದೀಮ ಹಾಗೂ ಘಾಟಿ. ಇವನ ಕೆಲಸ ಏನಪ್ಪಾ ಅಂದರೆ ಒಳ್ಳೊಳ್ಳೆ ಕೋವಿಗಳನ್ನು ಕೊಂಡುಕೊಂಡು ಶಿಕಾರಿ ಮಾಡಲು ಹಾತೊರೆಯುವ ಜಂಟಲ್‌ಮನ್ ಶಿಕಾರಿದಾರರಿಗೆ ಶಿಕಾರಿ ವರ್ತಮಾನ ಕೊಡುವುದು.

''ಮಾಸ್ಟರ್ ವೈಟ್‌ಫೀಲ್ಡಿನಿಂದ ಕೇವಲ ಹನ್ನೆರಡೇ ಮೈಲಿ ದೂರ! ನಲ್ವತ್ತು ಕಾಡುಹಂದಿ ಹಿಂಡೇ ಇದೆ. ಯು ಕಂ. ಷೂಟ್''.

ಇಲ್ಲವೇ ''ಮಾಸ್ಟರ್ ಬೆಂಗಳೂರಿಂದ ಮೈಸೂರಿಗೆ ಹೋಗುವ ರೋಡಿನಲ್ಲಿ ಇಪ್ಪತ್ತನೇ ಮೈಲಿಕಲ್ಲಿನ ಮಾಗಡಿ ಕ್ರಾಸ್ ಹತ್ತಿರ ಎರಡು ದೊಡ್ಡ ಜಿಂಕೆ ಗುಂಪುಗಳಿವೆ. ನೀವು ಕಾರಿನಿಂದ ಇಳಿಯುವ ಅಗತ್ಯಸಹ ಇಲ್ಲ. ಯು ಕಂ. ಷೂಟ್'' ಎಂದೆಲ್ಲ ಶಿಕಾರಿ ಮಾಡಲು ಹಾತೊರೆಯುವ ಪೇಟೆ ಶಿಕಾರಿದಾರರಿಗೆ ಪ್ರಲೋಭನ ಒಡ್ಡುವುದು.

ಈ ವಿಚಾರ ಅವರಿಗೆ ತಿಳಿಸಿದ್ದಕ್ಕೆ ಅವರ ಹತ್ತಿರ ಒಂದಷ್ಟು ಮುಂಗಡ ಹಣ ಪಡೆದು ಶಿಕಾರಿಗೆ ದಿನಾಂಕ ಗೊತ್ತು ಮಾಡಿ ಹೋಗುವುದು ಮಾಡುತ್ತಿದ್ದ. ಅಕಸ್ಮಾತ್ ಅವರೇನಾದರೂ ಮತ್ತೊಮ್ಮೆ ಸಿಕ್ಕು ''ಎಲ್ಲಯ್ಯಾ ನೀನು ಅವತ್ತು ಹೇಳಿದ ನಲ್ವತ್ತು ಕಾಡು ಹಂದಿಗಳ ಅಥವಾ ಎರಡು ಗುಂಪು ಜಿಂಕೆಗಳ ಕತೆ ಏನಾಯ್ತು?'' ಎಂದು ಕೇಳಿದರೆ ''ನಾನು ಅವತ್ತೇ ಹೇಳಲಿಲ್ಲವೆ ನಿಮಗೆ 'ಯು ಕಂ ಕ್ವಿಕ್, ಷೂಟ್' ಅಂತ! ನಿನ್ನೆಯಷ್ಟೆ ಬಿಗ್ ಮಿಲಿಟರಿ ಆಫೀಸರ್ಸ್ ಕಂ ಅಂಡ್ ಷೂಟ್ ಆಲ್! ಮಿಕ್ಕವೆಲ್ಲಾ ಓಡಿ ಹೋದವು. ವಾಟ್ ಟು ಡು! ಮಾಸ್ಟರ್ ಡೋಂಟ್ ವರಿ. ಐ ವಿಲ್ ಕಂ ಅನದರ್ ಡೆ'' ಎಂದು ಸಮಯಕ್ಕೆ ಸರಿಹೊಂದುವಂತೆ ಒಂದು ಪಕ್ಕಾ ಢೋಂಗಿ ಹೊಡೆಯುತ್ತಿದ್ದ. ಕಂಟೋನ್ಮೆಂಟಿನಲ್ಲಿ ಮಿಲಿಟರಿ ಇದ್ದುದರಿಂದ ಇದ್ದರೂ ಇರಬಹುದೇನೋ ಎಂದು ಈ ಜಂಟಲ್‌ಮನ್ ಶಿಕಾರಿದಾರರು ಇನ್ನಷ್ಟು ಅವನಿಗೆ ಅಡ್ವಾನ್ಸ್ ಕೊಡುತ್ತಿದ್ದರು.

ಕಾಡುಹಂದಿ, ಜಿಂಕೆಹಿಂಡು ಕಂಡೆ ಎಂದು ದುಡ್ಡು ಹೊಡೆಯುತ್ತಿದ್ದುದೆಲ್ಲಾ ಮುನಿಶಾಮಿಯ ಸಣ್ಣಪುಟ್ಟ ಖದೀಮ ಕೆಲಸವಷ್ಟೆ. ಅವನ ಖದೀಮತನದ ಕಲೆಗಾರಿಕೆಯನ್ನು ನೋಡಬೇಕೆಂದಾದರೆ ಬಡಪಾಯಿ ಜಂಟಲ್‌ಮನ್ ಶಿಕಾರಿದಾರರ ಬಳಿಗೆ ಅವನು ಚಿರತೆ ವರ್ತಮಾನ ಕೊಡುವಾಗ ನೋಡಬೇಕು. ಅವನು ಈ ಪೆದ್ದರನ್ನು ಬಂಗಲೆ ಬಳಿಯೋ ಅಥವಾ ದಾರಿಯಲ್ಲೋ ಸಂಧಿಸಿ ''ಸಾರ್ ಮಿ ಬಿಗ್ ಜಂಟಲ್‌ಮನ್ ಶಿಕಾರಿ ಗೈಡ್. ನಾನು ಎಷ್ಟೋ ಜನಕ್ಕೆ ಜಿಂಕೆ, ಕಾಡುಕೋಳಿ, ಹಂದಿ, ಮೊಲ ಎಲ್ಲ ತೋರಿಸಿ ಹೊಡೆಸಿದ್ದೇನೆ. ಕಾಡುಬಾತು ಹೊಡೆಯುವುದಾದರೆ ಅವನ್ನೂ ತೋರಿಸುತ್ತೇನೆ.. ದೆ ಕಂ ಪ್ಲೆಂಟಿ ಇನ್ ಕಿಸ್ಮಿಸ್ ಟೈಮ್. ಮಾಸ್ಟರ್ ಲೈಕ್ ಟು ಷೂಟ್ ಪ್ಯಾಂಥರ್! ಓನ್ಲಿ ಫಿಫ್ಟೀನ್ ಮೈಲ್ಸ್. ಕಾನ್‌ಕಾನ್‌ಹಳ್ಳಿ

ರೋಡ್. ಹದಿನೈದು ರೂಪಾಯಿ ಅಡ್ವಾನ್ಸ್ ಕೊಡಿ. ಮಿ ಟ್ರೈ ಲೈವ್ ಡಾಂಕಿ. ಪ್ಯಾಂಥರ್ ಕಿಲ್ ಡಾಂಕಿ. ನಿಮ್ಮನ್ನು ಬಂದು ಕರೆದುಕೊಂಡು ಹೋಗುತ್ತೇನೆ. ನಾನು ನಿಮಗೋಸ್ಕರ ಮರದ ಮೇಲೆ ಮಚಾನ್ ಸಹ ಕಟ್ಟಿಸುತ್ತೇನೆ. ಮಾಸ್ಟರ್ ಷೂಟ್ ಪ್ಯಾಂಥರ್ ವೆರಿ ಈಸಿ.'' ಎಂದು ಉದ್ವೇಗಭರಿತನಾಗಿ ಅವರು ನಂಬುವಂತೆ ನಾಟಕ ಮಾಡುತ್ತಿದ್ದ.

ಇದನ್ನು ಕೇಳಿದ ಪೇಟೆ ಜಂಟಲ್‌ಮನ್ ಶಿಕಾರಿದಾರರಿಗೆ ಅಚ್ಚರಿಯಾಗುತ್ತಿತ್ತು! ಕೇವಲ ಹದಿನೈದು ರೂಪಾಯಿಗೆ ಒಂದು ಚಿರತೆ ಷಿಕಾರಿ! ಅದೂ ಬೆಂಗಳೂರಿಂದ ಹದಿನೈದೇ ಮೈಲು ದೂರದಲ್ಲಿ! ಷಿಕಾರಿ ಎನ್ನುವುದು ಬಹಳ ದುಬಾರಿ ವ್ಯವಹಾರ ಎಂದು ತಿಳಿದಿದ್ದೆನಲ್ಲಾ ನಾನೆಂಥ ಪೆದ್ದು! ಎಂದು ಯೋಚಿಸುತ್ತಿದ್ದ ಜಂಟಲ್‌ಮನ್ ಶಿಕಾರಿದಾರ ಅಲ್ಲೇ ಮುನಿಶಾಮಿ ಬುಟ್ಟಿಗೆ ಬೀಳುತ್ತಿದ್ದ.

ಸರಿ, ಮುನಿಶಾಮಿ ಜೇಬಿಗೆ ಹದಿನೈದು ರೂಪಾಯಿಗಳು ಬೀಳುತ್ತಿದ್ದುವು. ಮುನಿಶಾಮಿ ಅಲ್ಲಿಗೆ ಹೋಗಿ ಕೆಲಸ ಮಾಡಲು ಊಟ ತಿಂಡಿ ಕರ್ಚು ಎರಡು ರೂಪಾಯಿ ಮತ್ತು ಬಸ್ ಚಾರ್ಜು ಮೂರು ರೂಪಾಯಿ ಎಂದು ಮತ್ತೆ ಐದು ರೂಪಾಯಿ 'ಟಿಯೆ. ಡಿಯೆ' ಅವರ ಕೈಲಿ ಕಕ್ಕಿಸುತ್ತಿದ್ದ. ಪೆದ್ದರು ಇದೆಲ್ಲಾ ಸಮರ್ಥನೀಯ ಕರ್ಚೇ ಸರಿ ಎಂದು ಹಿಂದುಮುಂದು ನೋಡದೆ ಕೊಡುತ್ತಿದ್ದರು. ಸಂತೃಪ್ತನಾಗಿ ನಿರ್ಗಮಿಸುತ್ತಿದ್ದ ಮುನಿಶಾಮಿ.

ದುಡ್ಡು ಸಿಕ್ಕ ತಕ್ಷಣ ಅವನು ಮಾಡುತ್ತಿದ್ದ ಕೆಲಸವೆಂದರೆ ಸಮೀಪದಲ್ಲಿದ್ದ ಶೇಂದಿ ಅಂಗಡಿಗೆ ನುಗ್ಗುತ್ತಿದ್ದುದು. ಅವನು ಕೇವಲ ತೆಂಗಿನಮರದ ಸೇಂದಿ ಮಾತ್ರ ಕುಡಿಯುತ್ತಿದ್ದ. ಷರಾಬು ಕುಡಿದರೆ ಅದರ ನಿಷಾ ನನಗೆ ತಾಳುವುದಕ್ಕಾಗಲ್ಲ, ನನ್ನದು ಏನಿದ್ದರೂ ಸೇಂದಿ ಮಾತ್ರ ಎನ್ನುತ್ತಿದ್ದ. ಚೆನ್ನಾಗಿ ಕುಡಿದು ಮತ್ತಿನಲ್ಲಿ ಮಲಗುವುದಷ್ಟೇ ಅವನು ಅವತ್ತು ಮಾಡುತ್ತಿದ್ದ ಕೆಲಸ.

ಮಾರನೆ ದಿನ ಎದ್ದು ನಿಷ್ಠಾವಂತನಂತೆ ಚಿರತೆ ಆಕರ್ಷಿಸಲು ಕಾಡಿಗೆ ಕತ್ತೆ ಕಟ್ಟಲು ತೆರಳುತ್ತಿದ್ದ.



# ೨



ಬೆಂಗಳೂರಲ್ಲಿ ಕೆಲಸಕ್ಕೆ ಬಾರದೆ ಬೀದಿ ಅಲೆಯುವ ವಾರಸುದಾರರಿಲ್ಲದ ಕತ್ತೆ ನಾಯಿ ದನ ಇತ್ಯಾದಿಗಳನ್ನು ಕೂಡುವ ಎರಡು ಪಿಂಜರಾಪೋಲು ದೊಡ್ಡಿಗಳಿವೆ. ಅಲ್ಲಿರುವ ಪ್ರಾಣಿಗಳಲ್ಲಿ ಯಾವಾದರೂ ನಿಮ್ಮವಿದ್ದರೆ ಅವುಗಳನ್ನು ಬಿಡಿಸಿಕೊಳ್ಳಲು ನೀವು ಸರ್ಕಾರಕ್ಕೆ ಕೊಡಬೇಕಾಗಿದ್ದ ಜುಲ್ಮಾನೆ ಒಂದು ರೂಪಾಯಿ. ಅವುಗಳನ್ನು ಹತ್ತು ದಿನಗಳವರೆಗೆ ಯಾರೂ ಬಿಡಿಸಿಕೊಳ್ಳಲು ಬರದಿದ್ದರೆ ಸರ್ಕಾರವೇ ಆ ಪ್ರಾಣಿಗಳನ್ನು ಹರಾಜಿನಲ್ಲಿ ಮಾರಾಟ ಮಾಡಿ ಅಲ್ಲಿಯವರೆಗೆ ಅವುಗಳನ್ನು ನೋಡಿಕೊಂಡ ಖರ್ಚನ್ನು ತುಂಬಿಕೊಳ್ಳುತ್ತಿತ್ತು. ಈ ಹರಾಜನ್ನು ಸರ್ಕಾರ ವಾರಕ್ಕೆ ಎರಡುಬಾರಿ ಮಾಡುತ್ತಿತ್ತು. ಮುನಿಶಾಮಿ ನೇರವಾಗಿ ಈ ಹರಾಜುಗಳಿಗೆ ಹೋಗಿ ಎರಡು ರೂಪಾಯಿ ತೆತ್ತು ಒಂದು ಕತ್ತೆ ಕೊಳ್ಳುತ್ತಿದ್ದ. ಕೆಲವೊಮ್ಮೆ ತಾನೇ ವಾರಸುದಾರನೆನ್ನುವಂತೆ ನಟಿಸಿ ಸರ್ಕಾರಕ್ಕೆ ಒಂದು ರೂಪಾಯಿ ದಂಡ ತೆತ್ತು ಕತ್ತೆ ಬಿಡಿಸಿಕೊಳ್ಳುತ್ತಿದ್ದ. ಕತ್ತೆಗಳೆಲ್ಲಾ ಒಂದೇತರ ಕಾಣುತ್ತವೆ. ಯಾವುದು ಯಾರದ್ದೋ ಗುರುತು ಹಚ್ಚುವವರು ಯಾರು? ಯಾವ ಅಧಿಕಾರಿ ಯಾವ ದಾಖಲೆಗಳ ಸಹಾಯದಿಂದ ಕತ್ತೆಗಳ ಸ್ವಾಮ್ಯತ್ವ ಯಾರದ್ದೆಂದು ಪತ್ತೆ ಹಚ್ಚಿಯಾನು? ಎಷ್ಟೋಸಾರಿ ಮುನಿಶಾಮಿ ಕತ್ತೆ ತರಲು ಅವನ ಗೆಳೆಯರಿಗೂ ವಹಿಸುತ್ತಿದ್ದ.

ಒಟ್ಟಿನಲ್ಲಿ ಮುನಿಶಾಮಿ ಅವನ ಮಾಸ್ಟರ್ ಕೊಟ್ಟಿದ್ದ ಹದಿನೈದು ರೂಪಾಯಿಯಲ್ಲಿ ಕೇವಲ ಒಂದು ಅಥವಾ ಎರಡು ರೂಪಾಯಿಗೆ ಒಂದು ಕತ್ತೆ ಗಿಟ್ಟಿಸುತ್ತಿದ್ದ. ಶೇಕಡ ಆರುನೂರ

ಐವತ್ತರಷ್ಟು ಲಾಭ ಮಾಡುತ್ತಿದ್ದುದರಿಂದ ಕತ್ತೆಗೆ ದುಡ್ಡು ಕರ್ಚು ಮಾಡಲು ಅವನಿಗೆ ಬೇಸರವಾದರೂ ಯಾಕೆ!

ಆಮೇಲೆ ಅವನು ಕತ್ತೆಯನ್ನು ಹಿಡಿದುಕೊಂಡು, ಮಾಸ್ಟರ್‌ಗೆ ಯಾವ ಜಾಗದಲ್ಲಿ ಚಿರತೆ ನೋಡಿದ್ದೇನೆಂದು ಹೇಳಿರುತ್ತಿದ್ದನೋ ಅಲ್ಲಿಯವರೆಗೂ ನಡೆದುಕೊಂಡೇ ಹೋಗುತ್ತಿದ್ದ. ಅಲ್ಲಿ ಕತ್ತೆಯನ್ನು ಮೂರು ದಿನ ಕಟ್ಟಿಹಾಕುತ್ತಿದ್ದ. ಅನ್ನ ನೀರಿಲ್ಲದೆ ಕಾಡಿನಲ್ಲಿ ಮೂರು ದಿನ ಕಳೆದಿದ್ದ ಆ ಕತ್ತೆಯನ್ನು ಅನಂತರ ಅವನೇ ಕೊಲ್ಲುತ್ತಿದ್ದ. ಇದಕ್ಕಾಗಿ ಅವನು ಕುದುರೆಗೆ ಲಾಳ ಹೊಡೆಯಲು ಉಪಯೋಗಿಸುವ ಹುಲಿಯುಗುರಿನಂಥ ಎರಡು ವಿಚಿತ್ರ ಆಯುಧಗಳನ್ನು ಇಟ್ಟುಕೊಂಡಿದ್ದ. ಇದೆಲ್ಲಾ ಅವನಿಂದಲೇ ನಾನು ತಿಳಿದಿದ್ದರಿಂದ ಇಷ್ಟು ವಿವರ ಕೊಡಲು ಸಾಧ್ಯವಾಗಿದ್ದು. ಈ ಉಪಕರಣಗಳಿಂದ ಒಂದು ಪ್ರಾಣಿಯನ್ನು ಹೇಗೆ ಕೊಲ್ಲಬಹುದೋ ನಾನಂತೂ ಪ್ರತ್ಯಕ್ಷವಾಗಿ ನೋಡಿಲ್ಲ. ಕತ್ತಿಗಿತ್ತಿ ಉಪಯೋಗಿಸಿ ಕಡಿದು ಕೊಂದರೆ ತನ್ನ ಕಳ್ಳಾಟ ಬಯಲಾಗುತ್ತದೆಂದೋ ಏನೋ ಇವನು ತದ್ವತ್ತಾಗಿ ಚಿರತೆಯೇ ಕತ್ತೆಯನ್ನು ಕೊಂದಂತೆ ಅದರಲ್ಲಿ ಕತ್ತೆ ಕುತ್ತಿಗೆಯನ್ನು ಚುಚ್ಚಿ ಚುಚ್ಚಿ ಕೊಲ್ಲುತ್ತಿದ್ದ. ಕತ್ತೆ ಕೆಳಗೆ ಬೀಳುತ್ತಲೂ ಇವನು ಕತ್ತೆ ಕುತ್ತಿಗೆಯ ಎರಡು ಭಾಗಗಳಿಗೂ ಚುಚ್ಚಿ ಆದಷ್ಟು ಗಾಯ ಮಾಡುತ್ತಿದ್ದ. ಅದು ಸತ್ತನಂತರ ಆ ಆಯುಧದ ಹಿಂಭಾಗದ ಹರಿತ ಮೊನೆಯಿಂದ ಅದರ ಹೊಟ್ಟೆ ಕುಯ್ದು ಕರುಳು ಪಚ್ಚಿಯನ್ನೆಲ್ಲಾ ಹೊರಗೆಳೆದು, ಅದರ ದೇಹದ ಮಾಂಸವನ್ನೂ ಹಲವಾರು ಕಡೆ ಕುಯ್ದು, ಚಿರತೆ ಅದನ್ನು ಕೊಂದು ಅರ್ಧಮರ್ಧ ತಿಂದಂತೆಯೇ ಮಾಡಿ ಆಮೇಲೆ ಕಾಡಿನ ಸೊಪ್ಪನ್ನೆಲ್ಲಾ ತಂದು ಅದನ್ನು ಮುಚ್ಚಿಬಿಡುತ್ತಿದ್ದ. ಇದೆಲ್ಲಾ ಆದಮೇಲೆ ಅವನು ಮಾಡುತ್ತಿದ್ದ ಕೊಟ್ಟ ಕೊನೆ ಕೆಲಸ ಏನೆಂದು ನೀವು ಊಹಿಸಲಾರಿರಿ. ಇದು ಘಾಟಿ ಮುನಿಶಾಮಿಯ ಅಸಾಧಾರಣ ಕಾರ್ಯಕುಶಲತೆ ಎಂದೇ ಹೇಳಬೇಕು. ಅವನು ಚೀಲದಿಂದ ಒಂದು ಚಿರತೆಯ ಪಾದ ತೆಗೆಯುತ್ತಿದ್ದ. ಚಿರತೆ ಕಾಲಿನ ಮೂಳೆಗಳನ್ನೆಲ್ಲ ತೆಗೆದು ಅದಕ್ಕೆ ಹುಲ್ಲು ತುಂಬಿ ಒಂದು ನಕಲಿ ಚಿರತೆ ಕಾಲು ಮಾಡಿಟ್ಟುಕೊಂಡಿದ್ದ. ಅದನ್ನು ತೆಗೆದುಕೊಂಡು ಅಲ್ಲೆಲ್ಲಾ ಚಿರತೆ ಹೆಜ್ಜೆ ಗುರುತುಗಳನ್ನು ಮೂಡಿಸಿ ಚಿರತೆ ಸಾಕ್ಷಾತ್ತಾಗಿ ಬಂದು ಕತ್ತೆ ಕೊಂದಂತೆಯೇ ಮಾಡುತ್ತಿದ್ದ.

ಅನಂತರ ನಾಲ್ಕಾಣೆ ಕೊಟ್ಟು ದಾರಿಯಲ್ಲಿ ಸಾಗುವ ಲಾರಿಯಲ್ಲಿ ಕುಳಿತು ಬೆಂಗಳೂರಿನತ್ತ ದೌಡಾಯಿಸುತ್ತಿದ್ದ. ಭಾರೀ ಉದ್ವೇಗದಲ್ಲಿ, ಇನ್ನು ತಡಮಾಡುವಂತಿಲ್ಲ ಎನ್ನುವ ಅವಸರದಲ್ಲಿ ಇವನಿಗೆ ದುಡ್ಡುಕೊಟ್ಟು ಸಿಕ್ಕಿಬಿದ್ದಿರುವ ಮಾಸ್ಟರ್ ಬಂಗಲೆಗೆ ನುಗ್ಗಿ ಚಿರತೆ ಕತ್ತೆ ಹಿಡಿದಿರುವ ಸಮಾಚಾರ ತಿಳಿಸುತ್ತ, ಬೇಗ ಬೇಗ ಥರ್ಮಾಸ್ ಪ್ಲಾಸ್ಕಿಗೆ ಕಾಫಿ ತುಂಬಿಕೊಳ್ಳುವಂತೆಯೂ, ಸ್ಯಾಂಡ್‌ವಿಚ್‌ಗಳನ್ನು ಸಿದ್ಧಪಡಿಸಿಕೊಳ್ಳುವಂತೆಯೂ ಗಡಿಬಿಡಿ ಮಾಡುತ್ತಿದ್ದ. ಇವನೇ ಅವರ ಟಾರ್ಚಗಳಿಗೆ ಸೆಲ್ ಹಾಕುತ್ತ, ರೈಫಲ್ ಒರೆಸಿ ರೆಡಿ ಮಾಡುತ್ತ, ತಡ ಮಾಡಿದರೆ ತನ್ನ ಶ್ರಮವೆಲ್ಲಾ ವ್ಯರ್ಥವಾಗುತ್ತದೆಂದು ಗಡಿಬಿಡಿ ಮಾಡುತ್ತಿದ್ದ. ಆಮೇಲೆ

ಇಬ್ಬರೂ ಕಾರು ಹತ್ತಿ ಚಿರತೆ ಹುಲಿ ಹಿಡಿದಿರುವ ಜಾಗದತ್ತ ಅಸಾಧ್ಯ ವೇಗದಲ್ಲಿ ಕಾಡಿಗೆ ದೌಡಾಯಿಸುತ್ತಿದ್ದರು.

ಮುನಿಶಾಮಿ ಕತ್ತೆಯನ್ನು ಚಿರತೆ ಹಿಡಿದು ಕೊಂದಿರುವ ಹಲ್ಲು ಗುರುತುಗಳನ್ನು ಚಿರತೆಯ ಕುತ್ತಿಗೆಯ ಮೇಲೂ, ಅಲ್ಲೆಲ್ಲಾ ಅದು ಓಡಾಡಿರುವ ಹೆಜ್ಜೆ ಗುರುತುಗಳನ್ನು ನೆಲದಮೇಲೂ ತೋರಿಸುತ್ತಿದ್ದ. ಅನಂತರ ಮಚಾನ್ ಕಟ್ಟಲು ಇಬ್ಬರು ಆಳುಗಳಿಗೆ ಎರಡೆರಡು ರೂಪಾಯಿಯಂತೆ ನಾಲ್ಕು ರೂಪಾಯಿ ತೆಗೆದುಕೊಂಡು ಪಕ್ಕದ ಹಳ್ಳಿಗಳಿಂದ ನಾಲ್ಕಾಣೆ ಸಂಬಳಕ್ಕೆ ಇಬ್ಬರು ಆಳುಗಳನ್ನು ಕರೆತಂದು ಮಚಾನು ಕಟ್ಟಿಸುತ್ತಿದ್ದ. ಮಾಸ್ಟರ್ ಮರ ಹತ್ತಿ ಚಿರತೆಗಾಗಿ ಕಾದು ಕೂರುವ ಮೊದಲು ಮುನಿಶಾಮಿಯ ಇನ್ನೊಂದು ಚೌಕಾಶಿ ನಡೆಯುತ್ತಿತ್ತು. ಅದೇನೆಂದರೆ ಚಿರತೆ ಬಂದು, ಮಾಸ್ಟರ್ ಅದನ್ನೇನಾದರೂ ಹೊಡೆದರೆ ಮುನಿಶಾಮಿಗೆ ಇಪ್ಪತ್ತು ರೂಪಾಯಿ ಬಕ್ಷೀಸ್ ಕೊಡಬೇಕು, ಅಕಸ್ಮಾತ್ ಗುರಿತಪ್ಪಿ ಚಿರತೆ ಪಾರಾದರೆ ಅದು ಮಾಸ್ಟರ್ ತಪ್ಪಿನಿಂದಾದ್ದರಿಂದ ಮುನಿಶಾಮಿಗೆ ಮಾಸ್ಟರ್ ಹತ್ತು ರೂಪಾಯಿ ಕೊಡಬೇಕು. ಅಕಸ್ಮಾತ್ ಮರದಮೇಲೆ ಮಾಸ್ಟರ್ ಕುಳಿತಿರುವ ಸುಳಿವು ದೊರೆತು ಚಿರತೆ ದೂರದಿಂದಲೇ ನಿರ್ಗಮಿಸಿ ಬರದೇ ಹೋದರೆ ಆಗಲೂ ಇಷ್ಟೆಲ್ಲಾ ಕಷ್ಟಪಟ್ಟಿದ್ದಕ್ಕೆ ಮಾಸ್ಟರ್ ಐದು ರೂಪಾಯಿಯನ್ನಾದರೂ ಕೊಡಬೇಕು. ಇದಿಷ್ಟೂ ಮರ ಹತ್ತುವ ಮೊದಲು ಮಾಸ್ಟರ್‌ಗೆ ಮುನಿಶಾಮಿ ಹಾಕುತ್ತಿದ್ದ ಕರಾರು. ಚಿರತೆ ಹೊಡೆಯುವ ತುರಾತುರಿಯಲ್ಲಿರುತ್ತಿದ್ದ ಈ ಪೇಟೆ ಜಂಟಲ್‌ಮನ್ ಶಿಕಾರಿದಾರರು ಈ ಕುರಿತು ಅವನ ಬಳಿ ಚರ್ಚೆ ಮಾಡುವ ಸ್ಥಿತಿಯಲ್ಲಿರುತ್ತಾರೆಯೆ? ಅವನು ಹೇಳಿದ್ದಕ್ಕೆಲ್ಲಾ ಆಯ್ತೆಂದು ತಲೆಯಾಡಿಸಿ ಮರ ಹತ್ತುತ್ತಿದ್ದರು.

ಸರಿ, ಬೆಳಗಾಗುವವರೆಗೆ ಕಣ್ಣಿಗೆ ಎಣ್ಣೆ ಹಚ್ಚಿ ಕಾದರೂ ಚಿರತೆ ಬರುತ್ತಿರಲಿಲ್ಲ. ಇಲ್ಲದ ಚಿರತೆ ಬರುವುದಾದರೂ ಎಲ್ಲಿಂದ? ಮುನಿಸ್ವಾಮಿಗೆ ಅವನ ಕರಾರಿನ ಪ್ರಕಾರ ಐದು ರೂಪಾಯಿ ಸಂದಾಯವಾಗುತ್ತಿತ್ತು. ಮುನಿಸ್ವಾಮಿ ಚಿರತೆಗಳೆಲ್ಲಾ ಬಹಳ ಸೂಕ್ಷ್ಮ ಪ್ರಾಣಿಗಳೆಂದೂ, ಅವುಗಳ ನಡವಳಿಕೆಯನ್ನು ಯಾರೂ ಹೀಗೇ ಎಂದು ಹೇಳಲು ಸಾಧ್ಯವಿಲ್ಲವೆಂದೂ ಹತಾಶನಾಗಿ ಮರ ಇಳಿಯುತ್ತಿದ್ದ ಮಾಸ್ಟರ್ ಮಹಾಶಯನಿಗೆ ಸಾಂತ್ವನ ಹೇಳುತ್ತಿದ್ದ. ''ಏನೂ ಹೆದರಬೇಡಿ ಅದು ಎಲ್ಲಿ ಹೋಗುತ್ತದೆ. ಇನ್ನೊಂದು ಕತ್ತೆ ಕಟ್ಟುತ್ತೇನೆ ಇವತ್ತಲ್ಲದಿದ್ದರೆ ನಾಳೆ ಅದು ಮತ್ತೊಮ್ಮೆ ಬರುವುದರಲ್ಲಿ ಅನುಮಾನವೇ ಇಲ್ಲ'' ಎಂದು. ಹೀಗೇ ನಡೆದ ಕತೆಯೇ ಅನೇಕಬಾರಿ ಪುನರಾವರ್ತನೆಯಾಗುತ್ತಿತ್ತು. ಎಷ್ಟುಸಾರಿ ಎಂದರೆ, ಎಷ್ಟು ಪ್ರಯತ್ನಪಟ್ಟರೂ ಕೈಗೆ ಸಿಕ್ಕದಿರುವ ಈ ಚಿರತೆ ಹೊಡೆಯುವ ಆಸೆಯನ್ನೇ ಮುನಿಶಾಮಿಯ ಮಾಸ್ಟರ್ ತೊರೆದು ಕಾಡು ಬಾತುಗಳನ್ನೋ ಗೌಜಲು ಹಕ್ಕಿಗಳನ್ನೋ ಹೊಡೆದು ಶಿಕಾರಿಯ ಚಪಲ ತೀರಿಸಿಕೊಳ್ಳಲು ನಿರ್ಧರಿಸುವವರೆಗೆ. ಆಗಲೂ ಅವರು ಅವನ್ನು ತೋರಿಸಲು ಮುನಿಶಾಮಿಯನ್ನೇ ಆಶ್ರಯಿಸಬೇಕಾಗುತ್ತಿತ್ತು.

ನಿಮಗೆ ಅಚ್ಚರಿಯಾಗಬಹುದು, ಮುನಿಶಾಮಿಯ ಖದೀಮ ಬುದ್ಧಿಯ ಬಗ್ಗೆ ನನಗೆ

ಇಷ್ಟೊಂದೆಲ್ಲಾ ಒಳ ವಿವರಗಳು ಗೊತ್ತಾಗಿದ್ದು ಹೇಗೆ? ಎಂದು. ಅದೇನೂ ಅಂಥ ರಹಸ್ಯವೇನಲ್ಲ, ನಾನೇನೂ ಪತ್ತೇದಾರಿ ಕೆಲಸ ನಡೆಸಿ ಇದನ್ನೆಲ್ಲಾ ಪತ್ತೆಹಚ್ಚಲಿಲ್ಲ. ನಾನೂ ಹಿಂದೊಮ್ಮೆ ಪೇಟೆಯ ಪೆದ್ದು ಜಂಟಲ್ ಮನ್ ಶಿಕಾರಿದಾರನಾಗಿದ್ದಾಗ ಈ ಮುನಿಶಾಮಿ ಒಂದಲ್ಲ ಎರಡಲ್ಲ ನಾಲ್ಕುಸಾರಿ ನನಗ ಎಪ್ಪೆ ಹಾಕಿ ಮೂರ್ಖನನ್ನಾಗಿ ಮಾಡಿದ್ದಾನೆ. ಇದೆಲ್ಲಾ ನಾನು ಅವನ ಹತ್ತಿರ ಅನುಭವಿಸಿ ಅರಿತಿದ್ದು. ಅವನು ಸಿಕ್ಕಿಬಿದ್ದಿದ್ದು ಹೇಗೆ ಎನ್ನುತ್ತೀರಿ! ಒಂದುದಿನ ಹೀಗೇ ನನಗೆ ಮೋಸ ಮಾಡುತ್ತಿರಬೇಕಾದರೆ ಮುನಿಶಾಮಿ ನನಗೆ ಮಾಲು ಸಮೇತ ಸಿಕ್ಕಿಬಿದ್ದಿದ್ದರಿಂದ. ಒಮ್ಮೆ ಸತ್ತ ಕತ್ತೆ ಹತ್ತಿರ ನಾವು ನಿಂತು ಮಚಾನು ರಚಿಸುವ ಬಗ್ಗೆ ಯೋಚಿಸುತ್ತಿರಬೇಕಾದರೆ ಅಲ್ಲೊಂದು ಕಂತ್ರಿನಾಯಿ ಬಂತು. ಅದು ಸತ್ತ ಕತ್ತೆಯ ವಾಸನೆ ಹಿಡಿದು ಬಂದಿತ್ತೆಂದು ತೋರುತ್ತದೆ. ನಾವು ಅಲ್ಲೇ ನಿಂತಿದ್ದರಿಂದ ದೂರದಲ್ಲೇ ನಿಂತಿದ್ದ ಅದು ಇದ್ದಕ್ಕಿದ್ದಂತೆ ವಾಸನೆ ಹಿಡಿಯುತ್ತ ದಾರಿ ಪಕ್ಕದ ಪೊದೆಯೊಂದರೊಳಗೆ ನುಗ್ಗಿ ಒಂದು ಅತ್ಯಂತ ಕೊಳಕಾದ ಬಟ್ಟೆ ಚೀಲ ಒಂದನ್ನು ಕಚ್ಚಿಕೊಂಡು ಹೊರಬಂತು. ಅದನ್ನು ನೋಡಿದ್ದೇ ಮುನಿಶಾಮಿ ಬೆಚ್ಚಿಬಿದ್ದು ಗಾಬರಿಯಲ್ಲಿ ಅದನ್ನು ಗದರಿಸುತ್ತಾ ಚೀಲ ಕಿತ್ತುಕೊಳ್ಳಲು ನಾಯಿಯನ್ನು ಬೆನ್ನಟ್ಟಿದ. ನಾಯಿ ಚೀಲದೊಡನೆ ಓಡುತ್ತಿರಬೇಕಾದರೆ ಅದರೊಳಗಿಂದ ಹುಲ್ಲು ತುಂಬಿದ ಚಿರತೆ ಕಾಲು ಹಾಗೂ ಕತ್ತೆ ಕೊಲ್ಲಲು ಅವನು ಉಪಯೋಗಿಸುತ್ತಿದ್ದ ವಿಚಿತ್ರ ಆಯುಧ ಸಾಮಗ್ರಿಗಳು ಒಂದೊಂದಾಗಿ ಉದುರತೊಡಗಿದುವು. ಮೂರ್ಖನಾಗಿದ್ದ ನನಗೆ ಅವನ ಮೇಲೆ ಬಂದ ಕೋಪ ಅಷ್ಟಿಷ್ಟಲ್ಲ. ನಿನ್ನನ್ನು ಅತ್ಯಂತ ಕ್ರೂರವಾಗಿ, ನೀನು ಆ ಕತ್ತೆ ಕೊಂದಿದ್ದಕ್ಕಿಂತಲೂ ಕ್ರೂರವಾಗಿ ಆ ಆಯುಧದಿಂದಲೇ ಹಿಂಸಿಸಿ ಕೊಲ್ಲುತ್ತೇನೆ ಎಂದು ಹೆದರಿಸಿದ ಮೇಲೆ ಅವನು ಅವನ ಖದೀಮ ಕತೆಯನ್ನೆಲ್ಲಾ ನನಗೆ ವಿವರಿಸಿದ. ಅದನ್ನೇ ನಾನು ನಿಮಗೆ ಇಷ್ಟು ಹೊತ್ತೂ ಹೇಳಿದ್ದು.

ಕೆಲವು ವಿಚಾರಗಳಲ್ಲಿ ನಾನು ಕೊಂಚ ವಿಚಿತ್ರ ಮನುಷ್ಯ. ನನ್ನ ರೀತಿಯ ಪೆದ್ದು ಶಿಕಾರಿದಾರರು ಮುನಿಶಾಮಿಯಂಥವರ ಬಳಿ ಬೋಳಿಸಿಕೊಳ್ಳಲು ತಲೆ ಕೊಡಲು ಸಿದ್ಧವಿರಬೇಕಾದರೆ ನಾನ್ಯಾಕೆ ಅವನ ಮೇಲೆ ಮುಯ್ಯಿ ತೀರಿಸಲು ಹೋಗಲಿ ಎನ್ನಿಸಿತು. ಕೋವಿ ಹಿಡಿದು ಶಿಕಾರಿ ತಿರುಗಬೇಕೆಂಬ ಚಪಲವಿದ್ದವರು ಈ ಕೇಡಿಯ ಹಿಂದೆ ತಿರುಗುವಂತಿದ್ದರೆ ತಿರುಗಲಿ. ಅದರಿಂದ ಮುನಿಶಾಮಿಗೂ ಹೊಟ್ಟೆಪಾಡು ನಡೆಯುವಂತಿದ್ದರೆ ನಡೆಯಲಿ ಎನ್ನಿಸಿತು. ಇನ್ನುಮೇಲೆ ಮುನಿಶಾಮಿ ನನ್ನನ್ನು ಮೂರ್ಖ ಮಾಡಲು ಬರದಿದ್ದರೆ ಸಾಕು, ಅವನು ಏನಾದರೂ ಮಾಡಿಕೊಳ್ಳಲಿ ಎಂದು ಅವನಿಗೆ ಸರಿಯಾಗಿ ಎಚ್ಚರಿಕೆ ಕೊಟ್ಟು ಬಿಟ್ಟುಬಿಟ್ಟೆ. ಆಮೇಲಿಂದ ಮುನಿಶಾಮಿ ನನ್ನನ್ನು ಕಂಡರೆ ಗೌರವದಿಂದ ದೂರದಿಂದಲೇ ನಮಸ್ಕಾರ ಮಾಡಿ ಅಡ್ಡದಾರಿ ಹಿಡಿದು ಕಣ್ಮರೆಯಾಗುತ್ತಾನೆ.

ಈ ವಿಚಾರವನ್ನೆಲ್ಲಾ ಈಗ ಬರೆದು ನಾನು ಅವನ ಕಿಡಿಗೇಡಿ ದಂಧೆಗೆ ಕಲ್ಲು ಹಾಕುತ್ತಿದ್ದೇನೆಂದು ನೀವು ಭಾವಿಸಬೇಡಿ. ಏಕೆಂದರೆ ಇವನು ನೂರಾರು ಹೆಸರುಗಳಲ್ಲಿ ಒಮ್ಮೆ ರಾಮಯ್ಯ ಎಂದೋ, ಒಮ್ಮೆ ಪೂವಯ್ಯ ಎಂದೋ ಅನೇಕ ಉರುಫ್ ಹೆಸರುಗಳಲ್ಲಿ ಕೆಲಸ

ಮಾಡುತ್ತಾನೆ. ಮುನಿಶಾಮಿ ಸಹ ಅಂಥ ನೂರು ಉರುಫ್ ಹೆಸರುಗಳಲ್ಲಿ ಒಂದಿರಬಹುದಾದ್ದರಿಂದ ಮುನಿಶಾಮಿಯ ಕತೆ ಬರೆದರ ಅವನಿಗೆ ಏನೇನೂ ತೊಂದರೆ ಇಲ್ಲ. ಏನೇ ಇರಲಿ, ನೀವೇನಾದರೂ ಬೆಂಗಳೂರಿಗೆ ಬಂದರ, ನಿಮಗೂ ನನಗಿದ್ದಂತೆಯೇ ಶಿಕಾರಿ ಮಾಡಬೇಕೆಂಬ ಚಪಲವೇನಾದರೂ ಇದ್ದರೆ ಅವನ ಚಹರೆ ತಿಳಿಸಿ ನಿಮಗೆ ಒಂದೆರಡು ಎಚ್ಚರಿಕೆಯ ಮಾತು ಹೇಳಿರುವುದು ಒಳ್ಳೆಯದು. ಕೊಂಚ ವಯಸ್ಸಾದ ಹರಕು ಮುರುಕು ಇಂಗ್ಲಿಷ್ ಮಾತಾಡುವ ಕಪ್ಪನೆಯ ಮನುಷ್ಯ ತನ್ನನ್ನು ತಾನು 'ಜಂಟಲ್ ಮನ್ ಶಿಕಾರಿ ಗೈಡ್' ಎಂದು ಕರೆದುಕೊಳ್ಳುತ್ತಾ ನಿಮಗೆ ಪರಿಚಯಿಸಿಕೊಂಡರೆ ಸಲ್ಪ ಹುಷಾರಾಗಿರಿ. ಕೂದಲು ಉದ್ದ ಬಿಟ್ಟುಕೊಂಡು ಹಿಂದುಗಡೆ ಮುಡಿ ಕಟ್ಟಿಕೊಂಡಿರುವ, ಉಬ್ಬಿದ ಕಣ್ಣುಗಳ ಈ ಮನುಷ್ಯ ಈ ಬಾರಿ ಜಾಕ್ ಜಾನ್ಸನ್ ಎಂದು ಕ್ರಿಶ್ಚಿಯನ್ ಹೆಸರಿನಲ್ಲೇ ಪರಿಚಂಯಿಸಿಕೊಂಡರೂ ಪರಿಚಯಿಸಿಕೊಳ್ಳಬಹುದು. ಅವನಿಂದ ಆದಷ್ಟು ದೂರ ಇದ್ದು ನಿಮ್ಮ ಪರ್ಸನ್ನು ಮಾತ್ರ ಬೀರುವಿನಲ್ಲಿ ಭದ್ರ ಮಾಡಿ. ಅವನು ಇನ್ನ್ಯಾರೂ ಅಲ್ಲ, ನನ್ನ ಹಳೇ ಸ್ನೇಹಿತ ಮುನಿಶಾಮಿ.

ಮಾಗಡಿ ಚಿರತೆ ಕಥೆ ಹೇಳಲು ಹೋಗಿ, ಇವನ್ಯಾವನೋ ಮುನಿಶಾಮಿ ಎನ್ನುವ ಕಳ್ಳಕೊರಮನ ಪುರಾಣ ಹೇಳುತ್ತಾ ಕುಳಿತಿದ್ದೇನಲ್ಲಾ ಎಂದು ನಿಮಗೆ ಅನ್ನಿಸಬಹುದೆಂದು ನನಗೂ ಅನ್ನಿಸುತ್ತಿದೆ. ಈ ಕತೆಯ ಮೊದಲಿಂದ ಕೊನೆಯವರೆಗೂ ಬರುವ ಈ ಕುತೂಹಲಕರ ಪಾತ್ರದ ಪರಿಚಯ ಮಾಡಿಕೊಳ್ಳುವುದು ಕತೆ ಕೇಳುವುದಕ್ಕೆ ಸಹಾಯಕವೇ ಅಲ್ಲವೆ?

ಈ ಕೇಡಿ ಮುನಿಸ್ವಾಮಿಗೆ ಯಾರೋ ಮಾಗಡಿ ಹತ್ತಿರದ ಹಳ್ಳಿಗಳಲ್ಲಿ ಈ ಚಿರತೆ ಹಸು ಕೊಂದ ಸಮಾಚಾರ ಹೇಳಿದರು. ಮುನಿಶಾಮಿ ತನ್ನ ದಂಧೆಗೆ ಕೃತಕ ಚಿರತೆ ಕಾಲುಗಳನ್ನು ತಯಾರಿಸಿಕೊಂಡಿದ್ದನೆಂಬ ಮಾತ್ರಕ್ಕೆ ಇವನಿಗೆ ನಿಜವಾದ ಚಿರತೆಗಳ ಬಗ್ಗೆ ಏನೂ ಗೊತ್ತಿರಲಿಲ್ಲವೆಂದು ಮಾತ್ರ ತಿಳಿಯ ಬೇಡಿ. ಶಿಕಾರಿಯ ಬಗ್ಗೆ ಅವನು ಅಜ್ಞಾನಿಯೇನಲ್ಲ. ಅವನ ಯೌವನದಲ್ಲಿ ಅವನು ಬೇಕಾದಷ್ಟು ಶಿಕಾರಿ ಮಾಡಿದ್ದವನು. ಕಾಡಿನ ಬಗ್ಗೆ ಕಾಡು ಪ್ರಾಣಿಗಳ ಬಗ್ಗೆ ಸಾಕಷ್ಟು ತಿಳಿದುಕೊಂಡಿದ್ದವನು. ಅಷ್ಟು ಗೊತ್ತಿದ್ದುದರಿಂದಲೇ ಅವನು ವಂಚನೆಯಲ್ಲೂ ನೈಪುಣ್ಯ ತೋರಿಸುತ್ತಿದ್ದುದು. ಅವನಿಗೆ ಈ ಚಿರತೆ ಸಮಾಚಾರ ಗೊತ್ತಾದ ಕೂಡಲೇ ಬಸ್ ಹತ್ತಿ ಮಾಗಡಿ ಹಳ್ಳಿಗೆ ಹೋದ. ಖುದ್ದಾಗಿ ತನಿಖೆ ನಡೆಸಿದ. ಮಾಗಡಿ ಸುತ್ತಮುತ್ತ ಈ ಚಿರತೆ ಹಲವಾರು ಕುರಿ ನಾಯಿ ಹಸುಗಳನ್ನು ಅಲ್ಪ ಕಾಲಾವಧಿಯಲ್ಲಿ ಹಿಡಿದು ತಿಂದಿದ್ದು ನಿಜವಾಗಿತ್ತು.

ಶಿಕಾರಿ ಗೈಡ್ ಆಗಿ ಮುನಿಶಾಮಿಯ ದಂಧೆ ಇಳಿಮುಖವಾಗಿತ್ತು. ಅವನಿಗೆ ದುಡ್ಡು ಕೊಟ್ಟು ಹಿಂಬಾಲಿಸಿದ ಯಾವ ಜಂಟಲ್‌ಮನ್ ಶಿಕಾರಿದಾರನೂ ಈತನಕ ಚಿರತೆ ಹೊಡೆಯುವುದಿರಲಿ ನೋಡಲು ಸಹ ಆಗಿರಲಿಲ್ಲ. ಬೆಂಗಳೂರಿನ ಎಲ್ಲಾ ಶಿಕಾರಿ ಸಾಹಿಬ್‌ಗಳೂ ಮಾಸ್ಟರ್‌ಗಳೂ ಇವನನ್ನು ದೂರ ಮಾಡತೊಡಗಿದ್ದರು. ಆಗೀಗ ಬೆಂಗಳೂರಿಗೆ ಹೊಸದಾಗಿ ಆಗಮಿಸುತ್ತಿದ್ದ ಯೂರೋಪಿಯನ್ ಅಥವಾ ಸ್ವದೇಶೀ ಶಿಕಾರಿ ಮಾಸ್ಟರ್‌ಗಳಿಗೆ ಮಾತ್ರ ಅವನ ಖದೀಮ ದಂದೆ ಸೀಮಿತವಾಗಿ ಮುನಿಶಾಮಿಗೆ ಸೇಂದಿಗೂ ಊಟಕ್ಕೂ

ತೊಂದರೆ ಪ್ರಾರಂಭವಾಗಿತ್ತು. ಆದ್ದರಿಂದ ಚಿರತೆ ನಿಜವಾಗಿಯೂ ಮಾಗಡಿಬಳಿ ಇರುವುದು ಗೊತ್ತಾದಾಗ ಮುನಿಶಾಮಿ ಈಸಾರಿ ಅದನ್ನು ತಾನೇ ಶಿಕಾರಿ ಮಾಡಿಬಿಡಬೇಕೆಂದು ಧೈರ್ಯಮಾಡಿದ.

ಆ ಚಿರತೆ ಪದೇ ಪದೇ ಕುರಿಗಳನ್ನೂ ದನಗಳನ್ನೂ ಹಿಡಿಯುತ್ತಿದ್ದುದರಿಂದ ಸುಲಭದಲ್ಲಿ ಅದನ್ನು ಹೊಡೆಯಬಹುದೆಂದು ಲೆಕ್ಕ ಹಾಕಿದ. ಅದನ್ನು ಹೊಡೆದರೆ ಈಸಾರಿ ಮಾತ್ರ ಎತ್ತಿನಗಾಡಿಮೇಲೆ ಹಾಕಿಕೊಂಡು ತಮ್ಮಟೆ ಟಾಂಟಾಂ ಬಜಾಯಿಸುತ್ತ ಬೆಂಗಳೂರಿನ ಬೀದಿಗಳಲ್ಲಿ ಮೆರವಣಿಗೆ ಮಾಡಿ ತನ್ನ ಶಿಕಾರಿ ಸಾಮರ್ಥ್ಯಕ್ಕೆ ಆದಷ್ಟು ಪ್ರಚಾರ ದೊರಕುವಂತೆ ಮಾಡಬೇಕು ಎಂದು ಕಲ್ಪಿಸಿಕೊಂಡಿದ್ದ. ಅಲ್ಲದೆ ಚಿರತೆ ಹೊಡೆದು ಹಿಂದಿನ ಮಹಾರಾಜರುಗಳಂತೆ ಕೋವಿ ಹಿಡಿದು ಅದರ ಮೇಲೆ ಕಾಲಿಟ್ಟು ನಿಂತುಕೊಂಡು ಫೋಟೋ ತೆಗೆಸಿ ಇವನಿಂದ ದೂರಾಗುತ್ತಿದ್ದ ಬೆಂಗಳೂರಿನ ಶಿಕಾರಿ ಸಾಹಿಬ್‌ಗಳಿಗೆಲ್ಲಾ ಒಂದೊಂದು ಕಾಪಿ ಕಳಿಸಿ ತಾನು ಅಸಲಿ ಶಿಕಾರಿ ಗೈಡ್ ಎಂಬುದನ್ನು ಸಾಕ್ಷಾಧಾರಗಳೊಡನೆ ಸಾಬೀತು ಮಾಡಬೇಕೆಂದು ಯೋಜನೆ ಹಾಕಿದ. ಇವನ ಜೊತೆ ಬಂದ ಒಬ್ಬ ಸಾಹೇಬನೂ ಒಂದು ಚಿರತೆಯನ್ನೂ ಹೊಡೆಯದುದಕ್ಕೆ ಅವರ ಅಸಾಮರ್ಥ್ಯ ಕಾರಣವೇ ಹೊರತು ತಾನಲ್ಲವೆಂದು ಅವರೆಲ್ಲರಿಗೂ ಸರಿಯಾಗಿ ಮನವರಿಕೆ ಮಾಡಿಕೊಡಲು ನಿರ್ಧರಿಸಿದ.

ಇದನ್ನೆಲ್ಲಾ ಯೋಚಿಸಿದಷ್ಟೂ ಮುನಿಶಾಮಿಗೆ ರೋಮಾಂಚನವಾಯ್ತು. ಕಳೆಗುಂದುತ್ತಿದ್ದ ತನ್ನ ಖದೀಮ ದಂದೆಯನ್ನು ಮತ್ತೆ ಪುನರುಜ್ಜೀವನಗೊಳಿಸಲು ಇದು ಬಹಳ ಒಳ್ಳೆ ಉಪಾಯವಾಗಿ ಅವನಿಗೆ ತೋರಿತು.

ಅವನ ಹತ್ತಿರ ಕೋವಿ ಇರಲಿಲ್ಲ. ಅವನಬಳಿ ಹಿಂದೆ ಇದ್ದ ಕೋವಿಯನ್ನು ಬಹಳ ಹಿಂದೆಯೇ ಹೊಟ್ಟೆಪಾಡಿಗಾಗಿ ಅಡುವಿಟ್ಟು ಅದನ್ನು ಬಿಡಿಸಿಕೊಳ್ಳಲಾರದೆ ಕೊನೆಗೆ ಯಾರಿಗೋ ಮಾರಿ ಸಾಲ ಹಿಂದಿರುಗಿಸಿದ್ದ. ಆದರೂ ಈಗ ಈ ಸುವರ್ಣಾವಕಾಶ ಬಿಡುವಹಾಗೆ ಇರಲಿಲ್ಲ. ಯಾರ ಹತ್ತಿರವೋ ಕಾಡಿ ಬೇಡಿ ದಮ್ಮಯ್ಯ ಹಾಕಿ ಒಂದು ಹಳೆ ತೋಟಾ ಕೋವಿಯನ್ನೂ, ಅದಕ್ಕೆ ನಾಲ್ಕು ಎಲ್.ಜಿ ತೋಟಾಗಳನ್ನೂ ಸಂಪಾದಿಸಿದ. ಮತ್ತೆ ಚಿರತೆ ಹಸು ಹಿಡಿದ ಜಾಗದಲ್ಲಿ ಪ್ರತ್ಯಕ್ಷವಾಗಿ ಊರವರನ್ನೆಲ್ಲಾ ಕರೆಸಿ ತಾನೊಬ್ಬ ಹಳೇ ಶಿಕಾರಿದಾರನೆಂದೂ, ಹಿಂದೆ ದೊಡ್ಡದೊಡ್ಡ ಮಿಲಿಟರಿ ಜನರಲ್‌ಗಳ, ವೈಸ್‌ರಾಯ್ ಮತ್ತು ಗೌರ್ನರುಗಳ ಜೊತೆಯೆಲ್ಲಾ ಶಿಕಾರಿ ಮಾಡಿದವನೆಂದೂ ಬಡಾಯಿ ಕೊಚ್ಚಿ, ನಿಮ್ಮ ಸಂಕಟ ಪರಿಹಾರಕ್ಕೆ ಈಗ ಇಲ್ಲಿಗೆ ಆಗಮಿಸಿದ್ದೇನೆಂದು ಹೇಳಿದ. ತಾನು ಮಾಗಡಿ ಬೆಟ್ಟದ ಈಶಾನ್ಯಕ್ಕಿರುವ ಮಾಗಡಿ ಊರಿನಲ್ಲಿ ಬಿಡಾರ ಮಾಡಿರುತ್ತೇನೆ, ಇನ್ನೊಮ್ಮೆ ಚಿರತೆ ಯಾವುದಾದರೂ ಹಸುವನ್ನು ಕೊಂದರೆ ಕೂಡಲೆ ಬಂದು ನನಗೆ ತಿಳಿಸಿ ಎಂದು ಹಳ್ಳಿಯವರಿಗೆಲ್ಲಾ ಹೇಳಿ ಅಲ್ಲಿಂದ ನೆಟ್ಟಗೆ ಮಾಗಡಿ ಊರಿಗೆ ಹೋಗಿ ಠಿಕಾಣಿ ಹೂಡಿದ.


ಅವನ ಅದೃಷ್ಟವೋ ದುರಾದೃಷ್ಟವೋ, ಅಂತೂ ಅವನು ಮಾಗಡಿ ಊರಿಗೆ ಹೋಗಿ ಬಿಡಾರ ಹೂಡಿದ ಎರಡೇ ದಿನಕ್ಕೆ ಚಿರತೆ ಇನ್ನೊಂದು ದನ ಹಿಡಿದು ಕೊಂದಿತು. ಮುನಿಶಾಮಿ

ತಡ ಮಾಡದೆ ತಾನು ಎರವಲು ತಂದಿದ್ದ ಕೋವಿಯೊಂದಿಗೆ ಸನ್ನದ್ಧನಾಗಿ ಅಲ್ಲಿ ಪ್ರತ್ಯಕ್ಷವಾದ. ಸಮೀಪದ ಮರ ಒಂದರ ಮೇಲೆ ಮಚಾನು ಕಟ್ಟಿ ಮರ ಹತ್ತಿ ಕೂತ. ಎಲ್ಲ ಅವನ ಊಹೆ ಪ್ರಕಾರವೇ ನಡೆಯಿತು. ಚಿರತೆ ಅರ್ಧ ತಿಂದು ಬಿಟ್ಟುಹೋಗಿದ್ದ ಹಸು ಮುಗಿಸಲು ಹಾಜರಾಯ್ತು. ಜೋಡುನಳಿಗೆ ತೋಟಾಕೋವಿ ಹಿಡಿದು ಕುಳಿತಿದ್ದ ಮುನಿಶಾಮಿ ಎರಡು ನಳಿಗೆಯ ಎರಡು ಈಡುಗಳನ್ನೂ ಒಟ್ಟಿಗೆ ಢಮಾರೆಂದು ಚಿರತೆ ಭುಜಕ್ಕೆ ಗುರಿಯಿಟ್ಟು ಲಗಾಯಿಸಿದ. ಗಾಯಗೊಂಡ ಚಿರತೆ ಒಮ್ಮೆ ಘರ್ಜಿಸಿ ನೆಗೆದು ಚಿಮ್ಮಿ ಮಾಗಡಿ ಗುಡ್ಡದಕಡೆಗೆ ಓಡಿಹೋಯಿತು.

ಹತಾಶನಾದ ಮುನಿಶಾಮಿ ಮರದಿಂದಿಳಿದ. ಚಿರತೆ ಓಡಿಹೋದ ದಾರಿಯುದ್ದಕ್ಕೂ ಅದರ ಗಾಯಗಳ ರಕ್ತ ಸೋರಿತ್ತು. ಮುನಿಶಾಮಿಯ ಗುರಿ ಅದರ ಆಯಕ್ಕೆ ತಾಗಿರಲಿಲ್ಲ. ತನಗೆ ವಯಸ್ಸಾಯ್ತು, ಆದ್ದರಿಂದಲೇ ಚಿರತೆ ಸಾಯದೆ ಗಾಯಗೊಂಡು ಓಡಿಹೋಗಿದೆ ಎಂದುಕೊಂಡ. ಚಿರತೆ ಕೊಂದು ಮೆರವಣಿಗೆ ಮಾಡಿ ಪ್ರಚಾರ ಪಡೆಯಬೇಕೆಂದಿದ್ದ ಅವನ ಕನಸುಗಳನ್ನೆಲ್ಲ ಯೋಚಿಸಿ ಗಾಯದ ಚಿರತೆ ಏನಾಯ್ತೆಂದು ಹಿಂಬಾಲಿಸಿ ಹುಡುಕಲು ಯೋಚಿಸಿದ. ತಕ್ಷಣ ಅವನ ಪ್ರಚಾರದ ಹೊಂಗನಸುಗಳೆಲ್ಲ ಮಾಯವಾಗಿ ಅದರ ಬದಲು ಮೈಮೇಲೆ ನೆಗೆಯುವ ಗಾಯದ ಚಿರತೆ, ಅದರ ಭಯಾನಕ ಕೋರೆದಾಡೆಗಳು, ಭರ್ಜಿಗಳಂತಿರುವ ಉಗುರುಗಳು ಇವೆಲ್ಲದರ ದುಃಸ್ವಪ್ನ ಮನಸ್ಸಿನಲ್ಲಿ ಮೂಡಿತು. ಹಾಗಾಗಿ ''ಆ ಚಿರತೆಗೆ ಸರಿಯಾಗಿ ಬುದ್ಧಿ ಕಲಿಸಿದ್ದೇನೆ. ಅದು ಎಲ್ಲಾದರೂ ಹೋಗಿ ಸಾಯಲಿ. ನಿಮ್ಮ ದನಗಳ ತಂಟೆಗಂತೂ ಅದು ಇನ್ನು ಬರುವುದಿಲ್ಲ'' ಎಂದು ಊರವರಿಗೆ ಹೇಳಿ ಅಲ್ಲಿಂದ ಮುನಿಶಾಮಿ ಕಾಲುಕಿತ್ತ.

ಕೆಲವು ವಾರಗಳು ಚಿರತೆಯ ಸುಳಿವಿಲ್ಲದೆ ಕಳೆಯಿತು. ಆಮೇಲೆ ಏನಾಗಬಹುದೆಂದು ನಾವೆಲ್ಲ ಊಹಿಸುತ್ತೇವೋ ಅದೇ ಹಳೇ ಕತೆಯ ಪುನರಾವರ್ತನೆ ಆರಂಭವಾಯ್ತು. ಅರೆ ಪೆಟ್ಟಾದ ಹುಲಿ ಚಿರತೆಗಳು ಏನೇನು ಮಾಡುತ್ತವೋ ಅದೇ ಶುರುವಾಯ್ತು. ಚಿರತೆಯೊಂದು ಮಾಗಡಿಯಿಂದ ಕ್ಲೋಸ್‌ಪೇಟೆವರೆಗಿನ ಹಳ್ಳಿಗಳಲ್ಲೆಲ್ಲಾ ದನ ಕರುಗಳ ಮೇಲೂ ನಾಯಿಗಳ ಮೇಲೂ ಧಾಳಿ ಮಾಡತೊಡಗಿತು. ಅದನ್ನು ಬೆದರಿಸಿ ಓಡಿಸಲು ಹೋದ ಒಬ್ಬ ದನ ಕಾಯುವ ಮುದುಕನನ್ನೂ ಇನ್ನೊಬ್ಬ ಹುಡುಗನನ್ನೂ ಚಿರತೆ ಕಚ್ಚಿ ಸರಿಯಾಗಿ ಗಾಯಗೊಳಿಸಿತು.

## ೩



ಪ್ರಹಸನದಂತೆ ಶುರುವಾದ ಈ ನಾಟಕದೊಳಕ್ಕೆ ಒಬ್ಬ ಜಟಕಾವಾಲಾನೂ ಅವನ ಕುದುರೆಯೂ ಬಂದರು. ಕ್ಲೋಸ್ ಪೇಟೆ ರೈಲ್ವೆಸ್ಟೇಷನ್ನಿನಲ್ಲಿ ರೈಲಿಳಿದ ಮೂರು ಜನ ಅಲ್ಲಿ ಊರಿಗೆ ಹೋಗಲು ಆ ಹೊತ್ತಿನಲ್ಲಿ ಯಾವುದೇ ಬಸ್ ಸೌಕರ್ಯ ಇಲ್ಲದ್ದನ್ನು ನೋಡಿ ಜಟಕಾದಲ್ಲಿ ಊರಿಗೆ ಹೋಗಲು ನಿರ್ಧರಿಸಿದರು. ನಿಮ್ಮಲ್ಲಿ ಕೆಲವರಿಗೆ ಜಟಕಾ ಪದದ ಪರಿಚಯ ಇಲ್ಲದಿರಬಹುದು. ಜಟಕಾ ಎಂದರೆ ಎರಡು ಚಕ್ರದ ಎತ್ತಿನ ಗಾಡಿಯನ್ನೇ ಹೋಲುವ ಹಗುರವಾಗಿ ರಚಿಸಿರುವ ಕುದುರೆಗಾಡಿ. ಅದಕ್ಕೂ ಬಿದಿರು ದಬ್ಬೆಗಳಿಂದ ಎತ್ತಿನಗಾಡಿಗಳಿಗಿರುವಂತೆಯೇ ಕಮಾನು ರಚಿಸಿ ಮುಚ್ಚಿಗೆ ಮಾಡಿರುತ್ತಾರೆ. ಈ ಗಾಡಿಯನ್ನೆಳೆಯಲು ಕುಳ್ಳಗೆ ಕತ್ತೆಗಳಿಗಿಂತ ಕೊಂಚ ಎತ್ತರವಾಗಿರುವ ಕಂತ್ರಿ ಕುದುರೆಗಳನ್ನು ಉಪಯೋಗಿಸುತ್ತಾರೆ ಈ ಕುದುರೆಗಳ ಎಳೆಯು ಶಕ್ತಿ ಸಾಮರ್ಥ್ಯಗಳಿಗೆ ಅನುಗುಣವಾಗಿರಲೆಂದೇ ಜಟಕಾವನ್ನು ಹಗುರ ಸಾಮಗ್ರಿಗಳಿಂದ ರಚಿಸಿರುವುದು.

ಹತ್ತು ಮೈಲಿ ದೂರದ ಹಳ್ಳಿಗೆ ಜಟಕಾ ಗಾಡಿ ಮೂರು ಜನರನ್ನೇನೋ ಕರೆದುಕೊಂಡು ಬಂತು. ರಾತ್ರಿಯಾಗಿದ್ದರಿಂದ ಜಟಕಾವಾಲ ಅಲ್ಲೇ ಮಲಗಿ, ಬೆಳಗ್ಗೆ ಎದ್ದು ಕ್ಲೋಸ್ ಪೇಟೆಯತ್ತ ಪಯಣ ಬೆಳೆಸೋಣವೆಂದು ಯೋಚಿಸಿದ. ಬೆಳಗ್ಗೆ ಹೋಗುವುದಾದರೆ ಕ್ಲೋಸ್ ಪೇಟೆಗೆ ಹೋಗುವ ಯಾರಾದರೂ ಪ್ಯಾಸೆಂಜರ್ ಸಿಕ್ಕರೂ ಸಿಕ್ಕಬಹುದೆಂದು ಅವನ ಆಸೆ. ಗಾಡಿಯಿಂದ ಕುದುರೆ ಕಳಚಿ, ಗಾಡಿಯಡಿ ನೇತುಹಾಕಿದ್ದ ಚೀಲದಿಂದ ಒಣ ಹುಲ್ಲನ್ನಷ್ಟು

ತೆಗೆದು ಕುದುರೆಗೆ ಮೇವಾಗಿ ರಾಶಿ ಹಾಕಿದ. ಆಮೇಲೆ ಅಲ್ಲೇ ಮಲಗಿ ನಿದ್ದೆಹೋದ. ಕುದುರೆ ಅವನು ರಾಶಿಹಾಕಿದ ಮೇವನ್ನೆಲ್ಲ ತಿಂದಾದ ಮೇಲೆ ನಿಧಾನವಾಗಿ ರಸ್ತೆಯ ಎರಡು ಪಕ್ಕದಲ್ಲಿ ಬೆಳೆದಿದ್ದ ಹಸುರು ಹುಲ್ಲನ್ನು ಮೇಯುತ್ತಾ ಮುಂದುವರಿಯಿತು. ಅದೊಂದು ಚಿಕ್ಕ ಹಳ್ಳಿ. ನಾಲ್ಕೇ ಹೆಜ್ಜೆಯೊಳಗೆ ಊರು ಮುಗಿದು ಅದು ಊರಿನ ಹೊರವಲಯಕ್ಕೆ ಹತ್ತಿರಾಯ್ತು.

ಆ ಊರಿನ ಕೊಟ್ಟಕೊನೆಯ ಗುಡಿಸಿಲಿನ ಹಿಂಭಾಗದಿಂದ ಎಂಥದೋ ಒಂದು ಇದ್ದಕ್ಕಿದ್ದಂತೆ ಅದರ ಮೇಲೆ ಜಿಗಿಯಿತು. ಕುದುರೆಗೆ ಏನೆಂದು ತಿಳಿಯುವುದರೊಳಗೆ ಅದು ಕುತ್ತಿಗೆಗೆ ಬಾಯಿಹಾಕಿ ಕಚ್ಚಿತು. ಕುದುರೆ ಗಾಬರಿಯಿಂದ ಕೆನೆಯುತ್ತ ನಾಗಾಲೋಟದಲ್ಲಿ ಗಾಡಿಕಡೆಗೆ ಓಡಿ ಬಂತು. ಅದರ ಮೇಲೆ ಹಾರಿದ ರಹಸ್ಯ ಪ್ರಾಣಿ ಆಗಲೂ ಅದರ ಬೆನ್ನು ಬಿಡಲಿಲ್ಲ, ಕುತ್ತಿಗೆ ಕಚ್ಚುವುದನ್ನು ನಿಲ್ಲಿಸಲಿಲ್ಲ. ಆದರೆ ಊರಿನ ಮಧ್ಯೆ ಮೈಮೇಲಿದ್ದ ಪ್ರಾಣಿ ಆಯ ತಪ್ಪಿ ಕುದುರೆ ಮೇಲಿಂದ ಕೆಳಕ್ಕೆ ಬಿತ್ತು. ಅದರ ಮೈಮೇಲೆ ಸವಾರಿ ಮಾಡುತ್ತಿದ್ದ ಪ್ರಾಣಿ ಇನ್ಯಾವುದೂ ಅಲ್ಲ, ಮುನಿಶಾಮಿ ಗಾಯಮಾಡಿದ್ದ ಚಿರತೆ! ಅದು ಅಲ್ಲಿಂದ ಓಡಿ ಹೋಗುವುದರೊಳಗೆ ಕುದುರೆಯ ಬೆನ್ನ ಮೇಲೂ ಕುತ್ತಿಗೆಯ ಮೇಲೂ ಸಾಕಷ್ಟು ಗಾಯ ಮಾಡಿತ್ತು. ಚಿರತೆಯ ಗುರುಗುಟ್ಟುವಿಕೆಗೂ ಕುದುರೆಯ ಕೆನೆತಕ್ಕೂ ಎಚ್ಚರಾದ ಗಾಡಿಯವನು ನೋಡಿದಾಗ ಕುದುರೆ ಮೈಯೆಲ್ಲಾ ಗಾಯ ರಕ್ತ ಮಾಡಿಕೊಂಡು ಓಡಿಬರುತ್ತಿತ್ತು. ಅವನೂ ಗಾಬರಿಯಿಂದ ಕಿರುಚಾಡಿದ.

ಗಾಯಗಳಿಂದ ಗಾಡಿ ಎಳೆಯಲಾರದಷ್ಟು ಕುದುರೆ ನಿತ್ರಾಣವಾಗಿದ್ದುದರಿಂದ ಮಾರನೆ ದಿನ ಬೆಳಗ್ಗೆ ಜಟಕಾವಾಲನೇ ಗಾಡಿಯನ್ನು ಎಳೆಯುತ್ತಾ, ಕುದುರೆಯನ್ನು ಗಾಡಿ ಹಿಂದೆ ಕಟ್ಟಿ ಕ್ಲೋಸ್‌ಪೇಟೆವರೆಗೆ ನಡೆಸಿಕೊಂಡು ಹೋಗಬೇಕಾಯ್ತು. ಜಟಕಾವಾಲ ಕ್ಲೋಸ್‌ಪೇಟೆ ಪೋಲಿಸ್ ಸ್ಟೇಷನ್ನಿನಲ್ಲಿ ಈ ಸಂಗತಿ ತಿಳಿಸಿ ದೂರು ನೀಡಿದ. ಈ ವಾರ್ತೆ ಊರೆಲ್ಲಾ ಹಬ್ಬಿತು. ಯಾವ ಕ್ಷಣ ಬೇಕಾದರೂ ನರಭಕ್ಷಕವಾಗಬಹುದಾದ ಚಿರತೆಯೊಂದು ತಮ್ಮ ಹಳ್ಳಿಗಳ ಆಸುಪಾಸಿನಲ್ಲೇ ತಿರುಗುತ್ತಿದೆಯೆಂದು ತಿಳಿದ ಜನ ಗಾಬರಿಬಿದ್ದರು.

ಈ ಸಂಗತಿ ನಡೆದ ಕೆಲವೇ ಕಾಲದಲ್ಲಿ ಮಾಗಡಿಯಿಂದ ಎರಡೇ ಮೈಲು ದೂರದ ಹೊಲಗಳಲ್ಲಿ ಕೆಲಸ ಮಾಡುತ್ತಿದ್ದ ಒಬ್ಬನ ಮೇಲೆ ಹಾಡು ಹಗಲೇ ಚಿರತೆ ಆಕ್ರಮಣ ಮಾಡಿತು. ಅವನ ಆರ್ತನಾದ ಕೇಳಿ ಎಚ್ಚತ್ತ ಅಕ್ಕಪಕ್ಕದ ಹೊಲಗಳವರೆಲ್ಲಾ ಕತ್ತಿ ದೊಣ್ಣೆ ಹಿಡಿದು ಓಡಿ ಬರುವುದರೊಳಗೆ ಅಲ್ಲಿ ಏನೂ ಇರಲಿಲ್ಲ. ಮನುಷ್ಯ ಮಾತ್ರ ರಕ್ತದ ಮಡುವಿನಲ್ಲಿ ಬಿದ್ದಿದ್ದ. ಗಾಯಗಳಲ್ಲದೆ ಮೈಯೆಲ್ಲಾ ಸಿಗಿದು ಹೋಗುವಂತೆ ಚಿರತೆ ಪರಚಿತ್ತು. ಅವನನ್ನು ಹಳ್ಳಿಯವರು ಹೇಗೋ ಮಾಡಿ ಮಾಗಡಿಯಲ್ಲಿದ್ದ ಸರ್ಕಾರಿ ಡಿಸ್ಪೆನ್ಸರಿಗೆ ಒಯ್ದರು. ಪೋಲೀಸರಿಗೆ ಅವರೆಲ್ಲಾ ಸೇರಿ ದೂರು ಕೊಟ್ಟರು. ಅಲ್ಲಿದ್ದ ಅತ್ಯುನ್ನತ ಸರ್ಕಾರಿ ಅಧಿಕಾರಿಯೆಂದರೆ ಒಬ್ಬ ಪೋಲೀಸ್ ದಫೇದಾರ. ಅವನು ಕೂಡಲೇ ತನ್ನ ಕರ್ತವ್ಯಪಾಲನೆಗೆ

ತೊಡಗಿದ. ಈ ಅನಾಹುತ ನಡೆದ ಸ್ಥಳ ಪರಿಶೀಲನೆ ಮಾಡಿ ಮಹಜರ್ ಬರೆಯಲು ಸೈಕಲ್ ಹಿಡಿದಿದ್ದ ಇನ್ನೊಬ್ಬ ಪೋಲೀಸ್ ಪೇದೆಯನ್ನೂ ರೈತರನ್ನೂ ಕರೆದುಕೊಂಡು ಹೊಲಗಳತ್ತ ಹೊರಟ.

ಆ ಜಾಗದಲ್ಲಿ ಕೋಡಿ ಹರಿದಿದ್ದ ರಕ್ತ ಮತ್ತು ಚಿರತೆಯ ಹೆಜ್ಜೆಗುರುತು ಇತ್ಯಾದಿಗಳನ್ನೆಲ್ಲಾ ನೋಟ್ ಮಾಡಿಕೊಳ್ಳುತ್ತ ದಫೇದಾರ ಮಹಜರು ವರದಿ ತಯ್ಯಾರಿಸುತ್ತಿರಬೇಕಾದರೆ ಅಲ್ಲಿಗೆ ಬಂದವನೊಬ್ಬ ಇಲ್ಲೇ ಎರಡು ಫರ್ಲಾಂಗ್ ದೂರದ ಗುಡ್ಡದಲ್ಲಿ ಕಲ್ಲುಬಂಡೆಯ ಮೇಲೆ ಚಿರತೆಯೊಂದು ಕುಳಿತಿರುವುದನ್ನು ನೋಡಿದೆ ಎಂದು ವರದಿ ಮಾಡಿದ. ಅಲ್ಲಿದ್ದ ಚುರುಕುಗಣ್ಣಿನವನೊಬ್ಬ ಬೆಟ್ಟಗಳತ್ತ ದಿಟ್ಟಿಸುತ್ತಾ ಅಲ್ಲಿ ಚಿರತೆ ಕುಳಿತಿರುವುದು ತನಗೂ ಕಾಣುತ್ತದೆ ಎಂದ. ಅದನ್ನು ಇನ್ನೂ ಹಲವರು ನೋಡಿ ದೃಢೀಕರಿಸಿದರು. ಅವರು ಹಾಗಂದಿದ್ದೇ ತಡ ದಫೇದಾರ ಕಾನ್‌ಸ್ಟೇಬಲನ ಸೈಕಲ್ ತಗೊಂಡು ಸ್ಟೇಷನ್ನಿನಲ್ಲಿಟ್ಟಿದ್ದ ಮೂರು ರೈಫಲ್‌ಗಳಲ್ಲಿ ಒಂದನ್ನೂ, ಮದ್ದು ಗುಂಡುಗಳನ್ನೂ ತರಲು ಮಾಗಡಿ ಕಡೆಗೆ ಅಸಾಧ್ಯ ವೇಗದಲ್ಲಿ ಪೆಡಲು ತುಳಿಯುತ್ತಾ ದೌಡಾಯಿಸಿದ.

ಆತ ಆಯುಧ ಸನ್ನದ್ಧನಾಗಿ ಅದೇ ವೇಗದಲ್ಲಿ ಬಂದರೂ ಅಷ್ಟರೊಳಗೆ ಅಲ್ಲಿ ಕುಳಿತಿದ್ದ ಚಿರತೆ ಎದ್ದುಹೋಯ್ತೆಂದು ಅಲ್ಲೇ ಇವನಿಗಾಗಿ ಕಾದಿದ್ದ ರೈತರೂ ಪೋಲೀಸ್ ಪೇದೆಯೂ ಹೇಳಿದರು. ನಿರಾಶನಾದ ದಫೇದಾರನಿಗೆ ಅಲ್ಲಿದ್ದ ರೈತರು, ಆ ಗುಡ್ಡ ಸಮೀಪದಲ್ಲೇ ಇರುವುದರಿಂದ ನಾವು ಆ ಗುಡ್ಡದ ಹತ್ತಿರ ಹೋಗಿ ಸುತ್ತುವರಿದು ನೊಡೋಣ. ಆ ಚಿರತೆ ಗುಡ್ಡದ ಬೇರೆ ಮಗ್ಗುಲಲ್ಲಿ ಕುಳಿತಿದ್ದರೆ ಕಂಡರೂ ಕಾಣಬಹುದು ಎಂದು ಸಲಹೆ ಕೊಟ್ಟರು. ದಫೇದಾರ ಊರವರ ಈ ಸಲಹೆಗೆ ಸಮ್ಮತಿಸಿ ಒಬ್ಬ ರೈತನನ್ನು ಕರೆದುಕೊಂಡು ಗುಡ್ಡ ಸುತ್ತಿಬರಲು ಹೊರಟ.

ಆಗ ಪೋಲೀಸರಿಗೂ ಮಿಲಿಟರಿಯವರು ಉಪಯೋಗಿಸುತ್ತಿದ್ದ ೩೦೩ ನಂಬರಿನ ರೈಫಲನ್ನೇ ಕೊಡುತ್ತಿದ್ದರು. ಒಂದೇ ವ್ಯತ್ಯಾಸವೆಂದರೆ ಐದು ಗುಂಡುಗಳನ್ನು ಸರದಿ ಪ್ರಕಾರ ಹಾರಿಸಲು ರೈಫಲ್ ಕೆಳಗೆ ಜೋಡಿಸಿರುತ್ತಿದ್ದ ತೋಟಾಗಳ ಮ್ಯಾಗಝೀನ್ ತೆಗೆದುಹಾಕಿ ಒಂದೊಂದು ಸಾರಿಗೆ ಒಂದೊಂದೇ ಗುಂಡು ಹಾರಿಸಲು ಸಾಧ್ಯವಾಗುವಂತೆ ಮಾಡಿರುತ್ತಿದ್ದರು. ಗಲಭೆ ದೊಂಬಿ ಮುಂತಾದ ಸಂದರ್ಭದಲ್ಲಿ ಜನಗಳನ್ನು ಹತೋಟಿಗೆ ತರಲು ಗೋಲೀಬಾರ್‌ಗೆ ಆಜ್ಞೆ ಮಾಡಿದಾಗ ಪೋಲೀಸರು ಯದ್ವಾತದ್ವಾ ಗುಂಡು ಹಾರಿಸಿ ಜನಗಳನ್ನು ಕೊಲ್ಲದಿರಲಿ ಎಂದು ಸರ್ಕಾರ ಈ ಕ್ರಮ ಅನುಸರಿಸುತ್ತಿದ್ದುದು. ಆದ್ದರಿಂದ ದಫೇದಾರನಿಗೆ ಚಿರತೆ ಮೇಲೆ ಒಂದೊಂದು ಸಾರಿಗೆ ಒಂದೊಂದೇ ಗುಂಡು ಹಾರಿಸಲು ಸಾಧ್ಯವಿತ್ತು. ರೈಫಲ್ಲಿಗೆ ಒಂದು ಗುಂಡು ತುಂಬಿದ್ದ ಆತ ಮಿಕ್ಕ ಮೂರು ತೋಟಾಗಳನ್ನು ಜೇಬೊಳಗೆ ಇಟ್ಟುಕೊಂಡಿದ್ದ.

ಗುಡ್ಡ ಸುತ್ತಿ ಅದರ ಇನ್ನೊಂದು ಪಾರ್ಶ್ವಕ್ಕೆ ಬಂದರೂ ಅವರಿಗೆ ಚಿರತೆಯ ಸುಳಿವೇ ಕಾಣಲಿಲ್ಲ. ಗುಡ್ಡದ ತುಂಬೆಲ್ಲ ಕುರುಚಲು ಪೊದೆಗಳೂ ಬೃಹದಾಕಾರದ ಬಂಡೆಗಳೂ ತುಂಬಿದ್ದುವು. ಹಳ್ಳಿಯವ ಗುಡ್ಡವನ್ನು ಕೊಂಚ ಹತ್ತಿ ಚಿರತೆ ಅಲ್ಲೆಲ್ಲಾದರೂ ಕಾಣುತ್ತದೆಯೇ

ನೋಡೋಣ ಎಂದು ದಫೇದಾರನಿಗೆ ಸಲಹೆ ಮಾಡಿದ. ಇಬ್ಬರೂ ಹಾಗೇ ಮಾಡಿದರು. ಅವರು ನಾಲ್ಕಾರು ಹೆಜ್ಜೆ ಕ್ರಮಿಸಿಲ್ಲ, ಚಿರತೆ ಯಾವುದೋ ಬಂಡೆಯ ಸಂದಿಯಿಂದ ಮಿಂಚಿನಂತೆ ಪ್ರತ್ಯಕ್ಷವಾಯ್ತು. ಅದರ ಅನಿರೀಕ್ಷಿತ ಆಘಾತಕ್ಕೆ ತತ್ತರಿಸಿದ ದಫೇದಾರ ಗುರಿ ಹಿಡಿಯಲು ಸಾಧ್ಯವಾಗದೆ ಯಾವುದೋ ದಿಕ್ಕಿಗೆ ಗುಂಡು ಹಾರಿಸಿ ಅದು ಚಿರತೆಗೆ ತಗುಲಲೇ ಇಲ್ಲ. ಮರುಕ್ಷಣ ಕೆಳಗೆ ಬಿದ್ದ ದಫೇದಾರನ ಮೇಲೆ ಚಿರತೆ ಇತ್ತು. ಎದೆ, ಭುಜ, ಹೊಟ್ಟೆಗಳನ್ನೆಲ್ಲಾ ಯದ್ವಾತದ್ವಾ ಪರಚಿ ಕಚ್ಚಿತು. ಅದರ ಆಕ್ರಮಣದ ರಭಸಕ್ಕೆ ಸಮೀಪದಲ್ಲೇ ಇದ್ದ ಹಳ್ಳಿಯವ ನಡುಗಿಹೋದ. ಹೋ ಎಂದು ಆರ್ತನಾದ ಮಾಡುತ್ತ ಒಂದೇ ಏಟಿಗೆ ಗುಡ್ಡ ಇಳಿದು ತಪ್ಪಲಿನಲ್ಲಿ ನಿಂತಿದ್ದ ಪೇದೆಕಡೆಗೆ ಓಡಿದ.

ಅವನಿಗೆ ಸರಿಯಾಗಿ ಕಚ್ಚಿ, ಕೋಪವಿಳಿದನಂತರ ಇನ್ನೂ ನರಭಕ್ಷಕನಾಗಿರದ ಆ ಚಿರತೆ ದಫೇದಾರನನ್ನು ಅಲ್ಲೇ ಬಿಟ್ಟು ಕಲ್ಲು ಬಂಡೆಗಳ ನಡುವೆ ನುಸುಳಿ ಮಾಯವಾಯ್ತು. ದಫೇದಾರ ಅರೆ ಮೂರ್ಛಾವಸ್ಥೆಯಲ್ಲಿ ಹುಯ್ಯಲಿಡುತ್ತಾ ನರಳುತ್ತಾ ಅಲ್ಲೇ ಬಿದ್ದಿದ್ದ.

ಈ ನಡುವೆ ತಪ್ಪಿಸಿಕೊಂಡು ಓಡಿದ ಹಳ್ಳಿಯವ ಹೊಲದಲ್ಲಿ ನಿಂತಿದ್ದ ಗುಂಪಿಗೆ ಆದ ಅನಾಹುತವನ್ನು ವರದಿ ಮಾಡಿದ. ತನ್ನ ಬೈಸಿಕಲ್ಲಿನ ಮೇಲೆ ಚಂಗನೆ ನೆಗೆದ ಪೇದೆ ವೇಗವಾಗಿ ಊರಿಗೆ ದೌಡಾಯಿಸಿ ಅಲ್ಲಿದ್ದ ಇನ್ನು ಮೂರು ಜನ ಪೇದೆಗಳಿಗೆ ದಫೇದಾರರಿಗಾದ ಭೀಕರ ದುರ್ಗತಿಯನ್ನು ವಿವರಿಸಿದ. ದಫೇದಾರರು ಸತ್ತೇ ಹೋಗಿದ್ದಾರೆಂದು ಹೇಳಿದ. ಅವರೆಲ್ಲ ರ್‍ಯಾಕಿನಲ್ಲಿದ್ದ ಇನ್ನೆರಡು ರೈಫಲ್‌ಗಳನ್ನು ತೆಗೆದುಕೊಂಡು, ಸೊಂಟಕ್ಕೆ ಲಾಠಿಗಳನ್ನೂ ಸಿಕ್ಕಿಸಿಕೊಂಡು ತಮ್ಮ ಕಾನೂನುಪಾಲಕ ಸಾಹೇಬರ ಗತಿ ಏನಾಯ್ತೆಂದು ನೋಡಲು ಹೊರಟರು. ಈ ವಾರ್ತೆ ಊರೆಲ್ಲಾ ಹಬ್ಬಿ ಹಲವಾರು ಜನ ರೈತರೂ ಈ ಗುಂಪನ್ನು ಸೇರಿಕೊಂಡರು. ಈ ಹತ್ತಾರು ಜನರ ಗುಂಪು ಗಲಾಟೆ ಮಾಡುತ್ತಾ ಗುಡ್ಡ ಹತ್ತಿ, ನರಳುತ್ತಿದ್ದ ದಫೇದಾರರನ್ನು ಹೊತ್ತು, ಮಾಗಡಿ ಸರ್ಕಾರಿ ಡಿಸ್ಪೆನ್ಸರಿಗೆ ತಂದರು. ಮಾರನೆ ದಿನ ಬೆಂಗಳೂರಿನಿಂದ ಆ್ಯಂಬುಲೆನ್ಸ್ ಕಳಿಸಿ ಆತನನ್ನು ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸಲಾಯ್ತು.

ಈ ಚಿರತೆಯ ಹಾವಳಿ ಬಗ್ಗೆ ಬೇಕಾದಷ್ಟು ದೂರುಗಳು ಪೋಲೀಸರಿಗೆ ಆಗಲೇ ಬಂದಿದ್ದುವು. ಆದರೆ ಈ ಚಿರತೆ ಅವರ ಇಲಾಖೆಯ ನೌಕರನನ್ನೇ, ಅದರಲ್ಲೂ ದಫೇದಾರನನ್ನೇ ಹಿನಾಮಾನ ಕಚ್ಚಿದೆ! ಇನ್ನು ಸುಮ್ಮನಿದ್ದರೆ ಹೇಗೆ ಎಂದು ಕೂಡಲೆ ಅವರೆಲ್ಲಾ ಕಾರ್ಯಪ್ರವೃತ್ತರಾದರು. ಅವರಿಗೆ ಈ ಅನಾಹುತಗಳಿಗೆಲ್ಲಾ ಮೂಲ ಕಾರಣ ಯಾರೆಂದು ಪತ್ತೆ ಹಚ್ಚುವುದು ಕಷ್ಟವಾಗಲಿಲ್ಲ. ಇಷ್ಟೆಲ್ಲಾ ಅನಾಹುತ ಆಗುತ್ತಿರಬೇಕಾದರೂ ತಲೆ ಮರೆಸಿಕೊಂಡು ತಣ್ಣಗೆ ಓಡಾಡುತ್ತಿದ್ದ ಖೇಡಿ ಮುನಿಶಾಮಿ ಈಗ ಮತ್ತೆ ರಂಗಸ್ಥಳಕ್ಕೆ ಎಳೆತರಲ್ಪಟ್ಟ.

ಪೋಲೀಸರು ಅವನನ್ನು ಎಳೆದುಕೊಂಡು ಬಂದರು. ಮಾಗಡಿ ಹಳ್ಳಿಯ ಹಲವರು ಅಲ್ಲಿ ಬಂದು ಮಚಾನು ಕಟ್ಟಿ ಚಿರತೆಗೆ ಗಾಯ ಮಾಡಿ ಓಡಿಸಿದವನು ಇವನೇ ಎಂದು ಗುರುತಿಸಿ ಸಾಕ್ಷಿ ಹೇಳಿದರು. ಹಾಗೆಲ್ಲಾ ಮಾಡಿರಬೇಕಾದರೆ ಇವನು ಬಂದೂಕು

ಉಪಯೋಗಿಸಿರಲೇಬೇಕಲ್ಲವೆ? ಹಾಗಿದ್ದರೆ ಅವನ ಬಳಿ ಒಂದು ಬಂದೂಕಿದೆಯೆ? ಅದಕ್ಕೆ ಅವನ ಹತ್ತಿರ ಲೈಸನ್ಸ್ ಇದೆಯೆ? ಇಲ್ಲದಿದ್ದರೆ ಕಳ್ಳಕೋವಿ ಮುಚ್ಚಿಟ್ಟುಕೊಂಡಿದ್ದಾನೆಯೆ? ಅಥವಾ ಮತ್ತೊಬ್ಬರದನ್ನು ಎರವಲು ತಂದನೆ? ಯಾರು ಕೊಟ್ಟರು? ಅವರಿಗೆ ಲೈಸನ್ಸ್ ಇದೆಯೆ? ಹೇಗೆ ಬೇರೊಬ್ಬರಿಗೆ ಆಯುಧ ಉಪಯೋಗಿಸಲು ಅನುಮತಿ ಕೊಟ್ಟ? ಅದಕ್ಕೆ ಮದ್ದು ಗುಂಡು ಎಲ್ಲಿಂದ ಬಂತು?

ಮುನಿಶಾಮಿ ತಿಪ್ಪರ್‌ಲಾಗ ಹೊಡೆದರೂ ಉತ್ತರಿಸಲಾಗದಷ್ಟು ಪ್ರಶ್ನೆಗಳೂ ಸಮಸ್ಯೆಗಳೂ ಮೇಲೆ ಬಿದ್ದುವು. ತನ್ನ ಗ್ರಹಚಾರ ಸಂಪೂರ್ಣ ಕೆಟ್ಟದ್ದು ಅವನಿಗೆ ಅರಿವಾಯ್ತು. ಅದರಲ್ಲೂ ಆ ಧಫೇದಾರನೇನಾದರೂ ಸತ್ತರೆ ಆ ಕೊಲೆಗೂ ತಾನೇ ಕಾರಣನಾಗುವುದರಿಂದ ಜೀವಾವಧಿಯೇ ತನಗೊದಗಬಹುದಾದ ಕನಿಷ್ಠ ಶಿಕ್ಷೆ ಎಂದು ಅರಿವಾಗಿ ಕಾಲುಗಳು ತರತರ ನಡುಗತೊಡಗಿದುವು.

ಇಂಥ ಅಪಾಯದಲ್ಲೂ ಮುನಿಶಾಮಿಯ ಕುತಂತ್ರಿ ಬುದ್ಧಿ ಕೆಲಸ ಮಾಡಿತು. ಅವನು ನೇರವಾಗಿ ಡಿ.ಎಸ್.ಪಿ ಸಾಹೇಬರ ಕಾಲಿಗೆ ಬಿದ್ದು, ಅದೊಂದು ಮಹಾ ಪುಂಡು ಚಿರತೆ ಎಂದೂ, ಅದರ ಈ ವರ್ತನೆಗೆ ತಾನು ಖಂಡಿತಾ ಕಾರಣನಲ್ಲವೆಂದೂ, ಅದರ ಅನಾಹುತಗಳನ್ನು ತಡೆಯಲಷ್ಟೆ ತಾನು ಪ್ರಾಮಾಣಿಕ ಪ್ರಯತ್ನ ಮಾಡಿದ್ದೆಂದೂ ಹೇಳಿದ. ಅಲ್ಲದೆ ಆ ಚಿರತೆಯನ್ನು ಕೊಂದು ಶಿಕ್ಷಿಸಲು ತನಗೆ ನಾಲ್ಕು ದಿನ ಕಾಲಾವಕಾಶ ಕೊಡಿ, ಅಷ್ಟರೊಳಗೆ ಅದನ್ನು ಮುಗಿಸದಿದ್ದರೆ ತಾವು ನನ್ನ ಮೇಲೆ ಕಾನೂನಿನ ಕ್ರಮ ತಗೊಳ್ಳಿ ಎಂದು ಅಳುತ್ತಾ ಗೋಳಾಡಿದ.

ಆ ಡಿ.ಎಸ್.ಪಿ ಬಹಳ ಕರ್ತವ್ಯಪ್ರಜ್ಞೆಯ ಮನುಷ್ಯ. ಆತನಿಗೆ ನಿಜವಾಗಿಯೂ ಈ ಚಿರತೆಯ ಪಿಡುಗನ್ನು ನಿವಾರಿಸುವುದು ಮುಖ್ಯವಾಗಿತ್ತೇ ಹೊರತು ಈ ಬಡಪಾಯಿ ಮುನಿಶಾಮಿಯ ಮೇಲೆ ಕಾನೂನು ಕ್ರಮ ಜರುಗಿಸುವುದಲ್ಲ. ಏಕೆಂದರೆ ಈ ಚಿರತೆ ಇನ್ನೇನು ನರಭಕ್ಷಕನಾಗಿ ಪರಿವರ್ತನೆಗೊಳ್ಳುವ ಹಂತದಲ್ಲಿತ್ತು. ಮುನಿಶಾಮಿಯೇನೂ ಚಿರತೆಗಿಂತ ಅಪಾಯಕಾರಿಯಾಗುವ ಸಾಧ್ಯತೆ ಇರಲಿಲ್ಲ. ಹೆಚ್ಚೆಂದರೆ ಹಲವಾರು ಕಿಡಿಗೇಡಿ ಕೆಲಸಗಳನ್ನು ಮಾಡಿಯಾನಷ್ಟೆ! ಆದ್ದರಿಂದ ಡಿ.ಎಸ್.ಪಿ ಆತನಿಗೆ ಆ ಚಿರತೆ ಕೊಂದು ತನಗೊದಗಲಿರುವ ದುರ್ಗತಿಯಿಂದ ತಪ್ಪಿಸಿಕೊಳ್ಳಲು ಕೇವಲ ನಾಲ್ಕು ದಿನ ಕಾಲಾವಕಾಶ ಕೊಟ್ಟು ಲಾಕಪ್ಪಿನಿಂದ ಹೊರಬಿಟ್ಟರು.

ಅದೇ ದಿನ ಸಂಜೆ ನಾನು ಕಾಫಿ ಕುಡಿಯುತ್ತ ಕುಳಿತಿರಬೇಕಾದರೆ 'ಸಾರ್ ಸಾರ್ ಸಾರ್' ಎಂಬ ಕರುಣಾಜನಕ ಕ್ಷೀಣ ದನಿಯೊಂದು ಕೇಳಿಸಿತು. ನಾನು ಬಾಗಿಲು ತೆರೆದು ನೋಡಿದಾಗ ಕಣ್ಣಿಂದ ಧಾರಾಕಾರವಾಗಿ ನೀರಿಳಿಯುತ್ತಿದ್ದ ಮುನಿಶಾಮಿ ಅಲ್ಲಿ ನಿಂತಿದ್ದ. ನಲ್ಲಿ ಬಿಟ್ಟಹಾಗೆ ಧಡೀರ್ ಕಣ್ಣೀರ್ಗರೆಯಲು ಅದೇನು ತಂತ್ರ ಉಪಯೋಗಿಸುತ್ತಿದ್ದನೋ! ಆ ಗುಟ್ಟು ಮಾತ್ರ ನನಗಿನ್ನೂ ಅವನು ಹೇಳಿಲ್ಲ. ಒಳಗೆ ಬಂದವನು ಕುಳಿತುಕೊಂಡು

ಅಲ್ಲಿಯವರೆಗೆ ನಡೆದ ಚಿರತೆ ಹಗರಣವನ್ನೆಲ್ಲಾ ಸವಿಸ್ತಾರವಾಗಿ ನನಗೆ ಹೇಳಿದ. ನಾನು ಹೇಳಿರುವ ಕತೆಯ ಬಹಳಷ್ಟೆಲ್ಲಾ ಅವನೇ ನನಗೆ ಹೇಳಿದ್ದು.

ಅವನಿಗೆ ಆ ಚಿರತೆ ಮುಗಿಸಲು ಇನ್ನು ನಾಲ್ಕೇದಿನ ಗಡು ಇತ್ತು. ಅಷ್ಟರೊಳಗೆ ಅದನ್ನು ಮುಗಿಸದಿದ್ದರೆ ನಾನಿನ್ನೆಂದೂ ತಮ್ಮ ಮುಖ ನೋಡದಹಾಗೆ ಶಾಶ್ವತವಾಗಿ ಜೈಲಿನಲ್ಲಿ ಆಯುಷ್ಯ ಕಳೆಯಬೇಕಾಗುತ್ತದೆ ಎಂದು ಗೋಳುಗರೆದ. ನಾನು ''ಎಲ್ಲಾದರೂ ತಲೆ ತಪ್ಪಿಸಿಕೊಂಡು ಪರಾರಿಯಾಗುವ ಉಪಾಯ ನೀನೇಕೆ ಮಾಡಲಿಲ್ಲ'' ಎಂದು ನಗುತ್ತ ಕೇಳಿದೆ. ಅದಕ್ಕೆ ಅವನು ''ನಾನು ಈ ವಯಸ್ಸಿನಲ್ಲಿ ತಲೆ ತಪ್ಪಿಸಿಕೊಂಡು ಎಲ್ಲಿ ಹೊಟ್ಟೆಹೊರೆಯಲಿ ಮಾಸ್ಟರ್? ನೀವೇ ಯೊಚಿಸಿ! ಇಲ್ಲಿ ದೊರಕುವಂತೆ ಶಿಕಾರಿ ಹುಚ್ಚಿರುವ ಜಂಟಲ್‌ಮನ್ ಹಂಟರ್‌ಗಳು, ಕೇಳಿದಾಗೆಲ್ಲ ಹಣ ಬಿಚ್ಚುವ ಶಿಕಾರಿಯವರು ಬೇರೆಲ್ಲಿ ಸಿಕ್ಕುತ್ತಾರೆ? ಎರಡೇ ರೂಪಾಯಿಗೆ ಕತ್ತೆಗಳು ಎಲ್ಲಿಸಿಗುತ್ತವೆ? ಸುಳ್ಳೋಪಳ್ಳೋ ಹೇಳಿಕೊಂಡು ಹೇಗಾದರೂ ಹೊಟ್ಟೆ ಪಾಡು ಮಾಡುತ್ತಿದ್ದೇನೆ. ಬೇರೆಲ್ಲಿಗೆ ಓಡಿ ಹೋಗಲಿ? ಹೇಗೆ ಹೊಟ್ಟೆ ಹೊರೆಯಲಿ? ನನಗೆ ಗೊತ್ತಿರುವುದು ಇದೊಂದೇ ವಿದ್ಯೆ. ನಾನೂ ನೀವು ಹೇಳಿದಂತೆ ತಲೆ ತಪ್ಪಿಸಿಕೊಂಡು ನಾಪತ್ತೆಯಾಗುವ ಬಗ್ಗೆ ಯೋಚನೆ ಮಾಡಿದೆ. ಆದರೆ ಅದರ ಸಾಧಕ ಬಾಧಕಗಳನ್ನೆಲ್ಲಾ ಯೋಚಿಸಿದಾಗ ತಲೆ ತಪ್ಪಿಸಿಕೊಂಡು ಓಡಿಹೋಗುವುದಕ್ಕಿಂತ ಜೇಲಿಗೆ ಹೋಗುವುದೇ ವಾಸಿಯಾಗಿ ಕಂಡಿತು. ಅಲ್ಲಿ ಸೇಂದಿ ಸಿಕ್ಕದಿದ್ದರೂ ಕೊನೇ ಪಕ್ಷ ಹೊಟ್ಟೆಗೆ ಅನ್ನವಾದರೂ ಸಿಕ್ಕುತ್ತೆ'' ಎಂದು ಕಣ್ಣೀರ್ಗರೆಯುತ್ತ ದುಃಖ ತೋಡಿಕೊಂಡ. ಅವನ ಕಣ್ಣಿನಿಂದ ಉದುರಿದ ಕಂಬನಿಗಳಲ್ಲಿ ಕೆಲವಾದರೂ ಪ್ರಾಮಾಣಿಕ ದಃಖಾಶ್ರುಗಳಿದ್ದುವೆಂದು ಕಾಣುತ್ತದೆ.

''ಇದೊಂದುಸಾರಿ ಆ ಸುಡುಗಾಡು ಚಿರತೆ ಕೊಂದು ಹೇಗಾದರೂ ಮಾಡಿ ನನ್ನ ಪ್ರಾಣ ಉಳಿಸಿ. ಇದನ್ನು ನೀವು ಹೊಡೆದರೆ ನನ್ನ ಜೀವ ಉಳಿಸುವುದಲ್ಲದೆ ಅದು ಮುಂದೆ ಕೊಲ್ಲಲಿರುವ ಹಲವಾರು ಅಮಾಯಕರ ಜೀವವನ್ನೂ ಉಳಿಸಿದಂತಾಗುತ್ತದೆ'' ಎಂದು ಗೋಗರೆದ.

''ಈ ಚಿರತೆ ಕೊಲ್ಲಲು ನೀನು ಹೇಳಿದ ಎರಡನೆ ಕಾರಣವನ್ನೇನೋ ನಾನು ಒಪ್ಪುತ್ತೇನೆ. ಆದರೆ ಮೊದಲನೆ ಕಾರಣದ ಬಗ್ಗೆ ಮಾತ್ರ ನನಗೇನೂ ಆಸಕ್ತಿಯಿಲ್ಲ'' ಎಂದೆ. ಅದರಿಂದ ಅವನು ಚೂರೂ ಬೇಸರ ಪಟ್ಟುಕೊಳ್ಳದೆ ''ಯಾವ ಕಾರಣಕ್ಕಾದರೂ ಸರಿ, ನಾಲ್ಕು ದಿನದೊಳಗೆ ಆ ಚಿರತೆ ಹೊಡೆದು ಕೊಡಿ'' ಅಂದ. ''ನಾನು ನಿನಗೆ ಸಹಾಯ ಮಾಡಬೇಕೆಂದಾದರೆ ನೀನು ನನ್ನ ಜೊತೆ ಆ ಚಿರತೆ ಹೊಡೆಯುವವರೆಗೂ ಇದ್ದು ನಾನು ಹೇಳಿದ ಎಲ್ಲಾ ಕೆಲಸ ಮಾಡಿ ಕೊಡಬೇಕು. ಹಾಗಾದರೆ ಮಾತ್ರ ನಾನು ಪ್ರಯತ್ನಿಸುತ್ತೇನೆ. ಏಕೆಂದರೆ ಈ ಎಲ್ಲಾ ತೊಂದರೆ ತಾಪತ್ರಯಗಳಿಗೂ ನೀನೇ ಮೂಲ ಕಾರಣ'' ಎಂದು ಕರಾರು ಹಾಕಿದೆ.

ಮುನಿಶಾಮಿಯ ಮೋರೆಯಲ್ಲಿ ಮಂದಹಾಸ ಮಿಂಚಿತು. ಮುಖದಮೇಲೆ ಇಳಿಯುತ್ತಿದ್ದ ಕಣ್ಣೀರಿನ ನಲ್ಲಿ ಹಠಾತ್ತನೆ ನಿಂತುಹೋಯ್ತು.


ಅದೇ ದಿನ ಸಾಯಂಕಾಲ ನಾನು ಮುನಿಶಾಮಿಯನ್ನೂ ಕರಕೊಂಡು ಡಿ.ಎಸ್.ಪಿ

ಬಳಿಗೆ ಹೋದೆ. ಮುನಿಶಾಮಿ ನನಗೆ ಗಂಟುಬಿದ್ದಿರುವ ಸಂಗತಿ ಅವರಿಗೆ ಹೇಳಿದೆ. ಅವರು ಕೊಟ್ಟಿರುವ ನಾಲ್ಕು ದಿನದ ಗಡು ಬಗ್ಗೆ ಅವರು ಸೀರಿಯಸ್ಸಾಗಿದ್ದಾರೋ ಎಂದು ಕೇಳಿದೆ. ಏಕೆಂದರೆ ಅವನನ್ನು ಸಹಾಯಕನನ್ನಾಗಿ ತಗೊಂಡಮೇಲೆ ನಾಲ್ಕು ದಿನದ ತರುವಾಯ ಐದನೆ ದಿನ ಪೋಲಿಸರು ಬಂಧಿಸಲು ಅವನ ಬೆನ್ನು ಬಿದ್ದರೆ ನನಗೆ ತುಂಬಾ ಫಜೀತಿಯಾಗುತ್ತಿತ್ತು . ಅದಕ್ಕಾಗಿ ನಾನು ಡಿ.ಎಸ್.ಪಿ ಬಳಿ ಈ ಸ್ಪಷ್ಟನೆ ಕೇಳಿದ್ದು. ಅವರು ಮುನಿಶಾಮಿಯನ್ನು ಹೆದರಿಸಲಷ್ಟೆ ನಾಲ್ಕು ದಿನ ಗಡು ಕೊಟ್ಟಿದ್ದರು. ನಿಮ್ಮ ಚಿರತೆ ಹೊಡೆಯುವ ಪ್ರಯತ್ನಕ್ಕೆ ನಾನು 'ಖಂಡಿತಾ ಅಡ್ಡ ಬರುವುದಿಲ್ಲ ಎಂದು ಆಶ್ವಾಸನೆ ಕೊಟ್ಟರು. ಅಲ್ಲದೆ ಚಿರತೆ ಹೊಡೆಯುವ ಜವಾಬ್ದಾರಿಯನ್ನು ನನಗೆ ವಹಿಸಿರುವುದಾಗಿಯೂ, ನನ್ನ ಕೆಲಸಕ್ಕೆ ಪೋಲೀಸ್ ಇಲಾಖೆಯವರೆಲ್ಲಾ ಸಹಕಾರ ನೀಡಬೇಕೆಂದೂ ಕಾಗದ ಸಹ ಕೊಟ್ಟರು.

ಹೊರಗೆ ಕುಳಿತಿದ್ದ ಮುನಿಶಾಮಿಗೆ ನಾನೇನೂ ಈ ವಿಚಾರ ತಿಳಿಸಲಿಲ್ಲ. ಬದಲಾಗಿ ಡಿ.ಎಸ್.ಪಿ ಮೂರೇ ದಿನಕ್ಕೆ ಗಡುವನ್ನು ಇಳಿಸುವುದರಲ್ಲಿದ್ದರೆಂದೂ, ನಾನು ಮನವಿ ಮಾಡಿಕೊಂಡು ಹೇಗೋ ಅದನ್ನು ನಾಲ್ಕು ದಿನಕ್ಕೆ ವಿಸ್ತರಿಸಿದೆನೆಂದು ಹೇಳಿ ಅವನ ಗಾಬರಿಯನ್ನು ದ್ವಿಗುಣಗೊಳಿಸಿದೆ. ಅವನು ಇದಕ್ಕಾಗಿ ನನಗೆ ಕೃತಜ್ಞನಾಗಿದ್ದಲ್ಲದೆ ಆದಷ್ಟು ಬೇಗ ಮಾಗಡಿ ಹಳ್ಳಿಗೆ ಹೋಗಿ ಚಿರತೆ ಹೊಡೆಯುವ ಪ್ರಯತ್ನ ಮಾಡೋಣ ಎಂದು ಚಡಪಡಿಸಿದ.



## ೪



ನಾನು, ಮುನಿಶಾಮಿ ಮಾರನೆದಿನ ನನ್ನ ಸ್ಟುಡಿಬೇಕರ್ ಕಾರು ಹತ್ತಿ ಮಾಗಡಿ ಬೆಟ್ಟದ ತಪ್ಪಲಿಗೆ ಹೋದೆವು. ಅಲ್ಲಿ ಮುನಿಸ್ವಾಮಿ ಚಿರತೆಗೆ ಗುಂಡು ಹಾರಿಸಿ ಗಾಯಮಾಡಿದಲ್ಲಿಂದ ಹಿಡಿದು ಎಲ್ಲಾ ಹಳ್ಳಿಗಳಲ್ಲೂ ಆ ಚಿರತೆ ಮಾಡಿದ ಧಾಂದಲೆ ಬಗ್ಗೆ ವಿಚಾರಿಸುತ್ತ ಬಂದೆವು. ಮಾಗಡಿ ಊರಿಗೆ ಸಹ ಹೋದೆವು. ಅಲ್ಲಿ ದಫೇದಾರರನ್ನು ಹೊತ್ತುತಂದ ಕಾನ್‌ಸ್ಟೇಬಲ್‌ಗಳು ಸಿಕ್ಕು ಅವತ್ತು ನಡೆದ ಅನಾಹುತದ ಸವಿವರ ವರದಿ ಕೊಟ್ಟರು. ಅಲ್ಲಿ ನಮ್ಮ ಶೋಧನೆಯೆಲ್ಲ ಮುಗಿದನಂತರ ಅಲ್ಲಿಂದ ಕ್ಲೋಸ್‌ಪೇಟೆ ಕಡೆಗೆ ಹೊರಟೆವು. ದಾರಿಯುದ್ದಕ್ಕೂ ಕಣ್ಣಿಗೆ ಕಂಡ ಹಳ್ಳಿಗಳಲ್ಲೆಲ್ಲಾ ಚಿರತೆ ಸಮಾಚಾರ ಏನಾದರೂ ಸಿಕ್ಕೀತೆ ಎಂದು ವಿಚಾರಿಸುತ್ತ ಮುಂದುವರಿದೆವು. ದಾರಿಯಲ್ಲಿ ಚಿರತೆ ಕುದುರೆ ಮೇಲೆ ಧಾಳಿ ಮಾಡಿದ ಹಳ್ಳಿಯೂ ಸಿಕ್ಕಿತು. ಕ್ಲೋಸ್‌ಪೇಟೆಯಲ್ಲಿ ಡಿ.ಎಸ್.ಪಿ ನನಗೆ ಕೊಟ್ಟಿದ್ದ ಕಾಗದವನ್ನು ಸಬ್‌ಇನ್‌ಸ್ಪೆಕ್ಟರಿಗೆ ತೋರಿಸಿದ ಕೂಡಲೆ ಆತ ತಕ್ಷಣ ಆ ಜಟಕಾವಾಲನನ್ನು ಕರೆಸಿದ. ಅವನು ತನಗೆ ಗೊತ್ತಿದ್ದಷ್ಟು ಚಿರತೆ ಸಮಾಚಾರ ಹೇಳಿದ. ಇಷ್ಟೆಲ್ಲಾ ಮಾಡಿ ಮುಗಿಸುವುದರೊಳಗೇ ಕತ್ತಲಾಗತೊಡಗಿತು. ಯಾರಿಗೂ ಚಿರತೆ ಸದ್ಯಕ್ಕೆ ಎಲ್ಲಿದೆ ಎನ್ನವುದರ ಸ್ಪಷ್ಟ ಸುಳಿವಾಗಲೀ, ಅದರ ನಡವಳಿಕೆ ಹಾಗೂ ಓಡಾಟದ ಬಗ್ಗೆಯಾಗಲೀ ಗೊತ್ತಿರಲಿಲ್ಲ. ನನಗೆ ಅಂಥ ಅವಸರವೇನೂ ಇರಲಿಲ್ಲ. ಆದರೆ ಡಿ.ಎಸ್.ಪಿ ಕೊಟ್ಟಿದ್ದ ನಾಲ್ಕು ದಿನದ ಗಡುವಿನಲ್ಲಿ ಒಂದು ಆಗಲೇ

ಮುಗಿದುಹೋಯ್ತಲ್ಲಾ ಎಂದು ಮುನಿಶಾಮಿ ಮಾತ್ರ ಚಿಂತಾಕ್ರಾಂತನಾಗಿದ್ದ.

ನಾವು ಕ್ಲೋಸ್‌ಪೇಟೆಯಿಂದ ಮತ್ತೆ ಹಿಂದಿರುಗಿ ಮಾಗಡಿ ಊರಿಗೆ ಬಂದು ಅಲ್ಲಿದ್ದ ಟಿಬಿಯಲ್ಲಿ ನಿದ್ರಿಸಿದೆವು.

ಬೆಳಗ್ಗೆ ಎದ್ದಾಗ ಮಧ್ಯ ವಯಸ್ಸಿನ ಒಬ್ಬ ನರಪೇತಲನಾರಾಯಣ ಎಲ್ಲಿಂದಲೋ ನನ್ನನ್ನು ಹುಡುಕಿಕೊಂಡು ಬಂದಿದ್ದ. ಅವನು ಮಾಗಡಿ ಬೆಟ್ಟದಲ್ಲಿ ಮತ್ತು ಸುತ್ತಮುತ್ತ ಇರುವ ಕಾಡುಗಳಲ್ಲಿ ಜೇನು ಸಂಗ್ರಹಿಸಿ ಮಾರಿ ಜೀವನ ಮಾಡುತ್ತಿದ್ದ. ಅಲ್ಲದೆ ಔಷಧಿ ಸಸ್ಯಗಳನ್ನೂ ನಾರು ಬೇರುಗಳನ್ನೂ ಸಹ ಅವನು ಸಂಗ್ರಹಿಸಿ ಅಳಲೇಕಾಯಿ ಪಂಡಿತರಿಗೆ ಒದಗಿಸುತ್ತಿದ್ದ. ಆಗೀಗ ಉರುಳು, ಬಲೆ ಒಡ್ಡಿ ಕಾಡುಕೋಳಿ, ಮೊಲ, ಗವುಜಲು ಹಕ್ಕಿಗಳನ್ನೂ ಹಿಡಿಯುತ್ತಿದ್ದ. ಅವನಿಗೆ ಯಾರೋ ನಾನು ಚಿರತೆ ಹೊಡೆಯಲು ಬಂದಿರುವ ವರ್ತಮಾನ ಕೊಟ್ಟಿದ್ದರು. ಅವನು ಆ ಚಿರತೆ ಮಾಗಡಿ ಬೆಟ್ಟಗಳ ನಡುವಿನ ಕಣಿವೆಯಲ್ಲಿರುವ ಒಂದು ಗವಿಯಲ್ಲಿ ಖಂಡಿತವಾಗಿಯೂ ವಾಸಿಸುತ್ತಿದೆ ಎಂದು ಹೇಳಿದ. ಅವನ ಹೆಸರು ಅಲ್ಲಿಮುತ್ತು.

ನಾನು ಅವನ ವರ್ತಮಾನ ಸರಿಯಾದುದೆಂದು ದೃಢಪಡಿಸಿಕೊಳ್ಳಲು ''ಅದು ಹೇಗೆ ಖಂಡಿತವಾಗಿ ಇದೆ ಎಂದು ಹೇಳುತ್ತೀ'' ಎಂದು ಕೇಳಿದೆ.

''ಕೆಲವು ದಿನಗಳ ಹಿಂದೆ ಜೇನು ಸಂಗ್ರಹಿಸಲು ಅಲ್ಲಿಗೆ ಹೋಗಿರಬೇಕಾದರೆ ಯಾವುದೋ ಪ್ರಾಣಿ ಅಲ್ಲಿನ ಕಲ್ಲುಗಳ ಮೇಲೆಲ್ಲಾ ರಕ್ತ ಸುರಿಸುತ್ತಾ ನಡೆದುಹೋಗಿರುವುದನ್ನು ಕಂಡೆ. ಅದನ್ನು ಹಾಗೇ ಹಿಂಬಾಲಿಸಿದಾಗ ರಕ್ತದ ಗುರುತಿನ ಅಕ್ಕಪಕ್ಕದಲ್ಲಿ ಚಿರತೆ ಹೆಜ್ಜೆಗುರುತುಗಳಿದ್ದುದನ್ನೂ ಒಂದೆರಡು ಕಡೆ ಸ್ಪಷ್ಟವಾಗಿ ನೋಡಿದೆ. ಆಮೇಲೆ ಹೆದರಿ ನಾನು ಮುಂದುವರಿಯಲಿಲ್ಲ. ಹಿಂದಿರುಗಿ ಬಂದಾಗ ಊರವರೆಲ್ಲಾ ಯಾರೋ ಚಿರತೆಗೆ ಹೊಡೆದು ಗಾಯ ಮಾಡಿದ್ದಾರೆಂದು ಮಾತಾಡಿಕೊಳ್ಳುತ್ತಿದ್ದರು'' ಎಂದ. ಆ ಯಾರೋ ಇನ್ಯಾರೂ ಅಲ್ಲ, ಈ ಮುನಿಶಾಮಿ ಮಹಾಶಯನೇ!

ಅವನಿಗೆ ಮಾಗಡಿ ಕಣಿವೆಯ ಗವಿ ಚೆನ್ನಾಗಿ ಗೊತ್ತಿತ್ತು. ಎಷ್ಟೋ ಸಾರಿ ಅದರ ಸನಿಹದಲ್ಲೇ ಹೆಜ್ಜೇನು ಕೀಳಲು ಅವನು ಅನೇಕ ಬಾರಿ ಹೋಗಿದ್ದ. ಧಫೇದಾರನ ಮೇಲೆ ಚಿರತೆ ಧಾಳಿ ಮಾಡಿದ ಅನಂತರ ಈ ನರಪೇತಲ ಮನುಷ್ಯ ಆ ಗವಿಯಬಳಿಗೆ ಹೆಜ್ಜೇನು ಕೀಳಲು ಹೋಗಿದ್ದನಂತೆ. ಆ ಗವಿಯ ಛಾವಣಿಯಲ್ಲೇನಾದರೂ ಜೇನು ತಟ್ಟಿಗಳು ಕಾಣುತ್ತವೆಯೇ ಎಂದು ದೂರದಿಂಲೆ ಪರೀಕ್ಷಿಸುತ್ತಿರಬೇಕಾದರೆ ಯಾವುದೋ ಪ್ರಾಣಿ ಗುರುಗುಟ್ಟಿದ್ದು ಅವನಿಗೆ ಸ್ಪಷ್ಟವಾಗಿ ಕೇಳಿತಂತೆ. ತಕ್ಷಣವೇ ಹಲವು ದಿನಗಳ ಹಿಂದೆ ಅವನು ಬಂಡೆಗಳ ಮೇಲೆ ಕಂಡ ರಕ್ತದ ಕಲೆಗಳನ್ನೂ, ಚಿರತೆ ಹೆಜ್ಜೆ ಗುರುತುಗಳನ್ನೂ ನೆನೆಸಿಕೊಂಡು ಮುಂದುವರಿದರೆ ಅಪಾಯವೆಂದು ಬಗೆದು ಸದ್ದಿಲ್ಲದೆ ಹಿಂದಿರುಗಿದ್ದ.

ಇದು ನಿಜವಾಗಿಯೂ ಶುಭ ಸಮಾಚಾರವೆ ಸರಿ!

ನಾನು ಅವನನ್ನು ಆ ಗವಿ ಎಲ್ಲಿದೆ? ಹೇಗಿದೆ? ಇತ್ಯಾದಿಗಳ ಬಗ್ಗೆ ಪ್ರಶ್ನೆ ಕೇಳತೊಡಗಿದೆ. ಅವನು, ನಾನು ಸುಮಾರು ಒಂದು ಫರ್ಲಾಂಗ್‌ವರೆಗೆ ಅಂಬೆಗಾಲಿನಲ್ಲಿ

ದಟ್ಟ ಪೊದೆಗಳ ಅಡಿಯಲ್ಲಿ ನುಸಿಯಲು ತಯ್ಯಾರಿದ್ದರೆ ಆ ಗವಿಯ ಬಳಿಗೆ ನಮ್ಮನ್ನು ಕರೆದೊಯ್ಯಲು ತನ್ನದೇನೂ ಅಭ್ಯಂತರವಿಲ್ಲವೆಂದು ಹೇಳಿದ. ಆ ಕಣಿವೆಯ ಅರ್ಧ ಭಾಗ ಎಷ್ಟು ದಟ್ಟವಾದ ಕುರುಚಲು ಕಾಡಿನಿಂದ ಆವೃತವಾಗಿದೆಯೆಂದರೆ ಅಂಬೆಗಾಲಿನಲ್ಲಿ ತೆವಳುವುದೊಂದು ಬಿಟ್ಟು ಬೇರೆ ಮಾರ್ಗವೇ ಇಲ್ಲವೆಂದು ಹೇಳಿದ. ಅವನ ಸಲಹೆಗೆ ನಾನು ಕೂಡಲೆ ಸಮ್ಮತಿಸಿ ಮುನಿಶಾಮಿ ಕಡೆ ತಿರುಗಿ "ನನ್ನ ಜೊತೆ ಚಿರತೆ ಹೊಡೆಯುವವರೆಗೂ ಇರುತ್ತೇನೆಂದು ಮಾತು ಕೊಟ್ಟಿದ್ದೆ. ಈಗ ನೀನು ಕೊಟ್ಟ ಮಾತು ಉಳಿಸಿಕೊಳ್ಳುವ ಕಾಲ ಸನ್ನಿಹಿತವಾಗಿದೆ. ಯಾಕೆಂದರೆ ಅದಕ್ಕೆ ಅರೆಪೆಟ್ಟು ಮಾಡಿಬಿಟ್ಟ ನೀನೇ ಈ ಎಲ್ಲ ಅನಾಹುತಗಳಿಗೂ ಮೂಲ ಕಾರಣ"ಎಂದು ಹೇಳಿದೆ.

ಅವನು ಕೊಂಚವಾದರೂ ದಿಗಿಲು ವ್ಯಕ್ತಪಡಿಸಬಹುದೆಂದು ನಾನು ಊಹಿಸಿದ್ದೆ. ನನ್ನ ಊಹೆ ಸುಳ್ಳಾಯ್ತು. ಪೋಲೀಸರು ಅವನಿಗೆ ಎಷ್ಟೊಂದು ದಿಗಿಲಿಕ್ಕಿಸಿದ್ದರೆಂದರೆ ಗಾಯದ ಚಿರತೆ ಹುಡುಕ ಹೋಗುವುದಕ್ಕಿಂತ ನಾಲ್ಕು ದಿನಗಳಲ್ಲಿ ಕರ್ಚಾಗುತ್ತಿರುವ ಎರಡನೆ ದಿನದ ಬಗ್ಗೆಯೇ ಅವನು ಅತ್ಯಂತ ವ್ಯಾಕುಲನಾಗಿದ್ದ. ಮರುಮಾತಾಡದೆ ನನ್ನ ಜೊತೆ ಬರಲು ಅವನು ಸಿದ್ಧನಾದ.

ನಾನು ಚೆನ್ನಾಗಿ ಬಿಸಿಲೇರುವವರೆಗೂ ನಿಧಾನವಾಗಿ ನನ್ನ 'ಛೋಟಾ ಖಾನ' ಮಾಡುತ್ತ ಬೇಕೆಂದೇ ತಡ ಮಾಡಿದೆ. ಏಕೆಂದರೆ ಬಿಸಿಲಿನ ಧಗೆಗೆ ಚಿರತೆ ಗುಹೆಯೊಳಗಿನ ನೆರಳಿನಲ್ಲಿ ಸರಿಯಾಗಿ ನಿದ್ದೆ ಹೋಗಬಹುದು ಎಂದು. ಮುಂಚೆಯೇ ಅಲ್ಲಿಗೆ ಹೋದರೆ ತೂಕಡಿಕೆ ಸಹ ಇಲ್ಲದ ಚಿರತೆ ನಮ್ಮ ಸದ್ದು ಕೇಳಿ ಪರಾರಿಯಾಗಬಹುದು.

ಸರಿಯಾಗಿ ಹತ್ತು ಗಂಟೆಗೆ ನಾವು ಕಾರಿನಲ್ಲಿ ಮಾಗಡಿ ಬೆಟ್ಟಗಳ ತಪ್ಪಲಿನ ಕಡೆ ಹೊರಟೆವು. ಹದಿನೈದು ನಿಮಿಷಗಳೊಳಗೆ ಆ ಎರಡು ಗುಡ್ಡಗಳ ನಡುವಿನ ಕಣಿವೆಯ ಸಮೀಪ ಇದ್ದೆವು. ನರಪೇತಲ ಅಲ್ಲಿಮುತ್ತು ಅಲ್ಲೊಂದು ಮರದ ನೆರಳು ತೋರಿಸಿ, ಅಲ್ಲಿ ಕಾರು ನಿಲ್ಲಿಸಿ ಇಲ್ಲಿಂದ ನಡೆಯಬೇಕೆಂದು ಹೇಳಿದ. ನಾವು ಮೂರೂ ಜನ ಕಾರು ನಿಲ್ಲಿಸಿ ಅಲ್ಲಿಂದ ಬೆಟ್ಟದ ಕಣಿವೆಯತ್ತ ಹೊರಟೆವು. ಮಾಗಡಿಗುಡ್ಡ ರಸ್ತೆಯಿಂದ ಸುಮಾರು ಮೂರು ಮೈಲು ದೂರದಲ್ಲಿತ್ತು. ಗುಡ್ಡದ ತಪ್ಪಲಿಗೆ ಬಂದವರು ಎರಡು ಗುಡ್ಡದ ನಡುವಿನ ಕಣಿವೆ ಕಡೆಗೆ ಹತ್ತತೊಡಗಿದೆವು. ನಮಗೀಗ ಬೆಟ್ಟ ಕಾಣುತ್ತಿರಲಿಲ್ಲ. ಏಕೆಂದರೆ ನಮ್ಮ ಸುತ್ತ ಎತ್ತೆತ್ತರದ ಮರಗಳು ಒತ್ತೊತ್ತಾಗಿ ಬೆಳೆದಿದ್ದು, ಎಲ್ಲೋ ಒಮ್ಮೊಮ್ಮೆ ಬೆಟ್ಟದ ನೆತ್ತಿ ಮರಗಳ ಮಧ್ಯೆ ಇಣುಕುತ್ತಿತ್ತು. ಕಡಿದಾದ ಬೆಟ್ಟವನ್ನು ಒಂದು ಗಂಟೆ ಹತ್ತಿದೆವು. ಸುಸ್ತಾಗಿ ಬೆವರು ಬರತೊಡಗಿತು. ಮರಗಳ ಕಾಡು ಮುಗಿಯುವ ಹೊತ್ತಿಗೆ ನಮಗೆ ವಿಸ್ತಾರವಾದ ಲಂಟಾನ ಪೊದೆಗಳ ದಟ್ಟ ಜಿಗ್ಗು ಇದಿರಾಯ್ತು. ಅಲ್ಲಿಮುತ್ತು "ಇದೇ ನಾನು ಹೇಳಿದ ಜಿಗ್ಗಿನ ಕಾಡು ಇಲ್ಲೇ ನಾವು ಅಂಬೆಗಾಲಿನಲ್ಲಿ ತೆವಳಬೇಕಾಗಿದ್ದು" ಎಂದು ಹೇಳಿದ. ಲಂಟಾನದ ಜಿಗ್ಗಿನ ಅಡಿ ತೆವಳುತ್ತಾ ಹುಳುಗಳಂತೆ ಮುಂದುವರಿಯುವುದು ಎಂಥ ಭೀಕರ ದುಃಸ್ವಪ್ನ ಎನ್ನುವುದು ನಿಮಗೆ ಅರ್ಥವಾಗುವುದಿಲ್ಲ. ಬೆವರಿನಿಂದ ನೆನೆದುಹೋಗಿದ್ದ ನಮ್ಮ ಬಟ್ಟೆಗಳೆಲ್ಲಾ ಮುಳ್ಳು

ಕಂಟಿಗಳಿಗೆ ಸಿಕ್ಕಿ ಹರಿದು ಚೂರಾದುವು. ಮುಳ್ಳು ತಾಗಿ ಮೈಯ್ಯೆಲ್ಲಾ ಚಿರತೆ ಪರಚಿದ ರೀತಿ ಗೀರು ಗಾಯಗಳಾದುವು. ಅಲ್ಲಿಮುತ್ತು ನನ್ನ ಮುಂದ ತೆವಳುತ್ತಿದ್ದ. ನನ್ನ ಹಿಂದೆ ಮುನಿಶಾಮಿ. ಕೆಲವು ಕೊಕ್ಕೆ ಮುಳ್ಳಿನ ಗಿಡಗಳಂತೂ ನಮ್ಮ ಚರ್ಮವನ್ನು ಸರಿಯಾಗಿಯೇ ಘಾಸಿ ಮಾಡಿದುವು. ಅಂತೂ ಇಂತೂ ಆ ಲಂಟಾನದ ಗಿಜರು ದಾಟಿ ಮತ್ತೆ ಕಣಿವೆಯ ಕಾಡಿಗೆ ಬಂದೆವು. ಅಲ್ಲೆಲ್ಲಾ ಎತ್ತರವಾದ ಮರಗಳಿದ್ದು ನೆಲದಮೇಲೆ ಮೊಣಕಾಲೆತ್ತರ ಹುಲ್ಲು ಬೆಳೆದಿತ್ತು ಅಲ್ಲದೆ ದೊಡ್ಡ ದೊಡ್ಡ ಕಲ್ಲು ಬಂಡೆಗಳು ಅಸಂಖ್ಯಾತವಾಗಿ ಉರುಳಿಸಿದಂತೆ ಬಿದ್ದಿದ್ದುವು. ಅಲ್ಲಿಮುತ್ತು ಅಲ್ಲೇ ಎಡಕ್ಕೆ ಬೆಟ್ಟದ ಮಧ್ಯದಲ್ಲಿ ಆ ಗವಿ ಇದೆಯೆಂದೂ, ಆದರೆ ಕಲ್ಲುಬಂಡೆಗಳ ದೆಸೆಯಿಂದ ಗವಿಯ ತೀರಾ ಹತ್ತಿರದಿಂದ ಸಹ ಅಲ್ಲಿ ಚಿರತೆಯನ್ನು ಗುರುತಿಸುವುದು ಕಷ್ಟವೆಂದೂ ಹೇಳಿದ. ಅವನ ಹೇಳಿಕೆಯಲ್ಲಿ ಉತ್ಪ್ರೇಕ್ಷೆಯೇನೂ ಇರಲಿಲ್ಲ. ಚಿರತೆ ಇರಲಿ ಹುಲಿಯನ್ನು ಸಹ ಅಲ್ಲಿ ಪತ್ತೆಮಾಡುವುದು ಕಷ್ಟವಿತ್ತು.

ಅಲ್ಲಿಮುತ್ತುವನ್ನು ಹಿಂದೆ ಬಿಟ್ಟು ನಾನು ಮುಂದಾದೆ. ಅವನ ಹಿಂದೆ ಮುನಿಶಾಮಿ ಬರುತ್ತಿದ್ದ. ಆ ಗವಿಗೆ ಅಡ್ಡಲಾಗಿದ್ದ ಬಂಡೆಯೊಂದರ ಮರೆಯಲ್ಲಿ ನಿಧಾನವಾಗಿ ಹೆಜ್ಜೆಮೇಲೆ ಹೆಜ್ಜೆ ಇಡುತ್ತ ಗವಿಯ ಹತ್ತಿರಕ್ಕೆ ಸರಿಯತೊಡಗಿದೆವು. ಚಿರತೆ ಯಾವ ಕ್ಷಣವಾದರೂ ಅಲ್ಲಿಂದ ಚಿಮ್ಮಬಹುದೆಂದು ಆ ಗವಿಯತ್ತ ಆಗೀಗ ಇಣುಕುತ್ತಲೇ ಮುಂದುವರಿಯುತ್ತಿದ್ದೆವು. ಗವಿಯ ಬಾಯಲ್ಲಿ ಛಾವಣಿಯಂತೆ ವಿಸ್ತಾರವಾದ ಕಲ್ಲುಚಪ್ಪಡಿ ಚಾಚಿಕೊಂಡಿತ್ತು. ಆ ಚಪ್ಪಡಿಯ ತಳಭಾಗದಲ್ಲಿ ಹಲವಾರು ಹೆಜ್ಜೇನುಗಳು ಕಟ್ಟಿ ಬಿಟ್ಟು ಹೋಗಿದ್ದ ಖಾಲಿ ತಟ್ಟಿಗಳು ಬೆಳ್ಳಗೆ ನೇತುಕೊಂಡಿದ್ದುವು. ಗವಿಯ ಬಾಯಿಯ ಮುಂದೆ, ಹುಲ್ಲಿನ ಮಧ್ಯೆ, ಎಲ್ಲ ಗಾತ್ರದ ಕಲ್ಲುಗಳೂ ಬಿದ್ದಿದ್ದುವು. ಯಾವುದೋ ಕಾಲದಲ್ಲಿ ಗುಡ್ಡದ ಮೇಲಿಂದ ಜಾರಿಬಿದ್ದವಿರಬೇಕು ಅವು.

ಅಷ್ಟರಲ್ಲಿ ನಮಗೆ ಸ್ಪಷ್ಟವಾಗಿ, ಆದರೆ ಕ್ಷೀಣವಾಗಿ ಯಾವುದೋ ಪ್ರಾಣಿ ಗುರುಗುಟ್ಟಿದಂತೆ ಸದ್ದು ಕೇಳಿಸಿತು! ಅಲ್ಲಿಮುತ್ತು ಮೆಲ್ಲಗೆ ಹಿಂದಿನಿಂದ ನನ್ನ ಭುಜ ಮುಟ್ಟಿ ನಿಲ್ಲಲು ಎಚ್ಚರಿಸಿದ.

ಅದು ಚಿರತೆ ಗುರುಗುಟ್ಟಿದ್ದಿರಬಹುದು- ಇಲ್ಲವೇ ಕರಡಿ ಇದ್ದರೂ ಇರಬಹುದು!

ನಾವೆಲ್ಲ ಕಲ್ಲಾಗಿ ಅಲ್ಲಾಡದೆ ನಿಂತೆವು. ಆ ಸದ್ದು ನಮ್ಮೆದುರಿನ ಗುಹೆಯ ಕಡೆಯಿಂದಲೇ ಬಂದಿದ್ದೆನ್ನುವುದರಲ್ಲಿ ಅನುಮಾನವೇ ಇರಲಿಲ್ಲ. ಗವಿಯೊಳಗಿಂದ, ಅಥವಾ ಅದಕ್ಕೆ ತೀರಾ ಸಮೀಪದಿಂದ! ನನಗೆ ಎರಡು ಯೋಚನೆ ಹೊಳೆಯಿತು. ಇಲ್ಲಿಂದಲೆ ಒಂದೆರಡು ಕಲ್ಲೆಸೆದು ಆ ಪ್ರಾಣಿಯನ್ನು ಹೊರಬರುವಂತೆ ಮಾಡುವುದು. ಇಲ್ಲವೇ ಇನ್ನೂ ನಾಲ್ಕಾರು ಹೆಜ್ಜೆ ಮುಂದುವರಿದು ನೋಡುವುದು. ಮುಂದುವರಿಯುವುದು ಯಾಕೋ ನನಗೆ ಅಪಾಯ ಎನ್ನಿಸಿತು. ಆ ಪ್ರಾಣಿ ನನಗಿಂತ ಎತ್ತರದಲ್ಲಿರುವುದರಿಂದ ಮೇಲೆ ಹಾರುವುದು ಸುಲಭ, ಅಲ್ಲದೆ ನಾನೇನಾದರು ನನ್ನ ಮೊದಲನೆ ಗುಂಡಿನ ಗುರಿ ತಪ್ಪಿದರೆ ಇನ್ನೊಂದಕ್ಕೆ ಸಮಯವೇ ಇರುವುದಿಲ್ಲ.

ಮೆಲ್ಲಗೆ ಹಿಂದಕ್ಕೆ ಬಾಗಿ ಅಲ್ಲಿಮುತ್ತುವಿಗೂ ಮುನಿಶಾಮಿಗೂ ಒಂದೊಂದು ಕಲ್ಲೆಸೆಯಲು ಹೇಳಿದೆ. ಅವರು ಹಾಗೇ ಮಾಡಿದರು.

ಏನೂ ಸಂಭವಿಸಲಿಲ್ಲ! ಯಾವುದೂ ಅಲ್ಲಾಡಲಿಲ್ಲ!

ನನ್ನ ರೈಫಲಿನ ಕುದುರೆ ಎಳೆದುಕೊಂಡು ಟ್ರಿಗ್ಗರಿನ ಮೇಲೆ ಬೆರಳಿಟ್ಟುಕೊಂಡು ಸಿದ್ಧನಾಗಿ ನಿಂತಿದ್ದೆ, ಯಾವೊಂದು ಅತಿ ಸೂಕ್ಷ್ಮ ಚಲನೆ ಕಂಡರೂ ಗುರಿಯಿಡಲು.

ಮತ್ತೆ ಅವರಿಬ್ಬರೂ ಒಂದೆರಡು ಕಲ್ಲೆಸೆದರು.! ಏನೂ ಅಲ್ಲಾಡಲಿಲ್ಲ!

ಅಷ್ಟರಲ್ಲಿ ನನಗೆ ಗುಹೆಯ ಬಲಭಾಗದಲ್ಲಿ ಅಲ್ಲಾಡುವ ಹುಲ್ಲು ನೋಡಿ ಇಳಿಜಾರಿನ ಕಡೆಗೆ ಏನೋ ಚಲಿಸುತ್ತಿದೆ ಎಂದು ಅನುಮಾನ ಬಂತು!

ಗಾಳಿ ಬೀಸಿದ್ದರಿಂದ ಹುಲ್ಲು ಅಲ್ಲಾಡಿರಬಹುದು! ಅಥವಾ ಯಾವುದೋ ಪ್ರಾಣಿ ಹುಲ್ಲೊಳಗೆ ಹುದುಗಿ ಮುಂದುವರ್ರಿಯುತ್ತಿರಬಹುದು! ಒಂದಂತು ನನಗೆ ಸ್ಪಷ್ಟ. ಭಾರತದ ಕರಡಿಗಳೆಲ್ಲಾ ಕಪ್ಪು ಬಣ್ಣದವು. ಕಂದು ಬಣ್ಣದ ಹುಲ್ಲಿನ ಮಧ್ಯೆ ನನಗೆ ಪತ್ತೆಮಾಡಲಾಗದಂತೆ ಕಪ್ಪು ಪ್ರಾಣಿಯೊಂದು ಆ ರೀತಿ ಮುಂದುವರಿಯಲು ಸಾಧ್ಯವೇ ಇರಲಿಲ್ಲ. ಅಲ್ಲದೆ ಕರಡಿ ಜಾಯಮಾನವೇ ಬೇರೆ. ಅದಕ್ಕೆ ಗಾಬರಿಯಾದರೆ ಹುಚ್ಚು ಹಿಡಿದಂತೆ ಮೈಮೇಲೆ ಬರುತ್ತದೆ. ಇಲ್ಲ ನೆಗೆದು ದೌಡಾಯಿಸಿಬಿಡುತ್ತದೆ. ಇದು ಕಂದುಗೆಂಪು ಬಣ್ಣದ ಒಣ ಹುಲ್ಲಿನ ಬಣ್ಣವನ್ನೇ ಹೋಲುವ ಪ್ರಾಣಿ. ಹಾಗಾದರೆ ಚಿರತೆಯೇ ಅಲ್ಲವೆ!

ಅದು ಮೆಲ್ಲಗೆ ಮುಂದಕ್ಕೆ ಹರಿದಂತೆ ನಾನು ಕಣ್ಣೆಲ್ಲಾ ನೋಯುವಂತೆ ಆ ಜಾಗವನ್ನು ದಿಟ್ಟಿಸಿದೆ. ಹುಲ್ಲಿನ ನಡುವೆ ಒಂದು ಸಣ್ಣ ಕಪ್ಪು ಚುಕ್ಕೆಯಂತೇನೋ ಕಾಣಿಸಿತು. ಈಗ ಹುಲ್ಲು ಅಲ್ಲಾಡುವುದು ನಿಂತಿತ್ತು. ಅದು ನಮ್ಮಿಂದ ಬಲಕ್ಕೆ ಸರಿಯುತ್ತಿದ್ದುದು ನಿಂತು ಹುಲ್ಲಿನ ಮರೆಯಲ್ಲಿ ನಮ್ಮತ್ತ ದಿಟ್ಟಿಸುತ್ತಿದೆ ಎನ್ನಿಸಿತು. ಆ ಪ್ರಾಣಿಯ ತಲೆ ಯಾವ ಕಡೆಗಿದೆ? ಬಾಲ ಯಾವ ಕಡೆಗಿದೆ? ಯಾವ ಪ್ರಾಣಿ? ಒಂದೂ ಅಂದಾಜಾಗುತ್ತಿಲ್ಲ. ಇನ್ನು ಒಂದು ಅಥವಾ ಎರಡು ಕ್ಷಣಗಳಷ್ಟು ಮಾತ್ರ ನನಗೆ ಸಮಯವಿದೆ! ತಡೆದರೆ ಇಲ್ಲಾ ಅದು ಪರಾರಿಯಾಗುತ್ತದೆ! ಇಲ್ಲವೇ ಮೈಮೇಲೆ ನೆಗೆಯುತ್ತದೆ!

ಹುಲ್ಲಿನ ಮಧ್ಯೆ ಕಾಣುತ್ತಿದ್ದ ಆ ಕಪ್ಪು ಚುಕ್ಕೆಗೇ ಗುರಿ ಹಿಡಿದೆ. ಮೆಲ್ಲಗೆ ಟ್ರಿಗ್ಗರ್ ಒತ್ತಿದೆ.

ಗುಂಡು ಹಾರುತ್ತಲೂ ಒಂದೇಸಾರಿ ಚಿರತೆಯೊಂದು ನೆಲದಿಂದ ನೆಟ್ಟಗೆ ಮೇಲಕ್ಕೆ ಚಿಮ್ಮಿ ಗಾಳಿಯಲ್ಲಿ ಗಿರಿಗರಿ ತಿರುಗಿ ಧೊಪ್ಪನೆ ನೆಲಕ್ಕೆ ಬಿತ್ತು. ಅದು ಬಲಗಡೆ ಇದ್ದ ಕಮರಿ ಕಡೆಗೆ ಉರುಳುರುಳಿ ಹೋದಂತೆ ಅನ್ನಿಸಿತು.

ಹತ್ತು ನಿಮಿಷ ಮಾತಾಡದೆ ಸುಮ್ಮನೆ ನಿಂತಿದ್ದೆವು. ಆಮೇಲೆ ನನ್ನ ಹಿಂದೆ ನಿಂತಿದ್ದ ಅಲ್ಲಿಮುತ್ತುವಿಗೂ ಮುನಿಶಾಮಿಗೂ ಯಾವುದಾದರೂ ಮರ ಹತ್ತಿಕೊಳ್ಳಿರೆಂದು ಎಚ್ಚರಿಕೆ ಹೇಳಿ ಮುಂದುವರಿದೆ. ನನ್ನ ಮುಂಜಾಗ್ರತೆಯೆಲ್ಲ ಅನವಶ್ಯಕವಾಗಿತ್ತು. ಚಿರತೆ ಸತ್ತು ಕೊರಕಲಿನಲ್ಲಿ ಬಿದ್ದಿತ್ತು. ನನ್ನ ೪೦೫ ಗುಂಡು ಅದರ ಕುತ್ತಿಗೆಯನ್ನು ತೂರಿ ಅದರ ತಲೆ

ಚಿಪ್ಪನ್ನೇ ಪುಡಿಪುಡಿಮಾಡಿತ್ತು!

ಸತ್ತ ಚಿರತೆಯನ್ನು ಪರೀಕ್ಷಿಸಿದಾಗ ಮುನಿಶಾಮಿ ಹೊಡೆದ ಗುಂಡು ಅದರ ಭುಜದ ಮೇಲ್ಭಾಗಕ್ಕೆ ಹೊಡೆದು ಬಲವಾದ ಗಾಯ ಮಾಡಿದ್ದು ಕಾಣುತ್ತಿತ್ತು. ಆ ಗಾಯ ಕೊಳೆತು ಆಗಲೇ ಅದರಲ್ಲಿ ಹುಳುಗಳು ಮಿಜಿಗುಡುತ್ತಿದ್ದುವು. ಅದು ನರಭಕ್ಷಕವಾಗುವ ಸಾಧ್ಯತೆಗಳಿದ್ದರೂ ಆ ಗಾಯದಿಂದ ಅದು ಬಹುಕಾಲ ಬದುಕುವ ಸಾಧ್ಯತೆಗಳಿರಲಿಲ್ಲವೆಂದೇ ಅನ್ನಿಸುತ್ತದೆ. ಅದು ಏಳು ಅಡಿ ಉದ್ದವಿದ್ದ ದೊಡ್ಡ ವಯಸ್ಕ ಚಿರತೆ.

ಅದನ್ನು ಆ ಲಂಟಾನದ ಜಿಗ್ಗಿನ ಅಡಿಯಿಂದ ಹೊರಕ್ಕೆ ಸಾಗಿಸಲು ಮೂರು ಜನಕ್ಕೂ ಸಾಕುಬೇಕಾಯ್ತು. ಮುಳ್ಳು ತರಚಿ ಮೈ ಕೈಯ್ಯೆಲ್ಲಾ ರಕ್ತಮಯವಾಗಿದ್ದ ನಮಗೆ ಶಿಕಾರಿಯ ಸಹವಾಸವೇ ಬೇಡವೆಂದು ಅನ್ನಿಸಿದ್ದರಲ್ಲಿ ಆಶ್ಚರ್ಯವೇನಿಲ್ಲ.

ಅದೇ ದಿನ ಸಾಯಂಕಾಲ ನಾವು ಆ ಚಿರತೆಯನ್ನು ಡಿ.ಎಸ್.ಪಿ ಆಫೀಸಿಗೆ ಒಯ್ದು ಅವರ ಕಾಲುಬುಡದಲ್ಲಿ ಹಾಕಿ ಅವರು ಕೊಟ್ಟಿದ್ದ ಗಡುವಿನ ಕಾಲಾವಧಿಯನ್ನು ಜ್ಞಾಪಿಸಿದೆವು. ಅದರ ಅರ್ಧದಷ್ಟು ಸಮಯದಲ್ಲಿ, ನಲ್ವತ್ತೆಂಟು ಗಂಟೆಗಳೊಳಗೆ ನಾವು ಒಪ್ಪಿಕೊಂಡ ಕೆಲಸ ಮಾಡಿ ಮುಗಿಸಿದ್ದೆವು. ಡಿ.ಎಸ್.ಪಿ ಪರಮಾನಂದದಿಂದ ನಮ್ಮಿಬ್ಬರ ಕೈ ಕುಲುಕಿದರು.



# ಅಲ್ಲಾಭಕ್ಷಿಯ ಪುಂಡುಕರಡಿ

೧



ಈಗ ನಾನು ಹೇಳಬೇಕೆಂದಿರುವ ಕತೆ ಒಂದು ದಕ್ಷಿಣಭಾರತದ ಕಾಡುಗಳಲ್ಲಿ ಸಾಮಾನ್ಯವಾಗಿ ಕಾಣಸಿಗುವ ಕರಡಿಗೆ ಸಂಬಂಧಿಸಿದ್ದು. ಭಾರೀ ದಾಂಡಿಗ ಕರೇ ಕರಡಿ.

ಎಲ್ಲ ಕರಡಿಗಳೂ ನಾನು ನಿಮಗೆ ಅನೇಕಬಾರಿ ತಿಳಿಸಿರುವಂತೆ ನಂಬಲನರ್ಹವಾದ, ಶೀಘ್ರಕೋಪದ, ಸುಲಭಕ್ಕೆ ಗಾಬರಿಬೀಳುವ ಪ್ರಾಣಿಗಳು. ಯಾರಾದರೂ ಆಕಸ್ಮಿಕವಾಗಿ ಅವು ಮಲಗಿದ್ದಾಗಲೋ, ಆಹಾರ ತಿನ್ನುತ್ತಿದ್ದಾಗಲೋ, ಇಲ್ಲವೇ ಕಾಡಿನಲ್ಲಿ ಅಲೆದಾಡುತ್ತಿರುವಾಗಲೋ ತೀರಾ ಹತ್ತಿರ ಹೋದರೆ ಯಾವಕಾರಣವೂ ಇಲ್ಲದಿದ್ದರೂ ಗಾಬರಿಯಾಗಿ ಮೈಮೇಲೆ ಬರುತ್ತವೆ. ಇದರಿಂದಾಗಿ ಕರಡಿಗಳನ್ನೂ ಆನೆಗಳನ್ನೂ ಕಂಡರೆ ಹಳ್ಳಿಯವರು ದುಪ್ಪರಿಂದ ದೂರವಿರಬೇಕೆನ್ನುವಂತೆ

ಅವುಗಳ ಹತ್ತಿರ ಸುಳಿಯುವುದಿಲ್ಲ.

ಈ ಕರಡಿಯಂತೂ ಮಹಾ ತಿಕ್ಕಲು ಪ್ರಾಣಿ, ಮತ್ತು ಮಹಾ ಕೋಪಿಷ್ಠ. ಹತ್ತಿರ ಹೋಗುವುದಿರಲಿ, ದೂರದಿಂದಲೇ ಯಾರಾದರೂ ಕಂಡರೆ ಸಾಕು, ಅದೇ ಹತ್ತಿರ ಬಂದು ಹಲ್ಲೆ ಮಾಡುತ್ತಿತ್ತು.

ಇದರ ಪುಂಡಾಟಿಕೆಗೆ ಕಾರಣವೇನೆಂದು ವಿವರಿಸುವುದು ಬಹಳ ಕಷ್ಟ. ಹಳ್ಳಿಯವರು ಅನೇಕ ಊಹಾಪೋಹದ ವಿಚಿತ್ರವಾದ ಕತೆಗಳನ್ನು ಹಬ್ಬಿಸಿದ್ದರು. ಅದರಲ್ಲಿ ಬಹಳ ಸಾದಾ ವದಂತಿ ಎಂದರೆ ಇದು 'ಹುಚ್ಚುಕರಡಿ' ಎನ್ನುವುದು. ಇನ್ನು ಕೆಲವರು ಹೇಳುತ್ತಿದ್ದುದು 'ಅದು ಹೆಣ್ಣು ಕರಡಿ, ಕರಡಿ ಆಡಿಸುವವರು ಅದರ ಮರಿಗಳನ್ನು ಕದ್ದೊಯ್ದಿದ್ದರಿಂದ ಅದು ಆ ದುಃಖ ತಾಳಲಾರದೆ ಮನುಷ್ಯರು ಕಂಡಕಂಡಲೆಲ್ಲಾ ಮುಯ್ಯಿತೀರಿಸಲು ಮುಂದಾಗುತ್ತದೆ ಎಂದು. ಆದರೆ ಹಳ್ಳಿಗಳಲ್ಲೆಲ್ಲಾ ತುಂಬಾ ಪ್ರಚಲಿತವಾಗಿದ್ದ ಅಚ್ಚರಿಯ ದಂತಕತೆ ಎಂದರೆ ಈ ಕರಡಿಯ ಲೈಂಗಿಕ ಜೀವನಕ್ಕೆ ಸಂಬಂಧಿಸಿದ್ದು. ಒಂದು ವರ್ಷದ ಹಿಂದೆ ತನ್ನ ಜಾತಿಯ ಜೊತೆಗಾತಿ ಸಿಕ್ಕದೆ ಕಾಡುಮೇಡು ತಿರುಗಿದ ಈ ಕರಡಿ ಕೊನೆಗೆ ಒಬ್ಬ ರೈತನ ಮಗಳನ್ನು ಮೋಹಿಸಿಬಿಟ್ಟಿತಂತೆ. ಅವಳು ಹಳ್ಳಿಯ ಪಕ್ಕ ಕಾಡಿನ ಸಮೀಪದಲ್ಲಿ ಕುರಿ ಕಾಯುತ್ತಿದ್ದಾಗ ಇದು ಅವಳನ್ನು ಹಾರಿಸಿಕೊಂಡು ಕಾಡಿಗೆ ಒಯ್ದಿತು. ಇಡೀ ಹಳ್ಳಿಗೆ ಈ ವರ್ತಮಾನ ಗೊತ್ತಾಗಿ ಹಳ್ಳಿಯವರೆಲ್ಲಾ ಹೇಗಾದರೂ ಮಾಡಿ ಆ ಹುಡುಗಿಯನ್ನು ರಕ್ಷಿಸಬೇಕೆಂದು ಒಟ್ಟಾದರು. ಗುಂಪಾಗಿ ಕಾಡಿಗೆ ನುಗ್ಗಿ, ಅಂತೂ ಇಂತೂ ಕರಡಿಯನ್ನು ಬೆದರಿಸಿ ಓಡಿಸಿ ಹುಡುಗಿಯನ್ನು ಪಾರು ಮಾಡಿದರಂತೆ. ಇದರಿಂದ ಕಡುಕೋಪಗೊಂಡ ಕರಡಿ ಅವತ್ತಿನಿಂದಲೂ ಕಣ್ಣಿಗೆ ಕಂಡ ಮನುಷ್ಯರನ್ನೆಲ್ಲಾ ಅಟ್ಟಾಡಿ ಹಲ್ಲೆ ಮಾಡತೊಡಗಿದೆ.

ಈ ವಿಚಿತ್ರ ಕಥೆಗಳ ವಿಚಾರ ಹಾಗಿರಲಿ ಈ ಕರಡಿಯ ಪುಂಡಾಟಿಕೆಯಿಂದ ಸತ್ತವರ ಮತ್ತು ಮರಣಾಂತಿಕವಾಗಿ ಗಾಯಗೊಂಡವರ ಬಹಳ ಉದ್ದ ಪಟ್ಟಿಯೇ ಇದರ ಖಾತೆಯಲ್ಲಿ ಜಮಾ ಆಗಿತ್ತು. ಸುಮಾರು ಹನ್ನೆರಡು ಜನರನ್ನು ಸಾಯಿಸಿದ್ದಲ್ಲದೆ ಹದಿನಾರು ಜನಕ್ಕೆ ಮೈಯ್ಯೆಲ್ಲಾ ಗಿಬರಿ ಮರಣಾಂತಿಕ ಗಾಯ ಮಾಡಿತ್ತು.

ಕರಡಿಗಳ ಸಹಜ ಸ್ವಭಾವದಂತೆ ಇದು ನೇರವಾಗಿ ಮನುಷ್ಯರ ಕಪಾಲಕ್ಕೆ ಹೊಡೆದು, ತನ್ನ ಭಯಂಕರ ಉಗುರುಗಳಿಂತ ಮುಖವನ್ನೆಲ್ಲಾ ಹರಿದುಹಾಕುತ್ತಿತ್ತು. ಮೈ ಕೈಯನ್ನೆಲ್ಲಾ ಮನಸ್ವಿಯಾಗಿ ಕಚ್ಚಿಯೂ ಕಚ್ಚುತ್ತಿತ್ತು. ಇದರ ಹಲ್ಲೆಗೊಳಗಾಗಿ ಪ್ರಾಣ ಉಳಿದವರಲ್ಲಿ ಕೆಲವರಿಗೆ ಎರಡೂ ಕಣ್ಣುಗಳು ಕುರುಡಾದುವು. ಕೆಲವರಿಗೆ ಮೂಗೂ ಕಪಾಲಗಳು ಅಸಹ್ಯವಾಗಿ ಹರಿದುಹೋದುವು. ಸತ್ತವರಿಗಂತೂ ಅವರ ಗುರುತು ಹಿಡಿಯಲು ಸಹ ಸಾಧ್ಯವಾಗದಂತೆ ಕರಡಿ ಮುಖವನ್ನೆಲ್ಲಾ ಹರಿದು ವಿರೂಪಗೊಳಿಸಿತ್ತು. ಕೆಲವರು ಇದು ಮನುಷ್ಯರನ್ನು ಕೊಂದು ತಿಂದಿದ್ದೂ ಉಂಟು ಎಂದು ಹೇಳುತ್ತಾರೆ.

ಈ ವದಂತಿಯ ಸತ್ಯಾಸತ್ಯವನ್ನು ಪರೀಕ್ಷಿಸುವಷ್ಟು ನನಗೆ ಸಮಯವಿರಲಿಲ್ಲ.

ಆದರೆ ಇಂಡಿಯಾದ ಕರಡಿಗಳೂ ಒಮ್ಮೊಮ್ಮೆ ಸತ್ತ ಪ್ರಾಣಿಗಳ ದೇಹವನ್ನು ತಿಂದ ಉದಾಹರಣೆಗಳಿವೆ. ಆದರೆ ಸ್ವಾಭಾವಿಕವಾಗಿ ಕರಡಿ ಸಸ್ಯಾಹಾರಿ ಪ್ರಾಣಿ. ಬೇರು, ಗಡ್ಡೆ ಗೆಣಸು, ಜೇನು ಹಲ್ಲಿ, ಗೊದ್ದ ಮತ್ತು ಹುತ್ತದ ಒರಲೆ, ಹಣ್ಣುಗಳು ಇವೇ ಕರಡಿಗಳ ಆಹಾರ. ಆದ್ದರಿಂದ ಹಸಿ ಮಾಂಸ, ಅದು ಮನುಷ್ಯರದ್ದೇ ಆದರೂ ಕರಡಿ ತಿನ್ನುವುದು ತೀರ ಅಸ್ವಾಭವಿಕ.

ಈ ಕರಡಿಯ ಮೂಲಸ್ಥಾನ ನಾಗವಾರ ಬೆಟ್ಟಗಳು. ಈ ಬೆಟ್ಟಗಳ ಹತ್ತಿರ ಅರಸೀಕೆರೆ ಎನ್ನುವ ದೊಡ್ಡ ಊರು ಇದೆ. ಬೆಂಗಳೂರಿನಿಂದ ನೂರಐದು ಮೈಲು ದೂರದಲ್ಲಿರುವ ಅರಸೀಕೆರೆ ಮೈಸೂರು ಸಂಸ್ಥಾನದಲ್ಲಿದೆ. ಈ ನಾಗವಾರ ಬೆಟ್ಟಗಳ ಬಳಿಯೇ ಈ ಕರಡಿ ಮೊದಲು ಪುಂಡಾಟಿಕೆ ಶುರುಮಾಡಿದ್ದು. ಆಮೇಲೆ ಇದಕ್ಕೆ ಧೈರ್ಯ ಹೆಚ್ಚಾಯ್ತು. ಗುಡ್ಡದಿಂದ ಬಯಲಿನತ್ತ ವಲಸೆ ಹೊರಟ ಇದು ಬಯಲುಸೀಮೆ ಹಳ್ಳಿಗಳ ಸುತ್ತಮುತ್ತ ಬೀಡುಬಿಟ್ಟು ಸಾಯಂಕಾಲ ಹೊಲಗದ್ದೆಗಳಲ್ಲಿ ಕೆಲಸ ಮಾಡುವ ರೈತರಿಗೆ ಕಿರುಕುಳ ಕೊಡಲಾರಂಭಿಸಿತು. ಕಬ್ಬು, ನೆಲಗಡಲೆ, ಆಲೂಗಡ್ಡೆ ಇತ್ಯಾದಿಗಳನ್ನು ಲೂಟಿ ಮಾಡುವುದಲ್ಲದೆ ಕಣ್ಣಿಗೆ ಕಂಡವರಮೇಲೆಲ್ಲಾ ಹಲ್ಲೆ ಮಾಡಲು ಶುರುಮಾಡಿತು.

ನಾನು ಈ ಕರಡಿಯ ಪುಂಡಾಟಿಕೆಯ ಸಮಾಚಾರ ಒಂದು ವರ್ಷದಿಂದಲೂ ಕೇಳುತ್ತಾ ಇದ್ದೆ. ಕಾಡು ಪ್ರಾಣಿಗಳ ಕಿರುಕುಳದ ಬಗ್ಗೆ ವರದಿ ಮಾಡುವಾಗೆಲ್ಲಾ ಹಳ್ಳಿಯವರು ಒಂದಕ್ಕೆರಡು ಉತ್ಪ್ರೇಕ್ಷೆ ಮಾಡುವುದರಿಂದ ಮತ್ತು ಯಾವುದೋ ಪ್ರಾಣಿ ಮಾಡಿದ ಅಪರಾಧವನ್ನು ಇನ್ಯಾವುದರದೋ ತಲೆಗೆ ಕಟ್ಟುವುದರಿಂದ, ನಾನು ಕರಡಿ ಕಾಟವನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ಕರಡಿಗಳನ್ನು ನಾನು ಕಾಡಿನ ಮಿತ್ರರೆಂದೇ ಭಾವಿಸಿರುವುದರಿಂದ ಕರಡಿ ಕೊಲ್ಲುವುದು ನನಗೆ ಇಷ್ಟವೂ ಇರಲಿಲ್ಲ.

ಆದರೇನು ಮಾಡುವುದು? ನಾನು ಅನಿವಾರ್ಯವಾಗಿ ಕರಡಿ ಶಿಕಾರಿಗೆ ಇಳಿಯಬೇಕಾದ ಸಂದಿಗ್ಧ ಪರಿಸ್ಥಿತಿಗೆ ಸಿಕ್ಕಿಕೊಂಡೆ. ನನಗೊಬ್ಬ ಅಲ್ಲಾಭಕ್ಷಿ ಎಂಬ ಮುದುಕ ಸ್ನಾಬಣ್ಣ ಸ್ನೇಹಿತನಿದ್ದ. ಅರಸೀಕೆರೆಯಿಂದ ಶಿವಮೊಗ್ಗಾಕ್ಕೆ ಹೋಗುವ ದಾರಿಯಲ್ಲಿ ಅಲ್ಲೊಂದು ಸಂತ ಮೌಲ್ವಿಗಳ ಗೋರಿ ಇದೆ. ಸುಮಾರು ಐವತ್ತು ವರ್ಷಗಳ ಹಿಂದೆ ಬದುಕಿದ್ದ ಮುಸ್ಲಿಂ ಸಂತನೊಬ್ಬನ ಗೋರಿ ಇದು. ಮುಸ್ಲಿಮರೆಲ್ಲಾ ಇದನ್ನು ಪವಿತ್ರ ಸ್ಥಳವೆಂದು ಪರಿಗಣಿಸಿ ಪ್ರತಿವರ್ಷ ಶ್ರದ್ಧಾಭಕ್ತಿಗಳಿಂದ ಇಲ್ಲಿ ಪೂಜೆ ಸಲ್ಲಿಸುತ್ತಾರೆ. ಇಂಥ ಮುಸ್ಲಿಂ ಸಂತರ ಪವಿತ್ರ ಗೋರಿಗಳನ್ನು ಭಾರತದಾದ್ಯಂತ ಅಲ್ಲಲ್ಲಿ ನೋಡಬಹುದು. ಯಾರಾದರೂ ಮುದುಕರನ್ನು ಅದಕ್ಕೆ ಪಾಲಕರನ್ನಾಗಿ ನಿಯಮಿಸಿ ಆತನಿಗೆ ವಾಸಕ್ಕೆ ಮನೆಯನ್ನೂ ಕಟ್ಟಿಕೊಟ್ಟಿರುತ್ತಾರೆ. ಈ ಪಾಲಕರ ಕೆಲಸವೆಂದರೆ ಆ ಗೋರಿಯನ್ನು ಶುದ್ಧವಾಗಿಟ್ಟು ರಾತ್ರಿ ಅಲ್ಲೊಂದು ದೀಪ ಹಚ್ಚಿಟ್ಟು, ತಾವು ಅಲ್ಲಿ ತೀರಿಕೊಂಡ ಸಂತರನ್ನು ಮರೆತಿಲ್ಲವೆಂದು ಅಲ್ಲಾಗೆ ಮನದಟ್ಟು ಮಾಡುವುದು.

ಅಲ್ಲಾಭಕ್ಷಿ ಗುಡಿಯಿಂದ ಸುಮಾರು ನಾನೂರು ಗಜ ದೂರದಲ್ಲಿ ಒಂದು ಚಿಕ್ಕ

ಗುಡ್ಡ ಇತ್ತು. ಚಿಕ್ಕ ದೊಡ್ಡ ಬಂಡೆಗಳಿಂದ ಕೂಡಿದ ಇದು ದಟ್ಟವಾದ ಲಂಟಾನ ಪೊದೆಗಳಿಂದ ಸುತ್ತುವರಿದಿತ್ತು. ಆ ಗುಡ್ಡದಿಂದ ಗುಡಿಯವರೆಗೆ ಮತ್ತು ರಸ್ತೆವರೆಗೂ ರೈತರ ಹೊಲಗಳಿದ್ದುವು. ರೈತರು ಹೊಲಗಳಲ್ಲಿ ನೆಲಗಡಲೆ ಬೆಳೆ ಬಿತ್ತಿದ್ದರು. ಕಾಡು ಪ್ರಾಣಿಗಳಿಗೆ ಲಂಟಾನ ಸುತ್ತುವರಿದಿದ್ದ ಗುಡ್ಡ ಒಳ್ಳೆ ಅಡಗುದಾಣವಾಗಿತ್ತು. ಪಕ್ಕದಲ್ಲೇ ವಿಸ್ತಾರವಾಗಿದ್ದ ಹೊಲಗಳಲ್ಲಿ ಹುಲುಸಾಗಿ ಬೆಳೆದಿದ್ದ ನೆಲಗಡಲೆ ಬಾಯಿ ಚಪ್ಪರಿಸುವ ಆಹಾರವಾಗಿತ್ತು. ಪುಂಡುಕರಡಿ ಅಲ್ಲಿಗೆ ಬಂದು ಬಿಡಾರ ಹೂಡಿತು.

ಗುಡ್ಡದ ಮೇಲಿನ ದೊಡ್ಡದೊಡ್ಡ ಬಂಡೆಗಳೆಡೆಯಲ್ಲಿ ಬಿರುಕಿನಂತಿದ್ದ ಒಂದು ಗುಹೆಯೊಳಗೆ ಸೇರಿಕೊಂಡ ಕರಡಿ ಸಂಜೆಯಾಗುತ್ತಲೆ ಹೊಟ್ಟೆ ತುಂಬಿಸಿಕೊಳ್ಳಲು ಗುಡ್ಡ ಇಳಿದು ನೆಲಗಡಲೆ ಹೊಲಗಳಿಗೆ ನುಗ್ಗುವುದನ್ನು ಎಲ್ಲರೂ ನೋಡಿದ್ದರು. ರಾತ್ರಿಯೆಲ್ಲಾ ನೆಲಗಡಲೆ ಗಿಡಗಳನ್ನು ಕಿತ್ತು ಕಾಡಲೆಕಾಯಿ ತಿಂದು ಅನಂತರ ಬಾಯಿಚಪಲಕ್ಕೆ ಅಲ್ಲಿಲ್ಲಿ ಸಿಗುವ ಬೇರು, ಗೆಡ್ಡೆ ಗೆಣಸು, ಒರಲೆ ಹುತ್ತಗಳನ್ನು ಹುಡುಕುತ್ತಿತ್ತು. ಬೆಳಕು ಬಿಟ್ಟಮೇಲೆ ಅದು ನೆಲಗಡಲೆ, ಒರಲೆ, ಗೊದ್ದದಕೊಟ್ಟೆ ಇತ್ಯಾದಿಗಳಿಂದ ಭರ್ತಿಯಾದ ಹೊಟ್ಟೆ ಹೊತ್ತುಕೊಂಡು ನಿಧಾನವಾಗಿ ಗುಡ್ಡದಮೇಲಿನ ಗವಿಯತ್ತ ಸಾಗುವುದನ್ನು ನೋಡ ಬಹುದಿತ್ತು. ಆ ಕರಡಿ ನಿರಾತಂಕವಾಗಿ ಠಾಣ್ಯ ಹೂಡಲು ಅಲ್ಲಿದ್ದ ಇನ್ನೊಂದು ಕಾರಣವೆಂದರೆ ಆ ಗುಡ್ಡದ ಹಿಂಭಾಗದಲ್ಲಿ ಸ್ವಾಭಾವಿಕವಾಗಿಯೇ ನಿರ್ಮಾಣವಾಗಿದ್ದ ಒಂದು ಚಿಕ್ಕ ಕೆರೆ ಇತ್ತು. ಆದ್ದರಿಂದಆ ಕರಡಿಗೆ ಹಸಿವು ನೀರಡಿಕೆಗಳೆರಡಕ್ಕೂ ಪರಿಹಾರ ಸಿಕ್ಕಿತ್ತು.

ಈ ನಡುವೆ ಇನ್ನೊಂದು ತಲೆನೋವು ಶುರುವಾಯ್ತು. ಬೆಂಗಳೂರು ಶಿವಮೊಗ್ಗಾ ಮೇನ್ ರೋಡಿನಲ್ಲಿ ಅಕ್ಕಪಕ್ಕದಲ್ಲಿ ತುಂಬಾ ಅತ್ತಿ, ಆಲ, ಬಸರಿಮರಗಳಿವೆ. ಇವೆಲ್ಲಾ ಹಳೆ ಮಹಾರಾಜರ ಕಾಲದಲ್ಲಿ ಹಾಕಿದವು. ಇವು ಅಲ್ಲಾಭಕ್ಷಿಯ ಗುಡಿಯ ಅಕ್ಕಪಕ್ಕದಲ್ಲೂ ಬೇಕಾದಷ್ಟು ಬೆಳೆದಿದ್ದುವು. ನೆಲಗಡಲೆ ಹೊಲಗಳಲ್ಲಿ ಕರಡಿ ಲೂಟಿ ನಡೆಯುತ್ತಿದ್ದ ಸಮಯದಲ್ಲೇ ಇವೂ ಸಹ ಹಣ್ಣು ಬಿಡಲು ಶುರುಮಾಡಿದುವು. ಬೆಳಗಿನ ಹೊತ್ತು ನಾನಾತರದ ಹಕ್ಕಿಗಳೂ ಕೋತಿಗಳೂ ಮರ ಹತ್ತಿ ಹಣ್ಣು ತಿನ್ನುತ್ತಾ ಧಾಂದಲೆ ನಡೆಸುತ್ತಿದ್ದುವು. ಈ ಮರಗಳಿಂದ ಉದುರುತ್ತಿದ್ದ ಹಣ್ಣುಗಳು ರಸ್ತೆಯುದ್ದಕ್ಕೂ ಕಿಕ್ಕಿರಿದು ಜಮಖಾನ ಹಾಸಿದಂತೆ ಬಿದ್ದಿರುತ್ತಿದ್ದುವು. ರಾತ್ರಿ ದೊಡ್ಡದೊಡ್ಡ ಬಾವಲಿಗಳು ಹಣ್ಣುತಿನ್ನಲು ಆಗಮಿಸಿ ತಲೆಕೆಳಗಾಗಿ ಜೋತುಕೊಂಡು ಹಣ್ಣು ತಿನ್ನುತ್ತಾ ಕರಕರ ಕೂಗಿ ಪರಸ್ಪರ ಜಗಳವಾಡುತ್ತಿದ್ದುವು.

ಬೆಳಗ್ಗೆ ರಾತ್ರೆ ಆಗಮಿಸುವ ಈ ಹಲವಾರುತರದ ಅತಿಥಿಗಳು ಹಣ್ಣು ತಾವು ತಿನ್ನುವುದಲ್ಲದೆ ಅದಕ್ಕೆ ಹತ್ತರಷ್ಟು ಹಣ್ಣನ್ನು ಮರದಡಿ ಉದುರಿಸುತ್ತಿದ್ದುವು. ಕಳಿತ ಹಣ್ಣುಗಳು ತಮ್ಮಭಾರಕ್ಕೇ ತೊಟ್ಟು ಕಳಚಿ ಬೀಳುತ್ತಿದ್ದುದಲ್ಲದೆ ಗಾಳಿ ಮಳೆಗಳಿಗೂ ಉದುರಿರುತ್ತಿದ್ದುವು. ಇದು ಇಲ್ಲಿಯವರೆಗೆ ಕಡಲೇಕಾಯಿಗಳನ್ನೇ ತಿಂದು ತಿಂದು

ಬೇಸರಗೊಂಡಿದ್ದ ಕರಡಿಗೆ ದೊಡ್ಡ ಆಕರ್ಷಣೆಯಾಯ್ತು.

ಅದು ಹೊಲಗಳಲ್ಲಿ ನೆಲಗಡಲೆ ತಿಂದು ಬೇಜಾರಾದ ಕೂಡಲೇ ಉದ್ದಕ್ಕೂ ಸಾಲಮರಗಳ ಅಡಿ ಉದುರಿರುತ್ತಿದ್ದ ಅತ್ತಿ ಗೋಣಿ ಹಣ್ಣುಗಳನ್ನು ಹೆರಕಿ ತಿನ್ನುತ್ತಾ ತಿರುಗುತ್ತಿತ್ತು. ಹಾಗಾಗಿ ಅದು ಅಲ್ಲಾಭಕ್ಷಿಯ ಗುಡಿಯ ಪಕ್ಕಕ್ಕೂ ಬರಲು ಶುರು ಮಾಡಿತು. ಇಲ್ಲಿಂದ ಅಲ್ಲಾಭಕ್ಷಿಯ ತೊಂದರೆಗಳು ಆರಂಭವಾದುವು.

ಅಲ್ಲಾಭಕ್ಷಿಗೊಬ್ಬ ಮಗ ಇದ್ದ. ಸುಮಾರು ಇಪ್ಪತ್ತೆರಡು ವರ್ಷದವನಿರಬಹುದು. ವಯಸ್ಸಾದ ತಾಯಿ ತಂದೆಗಳು ಮತ್ತು ಇವನಿಗಿಂತ ವಯಸ್ಸಿನಲ್ಲಿ ತುಂಬ ಚಿಕ್ಕವಳಾದ ತಂಗಿ, ಒಟ್ಟು ನಾಲ್ಕು ಜನ ಆ ಮನೆಯಲ್ಲಿ ವಾಸವಾಗಿದ್ದಿದ್ದು. ಒಮ್ಮೆ ರಾತ್ರಿ ಊಟವಾದನಂತರ ಯಾವ ಕಾರಣಕ್ಕೋ ಆ ಹುಡುಗ ಬಾಗಿಲು ತೆರೆದು ಆಚೆಗೆ ಹೋದ. ಅದು ಕಗ್ಗತ್ತಲ ರಾತ್ರಿ. ಅದೇಸಮಯದಲ್ಲಿ ಅಲ್ಲಾಭಕ್ಷಿ ಗುಡಿ ಎದುರೇ ಆ ಪುಂಡುಕರಡಿ ಅತ್ತಿಹಣ್ಣು ಆಯ್ದು ತಿನ್ನುತ್ತಾ ಇತ್ತು. ಹುಡುಗ ದಡಕ್ಕನೆ ಬಾಗಿಲು ತೆರೆದು ಆಚೆ ಬಂದಿದ್ದು ಅದರ ಊಟಕ್ಕೆ ಭಂಗವಾಯ್ತೋ ಏನೋ! ಅಂತೂ ಸಿಟ್ಟಿಗೆದ್ದ ಕರಡಿ ಬಾಗಿಲಿಳಿದು ಬರುತ್ತಿದ್ದ ಹುಡುಗನ ಮೇಲೆ ಒಮ್ಮೆಲೇ ಏರಿಹೋಗಿ ಅವನ ಕುತ್ತಿಗೆಯನ್ನು ಕಚ್ಚಿತು. ಹುಡುಗ ಗಟ್ಟಿಯಾಗಿ ಕಿರಿಚುತ್ತ ಒದ್ದಾಡಿ ಕರಡಿಯಿಂದ ಬಿಡಿಸಿಕೊಳ್ಳಲು ಯತ್ನಿಸಿದ. ಕರಡಿ ಮತ್ತೊಮ್ಮೆ ಅವನನ್ನು ಕಚ್ಚಿತು. ಈಸಾರಿ ಮೂಗನ್ನೂ ಒಂದು ಕಣ್ಣನ್ನೂ ಸೇರಿಸಿ ಕಪಾಲದ ಬಳಿ ಕಚ್ಚಿತು. ಅಲ್ಲದೆ ಎದೆ ಭುಜಗಳ ಬಳಿ ಉಗುರುಗಳಿಂದ ಸಿಗಿದಂತೆ ಪರಚಿತು. ಅಷ್ಟರಲ್ಲಿ ಮನೆಯೊಳಗೆಲ್ಲಾ ಗಲಾಟೆ ಶುರುವಾಗಿದ್ದರಿಂದ ಹುಡುಗನನ್ನು ಬಿಟ್ಟು ಕತ್ತಲಲ್ಲಿ ಮಾಯವಾಯ್ತು.

ಹುಡುಗ ಕರಡಿ ಆಘಾತಕ್ಕೆ ತತ್ತರಿಸುತ್ತ ಹೇಗೋ ತೂರಾಡಿಕೊಂಡು ಮನೆಯತ್ತ ಹೆಜ್ಜೆ ಹಾಕಿದ. ಹುಡುಗನ ಕುತ್ತಿಗೆ ಹತ್ತಿರ ಕರಡಿ ಕಚ್ಚಿದಲ್ಲಿ ಮುಖ್ಯ ರಕ್ತನಾಳ ಒಂದು ತುಂಡಾಗಿದ್ದರಿಂದ ರಕ್ತ ತಡೆಯಿಲ್ಲದೆ ಧಾರಾಕಾರವಾಗಿ ಚಿಲುಮೆಯಂತೆ ಹೊರ ಚಿಮ್ಮುತ್ತಿತ್ತು. ಅಲ್ಲಾಭಕ್ಷಿ ಮನೆಯಲ್ಲಿ ಇದ್ದಬದ್ದ ಬಟ್ಟೆಗಳನ್ನೆಲ್ಲಾ ಅವನ ಗಾಯಕ್ಕೆ ಸುತ್ತಿ ಸುತ್ತಿ ರಕ್ತ ತಡೆಯಲು ಯತ್ನಿಸಿದ. ಮನೆಯಲ್ಲಿದ್ದ ಬಟ್ಟೆಗಳೆಲ್ಲಾ ಹುಡುಗನ ರಕ್ತದಲ್ಲಿ ನೆಂದು ಒದ್ದೆಮುದ್ದೆಯಾದುವೇಹೊರತು ರಕ್ತ ನಿಲ್ಲಲಿಲ್ಲ.

ಮುಂಜಾನೆಯ ಹೊತ್ತಿಗೆ ರಕ್ತ ಸ್ರಾವದಿಂದಲೂ, ಕರಡಿ ಮಾಡಿದ್ದ ಪ್ರಾಣಾಂತಿಕ ಗಾಯಗಳಿಂದಲೂ ಹುಡುಗ ಕೊನೆಯುಸುರೆಳೆದ. ಕರಡಿ ಕಡಲೆಕಾಯನ್ನೂ ಗೋಣಿ ಅತ್ತಿ ಹಣ್ಣುಗಳನ್ನೂ ತಿಂದು ಹೊಟ್ಟೆ ತುಂಬಿಸಿಕೊಂಡು ಗುಡ್ಡವನ್ನೇರಿ ಕಲ್ಲು ಗುಂಡುಗಳ ನಡುವಿದ್ದ ಗುಹೆಗೆ ಹೋಯ್ತು.

ಅಲ್ಲಾಭಕ್ಷಿ ತುಂಬ ಬಡವ. ನನಗೆ ಬೆಂಗಳೂರಿಗೆ ಟೆಲಿಗ್ರಾಂ ಕಳಿಸುವುದಕ್ಕೆ ಕೂಡ ಅವನ ಕೈಲಿ ಶಕ್ಯವಿರಲಿಲ್ಲ. ಇನ್ನು ಬಸ್ಸು ರೈಲು ಹತ್ತಿ ಬೆಂಗಳೂರಿಗೆ ಬರುವುದಂತೂ ದೂರವೇ ಉಳಿಯಿತು.

೨



ಆದರೆ ಒಂದು ಪೋಸ್ಟ್‌ಕಾರ್ಡಿನಲ್ಲಿ ತನ್ನ ಮಗನ ದುರಂತ ಕಥೆಯೆಲ್ಲವನ್ನೂ ಬರೆದು ಪೋಸ್ಟ್ ಮಾಡಿದ. ಉರ್ದೂ ಲಿಪಿಯಲ್ಲಿ ಪೆನ್ಸಿಲಿನಲ್ಲಿ ಬರೆದಿದ್ದ ಆ ಕಾಗದದ ಮೇಲೆಲ್ಲಾ ಕಣ್ಣೀರ ಕಲೆಗಳಿದ್ದುವು. ಅವನು ಪೋಸ್ಟ್ ಮಾಡಿದ ಎರಡು ದಿನದನಂತರ ನನಗೆ ಆ ಕಾಗದ ಸಿಕ್ಕಿತ್ತು. ನನ್ನ ವೃದ್ಧ ಮಿತ್ರನಿಗೆ ಒದಗಿನ ಘೋರ ಆಘಾತಕ್ಕೆ ಮರುಗಿ, ತಡಮಾಡದೆ ನಾನು ಮೂರು ಗಂಟೆಯ ತರುವಾಯ ಅರಸೀ ಕೆರೆಯತ್ತ ಹೊರಟೆ.

ನಾನು ಹೋಗುತ್ತ ಈ ಕ್ರೂರ ಕರಡಿಯನ್ನು ಬಲಿಹಾಕುವದೇನೂ ಕಷ್ಟಕರವಲ್ಲವೆಂದು ಊಹಿಸಿ ಕೇವಲ ನನ್ನ ಟಾರ್ಚು, ೪೦೫ ರೈಫಲ್ಲು, ಒಂದೇ ಒಂದು ಜೊತೆ ಬಟ್ಟೆ ಮಾತ್ರ ಒಯ್ದಿದ್ದೆ. ಹೆಚ್ಚು ದಿನಗಳ ಪ್ರವಾಸಕ್ಕೆ ನಾನು ಅಣಿಯಾಗಿರಲಿಲ್ಲ. ಸುಮಾರು ಐದು ಗಂಟೆ ಸಮಯಕ್ಕೆ ನಾನು ಅಲ್ಲಾಭಕ್ಷಿ ಮನೆ ಬಾಗಿಲೆದುರು ಇದ್ದೆ. ಅಲ್ಲಾಭಕ್ಷಿ ನಡೆದ ಕತೆಯೆಲ್ಲವನ್ನೂ ನನಗೆ ವಿವರಿಸಿದ.

ಇಬ್ಬರೂ ಆ ಕರಡಿಯನ್ನು ಬಲಿ ಹಾಕಲು ಒಂದು ಸರಳ ಯೋಜನೆ ಹಾಕಿದೆವು. ಆಗ ಅಮಾವಾಸ್ಯೆಯಾಗಿದ್ದರಿಂದ ಕತ್ತಲಾಗುವವರೆಗೂ ನಾನು ಅಲ್ಲಾಭಕ್ಷಿ ಮನೆಯೊಳಗೆ ಸುಮ್ಮನೆ ಕೂರುವುದು. ಅನಂತರ ಟಾರ್ಚ ತಗೊಂಡು ನೆಲಗಡಲೆ ಹೊಲದಲ್ಲಿ

ಅಡ್ಡಾಡಿದರೆ ಸಾಕು ಆ ಪುಂಡುಕರಡಿ ಅಲ್ಲಿ ಎಲ್ಲಾದರೂ ಸಿಕ್ಕುತ್ತದೆ. ಇಲ್ಲವೇ ಹಣ್ಣು ತಿನ್ನಲು ಸಾಲುಮರಗಳ ಬಳಿಯಾದರೂ ಬಂದಿರುತ್ತದೆ.

ಅಲ್ಲಾಭಕ್ಷಿ ನನ್ನನ್ನು ಮನೆಯೊಳಗೆ ಕರೆದು ಬಾಗಿಲು ಮುಚ್ಚಿದ. ನಾವಿಬ್ಬರೂ ಮನೆಯೊಳಗಿನ ಮಂದಪ್ರಕಾಶದಲ್ಲಿ ಅಲ್ಲಿ ಕೆಲವೇ ದಿನಗಳ ಹಿಂದೆ ನಡೆದ ದುರ್ಘಟನೆ ಬಗ್ಗೆ ಪಿಸುಮಾತಿನಲ್ಲಿ ಮಾತಾಡುತ್ತಿದ್ದೆವು. ಅಲ್ಲಾಭಕ್ಷಿ ಅವನ ಮಗನ ಸಾವಿನ ಸಮಾಚಾರ ಎತ್ತುತ್ತಲೂ ಆ ಹುಡುಗನ ತಂಗಿಯೂ ತಾಯಿಯೂ ಗೊಳೋ ಎಂದು ಅಳುತ್ತ ತಮ್ಮ ದುಃಖ ತೋಡಿಕೊಳ್ಳತೊಡಗಿದರು. ಅವರ ದುಃಖ ಆಕ್ರಂದನ ನನಗೆ ಸಹಿಸಲಾಗದಷ್ಟು ದೀರ್ಘವಾಗಿ ಸುಮಾರು ಎಂಟುಗಂಟೆ ಹೊತ್ತಿಗೆ ನಾನು ಕರಡಿ ಹುಡುಕಲು ನಿಶ್ಚಯಿಸಿ ಹೊರಹೊರಟೆ.

ನನ್ನ ರೈಫಲನ್ನು ಲೋಡು ಮಾಡಿಕೊಂಡು ಟಾರ್ಚನ್ನೊಮ್ಮೆ ಸರಿಯಾಗಿದೆಯೋ ನೊಡಿಕೊಂಡು ಹೊರಬಿದ್ದೆ. ಅಲ್ಲಾಭಕ್ಷಿ ನನ್ನ ಬೆನ್ನ ಹಿಂದೆ ಬಾಗಿಲು ಹಾಕಿಕೊಂಡು ಅಗುಳಿ ಸರಿಸಿದ್ದು ಕೇಳಿತು. ಕತ್ತಲು ಕೈಯ್ಯಲ್ಲಿ ಮುಟ್ಟುವಷ್ಟು ಸ್ನಿಗ್ಧವಾಗಿತ್ತು. ನಾನು ನನ್ನ ರೈಫಲ್ ನಳಿಗೆಗೆ ಜೋಡಿಸಿದ್ದ ಟಾರ್ಚ್ ಗುಂಡಿಯನ್ನು ಒತ್ತಿದೆ. ಅದರ ಪ್ರಕಾಶ ಪ್ರವಾಹದಂತೆ ನೆಲಗಡಲೆ ಹೊಲಗಳ ಮೇಲೂ, ದಾರಿಬದಿಯಲ್ಲಿದ್ದ ಅತ್ತಿ ಮರಗಳ ಮೇಲೂ ಬಿತ್ತು.

ಎಲ್ಲೂ ಕರಡಿಯ ಸುಳಿವೇ ಕಾಣಲಿಲ್ಲ. ಒಂದು ಕಡೆಯಿಂದ ಕರಡಿ ಎಲ್ಲಿದೆ ಹುಡುಕಬೇಕಾಗಿತ್ತು. ಅತ್ತಿ ಮರಗಳತ್ತಣಿಂದ ಶುರು ಮಾಡೋಣೆಂದು ನಿರ್ಧರಿಸಿದೆ. ಅತ್ತಿ ಮತ್ತು ಗೋಣಿ ಹಣ್ಣಿನ ಮರಗಳು ರಸ್ತೆ ಇಕ್ಕೆಲದಲ್ಲೂ ಅಲ್ಲಲ್ಲಿ ಇದ್ದುವು. ಆದ್ದರಿಂದ ರಸ್ತೆಗುಂಟ ನಡೆಯುತ್ತಾ ಎಲ್ಲಾದರೂ ನಡುವೆ ಕರಡಿ ದರ್ಶನವಾಗುತ್ತೇನೋ ನೋಡೋಣ ಎಂದು ಹೊರಟೆ. ರಸ್ತೆ ಎರಡುಕಡೆಗಳಿಗೂ ಟಾರ್ಚ್ ಬಿಡುತ್ತಾ ಶಿವಮೊಗ್ಗಾ ಕಡೆಗೆ ಸುಮಾರು ಎರಡು ಮೈಲುಗಳವರೆಗೆ ನಡೆದುಹೋದೆ. ಅನಂತರ ನಾನು ಹಿಂದಕ್ಕೆ ಅಲ್ಲಾಭಕ್ಷಿ ಗುಡಿಯಕಡೆಗೆ ಬಂದು ಅನಂತರ ಅರಸೀಕೆರೆಕಡೆಗೆ ಸುಮಾರು ಎರಡು ಮೈಲು ನಡೆದುಹೋದೆ. ಕರಡಿಯ ಸುಳಿವು ಕಾಣಲಿಲ್ಲ. ಮತ್ತೆ ಹಿಂದಕ್ಕೆ ಬಂದು ನೆಲಗಡಲೆ ಹೊಲಗಳನ್ನು ನೋಡಲು ನಿರ್ಧರಿಸಿದೆ.

ನೆಲಗಡಲೆ ಹೊಲದಲ್ಲೇನೋ ನನಗೆ ಹಲವಾರು ಪ್ರಾಣಿಗಳ ಕಣ್ಣು ಹೊಳೆದಿದ್ದು ಕಾಣಿಸಿತು. ಆದರೆ ಅವುಗಳಲ್ಲಿ ನಾಲ್ಕು ಗುಳ್ಳೆ ನರಿಗಳವು. ಮಿಕ್ಕವೆಲ್ಲಾ ನೆಲಗಡಲೆ ಗಿಡಗಳ ಚಿಗುರು ತಿನ್ನಲು ಬಂದ ಮೊಲಗಳದ್ದು. ಅಲ್ಲಿಂದ ಮುಂದಕ್ಕೆ ಆ ಕರಡಿ ಮನೆ ಮಾಡಿಕೊಂಡಿದ್ದ ಗುಡ್ಡ ಸುತ್ತಿಕೊಂಡು ಅದರ ಆಚೆ ಮಗ್ಗುಲಲ್ಲಿದ್ದ ಕೆರೆಯ ಆಜುಬಾಜನ್ನೆಲ್ಲಾ ತಪಾಸಣೆ ಮಾಡಿದೆ. ಕೆರೆಯ ಅಂಗಳದಲ್ಲಿ ನೆಲು ಉಳುಮೆ ಮಾಡುತ್ತಿದ್ದ ಕಾಡುಹಂದಿಗಳು ನನ್ನ ಟಾರ್ಚ್ ಬೆಳಕನ್ನು ನೋಡಿ ಓಡಿಹೋದುವು. ಆದರೆ ಎಲ್ಲೂ ಪುಂಡುಕರಡಿಯ ಸುಳಿವೇ ಇರಲಿಲ್ಲ. ಅನಂತರ ನಾನು ಅಲ್ಲಿದ್ದ ಕಲ್ಲು

ಗುಡ್ಡದ ಹತ್ತಿರಕ್ಕೆ ಹೋಗಿ ಅದರ ತಪ್ಪಲಿನಲ್ಲಿ ಮೇಲೆ ಕೆಳಗೆ ಎಲ್ಲ ಕಡೆಗೂ ಟಾರ್ಚ್ ಬಿಡುತ್ತಾ ತುಂಬ ಹೊತ್ತು ಪ್ರದಕ್ಷಿಣೆ ಬಂದೆ. ಈ ನಡುವ ನಾನು ಕರಡಿಯತ್ತಲೇ ಗಮನ ಕೊಡುತ್ತಾ ಕಾಲಕೆಳಗಿನ ನೆಲ ನೋಡದೆ ದೊಡ್ಡ ತೊಂದರೆಗೆ ಸಿಕ್ಕಿಕೊಳ್ಳುವುದರಲ್ಲಿದ್ದೆ. ಟಾರ್ಚ್ ಬೆಳಕನ್ನೇ ಗಮನಿಸುತ್ತಾ ಮುಂದುವರಿದು, ನಾನು ಸಾಗುತ್ತಿದ್ದ ದಾರಿಯಲ್ಲೇ ಮಲಗಿದ್ದ ಕೊಳಕುಮಂಡಲ ಹಾವನ್ನು ಇನ್ನೇನು ತುಳಿಯುವುದರಲ್ಲಿದ್ದೆ. ನನ್ನ ಕಾಲುಗಳು ಹಾವಿನಿಂದ ಕೆಲವೇ ಇಂಚುಗಳ ದೂರದಲ್ಲಿದ್ದಾಗ ಅದು ಇನ್ನೇನು ಅಪ್ಪಳಿಸಿ ಕಚ್ಚುವುದಕ್ಕೆ ಮುನ್ನುಡಿಯಾಗಿ ಬುಸ್ಸೆಂದು ಸಿಳ್ಳು ಹೊಡೆದಂತೆ ಭಯಂಕರವಾಗಿ ಬುಸುಗುಟ್ಟಿತು. ಆ ಸದ್ದಿಗೆ ತನ್ನಿಂದ ತಾನೆ ಎನ್ನುವಂತೆ ಯೋಚಿಸುವುದಕ್ಕೆ ಮೊದಲೆ ಕಾಲುಗಳು ಹಿನ್ನೆಗೆದುವು. ಕೂಡಲೆ ಅತ್ತ ಟಾರ್ಚ್ ಬಿಟ್ಟಾಗ ಒಂದು ಕ್ಷಣ ಹಿಂದೆ ನಾನು ನಿಂತಿದ್ದ ಜಾಗಕ್ಕೆ ಸರಿಯಾಗಿ ಆ ಹಾವು ಅಪ್ಪಳಿಸಿ ಕಚ್ಚುವುದು ಕಾಣಿಸಿತು. ಹಾವು ಅಪ್ಪಳಿಸುವುದಕ್ಕಿಂತ ವೇಗವಾಗಿ ನನ್ನ ಕಾಲುಗಳು ಕೆಲಸ ಮಾಡಿದ್ದುವು! ಸ್ವಲ್ಪದರಲ್ಲಿ ಅಪಾಯ ತಪ್ಪಿಸಿಕೊಂಡಿದ್ದೆ. ಆ ಮಹಾ ವಿಷಪ್ರಾಣಿಗೆ ಗುಂಡು ಹೊಡೆದು ಕೊಂದುಬಿಡಬೇಕೆನ್ನಿಸಿದರೂ ಅದರ ಸದ್ದಿಗೆ ಪುಂಡುಕರಡಿಯೂ ಪರಾರಿಯಾದೀತೆಂದು ಅನ್ನಿಸಿತು. ಅಲ್ಲದೆ ಕೋಲು ತೆಗೆದು ಬಡಿದು ಸಾಯಿಸಬಹುದಾದುದಕ್ಕೆಲ್ಲ ದುಬಾರಿಗುಂಡು ವ್ಯಯಿಸುವದು ಬೇಡವೆನ್ನಿಸಿತು. ಅಷ್ಟಕ್ಕೂ ಅದು ಕಚ್ಚುವ ಮೊದಲೇ ಭುಸುಗುಟ್ಟಿ ಎಚ್ಚರಿಕೆ ಕೊಡಲಿಲ್ಲವೆ ಎಂದೆಲ್ಲಾ ಯೋಚಿಸಿ ಅಲ್ಲಿದ್ದ ನಾಲ್ಕಾರು ಚಿಕ್ಕ ಕಲ್ಲುಗಳನ್ನೆತ್ತಿ ಅದರತ್ತ ಒಗೆದೆ. ಮಿಕ್ಕ ಹಾವುಗಳಂತಲ್ಲದ ಆ ಮೊದ್ದು ಹಾವು ನಿಧಾನವಾಗಿ ಸುರುಳಿ ಬಿಚ್ಚಿಕೊಂಡು ತೆವಳುತ್ತಾ ಬಂಡೆಗಳ ಬಿರುಕಿನಲ್ಲಿ ಮಾಯವಾಯ್ತು.

ನಾನು ಇಷ್ಟೆಲ್ಲ ಸುತ್ತಾಡಿದ ಮೇಲೂ ಎಲ್ಲೂ ಕರಡಿಯ ಸುಳಿವೇ ಕಾಣದ್ದನ್ನು ನೋಡಿ, ಇಲ್ಲಾ ಕರಡಿ ನಾನು ಮನೆಯಿಂದ ಹೊರಹೊರಡುವ ಮೊದಲೇ ಇದು ಆಹಾರ ಹುಡುಕಿ ಬಹಳ ದೂರ ಎತ್ತಲೋ ಹೋಗಿದೆ! ಇಲ್ಲವೇ ಅದು ಹಸಿವೆಯಾಗದ ಕಾರಣ ಅದರ ಗುಹೆ ಬಿಟ್ಟು ಹೊರಬಂದೇ ಇಲ್ಲ! ಎಂದು ಅನ್ನಿಸಿತು. ಅಲ್ಲಿಂದ ಅಲ್ಲಾಭಕ್ಷಿಯ ಮನೆಗೆ ಬಂದು ಕರಡಿಯ ಸುಳಿವೇ ಇರದುದನ್ನು ತಿಳಿಸಿ, ಕೊಂಚ ಹೊತ್ತು ಬಿಟ್ಟು ಇನ್ನೊಮ್ಮೆ ಎಲ್ಲಕಡೆಯೂ ತಿರುಗಾಡಿ ನೋಡುತ್ತೇನೆಂದು ಹೇಳಿದೆ.

ಕೊಂಚ ಹೊತ್ತು ಕಳೆದನಂತರ ಒಂದಲ್ಲ ಎರಡು ಸಾರಿ ನನ್ನ ಸುತ್ತಾಟ ಪುನರಾವರ್ತನೆ ಮಾಡಿದೆ. ಒಟ್ಟು ನಾನು ರಾತ್ರಿಯೆಲ್ಲ ನಿದ್ದೆಗೆಟ್ಟು ತಿರುಗಿದ್ದು ನಾಲ್ಕುಸಾರಿ. ಕೊನೆಯ ಪಾಳಿ ತಿರುಗುತ್ತಿದ್ದಾಗ ಬೆಳಗಾಗೇಹೋಯ್ತು. ಬೆಳಗಾದನಂತರ ಕರಡಿ ಸಮೀಪದಲ್ಲೆಲ್ಲೂ ಇಲ್ಲವೆಂದು ನನಗನ್ನಿಸಿದ್ದರಿಂದ ಅಲ್ಲಾಭಕ್ಷಿಗೂ ನನ್ನ ಅನ್ನಿಸಿಕೆ ತಿಳಿಸಿ ನಾನು ಬೆಂಗಳೂರಿಗೆ ಮರಳುತ್ತೇನೆಂದು ಹೇಳಿದೆ. ಅದಕ್ಕೆ ಅಲ್ಲಾಭಕ್ಷಿ ನಿರಾಕರಿಸುತ್ತಾ ಇದೊಂದು ದಿನ ಹೇಗಾದರೂ ಮಾಡಿ ಪ್ರಯತ್ನಿಸೋಣ, ಆ ಬೆಟ್ಟದಮೇಲಿರುವ ಗುಹೆಯಲ್ಲಿ ಅದು ಮಲಗಿದ್ದರೆ ಸುಲಭವಾಗಿ ಸಿಕ್ಕಿಕೊಳ್ಳುತ್ತದೆ ಎಂದು ಅಂಗಲಾಚಿದ.

ಅಷ್ಟರಲ್ಲಿ ಅಲ್ಲಾಭಕ್ಷಿಯ ಹೆಂಡತಿ ನನಗಾಗಿ ಚಪ್ಪಾತಿಗಳನ್ನು ತಯಾರಿಸಿದ್ದಳು. ಅಲ್ಲದೆ ಗಮಗಮ ವಾಸನೆಯ ಟೀ ಸಹ ಸಿದ್ಧವಾಗಿತ್ತು. ರಾತ್ರಿಯೆಲ್ಲ ತಿರುಗಾಡಿ ಸುಸ್ತಾಗಿದ್ದ ನನಗೆ ಜೀವಬಂದಂತಾಯ್ತು. ಅವೆರಡನ್ನೂ ಹೊಟ್ಟೆಬಿರಿಯೆ ಹೊಡೆದು ನಿದ್ದೆ ತಾಳಲಾರದೆ ಮಲಗಿಬಿಟ್ಟೆ. ಮಧ್ಯಾಹ್ನದ ಹೊತ್ತಿಗೆ ಅಲ್ಲಾಭಕ್ಷಿಯೇ ನನ್ನನ್ನು ಎಚ್ಚರಿಸಿದ. ಅವನ ಹೆಂಡತಿ ನಾನು ಅಲ್ಲಿಯವರೆಗೆ ಬಂದು ತೊಂದರೆ ತಗೊಂಡ ಕೃತಜ್ಞತೆಗೆ ಪಲಾವ್ ಮಾಡಿದ್ದಳು. ನಾನು ಏಳುತ್ತಿದ್ದಂತೆಯೆ ಅದರ ಗಮಗಮ ವಾಸನೆ ಬಾಯಿ ನೀರೂರುವಂತೆ ಮೂಗಿಗೆ ಬಡಿಯಿತು. ನಾನು ಎದ್ದವನೆ ಅಲ್ಲಾಭಕ್ಷಿ ಹೆಂಡತಿ ತಟ್ಟೆಗೆ ಹಾಕಿದ್ದನ್ನೆಲ್ಲಾ ಚಪ್ಪರಿಸುತ್ತಾ ತಿಂದೆ. ಅವಳ ಅಡುಗೆಯನ್ನು ನಾನು ಆಸ್ವಾದಿಸಿ ಊಟ ಮಾಡಿದ ರೀತಿ ನೋಡಿ ಅವಳಿಗೆ ತುಂಬಾ ಸಂತೋಷ ಸಮಾಧಾನ ಆಯ್ತು. ಸೂರ್ಯ ನೆತ್ತಿಯ ಮೇಲಿದ್ದ. ಬಿಸಿಲಿನ ಝಳಕ್ಕೆ ಬಂಡೆಗಳೆಲ್ಲಾ ಬಿಸಿಯಾಗಿ ಕರಡಿ ಈಗ ಗುಹೆಯೊಳಗೆ ನೆರಳಿನಲ್ಲಿ ಗಾಢ ನಿದ್ದೆಯಲ್ಲಿರುತ್ತದೆ. ಅದನ್ನು ಹುಡುಕಹೋಗುವುದಕ್ಕೆ ಇದೇ ಸರಿಯಾದ ಸಮಯ ಎಂದು ಹೊರಟೆ.

ನನ್ನೊಡನೆ ಅಲ್ಲಾಭಕ್ಷಿಯೂ ಗುಹೆ ತೋರಿಸಲು ಗುಡ್ಡದವರೆಗೂ ಬಂದ. ಗುಡ್ಡದಿಂದ ಐವತ್ತು ಗಜ ದೂರದಲ್ಲೇ ನಿಂತು ಗುಹೆಯ ಜಾಗ ಬೆಟ್ಟುಮಾಡಿ ತೋರಿಸಿದ. ನಾನು ಹೆಜ್ಜೆ ಮೇಲೆ ಹೆಜ್ಜೆ ಇಡುತ್ತಾ ನನ್ನ ಕ್ಯಾನ್‌ವಾಸ್ ಷೂ ಕೊಂಚವೂ ಸದ್ದಾಗದಂತೆ ಗುಹೆಯನ್ನು ಸಮೀಪಿಸಿದೆ. ಆದರೆ ನನ್ನ ಷೂಗಳು ಬಿಸಿ ಕಲ್ಲಿನ ಶಾಖ ಹೀರಿಕೊಂಡು ಬೆಂಕಿಯಂತೆ ಅಂಗಾಲು ಸುಡಲಾರಂಭಿಸಿದುವು.

ಗುಹೆಯ ಬಾಯಿಹತ್ತಿರ ಬಂದು ನಿಃಶಬ್ದವಾಗಿ ಕರಡಿ ಒಳಗೆ ಮಲಗಿ ಉಸಿರಾಡುತ್ತಿರುವ ಸದ್ದೇನಾದರೂ ಕೇಳುತ್ತದೆಯೇ ಆಲಿಸಿದೆ.

ಸಾಧಾರಣವಾಗಿ ಕರಡಿ ನಿದ್ದೆಮಾಡುವಾಗ ಮನುಷ್ಯರಂತೆಯೇ ಗೊರಕೆ ಹೊಡೆಯುತ್ತವೆ. ಆದ್ದರಿಂದಲೇ ಕರಡಿ ನಿದ್ದೆ ಮಾಡುತ್ತಿದ್ದರೆ ಗೊರಕೆ ಸದ್ದು ಕೇಳುತ್ತದೆಂದು ನಾನು ನಿರೀಕ್ಷಿಸಿದ್ದು. ಸುಮಾರು ಹತ್ತುನಿಮಿಷ ಸದ್ದಿಲ್ಲದೆ ನಿಂತು ಆಲೈಸುವುದರೊಳಗೇ ಬಿಸಿ ಕಲ್ಲಿನ ನೆಲದ ಮೇಲೆ ನಿಲ್ಲುವುದು ಅಸಾಧ್ಯವಾಯ್ತು. ನನ್ನ ಕೈಯ್ಯಳತೆಯೊಳಗೆ ಹಲವಾರು ಚಿಕ್ಕಪುಟ್ಟ ಕಲ್ಲುಗಳು ಬಿದ್ದಿದ್ದುವು. ಅವುಗಳನ್ನು ಒಂದೊಂದಾಗಿ ತೆಗೆದುಕೊಂಡು ಆ ಗುಹೆಯೊಳಗೆ ಎಸೆದೆ. ಕೈಗಳು ಯಾವ ಕ್ಷಣವಾದರೂ ಹೊರ ನೆಗೆಯಬಹುದಾದ ಕರಡಿಗೆ ಸಿದ್ಧವಾಗಿದ್ದುವು.

ನನ್ನ ಕಲ್ಲುಗಳಿಂದಾದರೂ ಕರಡಿ ಸಿಟ್ಟುಬಂದು ಹೊರನುಗ್ಗಬೇಕಿತ್ತು. ಆದರೂ ಗುಹೆ ನಿಃಶಬ್ದ! ನಾನು ಗುಹೆಯ ಬಾಯಿ ಹತ್ತಿರವೇ ಹೋಗಿ ಗುಹೆಯೊಳಕ್ಕೆ ದೊಡ್ಡದೊಡ್ಡ ಕಲ್ಲುಗುಂಡುಗಳನ್ನೇ ತೆಗೆದೆಸೆದೆ. ಏನೂ ಸಂಭವಿಸಲಿಲ್ಲ! ಕರಡಿ ಗುಹೆ ಖಾಲಿ ಮಾಡಿ ಹೊರಟೇ ಹೋಗಿತ್ತು!

ಗುಡ್ಡ ಇಳಿದು ಬರುತ್ತಾ ನಾನು ಅಲ್ಲಾಭಕ್ಷಿಗೆ ಬೆಂಗಳೂರಿಗೆ ಮರಳುತ್ತೇನೆಂದು

ತಿಳಿಸಿ ಮತ್ತೇನಾದರೂ ಕರಡಿ ಕಾಟ ಶುರುವಾದರೆ ಕೂಡಲೆ ಬೆಂಗಳೂರಿಗೆ ಟೆಲಿಗ್ರಾಂ ಮಾಡೆಂದು ತಿಳಿಸಿ, ಟೆಲಿಗ್ರಾಮಿಗೂ ಸಧ್ಯದ ಖರ್ಚಿಗೂ ಸಹಾಯವಾದೀತೆಂದು ಕೊಂಚ ಹಣ ಕೊಟ್ಟೆ.

ನಾನು ಬೆಂಗಳೂರಿಗೆ ವಾಪಸ್ಸಾದೆ. ಸುಮಾರು ಒಂದು ತಿಂಗಳು ಕಳೆಯಿತು. ಕರಡಿಯ ಪುಂಡಾಟಿಕೆಯ ಬಗ್ಗೆ ಯಾವ ಸಮಾಚಾರವನ್ನೂ ಕೇಳಲಿಲ್ಲ.



೨



ಅಲ್ಲಾಭಕ್ಷಿ ಮಗನನ್ನು ಕರಡಿ ಕೊಂದ ಜಾಗದಿಂದ ಸುಮಾರು ಇಪ್ಪತ್ತೈದು ಮೈಲು ದೂರ ಪಶ್ಚಿಮಕ್ಕೆ ಚಿಕ್ಕಮಗಳೂರಿನ ಕಾಡುಗಳು ಪ್ರಾರಂಭವಾಗುತ್ತದೆ. ಇದು ಮೈಸೂರು ಸಂಸ್ಥಾನದ ಕಡೂರು ಜಿಲ್ಲೆಯಲ್ಲಿದೆ. ಕಡೂರಿಗೂ ಚಿಕ್ಕಮಗಳೂರಿಗೂ ಮಧ್ಯದಲ್ಲಿ ಸುತ್ತಲೂ ಕಾಡುಗಳಿಂದಾವೃತವಾದ ಸಕ್ಕರೆಪಟ್ಣ ಎಂಬ ಚಿಕ್ಕ ಹಳ್ಳಿಯೊಂದಿದೆ.

ಒಂದು ತಿಂಗಳ ತರುವಾಯ ಸಕ್ಕರೆಪಟ್ಟಣದ ಬಳಿ ಮರ ಕುಯ್ಯುವವರನ್ನು ಈ ಕರಡಿ ಯದ್ವಾತದ್ವಾ ಕಚ್ಚಿ ಅವರಲ್ಲೊಬ್ಬ ಸತ್ತುಹೋದನೆಂದು ವರದಿ ಬಂತು. ಅಲ್ಲಾಭಕ್ಷಿ ಮಗನನ್ನು ಕೊಂದ ಕರಡಿ ಅಲ್ಲಿಂದ ಸಕ್ಕರೆಪಟ್ಟಣದತ್ತ ವಲಸೆ ಹೋಗಿರಬೇಕು! ಕಡೂರಿನ ಜಿಲ್ಲಾ ಅರಣ್ಯಾಧಿಕಾರಿಗಳು ಆ ಕರಡಿ ಮಾಡಿದ ಹಾನಿಯನ್ನೆಲ್ಲಾ ವಿವರಿಸಿ ಅದನ್ನು ಹೊಡೆದು ಉಪದ್ರವ ನಿಲ್ಲಿಸಬೇಕೆಂದು ವಿನಂತಿಸಿ ಒಂದು ದೀರ್ಘಪತ್ರ ನನಗೆ ಬರೆದರು. ನನಗೆ ಇದು ಅರಸೀಕೆರೆಯ ಪುಂಡು ಕರಡಿಯೇ ಎನ್ನುವುದರಲ್ಲಿ ಅನುಮಾನವಿರಲಿಲ್ಲ. ಆದರೆ ವಿಸ್ತಾರವಾಗಿದ್ದ ಚಿಕ್ಕಮಗಳೂರಿನ ಕಾಡಿನಲ್ಲಿ ಇದನ್ನು

ಕರಡಿಯನ್ನು ಪತ್ತೆ ಮಾಡುವುದು ಹುಲ್ಲಿನ ರಾಶಿಯಲ್ಲಿ ಸೂಜಿ ಹುಡುಕಿದಷ್ಟು ಕಷ್ಟಸಾಧ್ಯದ ಕೆಲಸ ಎನ್ನಿಸಿತು. ಆದ್ದರಿಂದ ನಾನು ನನ್ನ ತೊಂದರೆಯನ್ನೆಲ್ಲಾ ವಿವರಿಸಿ ಆ ಕರಡಿಯ ಹಾವಳಿ ಕುರಿತು ಖಚಿತ ವರ್ತಮಾನಗಳೇನಾದರೂ ದೊರೆತಲ್ಲಿ ತಿಳಿಸಬೇಕೆಂದು ಕಾಗದ ಬರೆದೆ.

ಹತ್ತು ದಿನಗಳ ತರುವಾಯ ಮತ್ತೆ ಅರಣ್ಯಾಧಿಕಾರಿಗಳಿಂದ ಕಾಗದ ಬಂತು. ಆ ಕರಡಿ ಸಕ್ಕರೆ ಪಟ್ಟಣದಿಂದ ಸುಮಾರು ಮೂರು ಮೈಲಿ ದೂರದಲ್ಲಿರುವ ಅಯ್ಯನಕೆರೆ ಸಮೀಪದ ಕಲ್ಲು ಗುಡ್ಡಗಳೊಂದರ ಗವಿಯಲ್ಲಿ ಸೇರಿಕೊಂಡಿದೆಯೆಂದೂ, ಕೆಲವು ದಿನಗಳ ಹಿಂದಷ್ಟೆ ಅಯ್ಯನಕೆರೆ ಹಾದಿಯಲ್ಲಿ ಹೋಗುತ್ತಿದ್ದ ಗಾರ್ಡ ಒಬ್ಬನ ಮೇಲೆ ಹಲ್ಲೆ ಮಾಡಿ ವಿಪರೀತ ಗಾಯಗೊಳಿಸಿದೆಯೆಂದೂ ಬರೆದಿದ್ದರು.

ನಾನು ಚಿಕ್ಕಮಗಳೂರಿನತ್ತ ಕಾರಿನಲ್ಲಿ ಹೊರಟೆ. ಅಲ್ಲಿನ ಅರಣ್ಯಾಧಿಕಾರಿಯೂ ನನ್ನೊಡನೆ ಸಕ್ಕರೆಪಟ್ಟಣಕ್ಕೆ ಹೊರಟರು. ಸಕ್ಕರೆಪಟ್ಟಣದಲ್ಲಿ ಒಂದು ಚಿಕ್ಕ ಸರ್ಕಾರಿ ವಿಶ್ರಾಂತಿಗೃಹ ಇದೆ. ಅಲ್ಲಿ ನಾವು ಇಳಿದುಕೊಂಡೆವು.

ನನ್ನ ಅದೃಷ್ಟವೋ ದುರದೃಷ್ಟವೋ! ಮಾರನೆ ದಿನ ಮಧ್ಯಾಹ್ನ ನಾವು ಅಲ್ಲಿ ವಿರಮಿಸುತ್ತಿರಬೇಕಾದರೆ ಒಬ್ಬ ಗಾಬರಿಯಲ್ಲಿ ಓಡೋಡಿ ಬಂದು ಅವನ ತಮ್ಮ ದನ ಕಾಯುತ್ತಿರಬೇಕಾದರೆ ಯಾವುದೋ ಒಂದು ಪ್ರಾಣಿ ಅವನ ಮೇಲೆ ಹಲ್ಲೆ ಮಾಡಿತೆಂದೂ ಅವನು ಸಹಾಯಕ್ಕಾಗಿ ಕೂಗಿಕೊಂಡಾಗ ಆ ಪ್ರಾಣಿ ಕರಡಿಯಂತೆ ಘರ್ಜಿಸಿತೆಂದೂ ಹೇಳಿದ. ಆವನು ನಡೆದ ಅನಾಹುತವೆಲ್ಲವನ್ನೂ ಕಿವಿಯಿಂದ ಕೇಳಿದ್ದನೇ ಹೊರತು ಕಣ್ಣಾರೆ ಕಂಡಿರಲಿಲ್ಲ. ಗುಡ್ಡದ ತಪ್ಪಲಲ್ಲಿದ್ದ ಅವನಿಗೂ, ಈ ಘಟನೆ ನಡೆದ ಜಾಗಕ್ಕೂ ನಡುವೆ ದಟ್ಟ ಕುರುಚಲು ಕಾಡಿತ್ತೆಂದು ಹೇಳಿದ. ಅಲ್ಲೆಲ್ಲಾ ಪುಂಡುಕರಡಿ ಹಾವಳಿ ಇದ್ದುದರಿಂದಲೂ, ಅದು ಕರಡಿಯ ರೀತಿಯಲ್ಲಿ ಗುರುಗುಟ್ಟಿದ್ದರಿಂದಲೂ ಅವನು ಕರಡಿ ಎಂದು ಊಹಿಸಿ ವಿಷಯ ತಿಳಿಸಲು ವಿಶ್ರಾಂತಿಗೃಹಕ್ಕೆ ಓಡಿಬಂದಿದ್ದ.

ಕರಡಿಗಳು ಮೂಲತಃ ನಿಶಾಚರ ಪ್ರಾಣಿಗಳು. ಆದ್ದರಿಂದಲೇ ಸಾಧಾರಣವಾಗಿ ಕರಡಿ ಹಲ್ಲೆ ನಡೆಸುವುದು ನಸುಕು ಕವಿಯುವ ಸಂಜೆಯಲ್ಲಿ ಅಥವಾ ಬೆಳಗಿನ ನಸುಕಿನಲ್ಲಿ. ಈ ದನ ಕಾಯುವವನು ಬಹುಶಃ ಗೊತ್ತಿಲ್ಲದೆ ಆ ಕರಡಿ ಮಲಗಿ ನಿದ್ರಿಸುತ್ತಿದ್ದ ಗುಹೆಗೋ ಪೊದೆಗೋ ತೀರಾ ಸಮೀಪಗತನಾಗಿರಬೇಕು. ಕೋಪಗೊಂಡ ಕರಡಿ ಹಲ್ಲೆ ಮಾಡಿದೆ. ಇಲ್ಲದಿದ್ದರೆ ಹಾಡುಹಗಲಿನಲ್ಲಿ ಅದು ಮನುಷ್ಯರ ಮೇಲೆ ಬೀಳವುದು ಅಪರೂಪ.

ಅವನು ವರದಿ ಮಾಡುವ ಹೊತ್ತಿಗಾಗಲೇ ಸಂಜೆ ನಾಲ್ಕೂವರೆಯಾಗಿತ್ತು. ನಾನು ನನ್ನ ರೈಫಲನ್ನೂ ಟಾರ್ಚನ್ನೂ ತೆಗೆದುಕೊಂಡು, ಹಲ್ಲೆಗೊಳಗಾದ ದನ ಕಾಯುವವನನ್ನು ಹೊತ್ತುತರಲು ನಾಲ್ಕುಜನ ಸಹಾಯಕರನ್ನೂ ಕರೆದುಕೊಂಡು ಅಯ್ಯನಕೆರೆ ಕಡೆಗೆ ಹೊರಟೆ. ಕೊಂಚದೂರ ನಡೆಯುವುದರೊಳಗೇ ನಮಗೆ ವರ್ತಮಾನ ಕೊಡಲು ಓಡಿಬಂದಾತ ಹೇಳಿದ್ದಕ್ಕಿಂತಾ ಆ ಜಾಗ ಎರಡರಷ್ಟು ದೂರದಲ್ಲಿದೆಯೆಂದು ನನಗೆ

ಅರಿವಾಯ್ತು. ನಾವು ಆ ಜಾಗ ತಲುಪಬೇಕಾದರೆ ಕಾಡಿನೊಳಗೆ ಸುಮಾರು ಏಳು ಮೈಲಿ ದಾರಿ ಸವೆಸಬೇಕಾಯ್ತು. ಅವರು ದನ ಮೇಯಿಸುತ್ತಿದ್ದ ಬೆಟ್ಟದ ತುಂಬೆಲ್ಲಾ ದಟ್ಟವಾದ ಮುಳ್ಳು ಕಂಟಿಗಳೂ ಬಿದಿರೂ ನಿಬಿಡವಾಗಿ ಬೆಳೆದುಕೊಂಡಿತ್ತು.

ಸುತ್ತೆಲ್ಲಾ ಕಾಡು ದಟ್ಟವಾಗಿತ್ತು. ಆಗಲೇ ಸಂಜೆ ಆರುಗಂಟೆ. ಚಳಿಗಾಲವಾದ್ದರಿಂದ ಕತ್ತಲಾಗುವುದು ಬಹಳ ಬೇಗ. ನನ್ನೊಂದಿಗೆ ಬಂದಿದ್ದ ಜನಗಳು ನನ್ನೊಡನೆ ಇನ್ನೂ ಮುಂದೆ ಬರಲು ನಿರಾಕರಿಸಿದರು. ಈಗ ಸಕ್ಕರೆಪಟ್ಣಕ್ಕೆ ಹಿಂದಿರುಗಿ ಮತ್ತೆ ನಾಳೆ ಬಂದು ಹುಡುಕುವುದು ಕ್ಷೇಮಕರವೆಂದು ನನಗೆ ಸಲಹೆ ಕೊಟ್ಟು ಅವರೆಲ್ಲಾ ಸಕ್ಕರೆಪಟ್ಟಣದ ದಾರಿ ಹಿಡಿದರು. ನನ್ನೊಡನೆ ಕರಡಿಕೈಗೆ ಸಿಕ್ಕಿಕೊಂಡವನ ಅಣ್ಣ ಮಾತ್ರ ನಿಂತಿದ್ದ. ಅವನೇನೋ ನನ್ನ ಜೊತೆ ಇರಲು ತೀರ್ಮಾನಿಸಿದ್ದರೂ ನನ್ನೊಡನೆ ಮುಂದುವರಿದು ಕಾಡೊಳಗೆ ಬರಲು ಮಾತ್ರ ಭಯಬಿದ್ದು ಸುತರಾಂ ಒಪ್ಪಲಿಲ್ಲ. ಅವನ ತಮ್ಮ ಕರಡಿ ಕೈಗೆ ಸಿಕ್ಕಿಕೊಂಡು ಕೂಗಿದ ದಿಕ್ಕಿನತ್ತ ಬೆಟ್ಟುಮಾಡಿ ತೋರಿಸುವುದಕ್ಕಿಂತ ಹೆಚ್ಚಿನ ಸಹಾಯವೇನೂ ಅವನಿಂದಾಗಲಿಲ್ಲ.

ಆತನಿಗೆ ಅಲ್ಲೇ ಕಾದಿರಲು ಹೇಳಿ ಅವನು ತೋರಿಸಿದ ದಿಕ್ಕಿನತ್ತ ನಾನೇ ಮುಂದುವರಿದೆ. ಅವನ ತಮ್ಮನ ಹೆಸರೇನೆಂದು ಅಣ್ಣನಿಂದ ಕೇಳಿಕೊಂಡು ಆಗಾಗ ಅವನ ಹೆಸರನ್ನು ಗಟ್ಟಿಯಾಗಿ ಕೂಗಿ ಕರೆಯುತ್ತಾ ಮುಂದುವರಿದೆ. ನನ್ನ ಕೂಗುಗಳಿಗೆ ಎಲ್ಲಿಂದಲೂ ಮರುತ್ತರ ಬರಲಿಲ್ಲ. ನಾನು ಇನ್ನೂ ಮುಂದುವರಿದೆ. ಆ ವೇಳೆಗಾಗಲೇ ಕತ್ತಲಾಗಿತ್ತು. ಆದರೆ ನನ್ನ ಬಳಿ ಟಾರ್ಚ್ ಇದ್ದಿದ್ದರಿಂದ ನನಗೆ ಅದರ ಚಿಂತೆಯೇನೂ ಇರಲಿಲ್ಲ. ಪೊದರುಗಳ ಅಡಿಯಲ್ಲಿ ಕೊರಕಲುಗಳೊಳಗೆ ಟಾರ್ಚ್ ಬಿಟ್ಟು ನೋಡುತ್ತಾ ಮುಂದುವರಿದೆ.

ಕೊಂಚ ಹೊತ್ತಿನೊಳಗೇ ಮುಂದುವರಿಯಲಾರದಷ್ಟು ದಟ್ಟವಾದ ಗಿಜರುಕಾಡು ಅಡ್ಡಾಯ್ತು. ದನ ಕಾಯುವವನು ಇಲ್ಲಿ ನುಗ್ಗಿಕೊಂಡು ಮುಂದೆ ಹೋಗಿರಲು ಸಾಧ್ಯವಿಲ್ಲ ಎಂದು ಅನ್ನಿಸಿದ್ದರಿಂದ ಹಿಂದಿರುಗಲು ತೀರ್ಮಾನಿಸಿದೆ. ಆ ಸಮಯಕ್ಕೆ ಸರಿಯಾಗಿ ನನ್ನ ಎಡಕ್ಕಿದ್ದ ಕಣಿವೆಯಿಂದ ಸಣ್ಣ ನರಳಿದ ಸದ್ದು ಕೇಳಿದಹಾಗಾಯ್ತು.

ನಾನು ಹುಡುಕುತ್ತಿದ್ದ ಮನುಷ್ಯನ ಹೆಸರು ತಿಮ್ಮಯ್ಯ ಎಂದು ಕಾಣುತ್ತದೆ. ಅಲ್ಲಿಂದಲೇ ಎರಡುಮೂರು ಸಾರಿ ಗಟ್ಟಿಯಾಗಿ ಅವನ ಹೆಸರನ್ನು ಕೂಗಿದೆ. ನಿಃಶಬ್ದವಾಗಿ ಹಲವು ನಿಮಿಷ ಏನಾದರೂ ಉತ್ತರ ಬಂದೀತೇ ಎಂದು ಆಲಿಸಿದೆ. ಹೌದು! ಏನೋ ಕ್ಷೀಣ ಮರುತ್ತರ ಕೇಳಿದಂತಾಯ್ತು. ಮತ್ತೆ ಆಲಿಸಿದೆ! ಹೌದು, ನಿಸ್ಸಂಶಯವಾಗಿ ಯಾರೋ ನರಳಿದಂತೆ ಪ್ರತ್ಯುತ್ತರಿಸುತ್ತಿದ್ದಾರೆ!

ನಾನು ಪೊದೆಗಳೆಡೆಯಲ್ಲಿ ಇಳಿಜಾರಿನ ಕಡೆಗೆ ನುಗ್ಗಿದೆ. ದಾರಿಯುದ್ದಕ್ಕೂ ಇದ್ದ ಚಿಕ್ಕಪುಟ್ಟ ಕಲ್ಲುಗುಂಡುಗಳು ಜಾರಿ ಉರುಳುತ್ತಿದ್ದುದರಿಂದ, ನೂರಾರುರೀತಿ ಮುಳ್ಳುಕಂಟಿಗಳು ನನ್ನನ್ನು ಹೆಜ್ಜೆಹೆಜ್ಜೆಗೂ ತಡೆಯುತ್ತಿದ್ದುದರಿಂದ ಆ ದಿಕ್ಕಿನಲ್ಲಿ ಹಲವು

ನೂರು ಗಜ ನಡೆಯುವುದಕ್ಕೇ ನನಗೆ ಏದುಸಿರು ಬಂತು. ಮತ್ತೆ ಎರಡುಮೂರುಸಾರಿ ಕೂಗಿದೆ. ಮತ್ತೆ ನರಳಿನ ಉತ್ತರ ಕೇಳಿದಂತಾಯ್ತು, ಈ ಸಾರಿ ನನ್ನ ಬಲಗಡೆಯಿಂದ. ಅಂತೂ ಇಂತೂ ತಿಮ್ಮಯ್ಯ ಸಿಕ್ಕ! ಒಂದು ಮರದ ಬುಡದಲ್ಲಿ ಅವನದೇ ರಕ್ತದ ಹೊನಲಿನಲ್ಲಿ ಮಲಗಿದ್ದ. ಅವನ ಮುಖ ಯಾವುದೆಂದು ಗುರುತು ಹಿಡಿಯಲಾರದಷ್ಟು ಭಯಂಕರವಾಗಿ ಕರಡಿ ಕಚ್ಚಿ ಹರಿದುಹಾಕಿತ್ತು. ಮುಖವೆಲ್ಲಾ ಕೊಚ್ಚಿದ ಮಾಂಸ ಮೂಳೆಗಳ ಉಂಡೆಯಾಗಿತ್ತು. ಅವನು ಉಸಿರಾಡಿದಂತೆಯೂ ಉಕ್ಕುತ್ತಿದ್ದ ರಕ್ತದಲ್ಲಿ ಗುಳ್ಳೆಗಳೇಳುತ್ತಿದ್ದುವು. ನಾನು ನೋಡಿದಾಗಂತೂ ಅವನಿಗೆ ಮೈಮೇಲಿನ ಪ್ರಜ್ಞೆ ಇದ್ದಂತಿರಲಿಲ್ಲ. ಕರಡಿ ಮುಖವನ್ನೆಲ್ಲಾ ವಿರೂಪಗೊಳಿಸಿದ್ದಲ್ಲದೆ ಅವನ ಹೊಟ್ಟೆಯನ್ನು ಕರುಳು ಹೊರಬರುವವರೆಗೆ ಪರಚಿಹಾಕಿತ್ತು. ಅವನನ್ನು ಕರೆದಾಗ ಅದು ಕೇಳಿದರೂ ಅವನು ಓಕೊಳ್ಳುವ ಸ್ಥಿತಿಯಲ್ಲೇ ಇರಲಿಲ್ಲ. ಅವನ ಉತ್ತರ ಎಂದು ನಾನು ಭಾವಿಸಿದ್ದು ಅವನು ಆಗಾಗ ಭೀಕರವಾಗಿ ನರಳುತ್ತಿದ್ದ ಸದ್ದಷ್ಟೆ.

ರಾತ್ರಿಯೆಲ್ಲಾ ಯಾವ ಇಲಾಜೂ ಇಲ್ಲದೆ ಅವನು ಕಳೆದರೆ ಆ ಭಯಾನಕ ಗಾಯಗಳಿಂದ ಅವನು ಉಳಿಯುವ ಸಂಭವವೇ ಇರಲಿಲ್ಲ. ಆದ್ದರಿಂದ ಕೊನೆಯ ಪಕ್ಷ ಅವನ ಅಣ್ಣನನ್ನು ಬಿಟ್ಟುಬಂದ ಜಾಗದವರೆಗಾದರೂ ಅವನನ್ನು ಸಾಗಿಸಲೇ ಬೇಕಿತ್ತು. ಅವನ ಕೈಯ್ಯನ್ನು ಹೇಗೋ ಮಾಡಿ ಹೆಗಲ ಮೇಲೆ ಹಾಕಿಕೊಂಡು ಒಂದು ಕೈಯ್ಯಲ್ಲಿ ರೈಫಲನ್ನು ಕೋಲೂರಿದಂತೆ ಊರುತ್ತಾ ಆ ದಾರಿಯಲ್ಲಿ ಹಿಂದಕ್ಕೆ ಹೊರಟೆ. ನನ್ನಷ್ಟೇ ಬಲವಾದ ತೂಕದ ಆಸಾಮಿಯಾದ್ದರಿಂದ ಅಪ್ರಜ್ಞಾವಸ್ಥೆಯಲ್ಲಿದ್ದ ತಿಮ್ಮಯ್ಯನನ್ನು ಸಾಗಿಸುವ ಪಾಡು ಹೇಗಿರಬಹುದು ನೀವೇ ಊಹಿಸಿ.

ಅವತ್ತು ಆ ಕಾಡೊಳಗಿನ ನನ್ನ ಪಾಡನ್ನು ನಾನು ಜ್ಞಾಪಿಸಿಕೊಳ್ಳಲು ಸಹ ಇಷ್ಟವಿಲ್ಲ. ನಾನು ಅವನ ತೂಕವನ್ನೂ ಕೋವಿ ಟಾರ್ಚ್‌ಗಳನ್ನೂ ಹೊತ್ತು ಯಮ ಸಾಹಸದಲ್ಲಿ ಅರ್ಧದೂರ ಬಂದಿರಬೇಕಾದರೆ ನನ್ನ ದುರ್ದೈವವೆಂಬಂತೆ ಅಪಘಾತಕ್ಕೆ ಸಿಕ್ಕಿಕೊಂಡೆ. ನನ್ನ ಎಡಗಾಲು ಜಾರಿ ಎರಡು ಬಂಡೆಗಳ ನಡುವೆ ಸಿಕ್ಕಿ ತಿರುಚಿದಂತಾಗಿ ಬಲವಾಗಿ ಉಳುಕಿತು. ನಾನು ಮೊದಲಿಗೆ ಮೂಳೆಯೇ ಮುರಿಯಿತೆಂದು ಭಾವಿಸಿದೆ. ನಾನು ಬಂಡೆಗಳ ನಡುವೆ ಉರುಳಿದಾಗ ಕಾಲು ಅಷ್ಟೊಂದು ನೋಯುತ್ತಿತ್ತು. ತಿಮ್ಮಯ್ಯ ನನ್ನ ಮೇಲೆ ಉರಳಿ ಬಿದ್ದ. ರೈಫಲ್ ಒಂದು ಗಜ ಆಚೆ ಹಾರಿಬಿತ್ತು.

ಕಾಲು ಉಳುಕಿದ್ದು ಹೇಗಿತ್ತೆಂದರೆ ಗಾಯಗೊಂಡು ಅರೆಜೀವವಾಗಿದ್ದ ತಿಮ್ಮಯ್ಯನನ್ನು ಸಾಗಿಸುವುದಿರಲಿ, ಇನ್ನೊಬ್ಬರ ಸಹಾಯವಿಲ್ಲದೆ ಒಂದು ಹೆಜ್ಜೆಯನ್ನೂ ಮುಂದಿಡಲು ನನ್ನಿಂದ ಸಾಧ್ಯವಿರಲಿಲ್ಲ. ನಾನು ತಿಮ್ಮಯ್ಯನ ಅಣ್ಣನನ್ನು ಸುಮಾರು ಒಂದು ಗಂಟೆಯವರೆಗೆ ಬಿದ್ದಲ್ಲಿಂದಲೇ ಕೂಗಿ ಕರೆದೆ. ಯಾರೂ ಓಕೊಳ್ಳಲಿಲ್ಲ. ನನ್ನ ಕೂಗು ಕೇಳಿಸಲಾರದಷ್ಟು ದೂರ ಬಂದಿದ್ದೇನೆಂದು ಆಗ ನನಗೆ ಅರ್ಥವಾಯಿತು. ಬೆಳಗಾದ

ಮೇಲೆ ಯಾರಾದರೂ ಸಹಾಯಕ್ಕೆ ಬರುವವರೆಗೆ ನಾನು ಅಲ್ಲೇ ಆ ಗತಪ್ರಾಣನಾಗುತ್ತಿರುವ ತಿಮ್ಮಯ್ಯನೊಡನೆ ಕಳೆಯಬೇಕಾದ್ದು ಅನಿವಾರ್ಯವಾಯ್ತು.

ರಾತ್ರಿಯೆಲ್ಲಾ ಉಪಯೋಗಿಸಬೇಕಾಗುತ್ತದೆಂದು ನಾನು ಟಾರ್ಚನ್ನು ಆದಷ್ಟು ಕಡಿಮೆ ಬಳಸುತ್ತಿದ್ದೆ. ರಾತ್ರಿ ಛಳಿ ಏರುತ್ತಾ ಹೋದಂತೆ ತಿಮ್ಮಯ್ಯನ ನರಳಾಟ ಕುಗ್ಗುತ್ತಾ ಹೋಯ್ತು. ಸುಮಾರು ಬೆಳಗಿನಝಾವ ಐದುಗಂಟೆ ಹೊತ್ತಿಗೆ ಅವನ ಉಸಿರಾಟ ನಿಂತು ನಿಷ್ಪಂದನಾದ. ಅನಂತರ ಕೊಂಚಹೊತ್ತಿನೊಳಗೆ ಬೆಳಗಾಯ್ತು.

ತಿಮ್ಮಯ್ಯ ಸತ್ತುಹೋಗಿರುವುದರಿಂದ ಅವನನ್ನೇನೂ ಹೊತ್ತು ಸಾಗಿಸಬೇಕಾದ ಅವಶ್ಯಕತೆ ಈಗ ಇರಲಿಲ್ಲ. ಬೆಳಕು ಬಿಟ್ಟಮೇಲೆ ಹೇಗಾದರೂ ಮಾಡಿ ನಡೆದು ದಾರಿ ತಲುಪಲು ದೃಢ ನಿಶ್ಚಯ ಮಾಡಿ ಪ್ರಯತ್ನಿಸಿದೆ. ಆದರೆ ಕಾಲು ಹೇಗೆ ಉಳುಕಿತ್ತೆಂದರೆ ದೇಹದ ತೂಕ ಹೊತ್ತು ಸಾಗಲು ಅದಕ್ಕೆ ಸಾಧ್ಯವೇ ಇರಲಿಲ್ಲ. ಅನಂತರ ಅಂಬೆಗಾಲಿನಲ್ಲೇ ತೆವಳಿ ನಾಲ್ಕು ಕಾಲಿನ ಪ್ರಾಣಿಗಳ ತರ ಮುಂದುವರಿಯಲು ಪ್ರಯತ್ನಿಸಿದೆ. ಮುಳ್ಳುಗಿಡಗಳ ಜಿಗ್ಗಿನಲ್ಲಿ ಅದೂ ಸಹ ಅಸಾಧ್ಯವಾಯ್ತು. ಆಮೇಲೆ ಯಾರಾದರೂ ಸಹಾಯಕ್ಕೆ ಬರುವವರೆಗೆ ಕಾಯುವುದೆಂದು ನಿರ್ಧರಿಸಿ ಆಗೀಗ ಕೂಗು ಹಾಕುತ್ತಾ ಅಲ್ಲೇ ಬಿದ್ದುಕೊಂಡೆ.

ಅರಣ್ಯ ಇಲಾಖೆಯವರೂ, ಒಂದಷ್ಟುಜನ ಹಳ್ಳಿಯವರೂ ತಿಮ್ಮಯ್ಯನ ಅಣ್ಣನನ್ನು ಮುಂದಿಟ್ಟುಕೊಂಡು ಹುಡುಕುತ್ತಾ ಆ ಜಾಗಕ್ಕೆ ಸಮೀಪ ಬರಬೇಕಾದರೆ ಮಧ್ಯಾಹ್ನ ಹನ್ನೆರಡುಗಂಟೆ ಹೊತ್ತಾಗಿತ್ತು. ನನ್ನ ಕೂಗು ಕೇಳಿ ನಾನಿರುವ ದಿಕ್ಕು ಪತ್ತೆ ಮಾಡಿ ನನ್ನ ಬಳಿಸಾರಿದರು. ಅವರ ಸಹಾಯದಿಂದ ಕುಂಟುತ್ತಾ ಹೇಗೋ ವಿಶ್ರಾಂತಿಗೃಹ ತಲುಪಿ ಹಾಸಿಗೆ ಮೇಲೆ ಬಿದ್ದುಕೊಂಡೆ. ನನ್ನ ಮಂಡಿ ಬಾತು ಫುಟ್‌ಬಾಲಿನಷ್ಟು ದಪ್ಪ ಊದಿಕೊಂಡಿತ್ತು. ಮಾರನೆದಿನ ಒಂಬತ್ತುಗಂಟೆಹೊತ್ತಿಗೆ ಅರಣ್ಯಾಧಿಕಾರಿ ಬಂದರು. ನನ್ನ ಕಾರಿನಲ್ಲಿ ನನ್ನನ್ನು ಚಿಕ್ಕಮಗಳೂರಿನವರೆಗೆ ಒಯ್ದರು. ಅಲ್ಲಿನ ವೈದ್ಯೋಪಚಾರದಲ್ಲಿ ನನ್ನ ಮಂಡಿ ಊತ ಇಳಿದು ನೋವು ಕಡಮೆಯಾಯ್ತು. ಆದರೆ ನಾನು ನನ್ನ ಕಾಲಮೇಲೆ ನಿಂತುಕೊಳ್ಳಲು ನನಗೆ ಹದಿನೈದು ದಿನಗಳೇ ಬೇಕಾಯ್ತು. ಈ ಎಲ್ಲಾ ಪಾಡು ಪಡುತ್ತಿರಬೇಕಾದರೆ ನನಗೆ ನನ್ನ ಕಾಲು ಉಳುಕಿಸಿಕೊಂಡ ನನ್ನ ಅಜಾಗರೂಕತೆಯ ಬಗ್ಗೆ, ನನ್ನನ್ನು ಇಷ್ಟೊಂದು ತೊಂದರೆಗೆ ಸಿಕ್ಕಿಸಿದ ಆ ಆ ಸುಡುಗಾಡು ಪುಂಡುಕರಡಿ ಬಗ್ಗೆ ಅಸಾಧ್ಯ ಸಿಟ್ಟು ಬಂದಿತ್ತು. ಕೊಂಚ ನೆಟ್ಟಗೆ ಓಡಾಡುವಂತಾದರೆ ಸಾಕು ಅದನ್ನು ಬಲಿ ಹಾಕುತ್ತೇನೆಂದು ಮನಸ್ಸಿನಲ್ಲೇ ನಿಶ್ಚೈಸಿದೆ.

ನಾನು ಕಾಲು ರಿಪೇರಿ ಮಾಡಿಕೊಳ್ಳುತ್ತಿದ್ದ ಸಮಯದಲ್ಲಿ ಆ ಪುಂಡು ಕರಡಿಯೇನೂ ತೆಪ್ಪಗೆ ಸೋಮಾರಿಯಾಗಿ ಕುಳಿತಿರಲಿಲ್ಲ. ಅಯ್ಯನ ಕೆರೆ ಏರಿಯಮೇಲೆ ಹೋಗುತ್ತಿದ್ದ ಇಬ್ಬರ ಮೇಲೆ ಎರಗಿ ಇಬ್ಬರನ್ನೂ ಯದ್ವಾತದ್ವಾ ಕಚ್ಚಿತ್ತು. ಅವರಲ್ಲೊಬ್ಬನಿಗೆ ಒಂದು ಕಣ್ಣೇ ಕುರುಡಾಯ್ತು. ಆದರೆ ಅವರಿಬ್ಬರಿಗೂ ಸಕಾಲದಲ್ಲಿ ಔಷಧೋಪಚಾರ ಸಿಕ್ಕಿದ್ದರಿಂದ ಪ್ರಾಣ ಉಳಿಸಿಕೊಂಡರು.

೩



ನಾನು ಎದ್ದು ಓಡಾಡುವಂತಿದ್ದರೂ ಬಹಳ ದೂರ ನಡೆಯಲಾಗುತ್ತಿರಲಿಲ್ಲ. ಆ ಇಬ್ಬರನ್ನು ಕರಡಿ ಕಚ್ಚಿದ ವರ್ತಮಾನ ಬಂದ ನಾಲ್ಕು ದಿನಕ್ಕೆ ನಾನು ಸಕ್ಕರೆಪಟ್ಟಣದತ್ತ ಹೊರಟೆ. ಸಕ್ಕರೆಪಟ್ಟಣದಲ್ಲಿ ಹಳ್ಳಿಯವರನ್ನು ವಿಚಾರಿಸಿದಾಗ ಆ ಹಳ್ಳಿಯಿಂದ ಎರಡು ಮೈಲಿ ದೂರದಲ್ಲಿ ಕೆಲವು ಬೋರೆಹಣ್ಣಿನ ಮರಗಳಿಗೆ ದಿನವೂ ಆ ಕರಡಿ ಬರುತ್ತದೆಂದು ಹೇಳಿದರು. ಬೋರೆ ಮರಗಳು ಆಗತಾನೆ ಹಣ್ಣು ಬಿಡಲು ಶುರುಮಾಡಿದ್ದುವು. ಸಂಜೆ ಸುಮಾರು ಐದುಗಂಟೆಹೊತ್ತಿಗೆ ನಾನು ಆ ಬೋರೆ ಮರಗಳ ಬಳಿ ಇದ್ದೆ. ಅಲ್ಲಿ ಹಣ್ಣು ಹೆಚ್ಚಾಗಿದ್ದ ದೊಡ್ಡ ಬೋರೆ ಮರವನ್ನು ಆರಿಸಿಕೊಂಡು ಕರಡಿ ಅಲ್ಲಿಗೆ ಖಂಡಿತ ಬಂದೇಬರುತ್ತದೆಂದು ಮರದ ಬೊಡ್ಡೆಗೆ ಬೆನ್ನು ಹಚ್ಚಿ, ತೊಡೆಯ ಮೇಲೆ ರೈಫಲ್ ಇಟ್ಟುಕೊಂಡು ಕಾಯುತ್ತ ಕುಳಿತೆ.

ಸರಿಸುಮಾರು ಮಧ್ಯರಾತ್ರಿ, ಕರಡಿ ಗುಟುರು ಹಾಕುತ್ತ, ಗುರುಗುಟ್ಟುತ್ತಾ ಬರುತ್ತಿರುವ ಸದ್ದು ಕೇಳಿಸಿತು. ಅದು ಗಿಡದ ಬೇರುಗಳನ್ನೂ ಗಡ್ಡೆಗಳನ್ನೂ ಕೀಳುತ್ತ, ಹುತ್ತಗಳನ್ನು ಹುಡುಕುತ್ತ ಬರುತ್ತಿದ್ದುದರಿಂದ ನಿಧಾನವಾಗಿ ಬಂತು. ಹತ್ತಿರಾದಾಗ ಅದು ಅಲ್ಲಲ್ಲಿ ಪರಪರಪರ ನೆಲ ಕೆರೆಯುವ ಸದ್ದು ಅನೇಕಸಾರಿ ನನಗೆ ಕೇಳಿಸಿತು. ಕಾಡೆಲ್ಲಾ ಸುತ್ತಾಡಿ ಬೋರೆ ಮರದ ಹತ್ತಿರಕ್ಕೆ ಅದು ಬರಬೇಕಾದರೆ ಸುಮಾರು ಒಂದು ಗಂಟೆಯೇ ಹಿಡಿಯಿತು. ಅದು ನನ್ನೆದುರಿದ್ದ ಲಂಟಾನದ ಜಿಗ್ಗನ್ನು ತಳ್ಳುತ್ತಾ ಹೊರಕ್ಕೆ ಕಾಲಿಟ್ಟಾಗ ಮಿನುಗುತ್ತಿದ್ದ ನಕ್ಷತ್ರಗಳ ಕಾಂತಿಯಲ್ಲಿ ಭೂತಾಕಾರದ ಕರಿಯ ಗುಡ್ಡದಂತೆ ಕಾಣಿಸಿತು. ನಾನು ಕಾಡಿನಲ್ಲಿ ಸಾವಿರಾರು ಕರಡಿಗಳನ್ನು ನೋಡಿದ್ದೇನೆ. ಆದರೆ ಇಷ್ಟು ಧಾಂಡಿಗ

ಕರಡಿಯನ್ನು ನಾನು ಊಹಿಸಿರಲಿಲ್ಲ.

ನಾನು ಟಾರ್ಚ್ ಗುಂಡಿಯನ್ನು ಒತ್ತಿದೆ. ದೀಪದ ಕಣ್ಣುಕುಕ್ಕುವ ಪ್ರಕಾಶ ಅದರ ಮೇಲೆ ಬೀಳುತ್ತಿದ್ದಂತೆಯೇ ಕರಡಿ ಹೂಂಕರಿಸಿ ಎರಡು ಕಾಲಿನ ಮೇಲೆ ನಿಂತು ಎರಡು ಕೈಯ್ಯನ್ನೂ ಮೇಲೆತ್ತಿ ಎರಗಲು ಸಿದ್ಧವಾಯ್ತು. ನಾನು ನೆಲದಮೇಲೇ ಕುಳಿತಿದ್ದರಿಂದ ತಡಮಾಡಿದರೆ ಕೆಟ್ಟೆನೆಂದು ಅದರ ಎದೆಯ ಮೇಲಿದ್ದ ಬಿಳಿಯ ಪಟ್ಟೆಗೇ ಗುರಿಯಿಟ್ಟು ಗುಂಡು ಹೊಡೆದೆ. ಆ ಭೀಮಾಕಾರದ ಕರಡಿ ದಬಾರನೆ ಉರುಳಿ ಬಿತ್ತು.

ಕರಡಿಗಳು ಬಹುಬೇಗ ತಾಳ್ಮೆ ಕಳೆದುಕೊಳ್ಳುವ ಮುಂಗೋಪಿ ಪ್ರಾಣಿಗಳಾದರೂ ಅವನ್ನು ಕ್ರೂರ ಮೃಗಗಳೆಂದು ಕರೆಯಲಾಗುವುದಿಲ್ಲ. ಕಾಡಾನೆಗಳಂತೆಯೇ ಅವುಗಳ ತಂಟೆಗೆ ನಾವು ಹೋಗದಿದ್ದರೆ ಅವು ನಮ್ಮ ತಂಟೆಗೆ ಬರುವುದಿಲ್ಲ. ಆದರೆ ಈ ಗಡವ ಪುಂಡುಕರಡಿ ಮಾತ್ರ ಇದಕ್ಕೆ ಅಪವಾದವಾಗಿತ್ತು. ನಿಷ್ಕಾರಣವಾಗಿ ತಮ್ಮಪಾಡಿಗೆ ತಾವಿದ್ದ ಎಷ್ಟೋಜನ ದಾರಿಹೋಕರನ್ನೂ ದನ ಕಾಯುವವರನ್ನೂ ಮರಣಾಂತಿಕವಾಗಿ ಗಾಯಗೊಳಿಸಿದ್ದೂ ಅಲ್ಲದೆ ಹಲವರ ಸಾವಿಗೂ ಕಾರಣವಾಗಿತ್ತು.



# ಬಾಳೆತೋಟದ ಸ್ವಾಮಿ

## ೧



ನನ್ನ ಕತೆಗಳನ್ನು ಓದಿರುವವರಿಗೆ, ಅಥವಾ ಭಾರತಕ್ಕೆ ಬಂದು ಹೋಗಿರುವವರಿಗೆ ಸ್ವಾಮಿ ಎಂದರೇನು ಎಂದು ಗೊತ್ತಿರಬಹುದು. ಭಾರತದಲ್ಲಿ ಅದನ್ನು ನಾನಾ ಅರ್ಥಗಳಲ್ಲಿ ಉಪಯೋಗಿಸುತ್ತಾರೆ. ಸ್ವಾಮಿ ಎಂದರೆ ದೇವರು, ಸೃಷ್ಟಿಕರ್ತ, ಇಡೀ ವಿಶ್ವಕ್ಕೆ ಅಧಿಪತಿಯಾಗಿರುವವನು ಎಂಬುದು ಒಂದು ಅರ್ಥ. ದೈವಭಕ್ತರಾದ ಸನ್ಯಾಸಿಗಳಿಗೆ, ಸಾಧು ಸಂತರಿಗೆ, ಬೈರಾಗಿಗಳಿಗೆ ಸಹ ಸ್ವಾಮಿ ಅನ್ನುತ್ತಾರೆ. ಕೆಲವರು ಹೆಸರಿನ ಹಿಂದೆ ಸ್ವಾಮಿ ಎಂದು ಸೇರಿಸಿಕೊಳ್ಳುತ್ತಾರೆ. ಆದರೆ ಸಾಧಾರಣವಾಗಿ ಮಾತನಾಡುವಾಗ ಯಾವ ವಿಶಿಷ್ಟವಾದ ಅರ್ಥವೂ ಇಲ್ಲದೆ ಕೇವಲ ಗೌರವ ಸೂಚಿಸಲು ಬಹುವಚನ ಉಪಯೋಗಿಸುವಂತೆ ಸ್ವಾಮಿ ಎಂದು ಸಂಬೋಧಿಸುತ್ತಾರೆ. ಕೇವಲ ಸದ್‌ಗೃಹಸ್ಥ, ಮರ್ಯಾದಸ್ತ, ಗೌರವಾನ್ವಿತ ಎಂದು

ಮಾತ್ರ ಇಲ್ಲಿಲ್ಲಾ ಸ್ವಾಮಿ ಎನ್ನುವ ಪದಕ್ಕೆ ಅರ್ಥ. ಬಾಳೆತೋಟ ಎನ್ನುವುದೂ ಕನ್ನಡ ಭಾಷೆಯ ಇನ್ನೊಂದು ಪದ. ಬಾಳೆತೋಟ ಎಂದರೆ ಬಾಳೆ ಮರಗಳನ್ನು ಬೆಳೆಸಿರುವ ತೋಟ ಎಂದಷ್ಟೇ ಅರ್ಥ. ಈ ಕಥೆಯಲ್ಲಿ ಅದು ಆ ಸ್ಥಳದ ಹೆಸರೂ ಹೌದು.

ಈ ಕತೆಯ 'ಬಾಳೆ ತೋಟದ ಸ್ವಾಮಿ' ದೇವರೂ ಅಲ್ಲ, ಸಾಧು ಸಂತನೂ ಅಲ್ಲ, ಬಾಳೆತೋಟದ ಒಡೆಯನಾದ ಮರ್ಯಾದಸ್ತನೂ ಅಲ್ಲ. ಅದೊಂದು ನಿಲಗಿರಿ ಪರ್ವತಗಳ ತಪ್ಪಲಿನಲ್ಲಿದ್ದ, ಉದಕಮಂಡಲ ಊರಿನಿಂದ ಹನ್ನೆರಡು ಮೈಲು ದೂರದಲ್ಲಿದ್ದ ಬಾಳೆತೋಟ ಊರಿನ ಆಜುಬಾಜಿನ ರಸ್ತೆಗಳನ್ನೂ, ಹಳ್ಳಿಗಳನ್ನೂ, ಕಾಡನ್ನೂ ಭೀಕರ ಭೂತದಂತೆ ಕಾಡಿದ ಒಂದು ನರಭಕ್ಷಕ ಹುಲಿ. ಆದರೂ ಇದಕ್ಕೆ ಬಾಳೆತೋಟದ ಸ್ವಾಮಿ ಎನ್ನುವ ಹೆಸರು ತಗುಲಿಕೊಂಡಿದ್ದು ಮಾತ್ರ ಅತ್ಯಂತ ಕುತೂಹಲಕರವಾದ ಕತೆ.

ಈ ವಿಚಿತ್ರವಾದ ಹೆಸರು ಬಂದಿದ್ದಕ್ಕೆ ಅನೇಕ ಅಸಾಧಾರಣ, ಆಕಸ್ಮಿಕ, ಅಸಂಗತ ಘಟನಾವಳಿಗಳು ಕಾರಣ. ಇದೆಲ್ಲಾ ನಡೆದದ್ದು ಈಗ್ಗೆ ಹತ್ತು ವರುಷದ ಹಿಂದೆ.

ಆಗ ಒಬ್ಬ ಸಾಧು ಅಥವಾ ಸನ್ಯಾಸಿ ಆ ದಾರಿಗುಂಟ ಬಂದ. ಬಾಳೆ ತೋಟದ ರೈತ ಬಾಳೆತೋಟದೊಳಗೆ ಒಂದು ಹುಲ್ಲಿನ ಗುಡಿಸಿಲು ಕಟ್ಟಿಕೊಂಡು ಅಲ್ಲೇ ವಾಸವಾಗಿದ್ದ. ಸಾಧು ಅವನ ಮನೆಯನ್ನು ನೋಡಿದ್ದೇ ಅಲ್ಲಿಗೆ ಹೋಗಿ, ದಾರಿ ನಡೆದು ಬಳಲಿರುವುದರಿಂದ ಸುಧಾರಿಸಿಕೊಳ್ಳಲು ಮನೆಯಲ್ಲಿ ಕೊಂಚ ಜಾಗ ಕೊಡು ಎಂದು ಕೇಳಿದ. ತಾನು ನೂರಾರು ಮೈಲು ದೂರವಿರುವ ಮಂಜು ಮುಸುಗಿರುವ ಹಿಮಾಲಯ ಪರ್ವತದಿಂದ ಬಂದಿರುವುದೆಂದೂ ಇದೇ ಮಾರ್ಗವಾಗಿ ಉದಕಮಂಡಲದ ಮುಖಾಂತರ ತಾನು ದಕ್ಷಿಣದ ತುಟ್ಟ ತುದಿಯಾದ ಕನ್ಯಾಕುಮಾರಿಯವರೆಗೂ ಯಾತ್ರೆ ಹೊರಟಿರುವ ಪರಿವ್ರಾಜಕನೆಂದೂ ಹೇಳಿದ. ನೀಲಗಿರಿ ಬಹು ಕಡಿದಾದ ಪರ್ವತವಾದ್ದರಿಂದ ಇವತ್ತು ವಿಶ್ರಮಿಸಿ ನಾಳೆ ಬೆಟ್ಟ ಹತ್ತಿ ಹೋಗೋಣವೆಂದಿದ್ದೇನೆ ಎಂದು ಬಾಳೆತೋಟದ ರೈತನಿಗೆ ಹೇಳಿದ.

ಬಾಳೆ ತೋಟದ ರೈತನ ಹೆಸರು 'ಕಾಂತ' ಎಂದು. ತನ್ನ ಮನೆಗೊಬ್ಬ ಸರ್ವಸಂಗ ಪರಿತ್ಯಾಗ ಮಾಡಿದ ಸನ್ಯಾಸಿ ಅತಿಥಿಯಾಗಿ ಬಂದಿದ್ದು ನೋಡಿ ಅವನಿಗೆ ಬಹಳ ಖುಷಿಯಾಯ್ತು. ಈತನ ಆಗಮನ ತನಗೂ ತನ್ನ ತೋಟಕ್ಕೂ ಮುಂದೆ ಒಳ್ಳೆಯದಾಗುವುದರ ಸೂಚನೆ ಇದು ಎಂದು ಭಾವಿಸಿ ಸಂಭ್ರಮಗೊಂಡ. ಅವನು ಆ ಸ್ವಾಮಿಗೆ ತಾವು ಕೊನೇಪಕ್ಷ ಒಂದು ವಾರವಾದರೂ ಇಲ್ಲಿದ್ದು ಆತಿಥ್ಯ ಸ್ವೀಕರಿಸಿ ಮುಂದುವರಿಯಬೇಕೆಂದು ಭಯ ಭಕ್ತಿಯಿಂದ ಕೇಳಿಕೊಂಡ. ನೀಲಗಿರಿ ಪರ್ವತಗಳು ತುಂಬ ಕಡಿದಾಗಿರುವುದರಿಂದ ಆ ದಾರಿಯಲ್ಲಿ ಸಾಗುವ ಕಠಿಣ ಕೆಲಸಕ್ಕೆ ತಮಗೆ ಅಷ್ಟಾದರು ವಿಶ್ರಾಂತಿ ಅತ್ಯಗತ್ಯ ಎಂದು ಹೇಳಿ, ಸಾಧುವಿಗೆ ತಟ್ಟೆ ತುಂಬಾ ಬಾಳೆಹಣ್ಣಿನ ರಸಾಯನ ಮಾಡಿ ಅದಕ್ಕೆ ಕೆನೆ ಹಾಲು ಹಾಕಿ ಅತಿಥಿಸತ್ಕಾರ ಮಾಡಿದ.

ಹಿಮಾಲಯದಿಂದ ಆಗಮಿಸಿದ್ದ ಸಾಧು ಹಾಲಿನ ಕೆನೆಯ ರಸಾಯನವನ್ನು ಕಂಠ

ಪೂರ್ತಿ ಸ್ವೀಕರಿಸಿ ಸಂಪ್ರೀತನಾಗಿ, ಇದೇ ರೀತಿ ಸತ್ಕರಿಸುವಂತಿದ್ದರೆ ನಿನ್ನ ಪ್ರಾರ್ಥನೆಯನ್ನು ಮನ್ನಿಸಿ ಒಂದು ವಾರ ಇಲ್ಲೇ ಇರಲು ಯೋಚಿಸುತ್ತೇನೆ ಎಂದು ಹೇಳಿದ. ಆ ಸ್ವಾಮಿ ಅಲ್ಲೇ ಉಳಿದ. ಒಂದು ವಾರವಾಯ್ತು ಒಂದು ತಿಂಗಳಾಯ್ತು. ದಿನವೂ ಕೆನೆಹಾಲಿನ ಬಾಳೆ ಹಣ್ಣಿನ ರಸಾಯನ ಮೆಲ್ಲುತ್ತಾ ಅಲ್ಲಿ ಶಾಶ್ವತವಾಗೇ ಠಿಕಾಣಿ ಊರಿದ. ಬಾಳೆತೋಟದ ಯಜಮಾನನಿಗೆ ಅವನ ತೋಟದೊಳಗೇ ಒಂದು ಚಿಕ್ಕ ಪರ್ಣಶಾಲೆ ಕಟ್ಟಿಕೊಟ್ಟರೆ ದಿನವೂ ತಾನು ಜಪ, ತಪ, ಧ್ಯಾನಗಳಿಂದ ನಿನ್ನ ತೋಟ ನಿರಾಯಾಸವಾಗಿ ಅಭಿವೃದ್ಧಿಯಾಗುವಂತೆ ನೋಡಿಕೊಳ್ಳುತ್ತೇನೆ ಎಂದು ಆಶ್ವಾಸನೆ ಕೊಟ್ಟ. ಆದರೆ ಅದಕ್ಕೆಲ್ಲಾ ಪ್ರತಿದಿನ ನಿನ್ನ ಬಾಳೆ ಹಣ್ಣಿನ ರಸಾಯನದ ನೈವೇದ್ಯ ಬಹು ಮುಖ್ಯ ಎಂದು ಜ್ಞಾಪಿಸುವುದನ್ನು ಮರೆಯಲಿಲ್ಲ.

ಬಾಳೆತೋಟದ ಯಜಮಾನ ಕಾಂತನಿಗೆ ಉಭಯಸಂಕಟಕ್ಕಿಟ್ಟುಕೊಂಡಿತು. ತಾನು ಸಮ್ಮತಿಸದಿದ್ದರೆ ಆ ಸ್ವಾಮಿಗೆ ಕೋಪ ಬಂದು ಶಾಪ ಕೊಟ್ಟರೆ ತನ್ನ ಕತೆಯೇನು ಎಂದು ಗಾಬರಿ ಬಿದ್ದ. ನಿರ್ವಾಹವಿಲ್ಲದೆ ಕಾಂತ ಪರ್ಣಶಾಲೆ ಕಟ್ಟಿಕೊಡಬೇಕಾಯ್ತು. ಆ ಸ್ವಾಮಿ ಅಲ್ಲಿ ಗಡದ್ದಾಗಿ ಠಿಕಾಣಿ ಹೂಡೇಬಿಟ್ಟ.

ಅಲ್ಲಿ 'ಇರ್ಲ' ಎಂಬ ಬುಡಕಟ್ಟಿನ ಕಾಡುಕುರುಬರು ಕಾಡಿನಲ್ಲೇ ಚಿಕ್ಕಹಳ್ಳಿ ಮಾಡಿ ಮನೆ ಕಟ್ಟಿಕೊಂಡು ವಾಸವಾಗಿದ್ದರು. ಅಲ್ಲಿಗೆಲ್ಲಾ ದಿನವೂ ಕೆಲಸಕ್ಕೆ ಬರುತ್ತಿದ್ದ ಅವರಿಗೆ ಹೊಸದಾಗಿ ಇಲ್ಲಿ ಪಾಳಯ ಹೂಡಿದ ಈ ಸ್ವಾಮಿಯ ವಿಚಿತ್ರ ಸ್ವಭಾವ ನೋಡಿ ಆಶ್ಚರ್ಯ ಭಯ ಉಂಟಾದುವು. ಸಂಜೆ ಅಡಿಗೆ ಮಾಡಿ ಊಟಮಾಡಿದ ಇವನು ಮಲಗಿ ವಿಶ್ರಾಂತಿ ತಗೊಳ್ಳಲು ಬಹು ಬೇಗ ತನ್ನ ಪರ್ಣಶಾಲೆಯ ಬಾಗಿಲು ಹಾಕಿಬಿಡುತ್ತಿದ್ದ. ಆದರೆ ಅವನ ಗುಡಿಸಿಲಿನ ಬಿದಿರುತಡಿಕೆಯ ಗೋಡೆಗಳ ಬಿರುಕಿನಲ್ಲಿ ರಾತ್ರಿಯೆಲ್ಲಾ ದೀಪ ಉರಿಯುತ್ತಲೇ ಇರುವುದು ಕಾಣುತ್ತಿತ್ತು. ಈ ಸ್ವಾಮಿಯ ವಿಚಿತ್ರ ವ್ಯವಹಾರ ಅವರಿಗೆ ರಹಸ್ಯಮಯವಾಗಿ ಕಂಡಿತು.

ಒಂದು ದಿನ ಈ ಸ್ವಾಮಿ ಊಟ ಮಾಡಿ ಬಾಗಿಲು ಹಾಕಿಕೊಂಡ ತರುವಾಯ ಇರ್ಲ ಹುಡುಗನೊಬ್ಬ ಮೆಲ್ಲಗೆ ಸದ್ದಿಲ್ಲದೆ ಹೋಗಿ ತಡಿಕೆ ಸಂದಿಯಿಂದ ಗುಡಿಸಿಲೊಳಕ್ಕೆ ಇಣುಕಿ ನೋಡಿದ. ಅಲ್ಲಿ ನೋಡಿದರೆ ಯಾರೂ ಇರಲೇ ಇಲ್ಲ. ಪರ್ಣಶಾಲೆ ಖಾಲಿ!

ಹಾಗಿದ್ದರೆ ಸ್ವಾಮಿ ಒಳಬಂದವನು ಯಾರಿಗೂ ಸುಳಿವು ಕೊಡದೆ ಹೊರಗೆಲ್ಲೋ ಹೋಗಿರಬೇಕು! ಇವನು ದಿನಾ ಹೀಗೇ ಏನು ಮಾಡುತ್ತಾನೆ ಪತ್ತೆ ಮಾಡೇಬಿಡಬೇಕು ಎಂದು ಆ ಹುಡುಗ ಅಲ್ಲೇ ಪಕ್ಕದಲ್ಲಿ ಒತ್ತೊತ್ತಾಗಿ ಬೆಳೆದಿದ್ದ ಬಾಳೆ ಮರಗಳ ಪಕ್ಕ ಸದ್ದಿಲ್ಲದೆ ಅವಿತುಕೊಂಡ. ಯಾವ ಸದ್ದೂ ಇಲ್ಲದೆ ಚಲನೆಯೂ ಇಲ್ಲದೆ ಕೆಲಕಾಲ ಕಳೆಯಿತು. ಅಷ್ಟರಲ್ಲಿ ಆ ಸ್ವಾಮಿಯ ಪರ್ಣಶಾಲೆ ಆಚೆ ಪಕ್ಕದಲ್ಲಿದ್ದ ಕಾಡಿನಿಂದ ಭೀಕರವಾದ ಹುಲಿಯ ಘರ್ಜನೆ ಕೇಳಿಸಿತು.

ಹೆದರಿಹೋದ ಹುಡುಗ ತನ್ನ ಗೂಢಚರ್ಯೆ ಪ್ರಯತ್ನ ಕೈಬಿಟ್ಟು ಒಂದೇ ಉಸುರಿಗೆ

ತನ್ನ ಮನೆಗೆ ಓಡಿ ಬಾಗಿಲು ಭದ್ರ ಮಾಡಿಕೊಂಡ. ಆದರೆ ಓಡಿ ಹೋಗುತ್ತ ಹುಲಿಯೇನಾದರೂ ಬೆನ್ನಟ್ಟುತ್ತಿದೆಯೆ ಎಂದು ಹಿಂದಿರುಗಿ ನೋಡಿದ ಅವನಿಗೆ ಪರಮಾಶ್ಚರ್ಯವಾಗುವಂತೆ ಆ ಸ್ವಾಮಿ ನಿಧಾನವಾಗಿ ನಿಶ್ಚಿಂತೆಯಿಂದ ಗುಡಿಸಿಲಿನತ್ತ ಹೋಗುತ್ತಿದ್ದುದು ಕಂಡಿತು.

ಆ ಹುಡುಗ ಗುಡಿಸಿಲಿಗೆ ಹೋದವನು ಈ ವಿಚಿತ್ರ ಸಮಾಚಾರವನ್ನು ನೆರೆಹೊರೆಯವರಿಗೆಲ್ಲಾ ಪಿಸುಮಾತಿನಲ್ಲಿ ಹೇಳಿದ. ಅಬ್ಬರಿಸುವ ಹೆಬ್ಬುಲಿ ಇವನ ಗುಡಿಸಿಲಿನ ಬಳಿಯೇ ಘರ್ಜಿಸುತ್ತಿರಬೇಕಾದರೆ ನಿರ್ಯೋಚನೆಯಿಂದ ಇವನು ಹೊರಗೆಲ್ಲಾ ತಿರುಗಲು ಹೇಗೆ ಸಾಧ್ಯ? ಕಾಡು ಕುರುಬರಿಗೆ ಇವನ ಬಗ್ಗೆ ಮತ್ತಷ್ಟು ಗಾಬರಿಯಾಯ್ತು. ಘರ್ಜಿಸಿದ್ದು ಅದೊಂದು ಬೆದೆಗೆ ಬಂದ ಗಂಡು ಹುಲಿ. ಆ ಕಾಡಿನಲ್ಲಿ ಅನೇಕ ಹುಲಿಗಳಿದ್ದುವು. ಆದರೆ ಅವೆಲ್ಲಾ ದೂರದಲ್ಲೆಲ್ಲೋ ಕಾಡಿನಲ್ಲಿ ಘರ್ಜಿಸುತ್ತ ಓಡಾಡುತ್ತಿದ್ದವು.

ಈ ಹುಲಿ ಅಲ್ಲಿಗೆ ಎಲ್ಲಿಂದಲೋ ಹೊಸದಾಗಿ ಬಂದಿದ್ದಿರಬೇಕು. ಅದೂಸಹ ಬಾಳೆತೋಟದ ಪಕ್ಕದ ಕಾಡಿನಲ್ಲಿಯೇ ಠಿಕಾಣಿ ಹೂಡಿತ್ತು. ಬಾಳೆತೋಟದಲ್ಲೂ, ಉದಕಮಂಡಲಕ್ಕೆ ಹೋಗುವ ಹಾದಿಯಲ್ಲೂ, ಸಮೀಪದ ಹಳ್ಳದ ತಡಿಯುದ್ದಕ್ಕೂ ಅದರ ದೊಡ್ಡ ದೊಡ್ಡ ಹೆಜ್ಜೆ ಗುರುತುಗಳು ಅಸಂಖ್ಯಾತವಾಗಿ ಮೂಡಿರುತ್ತಿದ್ದುವು. ಆ ಸ್ವಾಮಿಯ ಗುಡಿಸಿಲಿನ ಸುತ್ತ ಸಹ ಅದರ ಹೆಜ್ಜೆ ಗುರುತುಗಳಿರುತ್ತಿದ್ದುವು.

ಆ ಹುಲಿ ಪ್ರತಿದಿನ ರಾತ್ರಿ ಘರ್ಜಿಸುತ್ತಾ ತಿರುಗುತ್ತಿತ್ತು. ಅಮಾವಾಸ್ಯೆ ಮತ್ತು ಹುಣ್ಣಿಮೆ ದಿನಗಳಲ್ಲಂತೂ ಅದರ ಗಲಾಟೆ ಉಲ್ಬಣವಾಗುತ್ತಿತ್ತು. ಆ ಹುಲಿ ಬಾಳೆ ತೋಟದ ಆಸುಪಾಸಿನಲ್ಲೇ ಇದ್ದು ದಿನನಿತ್ಯ ಗಲಾಟೆ ಮಾಡುತ್ತಿದ್ದರೂ ಒಂದು ದಿನವೂ ಯಾರೂ ಅದನ್ನು ಬೆಳಗಿನ ಹೊತ್ತು ನೋಡಲೂ ಇಲ್ಲ. ಅದರ ಘರ್ಜನೆ ಕೇಳಲೂ ಇಲ್ಲ.

ಆಗ ಕೆಲಸಗಾರರು ಆ ಕಾಡಿನೊಳಗೆಲ್ಲಾ ಕೆಲಸ ಮಾಡುತ್ತಿದ್ದರು. ಕೆಲವರು ಬೊಂಬು ಕಡಿದು ಸಾಗಿಸುವ ಕೆಲಸ ಮಾಡುತ್ತಿದ್ದರು, ಕಾಡಿನೊಳಗೆ ಹುಣಸೆ ಮರಗಳು ಬೇಕಾದಷ್ಟು ಇದ್ದು ಅವೆಲ್ಲಾ ಹಣ್ಣಾಗಿದ್ದರಿಂದ ಹುಣಸೆಹಣ್ಣು ಆಯುವ ಕೆಲಸವೂ ಭರದಿಂದ ಸಾಗಿತ್ತು. ಅಲ್ಲದೆ ರಸ್ತೆ ರಿಪೇರಿ ಕೆಲಸವೂ ನಡೆಯುತ್ತಿದ್ದುದರಿಂದ ಅಲ್ಲೂ ತುಂಬ ಜನ ಬೀಡುಬಿಟ್ಟಿದ್ದರು. ಇವೆಲ್ಲ ಅಲ್ಲದೆ ಆ ಕಾಡಿನಲ್ಲಿ ಮೇಯಲು ಅರಣ್ಯ ಇಲಾಖೆಯಿಂದ ಪರವಾನಗಿ ತೆಗೆದುಕೊಂಡು ದನ ಮೇಯಿಸುವವರ ಅನೇಕ ಮಂದೆಗಳಿದ್ದುವು. ಉದಕಮಂಡಲದ ಬಡಗ ಜಮೀನ್ದಾರರು ಅವರ ದನಗಳನ್ನೆಲ್ಲಾ ಮೇಯಲು ಇಲ್ಲಿ ತಂದು ಬಿಡುತ್ತಿದ್ದರು. ಒಂದೊಂದು ಮಂದೆಯನ್ನೂ ನೋಡಿಕೊಳ್ಳಲು ಮೂರು ನಾಲ್ಕು ಜನ ಸ್ಥಳೀಯ ಇರ್ಳರನ್ನು ನಿಯಮಿಸುತ್ತಿದ್ದರು. ಅವರು ದಿನವೆಲ್ಲಾ ತಮ್ಮ ಮಂದೆಯೊಡನೆ ಕಾಡಿನಲ್ಲೇ ಮೇಯಿಸುತ್ತಾ ಕಾಲ ಹಾಕಬೇಕಿತ್ತು. ಹುಲ್ಲು ಮುಗಿದು ಬೇಸಗೆ ಶುರುವಾಗುವವರೆಗೂ ಈ ಕೆಲಸ ನಡೆಯುತ್ತಿತ್ತು. ಅವರಿಗೆ ಆ ಕಾಡಿನಲ್ಲಿ ಹೋದಲ್ಲೆಲ್ಲಾ

ರಾತ್ರಿ ಘರ್ಜಿಸುವ ಹೆಬ್ಬುಲಿಯ ದೊಡ್ಡ ಹೆಜ್ಜೆ ಗುರುತುಗಳು ಕಾಣುತ್ತಿದ್ದುವು. ಅವರು ಒಂದಲ್ಲಾ ಒಂದು ದಿನ ತಾವು ದನ ಮೇಯಿಸಲು ಹೋದಾಗ ಈ ಹುಲಿ ದನ ಹಿಡಿಯಲು ಬಂದೇ ಬರುತ್ತದೆಂದು ನಿರೀಕ್ಷಿಸುತ್ತಿದ್ದರು.

ಆದರೆ ಹುಲಿಯೇನೂ ದನಗಳ ಮೇಲೆ ಆಕ್ರಮಣ ಮಾಡಲಿಲ್ಲ. ಕೊನೇ ಪಕ್ಷ ಬೆಳಗಿನ ಹೊತ್ತಂತೂ ದನ ಹಿಡಿಯಲು ಬರಲಿಲ್ಲ. ರಾತ್ರೆ ಅವರೆಲ್ಲಾ ದನಗಳನ್ನು 'ಕೂಡುಹಟ್ಟಿ'ಯಲ್ಲಿ ಕೂಡುತ್ತಿದ್ದುದರಿಂದ ಅವರು ಹೆಚ್ಚಾಗಿ ಬೆಳಗಿನ ಹೊತ್ತೇ ಶಂಕೆಯಿಂದ ಜಾಗರೂಕರಾಗಿರುತ್ತಿದ್ದರು. ದನಗಳ ಕೂಡುಹಟ್ಟಿ ಎಂದರೆ ಬಲವಾದ ಮುಳ್ಳು ಬೇಲಿ ಹಾಕಿರುವ ಅರ್ಧ ಎಕರೆ ಜಾಗ ಎಂದು ಹೇಳಬಹುದು. ದನಗಳು ರಾತ್ರಿ ಹೊರಗೆ ಹೋಗದಂತೆ ಮತ್ತು ಕಾಡು ಪ್ರಾಣಿಗಳು ಒಳನುಗ್ಗಿ ದನಗಳಿಗೆ ಅಪಾಯ ಮಾಡದಂತೆ ಬಲವಾದ ಗೂಟಗಳನ್ನು ಹೊಡೆದು ಮುಳ್ಳು ಬಿದುರನ್ನು ಅದಕ್ಕೆ ನೆಯ್ದಂತೆ ಸಿಕ್ಕಿಸಿರುತ್ತಿದ್ದರು. ಅನಂತರ ಬಿದುರನ್ನೂ ಮುಳ್ಳನ್ನೂ ಐದಾರು ಅಡಿ ಎತ್ತರಕ್ಕೆ ಅಡಕಿ ಬೇಲಿ ಮಾಡಿರುತ್ತಿದ್ದರು. ಮೇಯುವ ದನಗಳನ್ನು ಸಂಜೆಯಾಗುತ್ತಲೇ ತಂದು ಅವರವರ ಕೂಡು ಹಟ್ಟಿಯೊಳಗೆ ಕೂಡಿಬಿಡುತ್ತಿದ್ದರು. ಕಾಡಿನಲ್ಲಿ ಮೇಯುವಾಗ ಸುಲಭವಾಗಿ ದನ ಹಿಡಿಯುವುದಕ್ಕಿಂತ ಕೂಡುಹಟ್ಟಿಯಿಂದ ದನ ಕೊಂದು ಹೊತ್ತೊಯ್ಯುವುದು ಹುಲಿಗೆ ಕಷ್ಟಕರವಾದ ಕೆಲಸವಾಗಿತ್ತು.

ಒಂದು ದಿನ ಬೊದಿಯ ಎಂಬ ಇರ್ಲ ಅವನಿಗೆ ವಹಿಸಿದ್ದ ದನದ ಮಂದೆಯಲ್ಲಿ ಒಂದು ಒಳ್ಳೆ ಕೆಂದುಹಸು ನಾಪತ್ತೆಯಾಗಿದೆ ಎಂದು ಹುಯ್ಯಲಿಟ್ಟ. ನೋಡಿದರೆ ಕೂಡು ಹಟ್ಟಿಯೊಳಗೆ ಹುಲಿ ಹೆಜ್ಜೆ ಗುರುತುಗಳು! ಅವರ ಮುಳ್ಳು ಬೇಲಿಯನ್ನು ಲಕ್ಷಕ್ಕೇ ತೆಗೆದುಕೊಳ್ಳದೆ ಹುಲಿ ಒಂದೇ ನೆಗೆತಕ್ಕೆ ಒಳಬಂದಿತ್ತು. ಅದರ ಹೆಜ್ಜೆ ಗುರುತುಗಳ ಸಾದೃಶ್ಯದಿಂದ ಅದು ರಾತ್ರಿ ಘರ್ಜಿಸುತ್ತಾ ತಿರುಗುವ ಹೆಬ್ಬುಲಿಯದೇ ಕೆಲಸವೆಂದು ಎಲ್ಲರಿಗೂ ಗೊತ್ತಾಯ್ತು. ಹುಲಿ ಹಸುವನ್ನು ಕೊಂದು ಸತ್ತ ಹಸುವಿನ ಸಮೇತ ಆಚೆ ನೆಗೆದಿತ್ತು. ಹಟ್ಟಿಯೊಳಗೆ ಹುಲಿ ಹಸುವನ್ನು ಕೊಂದ ಜಾಗದಲ್ಲೂ ನೆಲದ ಮೇಲೂ ರಕ್ತ, ಹಸು ಒದ್ದಾಡಿದ ಗುರುತುಗಳು ಎಲ್ಲಾ ಇದ್ದುವು. ಅಲ್ಲದೆ ಅದು ಹಸು ಸಮೇತ ಬೇಲಿ ಜಿಗಿದ ಜಾಗದಲ್ಲೂ ಬೇಲಿ ಇದ್ದಹಾಗೇ ಇದ್ದರೂ ಸತ್ತ ಹಸುವಿನಿಂದ ಸೋರಿದ ರಕ್ತದ ಗುರುತು ಮಾತ್ರ ಧಾರಾಳವಾಗಿ ಇತ್ತು. ಮುಳ್ಳು ಬೇಲಿಯ ಮೇಲಿಂದ ಹಸುವಿನ ಶವವನ್ನು ಹುಲಿ ಎಳೆದುಕೊಂಡಿದ್ದ ಕಡೆ  ಬೇಲಿ ಹೊರಮುಖವಾಗಿ ಬಾಗಿತ್ತು. ಆಳವಾಗಿ ಬಿದ್ದಿದ್ದ ಹೆಜ್ಜೆ ಗುರುತು ಹುಲಿ ತೂಕ ಹೊತ್ತು ನಡೆದಿದ್ದನ್ನು ನಿಸ್ಸಂಶಯವಾಗಿ ತೋರಿಸುತ್ತಿದ್ದುವು.

ಬೊದಿಯನ ಹಸುವಿಗಾದ ಗತಿ ನೋಡಿ ಹಟ್ಟಿಯವರೆಲ್ಲಾ ಕಂಗಾಲಾದರು. ಅವತ್ತು ಬೆಳಗಿನ ಹೊತ್ತೆಲ್ಲಾ ಅವರಿಗೆ ಬೇಲಿ ಬಂದೋಬಸ್ತು ಮಾಡುವುದೇ ಕೆಲಸವಾಯ್ತು. ಪ್ರತಿ ಮಂದೆಗೂ ಮೂರು ನಾಲ್ಕು ಜನ ಕಾವಲಿನವರು ಇದ್ದುದರಿಂದ ಮಂದೆಗೊಬ್ಬನನ್ನು ದನ

ಮೇಯಿಸಲು ಕಳಿಸಿ ಮಿಕ್ಕವರೆಲ್ಲಾ ಕೊಡುಹಟ್ಟಿಗಳ ದುರಸ್ತಿ ಶುರುಮಾಡಿದು. ಇನ್ನಷ್ಟು ಗೂಟಗಳನ್ನು ಮಾಡಿ ಉದ್ದಕ್ಕೂ ಮತ್ತೊಂದು ವರಸೆ ಬೇಲಿ ಕಟ್ಟಿದರು. ಅವಕ್ಕೆಲ್ಲಾ ಮತ್ತಷ್ಟು ಮುಳ್ಳು ಹೆಣೆದರು.

ಅವರು ಒಂದೇ ದಿನದಲ್ಲಿ ಎಲ್ಲ ಕೊಡುಹಟ್ಟಿಗಳ ಬೇಲಿಗಳನ್ನೂ ಏರಿಸಲಾಗಲಿಲ್ಲ. ಅವರು ಅಷ್ಟನ್ನೂ ಬಂದೋಬಸ್ತು ಮಾಡುವ ಹೊತ್ತಿಗಾಗಲೆ ಆ ಹೆಬ್ಬುಲಿ ಮತ್ತೆ ನಾಲ್ಕು ದನಗಳನ್ನು ಹಳೆ ಮಾದರಿಯಲ್ಲೇ ಬೇರೆ ಬೇರೆ ಹಟ್ಟಿಗಳಲ್ಲಿ ಹಿಡಿದು ಹೊತ್ತೊಯ್ದಿತ್ತು. ಅದು ದನಗಳನ್ನು ಹಿಡಿಯುತ್ತಿತ್ತೇ ವಿನಃ ಎಮ್ಮೆಗಳನ್ನು ಹಿಡಿಯುತ್ತಿರಲಿಲ್ಲ. ಬಹುಶಃ ಎಮ್ಮೆಗಳು ದನಗಳಿಗಿಂತ ಹೆಚ್ಚು ಭಾರವಾದ್ದರಿಂದ ಬೇಲಿಯ ಮೇಲೆ ಹಾರಿ ಒಯ್ಯಲಸಾಧ್ಯವೆಂದು ಇರಬಹುದು.

ಇದರ ನಡವಳಿಕೆ ಮತ್ತು ಉಪದ್ರವಗಳು ಇರ್ಲರಿಗೆ ಗೊಂದಲವುಂಟು ಮಾಡಿದುವು. ಅವರಿಗೆ ನೆನಪಿದ್ದಂತೆ ಯಾವ ಹುಲಿಯೂ ಇಷ್ಟು ವಿಚಿತ್ರವಾಗಿ ವರ್ತಿಸುತ್ತಿರಲಿಲ್ಲ. ಅನೇಕ ತಲೆಮಾರುಗಳಿಂದ ಅವರು ಆ ಕಾಡಿನಲ್ಲೇ ಬದುಕಿದ್ದವರು. ಈ ದುಷ್ಟ ಪ್ರಾಣಿಗಳ ನಡವಳಿಕೆಗಳನ್ನೆಲ್ಲಾ ಚೆನ್ನಾಗಿ ಬಲ್ಲವರು. ದನಗಳನ್ನು ಹಿಡಿಯುತ್ತಿದ್ದ ಚಿರತೆ ಹುಲಿಗಳೇನೂ ಅವರಿಗೆ ಹೊಸದಲ್ಲ. ಭೀಕರ ನರಭಕ್ಷಕಗಳ ಕಾಟವನ್ನೂ ಅವರು ಕಂಡಿದ್ದರು ಅದರ ಪೀಡೆ ನಿವಾರಣೆಯಾಗುವವರೆಗೂ ಎಡಗೈಲಿ ಜೀವ ಹಿಡಿದು ಗಡಗಡ ನಡುಗುತ್ತಾ ಕಾಲ ಕಳೆದಿದ್ದೂ ಅವರ ಸ್ಮೃತಿಯಲ್ಲಿತ್ತು. ಆದರೆ ಅವೆಲ್ಲಾ ಏನಿದ್ದರೂ ಬೆಳಗಿನ ಹೊತ್ತೇ ಹಾವಳಿ ಮಾಡುತ್ತಿದ್ದುವು. ನರಭಕ್ಷಕಗಳೂ ಸಹ ಕಾಡಿಗೆ ಸೌದೆ ತರಲೋ, ಹುಣಿಸೆ ಹಣ್ಣು ಆಯಲೋ ಹೋದಾಗ ಬೆಳಗಿನ ಹೊತ್ತೇ ಆಕ್ರಮಣ ಮಾಡಿದ್ದು.

ಇಲ್ಲಿ ಈ ಹುಲಿ ಕತ್ತಲಾದ ಮೇಲೆ ಮಾತ್ರ ಆಚೆ ಬರುತ್ತದೆ! ರಾತ್ರಿಯೆಲ್ಲಾ ಅದರ ಕೂಗಾಟ ಓಡಾಟಗಳನ್ನು ಇರ್ಲರು ಗಮನಿಸುತ್ತಿದ್ದರು. ಬೆಳಗ್ಗೆ ಎದ್ದರೆ ಅದರ ಹೆಜ್ಜೆಗುರುತುಗಳನ್ನು ಅದು ಓಡಾಡಿದಲ್ಲೆಲ್ಲ ನೋಡಬಹುದಿತ್ತು. ಅಲ್ಲದೆ ಅವರ ಹಟ್ಟಿಗಳಿಂದ ಹೊತ್ತೊಯ್ದ ಐದು ದನಗಳ ತಲೆಗಳೂ ಸಹ ಆ ಹುಲಿ ಮರೀಚಿಕೆಯಾಗಲೀ ಭ್ರಾಂತಿಯಾಗಲಿ ಅಲ್ಲವೆನ್ನುವುದಕ್ಕೆ ಹಿರಿಸಾಕ್ಷಿಗಳಾಗಿವೆ!

ಅದೇಕೆ ಇದು ಹಾಡು ಹಗಲಲ್ಲಿ ಒಬ್ಬರ ಕಣ್ಣಿಗೂ ಬಿದ್ದಿಲ್ಲ? ಅದೇಕೆ ಇದುಬೆಳಗಿನ ಹೊತ್ತು ದನ ಹಿಡಿಯುವ ಧೈರ್ಯ ಮಾಡುವುದಿಲ್ಲ? ಹೀಗೆಲ್ಲಾ ಯೋಚಿಸುತ್ತಿರಬೇಕಾದರೆ ಇದೇನಾದರೂ ನರಭಕ್ಷಕನಾದರೆ ಎಂದು ಯೋಚಿಸಿಕೊಂಡ ಅವರಿಗೆ ನಡುಕ ಶುರುವಾಯ್ತು. ಏಕೆಂದರೆ ಈ ಹುಲಿಯ ಶಿಕಾರಿ ಕ್ರಮ ಮತ್ತು ಅದರ ಕುತಂತ್ರಿ ಬುದ್ಧಿಯಿಂದ ಅದು ಅತ್ಯಂತ ಅಪಾಯಕಾರಿಯಾಗಬಹುದಿತ್ತು.

ಅವರು ಪಿಸುಮಾತಿನ ಸಮಾಲೋಚನೆ ನಡೆಸುತ್ತಿರಬೇಕಾದರೆ ಕೆಲವರು ಅತ್ತಿತ್ತ ನೋಡಿ ಆಗಂತುಕರು ಯಾರೂ ಇಲ್ಲವೆಂದು ಖಾತರಿ ಪಡಿಸಿಕೊಂಡು ಮೆಲ್ಲಗೆ "ಆ

ವಿಚಿತ್ರ ಸ್ವಾಮಿ ಏನಾದರೂ ಈ ಹುಲಿ ಜೊತೆ ಮಿಲಾಕತ್ತಾಗಿ ಇದೆಲ್ಲಾ ಮಾಡಿಸುತ್ತಿದ್ದಾನೆಯೋ!'' ಎಂದು ಸಂಶಯ ವ್ಯಕ್ತಪಡಿಸಿದರು. ಅವನ ನಡವಳಿಕೆಗಳೂ ಹುಲಿ ನಡವಳಿಕೆಗಳೂ ಅಸಾಧಾರಣವಾಗಿ ಕಂಡಿದ್ದಲ್ಲದೆ ಒಂದಕ್ಕೊಂದು ಹೊಂದಿಕೊಳ್ಳುವಂತೆ ಸಹ ಅವರಿಗೆ ಕಾಣತೊಡಗಿತು. ಇಲ್ಲದಿದ್ದರೆ ನಾವು ಕಂಡು ಕೇಳಿಲ್ಲದ ರೀತಿಯಲ್ಲಿ ಈ ಹುಲಿ ವ್ಯವಹರಿಸುತ್ತಿರುವುದಕ್ಕೆ ಕಾರಣವಾದರು ಏನು?

ಈ ಗುಮಾನಿ ಪಿಸಿಪಿಸಿ ಎಂದೇ ಊರುತುಂಬೆಲ್ಲಾ ಹಬ್ಬಿತು. ಬಾಳೆ ತೋಟದಿಂದ ಹಿಡಿದು ಮೈಸೂರು ಗಡಿವರೆಗೂ ಇದ್ದ ಎಲ್ಲಾ ದನಗಾಹಿಗಳೂ ತಮ್ಮ ಕೂಡುಹಟ್ಟಿಯ ಮುಳ್ಳಿನ ಗೋಡೆಗಳನ್ನು ಹತ್ತಡಿಗೂ ಎತ್ತರಕ್ಕೆ ಏರಿಸಿಬಿಟ್ಟರು! ಈ ಕೇಡಿ ಹುಲಿ ಈಗೇನು ಮಾಡುತ್ತದೋ ನೋಡೋಣ ಎಂದು ನಿರೀಕ್ಷೆಯಲ್ಲಿ ಕಾದರು.

ಅನಂತರ ನಡೆದದ್ದು ಆ ಇರ್ಲಾಗಳ ಕುರುಡು ನಂಬಿಕೆ ಇಮ್ಮಡಿಸುವ ಹಾಗೆ ಮಾಡಿತು!

ಇದೆಲ್ಲಾ ನಡೆಯುತ್ತಿರಬೇಕಾದರೆ ಒಂದು ಒಂಟಿ ಆನೆ ಸಲಗ ಬಾಳೆತೋಟದ ಪಕ್ಕದಲ್ಲಿದ್ದ ಕಾಡಿಗೆ ಬಂದು ಸೇರಿಕೊಂಡಿತು. ಬಾಳೆತೋಟಕ್ಕೆ ಕೆಲವುಬಾರಿ ನುಗ್ಗಿ ಸಾಕಷ್ಟು ಬಾಳೆಗಿಡಗಳನ್ನು ತುಳಿದು ತಿಂದು ಹಾನಿ ಮಾಡಿತು. ಆನೆ ಹೊಡೆಯುವುದು ಕಾನೂನು ಪ್ರಕಾರ ಭಾರತದಲ್ಲಿ ಸಂಪೂರ್ಣ ನಿಷಿದ್ಧವಾದರೂ ಬಾಳೆತೋಟದ ಒಡೆಯ ಕಾಂತ ಕೊನೇ ಪಕ್ಷ ಬಾಳೆತೋಟಕ್ಕೆ ಬರದಹಾಗೆ ಅದನ್ನು ಹೆದರಿಸಲಾದರೂ ಪ್ರಯತ್ನಿಸುವ ನಿರ್ಧಾರ ಮಾಡಿದ. ಅವನು ತನ್ನಬಳಿ ಇದ್ದ ಹಳೇ ಕೇಪಿನ ಕೋವಿಗೆ ಮದ್ದು ತುಂಬಿ, ನಾಲ್ಕಾರು ಸೀಸದ ಗುಂಡು ಇಟ್ಟು ಕತ್ತ ಜಡಿದು ರೆಡಿಯಾದ. ಇನ್ನೊಂದು ಸಾರಿ ಕಾಲಿಡಲಿ ತೋಟದೊಳಕ್ಕೆ, ಆದಷ್ಟು ದೂರದಿಂದ ಅದಕ್ಕೊಂದು ಈಡು ಲಗಾಯಿಸಿಬಿಡುತ್ತೇನೆ! ಮತ್ತೆ ಇತ್ತಕಡೆಗೆ ತಲೆ ಹಾಕಬಾರದು ಅದು ಎಂದು ಮನದಲ್ಲೇ ನಿರ್ಧರಿಸಿ, ಬಾಳೆತೋಟದ ಮೂಲೆಯಲ್ಲಿ ಬಾಳೆ ಮರಗಳ ಮಧ್ಯೆ ಬೆಳದಿಂಗಳಲ್ಲಿ ಪೊಂಡು ಆನೆಯನ್ನು ಕಾಯುತ್ತಾ ಕುಳಿತ.



## ೨



87119CR

ಅವತ್ತು ಯಾವ ಆನೆಯೂ ಅತ್ತ ತಲೆ ಹಾಕಲಿಲ್ಲ. ಅದರ ಬದಲು ಆ ನಿಶಾಚರ ಹೆಬ್ಬುಲಿ ಅಲ್ಲೇ ಸಮೀಪದಲ್ಲಿ ಹಲವುಬಾರಿ ಘರ್ಜಿಸಿತು. ಕೊಂಚ ಹೊತ್ತಿನ ತರುವಾಯ ಬೆಳದಿಂಗಳಲ್ಲಿ ಅವನ ಬಾಳೆ ತೋಟಕ್ಕೂ ಕಾಡಿಗೂ ನಡುವೆ ಬಿಡಿಸಿ ಮಾಡಿದ್ದ ಬೆಂಕಿದಾರಿಯಲ್ಲಿ ಏನೋ ಚಲನೆ ಕಂಡಂತಾಯ್ತು. ಬೆಳುದಿಂಗಳ ಬೆಳಕಿನಲ್ಲಿ ಅದೇನೆಂದು ಸ್ಪಷ್ಟವಾಗಿ ತಿಳಿಯಲು ಕಾಂತ ದುರುಗುಟ್ಟಿ ನೋಡಿದ. ಅಲ್ಲಿದ್ದ ದಟ್ಟ ಪೊದೆಗಳ ಜಿಗ್ಗಿನಿಂದ ಯಾವುದೋ ಪ್ರಾಣಿ ನಿಧಾನವಾಗಿ ಹೊರಬರುತ್ತಿದ್ದುದಂತೂ ಸತ್ಯವಾಗಿತ್ತು.

ಕಾಂತ ಮತ್ತಷ್ಟು ದಿಟ್ಟಿಸಿದ. ಅದು ಹೆಬ್ಬುಲಿಯ ಆಕೃತಿ ಎನ್ನುವುದರಲ್ಲಿ ಅನುಮಾನವೇ ಇರಲಿಲ್ಲ. ಇದು ಈವರೆಗೂ ಯಾರೂ ನೋಡಿಲ್ಲದ, ರಾತ್ರಿಯೆಲ್ಲಾ ಕೂಗಾಡಿಕೊಂಡು ತಿರುಗುವ ದನಗಳ್ಳ ಹುಲಿಯೇ ಸರಿ! ಇದರ ಹಾವಳಿಯಲ್ಲಿ ನಲುಗಿಹೋಗಿರುವ ಇರ್ಲರಿಗೆಲ್ಲಾ ಖುಷಿಪಡಿಸಲು ಒಳ್ಳೆಯ ಅವಕಾಶ ಸಿಕ್ಕಿದೆ! ಇದನ್ನು ಇವತ್ತು ಹೀಗೇ ಬಿಡಕೂಡದು ಎಂದು ನಿರ್ಧರಿಸಿ ಕೋವಿಯೆತ್ತಿ ಗುರಿ ಹಿಡಿದ. ಕೇಪಿನ ಕೋವಿಯ ಹೊಡೆತಕ್ಕೆ ಅದು ತುಂಬಾ ದೂರವಿತ್ತು. ಅದರ ಬದಲು ಅವನ ಬಳಿ ರೈಫಲ್ ಇದ್ದಿದ್ದರೆ ಅದರ ಕತೆ ಮುಗಿಯುತ್ತಿತ್ತು. ಏನೇ ಇರಲಿ ಧೈರ್ಯ ಮಾಡಿ ಕಾಂತಾ ಅದಕ್ಕೆ ಗುರಿ ಇಟ್ಟು ಈಡು ಹಾರಿಸಿಯೇ ಬಿಟ್ಟ.

ಅವನ ಕೇಪಿನ ಕೋವಿಯ ಗುಂಡು ಮುಂದೆ ಅನಾಹುತಗಳ ಪರಂಪರೆಯನ್ನೇ ಸೃಷ್ಟಿಸುತ್ತದೆಂದು ಅವನಿಗೆ ತಿಳಿಯುವುದಾದರೂ ಹೇಗೆ!

ಅವನ ಕೋವಿಯಿಂದ ಸಿಡಿದ ಸೀಸದ ಗುಂಡುಗಳಲ್ಲಿ ಕೆಲವಾದರೂ ಅವತ್ತು ಗುರಿ ತಲುಪಿರಬೇಕು. ಏಕೆಂದರೆ ಹುಲಿ ಭಯಂಕರವಾಗಿ ಒಮ್ಮೆ ಘರ್ಜಿಸಿ ಚೀರಾಡಿ ಕಾಡೊಳಗೆ ಅಂತರ್ಧಾನವಾಯ್ತು. ಕಾಂತ ಸಹ ಅದರ ವಿರುದ್ಧ ದಿಕ್ಕಿನಲ್ಲಿ ಅಂತರ್ಧಾನವಾಗಿ ಮನೆ ಬಾಗಿಲು ಭದ್ರ ಮಾಡುತ್ತಿದ್ದ ಎಂದು ಬೇರೆ ಹೇಳಬೇಕಾಗಿಲ್ಲ ತಾನೆ!

ಮಾರನೆ ದಿನ ಬೆಳಗ್ಗೆ ಕಾಂತನ ಮಗ, ಸುಮಾರು ಹದಿನೇಳು ವರ್ಷದ ಹುಡುಗ, ಎಂದಿನಂತೆ ಕೆನೆಹಾಲು ಬಾಳೆಹಣ್ಣಿನ ರಸಾಯನದ ನೈವೇದ್ಯ ಹೊತ್ತುಕೊಂಡು ಸ್ವಾಮಿಯ ಪರ್ಣಕುಟಿಗೆ ಹೋದ. ಅವನ ಪರ್ಣಕುಟಿಯ ಬಾಗಿಲು ಒಳಗಿನಿಂದ ಭದ್ರ ಮಾಡಿದ್ದನ್ನು ನೋಡಿ ಚಕಿತನಾದ. ಅಲ್ಲದೆ ಮೆಟ್ಟಿಲಿನಿಂದ ಬಾಗಿಲವರೆಗೂ ಉದ್ದಕ್ಕೆ ತೊಟ್ಟು ತೊಟ್ಟಾಗಿ ಕಪ್ಪು ಕಲೆಗಳಿದ್ದುದೂ ಅವನಿಗೆ ಕಾಣಿಸಿತು. ಅವೆಲ್ಲ ಹೆಪ್ಪುಗಟ್ಟಿದ ರಕ್ತದ ಕಲೆಗಳೆಂದು ಗುರುತಿಸುವುದು ಅವನಿಗೇನೂ ಕಷ್ಟವಾಗಲಿಲ್ಲ.

ಹೆದರಿ ಗಾಬರಿಯ ದನಿಯಲ್ಲಿ ಬಾಗಿಲು ತಟ್ಟುತ್ತಾ ಅವನು ಸ್ವಾಮಿಯನ್ನು ಕರೆದ. ಕೊಂಚ ಕಾಲದ ಮೌನದನಂತರ ಒಳಗಿಂದ ಕ್ಷೀಣ ದನಿಯಲ್ಲಿ ಸಾಧು "ನನಗೆ ಹುಷಾರಿಲ್ಲ, ನೀನು ಮೊದಲು ಇಲ್ಲಿಂದ ಹೊರಟು ಹೋಗು" ಎಂದು ಆಜ್ಞಾಪಿಸಿದ್ದು ಕೇಳಿಸಿತು. "ಬಾಳೆ ಹಣ್ಣಿನ ರಸಾಯನ ತಂದಿದ್ದೇನೆ, ತಗೊಳ್ಳಿ" ಎಂದು ಹುಡುಗ ಹೇಳಿದ್ದಕ್ಕೆ ಮತ್ತೊಮ್ಮೆ ಗದರುವ ದನಿಯಲ್ಲಿ "ನಾನು ಅಸ್ವಸ್ಥನಾಗಿದ್ದೇನೆ, ನನಗೆ ಇವತ್ತು ಏನೂ ಫಲಾಹಾರ ಬೇಡ, ನೀನು ಮೊದಲು ಇಲ್ಲಿಂದ ಹೋಗು" ಎಂದು ಆ ಸ್ವಾಮಿ ಕೂಗಿದ.

ಆ ಹುಡುಗ ಹೆದರಿದರೂ ಕುತೂಹಲ ತಡೆಯಲಾಗಲಿಲ್ಲ. ಬಾಗಿಲ ಹತ್ತಿರ ನಿಂತುಕೊಂಡು "ನಿನ್ನೆ ಚೆನ್ನಾಗಿದ್ದರಲ್ಲ. ಏನಾದರೂ ಪೆಟ್ಟಾಯಿತೆ? ಬಾಗಿಲ ಹತ್ತಿರ ರಕ್ತದ ಕಲೆಗಳೆಲ್ಲಾ ಇದೆಯಲ್ಲಾ. ನನ್ನಿಂದೇನಾದರೂ ಸಹಾಯ ಆಗಬೇಕಿದ್ದರೆ ಹೇಳಿ, ಮಾಡುತ್ತೇನೆ" ಎಂದ. "ಹೋಗೋ ಹೋಗೋ! ಹೊಗ್ತೀಯೋ ಇಲ್ಲವೋ!" ಎಂದು ಒಳಗಿನಿಂದ ಕೋಪದ ಧ್ವನಿಯಲ್ಲಿ ಸಾಧು ಕೂಗಿದ.

ಸಾಧುವಿನ ಒರಟು ನಡವಳಿಕೆಗೆ ಬೇಸರಗೊಂಡ ಹುಡುಗ ರಸಾಯನದ ಸಮೇತ ಹಿಂದಿರುಗಿ ಬಂದು ನಡೆದದ್ದನ್ನೆಲ್ಲಾ ತಂದೆತಾಯಿಗಳಿಗೆ ವರದಿ ಮಾಡಿದ.

ಹಿಂದಿನ ದಿನ ಕೇಪಿನ ಕೋವಿಯಲ್ಲಿ ಹುಲಿಗೆ ಗುಂಡು ಹೊಡೆದಿದ್ದ ಕಾಂತ ಅದನ್ನು ಹೆಂಡತಿಗೆ ಹೊರತು ಯಾರಿಗೂ ತಿಳಿಸಿರಲಿಲ್ಲ. ಸಾಧುವಿಗೆ ಗಾಯವಾಗಿದ್ದಕ್ಕೂ ಇದಕ್ಕೂ ಏನಾದರೂ ದೂರದ ಸಂಬಂಧವಿರಬಹುದೇ ಎಂದು ಶಂಕಿಸಿ ತಲೆ ಬಿಸಿ ಮಾಡಿಕೊಂಡು ತುಂಬಾ ಹೊತ್ತು ಯೋಚಿಸಿದ.

ಅರ್ಧಗಂಟೆ ತೀವ್ರವಾಗಿ ಚಿಂತಿಸಿದ ಅವನ ತಲೆಗೆ ಏನೇನೋ ಗಾಬರಿಯಾಗುವಂಥ

ರಹಸ್ಯ ಕಲ್ಪನೆಗಳೆಲ್ಲ ಹೊಳೆದುವು. ಅವುಗಳನ್ನು ಖಾತರಿ ಪಡಿಸಿಕೊಳ್ಳಲು ಇರುವ ಒಂದೇ ಮಾರ್ಗವೆಂದು ಅವನು ಬರಿಗಾಲಿನಲ್ಲಿ ಆ ಸಾಧುವಿನ ಪರ್ಣಶಾಲೆಗೆ ಸದ್ದಿಲ್ಲದೆ ಹೋದ. ಉದ್ದಕ್ಕೂ ಬಿದ್ದಿದ್ದ ರಕ್ತದ ಕಲೆಗಳು ಅವನಿಗೂ ಸಹ ಕಂಡುವು. ಮೆಲ್ಲಗೆ ಬಾಗಿಲನ್ನು ತಳ್ಳಿದ.

ಬಾಗಿಲು ಒಳಗಿನಿಂದ ಭದ್ರಮಾಡಲ್ಪಟ್ಟಿತ್ತು!

ಒಂದೆರಡು ಹೆಜ್ಜೆ ಬಲಕ್ಕೆ ಹೋಗಿ ಅಲ್ಲಿ ಅಡ್ಡಲಾಗಿ ಕಟ್ಟಿದ್ದ ಬಿದುರಿನ ತಡಿಕೆಯ ಸಂದಿಯಿಂದ ಒಕ್ಕಣ್ಣಿನಲ್ಲಿ ಒಳಗೆ ಸಾಧು ಏನು ಮಾಡುತ್ತಿರಬಹುದು ಎಂದು ಮಂಡಿಯೂರಿ ಕುಳಿತು ಇಣುಕಿ ನೋಡಿದ. ಅವನು ಒಳಗೆ ನೋಡುವ ಪ್ರಯತ್ನ ಮಾಡುತ್ತಿರಬೇಕಾದರೆ ಅವನ ಎಡಕ್ಕೆ ತಲೆ ಮೇಲೆ ಏನೋ ಸದ್ದಾದಂತಾಗಿ ಕಾಂತ ತಲೆ ಎತ್ತಿ ನೋಡುತ್ತಾನೆ ಗುಡಿಸಿಲ ಬಾಗಿಲು ತೆರೆದಿದೆ! ಸ್ವಾಧು ಕೋಪಾರುಣ ನೇತ್ರನಾಗಿ ನಿಂತು ಮಂಡಿಯೂರಿ ಇಣುಕುತ್ತಿದ್ದ ಇವನನ್ನೇ ದಿಟ್ಟಿಸುತ್ತಿದ್ದಾನೆ! ಅವನ ಎಡಗೈಗೆ ಬಟ್ಟೆ ಬ್ಯಾಂಡೇಜೊಂದು ಸುತ್ತಿದೆ. ಬ್ಯಾಂಡೇಜಿನ ಮೇಲೂ ಮೈಮೇಲೂ ರಕ್ತದ ಕಲೆಗಳಿವೆ!!

ಸಿಕ್ಕಿಬಿದ್ದ ಕಾಂತ ಹೆಡ್ಡನಂತೆ ಹಲ್ಲು ಕಿರಿಯುತ್ತ "ನನ್ನ ಮಗ ನಿಮಗೆ ಮೈ ಸರಿ ಇಲ್ಲವೆಂದು ಹೇಳಿದ ಸ್ವಾಮಿಗಳೆ. ನನ್ನಿಂದೇನಾದರೂ ಸಹಾಯವಾದೀತೆ ನೋಡಲು ಬಂದೆ" ಎಂದು ತೊದಲುತ್ತಾ ಹೇಳಿದ.

"ಅದಕ್ಕೆ ಈ ರೀತಿ ತಡಿಕೆ ಮರೆಯಿಂದ ಕದ್ದು ಇಣುಕುತ್ತೀಯ? ಸರಿಯಾಗಿ ಸುಳ್ಳು ಸಹ ಹೇಳು ಬರದ ಸುಳ್ಳ ನೀನು! ಹುಷಾರಾಗಿರು, ನಿನ್ನ ಕಳ್ಳಾಟಗಳು ಯಾವುವೂ ನನ್ನ ಹತ್ತಿರ ನಡೆಯುವುದಿಲ್ಲ. ನಡಿ ಇಲ್ಲಿಂದ." ಎಂದು ಗುಡುಗಿದ ಸ್ವಾಮಿ "ನಿನಗೇನಾದರೂ ಕೇಡುಗಾಲ ಕಾಡಿದ್ದರೆ ಇಂಥ ಕೆಲಸ ಮಾಡು" ಎಂದು ಹೆದರಿಸಿದ

ಕುಳಿತಲ್ಲಿಂದ ಬೇಗ ಬೇಗ ಮೇಲೆದ್ದ ಕಾಂತ ಮನೆಯತ್ತ ಹೆಜ್ಜೆ ಹಾಕಿದ. ಏನೇನು ಮಾಟ ಮಂತ್ರಗಳನ್ನು ನನ್ನ ಮೇಲೆ ಪ್ರಯೋಗಿಸಲಿದ್ದಾನೋ ಎಂದು ಅವನಿಗೆ ಇನ್ನಿಲ್ಲದಷ್ಟು ದಿಗಿಲಾಯ್ತು.

ಇದಾದ ಒಂದು ವಾರದ ತರುವಾಯ ಆ ಹುಲಿ ಇನ್ನೊಂದು ಹಸುವನ್ನು ಬಲಿ ತೆಗೆದುಕೊಂಡಿತು. ನಾನು ಮೊದಲೇ ತಿಳಿಸಿದಂತೆ ಎಲ್ಲ ಗೋಪಾಲಕರೂ ತುಂಬಾ ಎತ್ತರಕ್ಕೆ ಕೋಟೆಯಂತೆ ಮುಳ್ಳು ಬೇಲಿ ಕಟ್ಟಿದ್ದರಿಂದ ಹುಲಿಗೆ ಹಾರಿ ಒಳಗೆ ಹೋಗುವುದು ದುಸ್ತರವಾಗಿದ್ದಲ್ಲದೆ, ಕೊಂದ ಹಸುವಿನ ಸಮೇತ ಹಾರಿ ಹೊರ ಸಾಗಿಸುವುದೂ ಅಸಾಧ್ಯವಾಗಿತ್ತು. ಆದ್ದರಿಂದ ಈ ಸಾರಿ ಅದು ಬೇಲಿ ಹಾರಲು ಹೋಗದೆ ಬೇಲಿ ಅಡಿಯಿಂದ ಕನ್ನ ಕೊರೆದಂತೆ ನುಗ್ಗಿ ತೂತು ಮಾಡಿಕೊಂಡು ಒಳಗೆ ಹೋಗಿ ಹಸುವನ್ನು ಕೊಂದಿತ್ತು. ಆದರೆ ಹಸುವನ್ನು ಅದೇರೀತಿ ಹೊರಕ್ಕೆ ಸಾಗಿಸಲು ಅದಕ್ಕೆ ಸಾಧ್ಯವಾಗದೆ ಬಿಟ್ಟು ಹೋಗಬೇಕಾಗಿ ಬಂತು.

ಇದಾದನಂತರ ಆ ಹುಲಿ ಹೆಚ್ಚು ಧೈರ್ಯ ವಹಿಸತೊಡಗಿತು. ಇರ್ಳರ ಮೂಢನಂಬಿಕೆ ಹೆಚ್ಚಿ ಅವರು ಇನ್ನೂ ಪುಕ್ಕಲರಾದರು. ಈ ಹಂತದಲ್ಲಿ ಹುಲಿ ಇಲ್ಲಿಯವರೆಗೆ ರಾತ್ರಿ ಮಾತ್ರ ಕದ್ದು ತಿರುಗುತ್ತಿದ್ದುದು ತನ್ನ ನಡವಳಿಕೆ ಬದಲಾಯಿಸಿ ಬೆಳಗಿನ ಹೊತ್ತೇ ರಾಜಾರೋಷಾಗಿ ಇರ್ಳರ ಗುಡಿಸಿಲುಗಳ ಸುತ್ತ, ಬಾಳೆತೋಟದ ಸಮೀಪದಲ್ಲಿ, ಸನಿಹದಲ್ಲೆ ಹರಿಯುತ್ತಿದ್ದ ಹಳ್ಳದ ತಡಿಯಲ್ಲಿ ಓಡಾಡತೊಡಗಿತು. ಅಲ್ಲದೆ ದನ ಮೇಯಿಸುವಲ್ಲೆ ಬಂದು ದನ ಹಿಡಿಯಲು ಶುರು ಮಾಡಿತು. ಆ ಹುಲಿಗೂ ಬಾಳೆತೋಟದ ಸ್ವಾಮಿಗೂ ಸಂಬಂಧವಿದೆಯೆಂದು ನಂಬಿಕೊಂಡಿದ್ದ ಇರ್ಳಜನಗಳು ಅವನ ಗುಡಿಸಿಲಿನತ್ತ ಸುಳಿಯುವುದನ್ನೂ ನಿಲ್ಲಿಸಿದರು, ಹುಲಿ ಬಂದು ದನ ಹಿಡಿದರೆ ಅದನ್ನು ತಪ್ಪಿಸುವ ಯಾವ ಪ್ರಯತ್ನವನ್ನೂ ಮಾಡಲಿಲ್ಲ.

ಇರ್ಳಜನಗಳ ನಡವಳಿಕೆಗೆ ಅಪವಾದವೆಂದರೆ ಒಂದೇ ಒಂದುಸಾರಿ ಮಾತ್ರ ಒಬ್ಬ ದನ ಕಾಯುವ ಹುಡುಗ ಹುಲಿಯನ್ನು ಹಿಮ್ಮೆಟ್ಟಿಸಲು ಪ್ರಯತ್ನಿಸಿದ್ದು. ಹುಲಿ ಅವನ ಕಣ್ಣೆದುರೇ ಮೇಯುತ್ತಿದ್ದ ಮಂದೆಯಲ್ಲಿ ಎಮ್ಮೆಯೊಂದನ್ನು ಹಿಡಿಯಿತು. ಎಮ್ಮೆಗಳೂ ಕೋಣಗಳೂ ಸಾಧಾರಣವಾಗಿ ಗುಂಪುಗಳಲ್ಲಿದ್ದರೆ ಅವೆಲ್ಲಾ ಒಟ್ಟಾಗಿ ಹಿಡಿಯಬಂದ ಪ್ರಾಣಿ ಮೇಲೆ ಬೀಳುತ್ತವೆ. ಇಲ್ಲೂ ಹಾಗೇ ಆಯ್ತು. ಎಮ್ಮೆ ಕೊಂದ ಹುಲಿ ಮೇಲೆ ಇತರ ಕೋಣಗಳು ನುಗ್ಗುತ್ತಿದ್ದುದನ್ನು ನೋಡಿ ಧೈರ್ಯ ಮಾಡಿದ ಹುಡುಗ ಅವನೂ ನುಗ್ಗಿ ಕೈಲಿದ್ದ ದೊಣ್ಣೆಯಿಂದ ಹುಲಿಗೆ ಹೊಡೆದ. ಹುಲಿ ಎಮ್ಮೆ ಬಿಟ್ಟು ಒಮ್ಮೆಲೇ ಹುಡುಗನ ಮೇಲೆ ಹಾರಿತು.

ಅದೃಷ್ಟವಶಾತ್ ಕೋಣಗಳು ಹುಡುಗನ ಸಹಾಯಕ್ಕೆ ನುಗ್ಗಿದುವು. ಅವು ಭುಸುಗುಡುತ್ತಾ ಸಾಲುಗಟ್ಟಿ ತಿವಿಯಲು ಕೊಂಬು ಮುಂದೆ ಮಾಡಿಕೊಂಡು ಬಂದಿದ್ದನ್ನು ನೋಡಿ ಹುಲಿ ಕೊಂಚ ಹೆದರಿತೆಂದೇ ಕಾಣುತ್ತದೆ. ಹುಡುಗನನ್ನು ಹಿಡಿದಿದ್ದ ಹುಲಿ ಘರ್ಜಿಸಿ ನೆಗೆದು ಕಾಡಿಗೆ ಪರಾರಿಯಾಯ್ತು. ಕೋಣಗಳು ನುಗ್ಗಿ ಹುಡುಗನ ಪ್ರಾಣವನ್ನು ತಾತ್ಕಾಲಿಕವಾಗಿ ಉಳಿಸಿದ್ದುವು. ಆದರೂ ಆ ವೇಳೆಗಾಗಲೇ ಹುಲಿ ಹಲವಾರುಕಡೆ ಕಚ್ಚಿ ಪರಚಿ ಹುಡುಗನಿಗೆ ಮರಣಾಂತಿಕ ಗಾಯಗಳಾಗಿದ್ದುವು.

ಆ ಅದೃಷ್ಟಹೀನ ಹುಡುಗ ಗಾಯಗಳಿಂದ ನರಳುತ್ತಾ ಕಾಡಿನಲ್ಲೇ ಬಿದ್ದಿದ್ದ. ಎಮ್ಮೆ ಕೋಣಗಳ ಗುಂಪು ಹಟ್ಟಿಗೆ ಮರಳದೆ ಹುಡುಗನನ್ನು ಸುತ್ತುಗಟ್ಟಿ ಕಾಯುತ್ತ ಕುಳಿತಿದ್ದುವು. ಬೆಳಗ್ಗೆ ಮಿಕ್ಕ ದನಗಾಹಿಗಳೆಲ್ಲಾ ಗುಂಪುಗೂಡಿ ಕಾಡಿಗೆ ಹೋಗಿ ಹುಡುಗನನ್ನು ಹುಡುಕಿ ಹೊತ್ತು ತಂದರು. ಅವನ ಗಾಯಗಳಿಗೆ ಯಾವ ಶುಶ್ರೂಷೆಯೂ ಇಲ್ಲದೆ ರಾತ್ರಿಯೆಲ್ಲಾ ನರಳುತ್ತ ಕಳೆದಿದ್ದರಿಂದ ಗಾಯಗಳ ನಂಜೇರಿ ಅವನು ಉದಕಮಂಡಲದ ಆಸ್ಪತ್ರೆಗೆ ಒಯ್ಯುತ್ತಿರಬೇಕಾದರೆ ಸತ್ತೇ ಹೋದ.

ಇದಾದನಂತರ ಮತ್ತೊಂದು ದುರಂತ ಸಂಭವಿಸುವ ಮೊದಲು ಕೆಲಕಾಲ ಯಾವ

ಉಪದ್ರವವೂ ಇರಲಿಲ್ಲ. ಯಾವ ದನದ ಮಂದೆಯ ಮೇಲಾಗಲೀ, ಕೂಡುಹಟ್ಟಿಯ ಮೇಲಾಗಲೀ ಹುಲಿಯ ಧಾಳಿ ನಡೆಯಲಿಲ್ಲ. ಇರ್ಲರು ಹುಲಿ ಆ ಜಾಗ ಬಿಟ್ಟು ಹೊರಟೇಹೋಗಿದೆ ಎಂದು ಸಹ ತಿಳಿದರು.

ಆದರೆ ಒಂದು ದಿನ ಒಬ್ಬ ಇರ್ಲ ಕಾಡಿನಲ್ಲಿ ಹೋಗುತ್ತಿರಬೇಕಾದರೆ ಒಂದು ಪೊದೆಯ ಹಿಂದಿನಿಂದ ಒಂದು ಹೇಟೆ ನವಿಲು ಬಡಲ್ಲನೆ ಎದ್ದು ರೆಕ್ಕೆ ಬಡಿಯುತ್ತ ಗಾಬರಿಯಲ್ಲಿ ಹಾರಿಹೋಯ್ತು. ಕಾಡಿನಲ್ಲಿ ಕೋಳಿ ನವಿಲು ಇತ್ಯಾದಿಗಳು ನೆಲದ ಮೇಲೇ ಗೂಡು ಮಾಡಿ ಮೊಟ್ಟೆ ಇಟ್ಟು ಕಾವು ಕೂರುತ್ತವೆ. ಅವು ಹಾಗೆ ಕೂತಿದ್ದ ಸಂದರ್ಭದಲ್ಲಿ ಮನುಷ್ಯರು ಯಾರಾದರೂ ಅನಿರೀಕ್ಷಿತವಾಗಿ ಹತ್ತಿರಾದರೆ ಅವು ಗೂಡು ಬಿಟ್ಟು ಹಾರಿಹೋಗುವುದು ಇದೇ ರೀತಿ. ಅವತ್ತು ಅಲ್ಲಿ ಹೋಗುತ್ತಿದ್ದ ಇರ್ಲನೂ ತಿಳಿದಿದ್ದು ಹಾಗೇ. ಆ ಪೊದೆಯ ಆಚೆಪಕ್ಕದಲ್ಲಿ ನವಿಲಿನ ಮೊಟ್ಟೆಗಳಷ್ಟು ಸಿಕ್ಕಬಹುದೆಂದು ಬೇಗ ಬೇಗ ಆ ಪೊದೆಯಾಚೆಗೆ ಇಣುಕಿದ.

ಆದರೆ ಇದ್ದಕ್ಕಿದ್ದಂತೆ ಗಾಬರಿಯಾಗಿ ನೆಲ ಬಿಟ್ಟು ಹಾರಿದ ನವಿಲಿನ ವರ್ತನೆಗೆ ಕಾರಣ ಬೇರೆಯೇ ಇತ್ತು! ನವಿಲು ಹಾರಿದ ಜಾಗದಲ್ಲಿ ಮೊಣಕಾಲೆತ್ತರದ ಹುಲ್ಲಿನ ನಡುವೆ ಆ ದೊಡ್ಡ ಹೆಬ್ಬುಲಿಗೆ  ಇರ್ಲ ಮುಖಾಮುಖಿಯಾಗಿ ಎದುರಾದ!

ಹುಲಿಗೆ ಹಠಾತ್ತನೆ ಮನುಷ್ಯ ಇದಿರಾಗಿದ್ದು ದೊಡ್ಡ ಆಶ್ಚರ್ಯಾಘಾತ. ಇರ್ಲನಿಗೆ ಅವನ ಜೀವನದ ಕೊಟ್ಟಕೊನೆಯ ಬೆಚ್ಚು. ಯಾವ ಉದ್ರೇಕವೂ ಇಲ್ಲದೆ ಹುಲಿ ನಿಷ್ಕಾರಣವಾಗಿ ಅವನನ್ನು ಪಂಜದಿಂದ ಹೊಡೆದು ನೆಲಕ್ಕೆ ಕೆಡವಿ ಕುತ್ತಿಗೆ ಮುರಿದು ಕೊಂದಿತು. ಅನಂತರ ಕೇವಲ ಕುತೂಹಲಕ್ಕೆಂಬಂತೆ ಅವನ ಎದೆಯ ಹತ್ತಿರ, ತೊಡೆಯ ಹತ್ತಿರ ಒಂದಷ್ಟು ಮಾಂಸ ಹರಿದು ತಿಂದಿತು.

ಬಹುಶಃ ಹುಲಿಗೆ ಮನುಷ್ಯರ ಮಾಂಸವೂ ರುಚಿಯಾಗಿಯೇ ಇದೆ ಎನ್ನಿಸಿರಬೇಕು. ಅವತ್ತಿಂದ 'ಬಾಳೆತೋಟದ ಸ್ವಾಮಿ' ಎಂಬ ನರಭಕ್ಷಕ ಜನ್ಮ ತಾಳಿದ. ಹುಲಿಯ ರಾಜಾರೋಷಾದ ನಡವಳಿಕೆಗಳಿಂದ ಮೊದಲೇ ಹೆದರಿದ್ದ ಇರ್ಲರು ಈಗ ದಿಗ್ಮೂಢರಾದರು. ಇಲ್ಲ ಸಲ್ಲದ ಮೂಢ ನಂಬುಗೆಗಳ ಮೇಲೆ  ನೂರಾರು ಆಲೋಚನೆಗಳಲ್ಲಿ  ತೊಡಗಿದ್ದ ಅವರ ಮನಸ್ಸಿಗೆ ಈ ಸಾರಿಯ ನರಹತ್ಯೆಯಂತೂ ಬಹಳ ಅರ್ಥಪೂರ್ಣವಾಗಿತ್ತು.

ಅವರಲ್ಲಿ ಈಗ ಎರಡು ಅಭಿಪ್ರಾಯಗಳಿದ್ದುವು. ಕೆಲವರು ಆ ಬಾಳೆ ತೋಟದ ಸಾಧು ಈ ಹುಲಿಯನ್ನು ವಶೀಕರಣ ಮಾಡಿಕೊಂಡು ಬೇಕೆನಿಸಿದ ಕೆಲಸ ಮಾಡಿಸುತ್ತಿದ್ದಾನೆ ಎಂದು ಅಭಿಪ್ರಾಯಪಟ್ಟರು. ಇನ್ನು ಕೆಲವರು ಆ ಸಾಧುವೇ ಬೇಕಾದಾಗ ಹುಲಿ ರೂಪ ತಾಳಿ ಬೇಕೆನ್ನಿಸಿದವರನ್ನು ಕೊಲ್ಲುತ್ತಾನೆ, ಮನುಷ್ಯ ಮತ್ತು ಹುಲಿ ಎರಡೂ ಒಂದೇ ಎನ್ನುತ್ತಿದ್ದರು. ಇದಕ್ಕೆ ಹಿಂದೆಲ್ಲಾ ಕೆಲವು ಕಾಕತಾಳೀಯವಾದ ಘಟನೆಗಳು ಸಂಭವಿಸಿದ್ದೇ ಕಾರಣ. ಹುಲಿ ಅಲ್ಲಿಗೆ ಬಂದು ಠಿಕಾಣಿ ಹೂಡುವುದಕ್ಕೂ ಸಾಧು ಕಾಂತನ ಮನೆಗೆ

ಬರುವುದಕ್ಕೂ, ಕಾಂತ ಆನೆ ಹೊಡೆಯಲು ಹೋಗಿ ಹುಲಿಗೆ ಹೊಡೆದು ಗಾಯ ಮಾಡಿದ್ದಕ್ಕೂ ಮಾರನೆ ದಿನ ಸಾಧು ಪರ್ಣಕುಟಿ ಬಳಿ ರಕ್ತದ ಕಲೆಗಳು, ಹಾಗು ಕೈ ಗಾಯವಾಗಿ ಬ್ಯಾಂಡೇಜು ಇದ್ದಿದ್ದಕ್ಕೂ, ಈಗ ಈ ಇರ್ಲನನ್ನು ಹುಲಿ ಕೊಂದು ಅವನನ್ನು ಅರೆಬರೆ ತಿಂದಿದ್ದಕ್ಕೂ ಸರಿ ಹೋಗಿ, ಈ ಎಲ್ಲ ಘಟನೆಗಳ ಸರಣಿ ಅವರ ಮೂಢನಂಬುಗೆಯನ್ನೇ ಸಮರ್ಥಿಸುವಂತಿದ್ದುವು.

ಈ ಸಾರಿ ನವಿಲಿನ ಮೊಟ್ಟೆ ಲಪಟಾಯಿಸಲು ಹೋಗಿ ಪ್ರಾಣ ಕಳಕೊಂಡ ಇರ್ಲನೂ ಸಾಧು ಮನೆಯ ಬಳಿ ಗೂಢಚರ್ಯೆ ನಡೆಸಲು ಹೋಗಿ ಹುಲಿ ಕೂಗು ಕೇಳಿ ಓಡಿಬಂದ ಹುಡುಗನೇ ಆಗಿದ್ದು ಆ ಕಳ್ಳ ಸ್ವಾಮಿಯ ಅದೃಷ್ಟವೆಂದೇ ಹೇಳಬೇಕು. ಸಾಧು ಸರಿಯಾಗಿಯೇ ಅವನಮೇಲೆ ಪ್ರತೀಕಾರ ತಗೊಂಡ ಎಂದು ಇರ್ಲರೆಲ್ಲಾ ಗಾಬರಿಯಾಗಿ ನಡುಗತೊಡಗಿದರು.

ಕೆಲವು ದಿನಗಳ ತರುವಾಯ ಇರ್ಲರೆಲ್ಲಾ ಧೈರ್ಯ ಕೂಡಿಸಿಕೊಂಡು ಬಾಳೆ ತೋಟದ ಯಜಮಾನ ಕಾಂತನ ನೇತೃತ್ವದಲ್ಲಿ ಸ್ವಾಮಿಯ ಪರ್ಣಕುಟಿ ಬಳಿಗೆ ಒಂದು ನಿಯೋಗ ಹೋದರು. ಹೋದವರೇ ಎಲ್ಲರೂ ಅವನಿಗೆ ಸಾಷ್ಟಾಂಗ ಅಡ್ಡಬಿದ್ದು ಆ ಹುಲಿ ನಿನ್ನ ಮಿತ್ರನಾಗಿದ್ದರೆ ನಮ್ಮ ಜೀವ ಉಳಿಸಲು ಹೇಳು. ಹುಲಿಯೂ ನೀನೂ ಒಂದೇ ಆಗಿದ್ದರೆ ನಮ್ಮ ಪ್ರಾಣ ಉಳಿಸು ಎಂದು ಕೇಳಿಕೊಂಡರು. ಒಂದಿಬ್ಬರು ಇರ್ಲಮುದುಕರು ನಿನ್ನ ಸಾಧನೆಗೆ ನರಮಾಂಸ ಮತ್ತು ರಕ್ತ ಅತ್ಯಗತ್ಯವೆಂದಾದರೆ ಇಲ್ಲಿಂದ ಒಂದೇ ಮೈಲಿ ದೂರದಲ್ಲಿ ಬಡಗರ ಬೀಡು ಇದೆ, ಇಲ್ಲವೇ ಹತ್ತೇ ಮೈಲಿ ದೂರದಲ್ಲಿ ಕರುಂಬರ ಹಾಡಿಗಳಿದ್ದಾವೆ ನಿನ್ನ ನರರಕ್ತದ ಹಸಿವನ್ನು ಅಲ್ಲಿ ಹಿಂಗಿಸಿಕೋ ಎಂದು ಬೇಡಿದರು.

ಆ ಸ್ವಾಮಿ ಬಹಳ ತಾಳ್ಮೆಯಿಂದ ಅವರ ಅಹವಾಲುಗಳನ್ನೆಲ್ಲಾ ಕೇಳಿದ. ಆಮೇಲೆ ತುಂಬಾ ಹೊತ್ತು ಯೋಚನೆ ಮಾಡಿ ಕೊನೆಗೆ ಹೇಳಿದ "ನನಗೆ ಪ್ರತಿ ತಿಂಗಳೂ ನೂರು ರೂಪಾಯಿ ದಕ್ಷಿಣೆ ಕೊಡಬೇಕು. ಅಲ್ಲದೆ ಈಗ ಒದಗಿಸುತ್ತಿರುವ ಬಾಳೆಹಣ್ಣಿನ ರಸಾಯನದ ಜೊತೆಗೆ ಅಕ್ಕಿ, ಹಾಲು, ತುಪ್ಪ ಮತ್ತು ತರಕಾರಿಗಳನ್ನೂ ದಿನಂಪ್ರತಿ ಒದಗಿಸಬೇಕು. ಹಾಗಿದ್ದರೆ ನಿಮ್ಮನ್ನು ರಕ್ಷಿಸುತ್ತೇನೆ. ಬಡಗರು ಕರುಂಬರ ಬಗ್ಗೆ ಆಮೇಲೆ ಯೋಚಿಸುತ್ತೇನೆ"ಎಂದು ಹೇಳಿದ.

ಈ ಸಾಧುವೇ ಈ ಕೆಲಸ ಮಾಡುತ್ತಿರುವುದಲ್ಲವೇ! ಬೇರೆಕಡೆ ನರಬಲಿ ತೆಗೆದುಕೊಳ್ಳುವುದನ್ನು ಪರಿಗಣಿಸುತ್ತೇನೆ ಎಂದು ಹೇಳಲಿಲ್ಲವೆ? ಎಂದು ತಮ್ಮ ಮೂಢ ಊಹೆ ನಿಜವಾದುದಕ್ಕೆ ಇರ್ಲರೆಲ್ಲರೂ ತಲೆದೂಗಿದರು.

ಆದರೆ ಈಗ ನೂರು ರೂಪಾಯಿ ಎಲ್ಲಿಂದ ತರುವುದು? ಅದೂ ಪ್ರತಿ ತಿಂಗಳೂ ಕೊಡುವುದು ಹೇಗೆ? ನಮ್ಮೆಲ್ಲಾ ಹಣ ಒಟ್ಟು ಮಾಡಿದರೂ ಅವನಿಗೆ ಒಂದು ತಿಂಗಳ ದಕ್ಷಿಣೆ ಸಹ ಆಗುವುದಿಲ್ಲವಲ್ಲ ಎಂದು ಚಿಂತಾಕ್ರಾಂತರಾಗಿ, ತಮ್ಮ ಬಳಿ ಅಷ್ಟೊಂದು ಹಣವೇ ಇಲ್ಲವೆಂದೂ, ಹೇಗಾದರೂ ಮಾಡಿ ದಕ್ಷಿಣೆ ಮೊತ್ತ ನೂರರಿಂದ ಐವತ್ತು

ರೂಪಾಯಿಗಳಿಗೆ ಇಳಿಸಬೇಕೆಂದೂ ಕೇಳಿಕೊಂಡರು. ಆದರೆ ಆ ಸ್ವಾಮಿ ಬಿಲ್ಕುಲ್ ಒಪ್ಪಲಿಲ್ಲ. ಮುಂದೆ ಮಾತಾಡಲು ನಿರಾಕರಿಸಿ ಧಡಾರನೆ ಬಾಗಿಲು ಹಾಕಿಕೊಂಡು ಒಳಗೆ ಹೋದ. ನಿಯೋಗ ಹೋದವರೆಲ್ಲ ತಲೆ ತಗ್ಗಿಸಿಕೊಂಡು ಮೌನವಾಗಿ ಹಿಂದಿರುಗಿದರು.

ಮೂರು ದಿನಗಳ ತರುವಾಯ ಆ ಹುಲಿ ಇನ್ನೊಬ್ಬ ಇರ್ಲನನ್ನು ಹಿಡಿಯಿತು. ಅದೂ ಮಧ್ಯಾಹ್ನದ ಹಾಡುಹಗಲಿನಲ್ಲಿ ಅವನ ಗುಡಿಸಿಲಿನೊಳಗೇ ನುಗ್ಗಿ ಹೊತ್ತುಕೊಂಡು ಹೋಯ್ತು. ಸ್ವಾಮಿಯ ಜೊತೆ ದಕ್ಷಿಣೆಗೆ ಚೌಕಾಶಿ ಮಾಡಿದವರಲ್ಲಿ ಅವನೂ ಒಬ್ಬನಾಗಿದ್ದು ಅವನ ದುರಾದೃಷ್ಟ.

ನನ್ನ ಈ ಕತೆಯ ಮುನ್ನುಡಿ ಕತೆಗಿಂತ ವಿಸ್ತಾರವಾಗಿದೆ. ಆದರೆ ಒಂದು ಕತೆ ಹೇಳುವ ಮೊದಲು ಅದರ ಹಿಂದು ಮುಂದುಗಳನ್ನೆಲ್ಲಾ ಸವಿಸ್ತಾರವಾಗಿ ತಿಳಿಸುವುದು ಕತೆಗಾರನ ಕರ್ತವ್ಯವಲ್ಲವೆ. ಭಾರತದ ಕಾಡುಗಳಲ್ಲಿರುವ ಮುಗ್ಧ ಗಿರಿಜನರ ನಂಬಿಕೆಗಳು, ದೆವ್ವ ದೇವರುಗಳ ಬಗ್ಗೆ ಇರುವ ಭಯ ಭೀತಿಗಳು ಇವನ್ನೆಲ್ಲ ನಿಮಗೆ ತಿಳಿಸುವ ಕ್ಷಿಪ್ರ ವಿಧಾನವೆಂದರೆ ನಾನು ಕಾರ್ಯಶೀಲನಾಗುವ ಮೊದಲು ಏನೆಲ್ಲ ಇತಿಹಾಸವನ್ನು ಅವರಿಂದ ತಿಳಿದುಕೊಂಡೆನೋ ಅದನ್ನೆಲ್ಲಾ ತದ್ವತ್ತಾಗಿ ತಿಳಿಸುವುದು ಒಂದೇ ಮಾರ್ಗ. ಇದನ್ನೆಲ್ಲ ನಾನು ಬಾಳೆ ತೋಟದಿಂದ ಒಂದು ಮೈಲು ದೂರದಲ್ಲಿ ಕಾಡಿನಲ್ಲಿದ್ದ ವಿಸ್ತಾರವಾದ ಮಾವಿನ ಮರದ ಕೆಳಗೆ, ಕ್ಯಾಂಪ್‌ಫೈರ್ ಪಕ್ಕ ಕುಳಿತು ಆಲೈಸಿದ್ದು.

ನನಗೆ ಇದನ್ನೆಲ್ಲಾ ವರದಿ ಮಾಡಿದವನು ಬೋರ ಎಂಬ ಒಬ್ಬ ಇರ್ಲ ಬುಡಕಟ್ಟಿನ ಹಳೇ ಮಿತ್ರ. ಕುಳ್ಳಗೆ ಕಪ್ಪಗಿದ್ದ ಇವನು ನಾನು ಹಿಂದೆಲ್ಲಾ ಶಿಕಾರಿಗೆ ಬಂದಾಗ ನನ್ನ ಒಡನಾಡಿಯಾಗಿದ್ದ.

ಈ ಗಿರಿಜನರು ತುಂಬಾ ಸಂಕೋಚ ಸ್ವಭಾವದವರು. ಹೊಸಬರ ಹತ್ತಿರ ಆತ್ಮೀಯವಾಗಿ ವರ್ತಿಸುವುದು ಅವರಿಗೆ ತುಂಬಾ ಕಷ್ಟ. ನೀವು ಅವರೊಡನೆ ತುಂಬಾ ಸಲುಗೆಯಿಂದ ಅವರಲ್ಲೊಬ್ಬರಂತೆಯೇ ಎಂದು ವರ್ತಿಸಲು ಸಾಧ್ಯವಾದರೆ ಮಾತ್ರ ಅವರೊಡನೆ ನಿಮಗೆ ಸಂವಾದ ಸಾಧ್ಯ. ಆಮೇಲೆ ಬಿಡಿ! ನೀವು ಒಳ್ಳೆ ಮಾತುಗಾರರಾದರೆ ನಿಮ್ಮೊಡನೆ ಬುಡುಬುಡಿಕೆಯಂತೆ ಗಳಹುತ್ತಾ ಬೇಕಿದ್ದು ಬೇಡದ್ದು ಎಲ್ಲವನ್ನೂ ಹೇಳಲು ಶುರುಮಾಡುತ್ತಾರೆ. ನಿಮಗೆ ಬೇಕಾದ್ದನ್ನು ನೀವು ಗ್ರಹಿಸಬಹುದು, ಬೇಡದ್ದನ್ನು ಮರೆಯಬಹುದು.

ನಾನು ಮಾವಿನ ಮರದಡಿ ಬೆಂಕಿಯೆದುರು ಕುಳಿತು ಬೋರನಿಂದ ರಹಸ್ಯಮಯವಾದ ಬಾಳೆತೋಟದ ಸ್ವಾಮಿಯ ಹಿನ್ನೆಲೆಯನ್ನೆಲ್ಲಾ ಕೇಳಿದ್ದು ಈಗಲೂ ಕಣ್ಣಿಗೆ ಕಟ್ಟಿದಂತಿದೆ. ನಾವು ಅಲ್ಲಿ ಕುಳಿತಿದ್ದಾಗ ದೂರದಲ್ಲಿ ಕಾಡಾನೆಗಳು ಬಿದಿರು ಹಿಂಡಿಲುಗಳನ್ನು ಲಟಲಟ ಮುರಿದು ಮೇಯುತ್ತಿದ್ದ ಸದ್ದು ಕೇಳುತ್ತಿತ್ತು. ಕಾಡಾನೆಗಳು ಮತ್ತು ಅಲ್ಲಿ ಪಿಡುಗಾಗಿದ್ದ ನರಭಕ್ಷಕ ಹುಲಿ ದೆಸೆಯಿಂದಲೇ ನಾವು ಅಷ್ಟು ದೊಡ್ಡ ಬೆಂಕಿ ಮಾಡಿಕೊಂಡು

ಕುಳಿತಿದ್ದು. ಬೆಂಕಿ ಕಡಿಮೆಯಾಗದ ಹಾಗೆ ನಾವು ಬೆಳಕಿದ್ದಾಗ ಸಂಗ್ರಹಿಸಿದ್ದ ಒಣಮರದ ತುಂಡುಗಳನ್ನು ಹಾಕುತ್ತಲೇ ಇದ್ದುವು. ಅವತ್ತು ಬಹಳ ಚಳಿ ಇತ್ತು. ನಾವಿಬ್ಬರೂ ಒತ್ತೊತ್ತಾಗಿ ಕುಳಿತುಕೊಂಡು ಚಳಿ ಕಾಯಿಸುತ್ತಿದ್ದೆವು. ಆದರೂ ಒಂದು ಭಾಗ ಬೆಚ್ಚಗೆ ಮಾಡಿಕೊಳ್ಳುವುದರೊಳಗೆ ಇನ್ನೊಂದುಕಡೆ ತಣ್ಣಗಾಗುತ್ತಿತ್ತು.

ಉದಕಮಂಡಲದಲ್ಲಿದ್ದ ನನ್ನ ಮಿತ್ರನೊಬ್ಬ, ಮಾರ್ಟಿನ್ ಸ್ಟಾಸಿಲ್ ಎಂದು ಆತನ ಹೆಸರು, ನನಗೆ ಉದಕಮಂಡಲಕ್ಕೆ ಬರಬೇಕೆಂದು ಆಹ್ವಾನಿಸುತ್ತ ಕ್ವಚಿತ್ತಾಗಿ ಬಾಳೆತೋಟದ ಸ್ವಾಮಿ ಬಗ್ಗೆಯೂ ಬರೆದು, ಉದಕಮಂಡಲದಲ್ಲಿ ಒಂದುದಿನ ಉಳಿದು ಅನಂತರ ಬಾಳೆ ತೋಟದ ಜಾಗಕ್ಕೆ ನಡೆದೇ ಹೋಗಬಹುದೆಂದು ಬರೆದಿದ್ದ. ನಾನಿಲ್ಲಿ ಕುಳಿತು ಬೋರನ ಕತೆ ಕೇಳುತ್ತಾ ಇರುವುದಕ್ಕೆ ಅವನ ಕಾಗದವೇ ಕಾರಣ.

ಬಾಳೆತೋಟದ ನರಭಕ್ಷಕನ ಕತೆ ಕೇಳುತ್ತಲೆ ನನಗೆ ಕಿವಿ ನೆಟ್ಟಗಾಯ್ತು. ನನ್ನ ಮಿತ್ರನ ಸಲಹೆಯನ್ನು ಅನುಸರಿಸಿ ಮಧ್ಯಾಹ್ನ ನಾಲ್ಕುಗಂಟೆಹೊತ್ತಿಗೆ ಬಾಳೆತೋಟಕ್ಕೆ ಬಂದಿದ್ದೆ. ನರಭಕ್ಷಕನ ದೆಸೆಯಿಂದ ಕಂಗಾಲಾಗಿ ಕುಳಿತಿದ್ದ ಬೋರನಿಗೆ ನನ್ನನ್ನು ಕಂಡು ಪರಮ ಸಂತೋಷವಾಗಿತ್ತು. ಅಲ್ಲೇ ಸಮೀಪದಲ್ಲಿ ಗುಡಿಸಿಲು ಕಟ್ಟಿಕೊಂಡು ಅವನು ವಾಸಿಸುತ್ತಿದ್ದ. ನಾವಿಬ್ಬರೂ ಹಳ್ಳದ ಪಕ್ಕದಲ್ಲಿ ಬೆಳೆದಿದ್ದ ಆ ಬೃಹದಾಕಾರದ ಮಾವಿನ ಮರದಡಿ ಬೆಂಕಿ ಹಾಕಿಕೊಂಡು ರಾತ್ರಿ ಕಳೆಯೋಣವೆಂದು ತೀರ್ಮಾನಿಸಿದೆವು. ನಮ್ಮ ಬೆಂಕಿಯ ಪ್ರಕಾಶದಾಚೆ ದಟ್ಟವಾಗಿ ಕವಿದಿದ್ದ ಕತ್ತಲನ್ನೂ, ಬೆಂಕಿ ಜ್ವಾಲೆಗೆ ದೂರದ ಮರಗಿಡಗಳ ಮೇಲೆ ಕುಣಿಯುತ್ತಿದ್ದ ನೆರಳುಗಳನ್ನೂ ಬೋರ ದಿಟ್ಟಿಸಿ ಭಯದಿಂದ ನೋಡುತ್ತಾ ಯಾರಾದರೂ ಕೇಳಿಸಿಕೊಂಡಾರೆಂದು ಪಿಸುದನಿಯಲ್ಲಿ ಇಲ್ಲಿಯವರೆಗೂ ನಡೆದ ಕತೆಯನ್ನೆಲ್ಲಾ ವಿವರಿಸಿದ.

ಎಲ್ಲ ಹೇಳಿದ ಮೇಲೆ ''ಬಹುಶಃ ಇದನ್ನೆಲ್ಲಾ ನಾನು ನಿಮಗೆ ಹೇಳಬಾರದಿತ್ತೋ ಏನೋ ದೊರೆ! ಯಾಕೆನ್ನಿ, ಎಲ್ಲಾ ನರಭಕ್ಷಕಗಳಿಗೂ ಒಂದೊಂದು ಭೂತದ ರಕ್ಷಣೆ ಇರುತ್ತದೆ. ಆ ಸ್ವಾಮಿ ಹುಲಿಯನ್ನು ರಕ್ಷಿಸುತ್ತಿರುವ ಭೂತ ಇದೆಯಲ್ಲಾ ಅದಕ್ಕೆ ಕಾಡಿನಲ್ಲಿ ಎಲ್ಲೆಲ್ಲೂ ಕಿವಿ ಇದೆ. ನಾವು ಎಷ್ಟೇ ಗುಟ್ಟಾಗಿ ಏನನ್ನು ಹೇಳಿದರೂ ಅದು ನಮ್ಮ ಮನಸ್ಸಿನಲ್ಲಿರಬೇಕಾದರೇ ಅದಕ್ಕೆ ಗೊತ್ತಾಗಿಹೋಗುತ್ತೆ. ಹಾಗಿದ್ದರೆ ಈಗಾಗಲೇ ನಾನು ನಿಮಗೆ ಹೇಳುತ್ತಿರುವುದೆಲ್ಲಾ ಆ ಸ್ವಾಮಿಗೆ ಗೊತ್ತಾಗಿರೋಲ್ಲ ಎನ್ನುತ್ತೀರಾ! ನನಗೆ ಖಂಡಿತ ಉಳಿಗಾಲವಿಲ್ಲ ಬಿಡಿ'' ಎಂದು ಭೀತ ಸ್ವರದಲ್ಲಿ ಉಸುರಿದ.

ಅವನ ಹಾಗೆ ಹೇಳಿ ಮುಗಿಸಿಲ್ಲ, ನಾವು ಬೆಂಕಿ ಮಾಡಿಕೊಂಡು ಕುಳಿತಿದ್ದ ಜಾಗದಿಂದ ಸುಮಾರು ಒಂದು ಫರ್ಲಾಂಗು ದೂರವಿರಬಹುದು, ಹುಲಿ ಭೀಕರವಾಗಿ ಕಾಡೆಲ್ಲ ನಡುಗುವಂತೆ ಘರ್ಜಿಸಿದ್ದು ಕೇಳಿಸಿತು. ''ಆ್ರ್ರ್ರಂಮ್, ಅಹ್‌ಹ್ ಹುಷ್ಹು''

೩



ಬೋರ ಹೆದರಿ ಸೆಡೆತುಕೊಂಡು ಸರಿದು ನನಗೆ ಒತ್ತಿ ಕುಳಿತ. ''ದೊರೆ, ಅದೇ ಭೂತ!, ನರಭಕ್ಷಕ!, ಬಾಳೆತೋಟದಲ್ಲಿದ್ದಾನಲ್ಲ ಆ ಸಾಧು! ನನ್ನ ಮಾತನ್ನೆಲ್ಲಾ ಗ್ಯಾರಂಟಿ ಕೇಳಿಸಿಕೊಂಡಿದ್ದಾನೆ. ಇನ್ನು ನನ್ನ ಗತಿ ಮುಗಿದಂತೆಯೇ ಸರಿ!'' ಎಂದು ಆರ್ತ ಸ್ವರದಲ್ಲಿ ಪಿಸುಗುಟ್ಟಿದ.

ಆ ಸನ್ನಿವೇಶದ ಮಹಿಮೆಯೋ ಏನೋ! ನನಗೂ ಒಂದುಸಾರಿ ಭಯ ಕಂಪನಗಳೆದ್ದು ಮೈ ಕೂದಲೆಲ್ಲ ನೆಟ್ಟಗಾದುವು. ಆದರೂ ಅವನ್ನೆಲ್ಲ ತೋರಗೊಡದೆ ''ಹುಚ್ಚ, ನಿನ್ನ ಮೂಢ ನಂಬಿಕೆಗಳನ್ನೆಲ್ಲಾ ನನ್ನೆದುರು ಬಿಚ್ಚಬೇಡ. ನಾನು ಹೊಡೆದಿರುವ ನರಭಕ್ಷಕಗಳೇನು ಒಂದೋ ಎರಡೋ? ಅಲ್ಲಿ ಕೂಗಿದ್ದೊಂದು ಕಾಡಿನ ಸಾಮಾನ್ಯ ಹುಲಿ. ಹೆಚ್ಚೆಂದರೆ ನರಭಕ್ಷಕ ಇರಬಹುದು. ಆದರೆ ಒಂದು ಮಾತ್ರ ತಿಳುಕೋ, ಹುಲಿ ಸ್ವಾಮಿಯಾಗುವುದೂ, ಪಿಶಾಚಿ, ಭೂತ ಎಲ್ಲ ನಂಬಬೇಡ''ಎಂದೆ.

ನನ್ನ ಕೈ ತಂತಾನೆ ಲೋಡು ಮಾಡಿ ತೊಡೆಯ ಮೇಲೆ ಇಟ್ಟುಕೊಂಡಿದ್ದ ೪೦೫ ರೈಫಲನ್ನು ಹಿಡಿದುಕೊಂಡಿತು. ಟಾರ್ಚ್ ತೆಗೆದುಕೊಂಡು ಹುಲಿ ಕೂಗಿದ ದಿಕ್ಕಿನ ಕಡೆಗೆ ದೀಪ ಬಿಟ್ಟೆ.

ಮೌನವಾಗಿ ಪ್ರತೀಕ್ಷೆಯಲ್ಲಿ ಕಾದೆವು. ಎಷ್ಟೋ ಹೊತ್ತಾದ ಮೇಲೆ ಮತ್ತೊಂದು ಸಾರಿ ಹಳ್ಳದ ನಮ್ಮಕಡೆ ದಂಡೆಯಿಂದ ಹುಲಿ ಘರ್ಜಿಸಿತು. ಅದು ಹಳ್ಳದ ನೀರನ್ನು ದಾಟಿಕೊಂಡು ನಮ್ಮನ್ನು ಬಳಸಿ ಹಿಂಭಾಗದಲ್ಲೆಲ್ಲೋ ಬಂದಿತ್ತು. ನಾನು ಉರಿಯುತ್ತಿದ್ದ ಬೆಂಕಿಗೆ ಇನ್ನೊಂದು ಸೌದೆ ತುಂಡನ್ನು ಹಾಕುತ್ತಾ ನಾವು ಸಂಗ್ರಹಿಸಿದ್ದ ಸೌದೆ ಬೆಳಗಿನವರೆಗೂ ಸಾಕಾಗುತ್ತೇನಪ್ಪಾ ಎಂದು ಚಿಂತಿಸಿದೆ.

ಹುಲಿ ಎರಡನೆ ಸಾರಿ ಘರ್ಜಿಸಿದ ಮೇಲೆ ತುಂಬ ಹೊತ್ತು ಸದ್ದಿರಲಿಲ್ಲ. ಸ್ಥಬ್ದವಾದ ಕಾಡು, ಹೆಪ್ಪುಗಟ್ಟಿದ ಮೌನ, ನಮ್ಮಲ್ಲಿ ಒಂದು ರೀತಿಯ ಕಳವಳ ಹುಟ್ಟಿಸಿತು. ಹುಲಿ ಮತ್ತೊಮ್ಮೆ ಘರ್ಜಿಸಬಾರದೆ ಎಂದೆನ್ನಿಸಿತು. ಕೊನೇ ಪಕ್ಷ ಅದೆಲ್ಲಿದೆ, ಅದರ ಚಲನವಲನಗಳೇನು ಎನ್ನುವುದನ್ನಾದರೂ ಅದರಿಂದ ತಿಳಿಯಬಹುದಿತ್ತು. ಇಷ್ಟೊಂದು ಹೆಪ್ಪುಗಟ್ಟಿದ ಮೌನದಲ್ಲಿ ಹುಲಿ ನಮ್ಮ ಬೆನ್ನ ಹಿಂದೆಯೇ ಇದ್ದರೂ ಇರಬಹುದು, ಇಲ್ಲವೇ ಮೈಲು ದೂರದಲ್ಲಿ ಇದ್ದರೂ ಇರಬಹುದು. ತಿಳಿಯುವುದೆಂತು?

ಕಾಡಿನಲ್ಲಿ ಸಾಧಾರಣವಾಗಿ ಆಗೀಗ ಕೇಳುವ ತರಗೆಲೆಗಳ ಚರಚರ ಸದ್ದು ನಮ್ಮ ಬೆಂಕಿ ಬೆಳಕಿನಾಚೆಯಿಂದ ಕೊಂಚ ದೂರದಲ್ಲೇ ಕೇಳಿದಂತಾಯ್ತು. ನರಭಕ್ಷಕ ನಮ್ಮ ಸುತ್ತ ನಿಧಾನವಾಗಿ ವೃತ್ತಾಕಾರವಾಗಿ ಸುತ್ತಿಸುತ್ತಿ ಬರುತ್ತಾ ಹತ್ತಿರ ಹತ್ತಿರವಾಗುತ್ತಿರುವ, ನಮ್ಮಮೇಲೆ ನೆಗೆಯುವಷ್ಟು ಹತ್ತಿರವಾಗುತ್ತಿರುವ ಭಯಾನಕ ಕಲ್ಪನೆಗಳು ಮನಸ್ಸಿನಲ್ಲೇ ಮಿಂಚಿದುವು.

ಚಂಗನೆ ಎಲ್ಲಿಂದಲಾದರೂ ಕತ್ತಲ ಗರ್ಭದಿಂದ ಪ್ರತ್ಯಕ್ಷವಾದಂತೆ ಮೈಮೇಲೆ ನೆಗೆಯುವ ನರಭಕ್ಷಕನನ್ನು ನಿರೀಕ್ಷಿಸುತ್ತ ಸಿದ್ಧನಾಗಿ ನಾನು ಅತ್ತಿತ್ತ ನೋಡಿದೆ. ಬೋರ ಹೆದರಿ ಹಿಪ್ಪೆಯಾಗಿ "ಅದು ಮುಯ್ಯಿ ತೀರಿಸ ಹೊರಟಿದೆ. ನಾವಿಬ್ಬರೂ ನಾಳೆ ಹೊತ್ತು ಹುಟ್ಟುವುದನ್ನು ನೋಡುವುದಿಲ್ಲ!" ಎಂದು ತನಗೆ ತಾನೆ ಎಂಬಂತೆ ಪಿಸುಗುಟ್ಟಿದ.

ಅವನ ವರ್ತನೆ ನನ್ನಲ್ಲೂ ಭಯ ಪ್ರಚೋದಿಸುತ್ತಿರುವುದನ್ನು ನೋಡಿ ನನಗೆ ಸಿಟ್ಟುಬಂದು "ನೀನು ಧೈರ್ಯವಾಗಿ ಬಾಯಿ ಬಿಗಿ ಹಿಡಿದು ಕೂರುತ್ತೀಯೋ ಇಲ್ಲವೋ" ಎಂದು ಕಿರುಚಿದಷ್ಟು ಗಟ್ಟಿಯಾಗಿ ಅವನತ್ತ ಒದರಿದೆ. ಆದರೆ ಅವನ ಅಸಂಬದ್ಧ ತೊದಲಾಟಕ್ಕೆ ನನ್ನ ಗದರಿಕೆ ತಡೆಹಾಕಲಿಲ್ಲ. ಅಷ್ಟೊಂದು ಅವನು ಹೆದರಿದ್ದ.

ಒಂದು ಕಡವೆ ಹಳ್ಳದ ತಡಿಯಲ್ಲಿ "ವ್ಯಾಂಕ್ ಡೋಂಕ್ ಡೋಂಕ್" ಎಂದು ಕೆಲಕೆಲವು ಕ್ಷಣಗಳ ಅಂತರದಲ್ಲಿ ಹಲವುಬಾರಿ ಕೂಗಿತು. ಬಹುಶಃ ಅದಕ್ಕೆ ನರಭಕ್ಷಕ ಕಂಡಿರಬೇಕು! ಇಲ್ಲವೇ ನರಭಕ್ಷಕನ ವಾಸನೆ ಹಿಡಿದಿರಬೇಕು. ಕೆಲವು ನಿಮಿಷಗಳ ತರುವಾಯ ಒಂದು ಆನೆ ಸಲಗ "ಕಿರ್ರ್ರ್ರ್ರ್" ಎಂದು ಹಲವಾರು ಬಾರಿ ಅಸಹನೆ ಕೋಪಗಳಿಂದ

ಕೂಗಿತು. ಆನೆ ಮರಿಗಳು ಕ್ವೀಂಕ್, ಕ್ವೀಂಕ್, ಕ್ವೀಂಕ್,'' ಎಂದು ಕೂಗುತ್ತಾ ಅವುಗಳ ತಾಯಂದಿರ ಹೊಟ್ಟೆಯಡಿ ಹುದುಗುವ ಸದ್ದು ಕೇಳಿತು.

ಹುಲಿ ನಮ್ಮ ಸುತ್ತ ವೃತ್ತಾಕಾರವಾಗಿ ಸುತ್ತಿಬರುತ್ತಿರುವುದರಲ್ಲಿ ಅನುಮಾನವೇ ಇರಲಿಲ್ಲ. ನಮ್ಮ ಎದುರು ಧಗಧಗ ಉರಿಯುತ್ತಿದ್ದ ಬೆಂಕಿಯೇ ಅದು ನಮ್ಮ ಮೇಲೆ ನೆಗೆಯದಂತೆ ತಡೆದಿದ್ದಿರಬಹುದು.

ಕೆಲವು ಕ್ಷಣಗಳಲ್ಲೇ ಕಡವೆ ಕೂಗಿದ ದಿಕ್ಕಿನಿಂದ ಅದರ ಆರ್ತ ಚೀರಾಟ ಕೇಳಿಸಿತು. ಬಹುಶಃ ಹುಲಿಯ ಸುಳಿವನ್ನರಿತೂ ಆ ಕಡವೆ ತಕ್ಕಷ್ಟು ಮುಂಜಾಗ್ರತೆ ವಹಿಸಲಿಲ್ಲೆಂದು ಕಾಣುತ್ತದೆ. ಹುಲಿ ಬೆಂಕಿ ಪಕ್ಕ ಕುಳಿತಿದ್ದ ನಮ್ಮನ್ನು ಬಿಟ್ಟು ಕಡವೆ ಹಿಡಿದಿದೆ!! ಸಾಯುವ ಕಡವೆಯ ಚೀರಾಟ ನಿಲ್ಲುತ್ತಿದ್ದಂತೆಯೇ ಆನೆಗಳ ಗುಂಪು ಕಾಡಿನಲ್ಲಿ ನಿಧಾನವಾಗಿ ದೂರ ಸರಿಯುವ ಸದ್ದು! ಅನಂತರ ಮಧ್ಯರಾತ್ರಿ ಕಳೆಯುವವರೆಗೂ ಅಳೆದೆಯವರಿಗೆ ಹುಚ್ಚು ಹಿಡಿಸುವಷ್ಟು ಕಳವಳಕಾರಕ ಮೌನ. ಅಷ್ಟರಲ್ಲಿ ಚಂದ್ರೋದಯವಾಯ್ತು. ಬೆಳುದಿಂಗಳು ಕಗ್ಗತ್ತಲ ಗಭೀರತೆಯನ್ನು ಕೆಲಮಟ್ಟಿಗಾದರೂ ತಗ್ಗಿಸಿತು. ಕಾಡಿನ ಎಲೆಗಳ ದಟ್ಟಣೆಯ ನಡುವೆಯೇ ಜಿನುಗಿ ಇಳಿಯುವ ಬೆಳುದಿಂಗಳಿನಿಂದ ಅತ್ತಿತ್ತ ಇರುವ ಕಾಡು ಅಸ್ಪಷ್ಟವಾಗಿಯಾದರೂ ಕಾಣುತ್ತಿತ್ತು. ನನಗೂ ಬೋರನಿಗೂ ಮನಸ್ಸಿನ ಕಳವಳ ಸಾಕಷ್ಟು ತಗ್ಗಿತು.

ಆದರೆ ಅವನಿಗೆ ಕಾವಲಿನ ಜವಾಬ್ದಾರಿ ವಹಿಸಿ ನಾನು ಕೊಂಚ ತೂಕಡಿಸಬಹುದಾದ ಪರಿಸ್ಥಿತಿಯಲ್ಲಂತೂ ಅವನಿರಲಿಲ್ಲ. ನಾನು ರಾತ್ರಿ ನಿದ್ದೆಗೆಡಬೇಕಾಗಿದ್ದು ಅನಿವಾರ್ಯವಾಗಿತ್ತು. ಸನಿಹದಲ್ಲೇ ಬಂಡೆಗಳ ಮೇಲೆ ನೆಗೆನೆಗೆದದು ಧುಮುಕುತ್ತಾ ಹರಿಯುತ್ತಿದ್ದ ಹಳ್ಳದ ನೀರಿನ ಜೋಗುಳಕ್ಕೆ ತೂಗುತ್ತಿದ್ದ ತಲೆಯನ್ನು ತಹಬಂದಿಗೆ ತಂದುಕೊಂಡು ಎಚ್ಚರಿರಲು ಹೆಣಗುತ್ತಾ ಇರಬೇಕಾದರೆ ಮುಂಜಾವಿನ ಸೂಚನೆಗಳು ಕಾಣತೊಡಗಿದುವು. ದೂರದಲ್ಲೆಲ್ಲೋ ಒಂದು ಕಾಡುಕೋಳಿ ಹುಂಜ ಕೂಗಿ ಅನಂತರ ಇನ್ನೂ ಬೆಳಕು ಹರಿದಿಲ್ಲವೆದು ಅರಿವಾಯ್ತೋ ಏನೋ, ಸುಮ್ಮನಾಯ್ತು.

ಕೊಂಚ ಹೊತ್ತಿನೊಳಗೆ ಪೂರ್ವ ದಿಕ್ಕು ಕೊಂಚ ಬೆಳ್ಳಗಾಯ್ತು. ನವಿಲುಗಳು ಮ್ಯಾವೋ ಮ್ಯಾವೋ ಎಂದು ಕೂಗಿದುವು. ತೇ ತೆಕೋ ತೆಕ್ ತೆಕ್ ಎಂದು ಸರಣಿಯಾಗಿ ಕಾಡುಕೋಳಿಗಳು ಅವುಗಳೊಡಗೂಡಿ ಕೂಗತೊಡಗಿದುವು. ಚಿಟ್ಟು ಕೋಳಿಗಳು ತಾರಸ್ವರದಲ್ಲಿ ಕ್ಕೆಕ್ಕೆಕ್ಕೇ ಎಂದು ನಿಲ್ಲಿಸದೆ ನಿರರ್ಗಳವಾಗಿ ಕೂಗಲಾರಂಭಿಸಿದುವು. ತರತರದ ಹಕ್ಕಿಗಳೂ ಪಿಕಳಾರಗಳೂ ಇದ್ದಕ್ಕಿದ್ದಹಾಗೆ ಕೂಗಿಕೊಂಡು ಹಾರಾಡಲಾರಂಭಿಸಿದುವು.

ಪೂರ್ವದಿಕ್ಕಿನ ಆಕಾಶದಲ್ಲಿ ನೂರಾರು ಬಣ್ಣಗಳ ಮೆರವಣಿಗೆ ಪ್ರಾರಂಭವಾಯ್ತು. ಸೂರ್ಯ ದಿಗಂತಕ್ಕೆ ಹತ್ತಿರಾದಂತೆ ಮಂದಕಾಂತಿಯ ಆಕಾಶ ನೇರಿಳೆ ಬಣ್ಣಕ್ಕೆ ತಿರುಗಿತು. ಕೊಂಚ ಹೊತ್ತಿನಲ್ಲಿ ಅದು ಕಿತ್ತಳೆ ಬಣ್ಣಕ್ಕೆ ತಿರುಗುತ್ತ ಬೆಂಕಿ ಜ್ವಾಲೆಯಾಯ್ತು ಅದರ ಮೇಲಿನ ನೀಲಾಕಾಶ ದಟ್ಟ ಹಸಿರು ಬಣ್ಣಕ್ಕೆ ತಿರುಗಿತು. ದಿಗಂತ ರಕ್ತಗೆಂಪು ಬಣ್ಣಕ್ಕೆ

ತಿರುಗುತ್ತಿದ್ದಂತೆ ಹೆಚ್ಚಿದ ಬೆಳಕಿನಲ್ಲಿ ಮಂಜು ಅಲ್ಲಲ್ಲಿ ಕವಿದಿದ್ದ ಗಿರಿ ಪರ್ವತಗಳ ಸೀಮಾ ರೇಖೆ ಪ್ರತ್ಯಕ್ಷವಾಯ್ತು. ಇದೆಲ್ಲ ಹಲವಾರು ನಿಮಿಷಗಳಷ್ಟೆ. ಅನಂತರ ಬೆಂಕಿ ಉಂಡೆಯಂತೆ ಸೂರ್ಯ ದಿಗಂತದ ಅಂಚಿನಿಂದ ಮೆಲ್ಲಗೆ ಇಣುಕಿದ.

ಪೃಥ್ವಿಯ ಪರಿಭ್ರಮಣದಲ್ಲಿ ಮತ್ತೊಂದು ದಿನ ಉದಿಸಿತು!

ನನಗೆ ತೂಕಡಿಕೆ ಬರಲು ಶುರುವಾಗಿತ್ತು. ಆ ಮಾವಿನ ಮರದ ಕೆಳಗೆ ನರಭಕ್ಷಕ ಅಡ್ಡಾಡುವ ತಾಣದಲ್ಲಿ ನಿಸ್ಸಹಾಯಕರಂತೆ ರಾತ್ರಿ ಕಳೆಯಲು ನಿರ್ಧರಿಸಿದ ನನ್ನ ಬೇಜವಾಬ್ದಾರಿತನಕ್ಕೆ ನನ್ನ ಮೇಲೇ ನನಗೆ ಬೇಸರವಾಯ್ತು. ಆದರೆ ಯಾರಿಗೆ ಗೊತ್ತಿತ್ತು ಬೋರ ಅಂಥದೊಂದು ರಹಸ್ಯಮಯವಾದ ಕತೆ ಹೇಳಿ ತನ್ನ ಅಂಧಶ್ರದ್ಧೆಯಿಂದ ನನಗೂ ದಿಗಿಲಿಕ್ಕಿಸುತ್ತಾನೆ ಎಂದು? ಯಾರಿಗೆ ಗೊತ್ತಿತ್ತು ಅವನು ಕತೆ ಹೇಳಿ, ಕತೆ ಹೇಳಿದ್ದೇ ಮಹಾಪರಾಧವೇನೋ ಎಂದು ಕಳವಳ ಪಡುತ್ತಿರಬೇಕಾದ ಸಮಯಕ್ಕೆ ಸರಿಯಾಗಿ ನರಭಕ್ಷಕ ಘರ್ಜಿಸುತ್ತದೆಂದು? ವಿಚಿತ್ರವೆಂದರೆ ನನಗೆ ಆ ನರಭಕ್ಷಕ ಹೆಬ್ಬುಲಿಯ ಮೇಲೆ ಚೂರೂ ಕೋಪವಿರಲಿಲ್ಲ. ಆದರೆ ಆ ಮುಗ್ಧ ಗಿರಿಜನರ ಅಂಧಶ್ರದ್ಧೆಯನ್ನೇ ಉಪಯೋಗಿಸಿಕೊಂಡು ಅವರನ್ನು ಹೆದರಿಸಿ ಸುಲಿಯಲೆತ್ನಿಸುತ್ತಿರುವ ಖೇಡಿ ಸಾಧು ಬಗ್ಗೆ ಮಾತ್ರ ಸಿಟ್ಟು ಬಂದಿತ್ತು. ಆ ಅಯೋಗ್ಯನನ್ನು ಅವನ ಪರ್ಣಶಾಲೆಯ ಹತ್ತಿರವೇ ಸಂಧಿಸಿ ನೀನು ಅದೇನು ಕಡಿಯುತ್ತೀಯೋ ನೋಡೋಣ ಎಂದು ಸವಾಲು ಹಾಕಿ ಬರಬೇಕೆಂದು ನಿರ್ಧರಿಸಿದೆ.

ಒಂದಷ್ಟು ಟೀ ಮಾಡಿ ಕುಡಿಯುತ್ತ, ಸ್ಟಾಸಿಲ್ ಉದಕಮಂಡಲದಲ್ಲಿ ಕಟ್ಟಿಕೊಟ್ಟಿದ್ದ ಸ್ಯಾಂಡ್ವಿಚ್‌ಗಳನ್ನು ತಿನ್ನುತ್ತ ಬೋರನಿಗೆ ಸ್ಪಷ್ಟವಾಗಿ ಆ ಸಾಧು ಹೇಳಿರುವ ಬೊಗಳೆಗಳನ್ನೆಲ್ಲಾ ನಂಬಿ ಹೆದರಿರುವ ನೀವೆಲ್ಲಾ ಮೂರ್ಖರೆಂದೂ, ಅವನೆಂಥ ಲಫಂಗನೆಂಬುದನ್ನು ಒಂದೆರಡು ದಿನದಲ್ಲೇ ತೋರಿಸಿ ಕೊಡುತ್ತೇನೆಂದೂ ಕೋಪದಿಂದ ಹೇಳಿದೆ. ಅದಕ್ಕೆ ಅವನು ಇನ್ನಷ್ಟು ಖಿನ್ನನಾಗಿ "ದೊರೆ, ಇಲ್ಲಿಯವರೆಗೂ ನನಗೆ ಮಾತ್ರ ಆ ದೆವ್ವದ ಹುಲಿಯಿಂದ ಪ್ರಾಣಾಪಾಯ ಇತ್ತು. ಈಗ ಇಂಥ ಮಾತಾಡಿ ನೀವು ಇಬ್ಬರ ತಲೆಗೂ ತಂದಿದ್ದೀರಿ. ಇನ್ನು ನೀವೂ ಉಳಿಯುವ ಸಂಭವವಿಲ್ಲ" ಎಂದ.

ನನ್ನ ಕೋಪ ಇನ್ನೂ ಮಿಗಿಲಾಯ್ತು.

ನಾನು ಆ ಸಾಧು ಹುಲ್ಲುಗುಡಿಸಿಲು ಎದುರು ನಿಂತಾಗ ಬೆಳಗ್ಗೆ ಏಳು ಗಂಟೆ. "ಬಾಗಿಲು ತೆಗೆಯೋ ಏ ದೆವ್ವದ ಹುಲಿಯೇ! ರಾತ್ರಿಯೆಲ್ಲಾ ಅರಚಾಡಿ ಬಂದು ನಿದ್ದೆ ಮಾಡುತ್ತಿದ್ದೀಯಾ" ಎಂದು ಅದೇ ಕೋಪದಲ್ಲಿ ಅಬ್ಬರಿಸಿ ಕೂಗಿದೆ. ನನ್ನ ಆಗಮನವನ್ನು ನಿರೀಕ್ಷಿಸಿದ್ದವನಂತೆ ಕಾವಿಧಾರಿಯಾದ ಸಾಧು ಬಾಗಿಲು ತೆರೆದು ಹೊರಬಂದ. ಕುತ್ತಿಗೆಯಲ್ಲಿ ಒಂದು ರುದ್ರಾಕ್ಷಿ ಸರ ಇತ್ತು. ನೀಳವಾದ ಗಡ್ಡ ಮೀಸೆಗಳ ಅವನ ಮುಖದಲ್ಲಿ ಬುದ್ಧಿವಂತಿಕೆ ಮತ್ತು ದೃಢ ನಿರ್ಧಾರ ಇದ್ದಂತಿತ್ತು.

ನನ್ನ ಗದರುವ ದನಿಗೆ ಪ್ರತಿಯಾಗಿ ಅವನು ಮಂದಹಾಸದೊಡನೆ ಶಾಂತ ಸ್ವರದಲ್ಲಿ

''ನಾನು ಈಗ ತಾನೆ ನಿದ್ದೆಯಿಂದ ಎದ್ದ ಬಿಳಿಯ ಮನುಷ್ಯನೆ. ನಿನ್ನ ಹಿಂದೆ ಅಡಗಿ ಕೊಂಡಿದ್ದಾನಲ್ಲ ಆ ಗುಳ್ಳೆ ನರಿಯಿಂದ ನಡೆದದ್ದನ್ನೆಲ್ಲಾ ಕೇಳಿ ತಿಳುಕೊಂಡು ನೀನು ಇಲ್ಲಿಗೆ ನಿನ್ನ ಪೌರುಷ ಪ್ರದರ್ಶನಕ್ಕೆ ಬಂದೇ ಬರುತ್ತೀಯ ಎಂದು ನಾನು ನಿರೀಕ್ಷಿಸಿದ್ದೆ. ನೀವಿಬ್ಬರೂ ಅಲ್ಲಿ ಬೆಂಕಿ ಮಾಡಿಕೊಂಡು ಚಳಿ ಕಾಯಿಸುತ್ತ ಕುಳಿತಿದ್ದನ್ನು ನೋಡಿದೆ. ಇಬ್ಬರಲ್ಲಿ ಒಬ್ಬರ ರುಚಿ ನೋಡೋಣ ಅನ್ನಿಸಿತು! ಏನು ಮಾಡುವುದು ಅಲ್ಲಿ ಕೂಗಿದ ಕಡವೆ ಸುಲಭಕ್ಕೆ ಸಿಕ್ಕುವಂತಿದ್ದಾಗ ಬಿಡುವುದು ಹೇಗೆಂದು ಅದನ್ನೇ ಮುಗಿಸಿದೆ.'' ಎಂದ.

ಅವನ ಮಾತಿನಿಂದ ನಾನು ಅಪ್ರತಿಭನಾದೆ. ನಿನ್ನೆ ರಾತ್ರಿಯ ದುಃಸ್ವಪ್ನದಂಥ ನಾಟಕದಲ್ಲಿ ಇವನು ಹುಲಿಯ ಪಾತ್ರಧಾರ ಎನ್ನುವಂತೆಯೇ ಮಾತಾಡಿದ್ದ. ನನಗೆ ಇಲ್ಲೇನೋ ಕುತಂತ್ರ ಇದೆ ಎನ್ನಿಸಿತು. ಯಾವನೂ ಹುಲಿಯಾಗಿ ರೂಪಾಂತರ ಹೊಂದಿ ಮತ್ತೆ ಮನುಷ್ಯನಾಗುವುದರಂಥ ಹುಚ್ಚು ಬೊಗಳೆ ಮತ್ತೊಂದಿಲ್ಲ. ಆದರೆ ಇಂಥದೇ ಅಂಧಶ್ರದ್ಧೆಯ ಮಾತುಗಳನ್ನು ನಾನು ಇನ್ನೂ ಅನೇಕ ಕಾಡುಜನಗಳ ಬಾಯಲ್ಲಿ ಕೇಳಿದ್ದೆ. ಇಲ್ಲೊಬ್ಬ ಅದೆಲ್ಲ ನಿಜ ಎನ್ನುವಂತೆ ಮಾತಾಡುತ್ತಿದ್ದಾನೆ!

ಈ ಅಯೋಗ್ಯನ ಕಳ್ಳಾಟಗಳಿಗೆ ಸೊಪ್ಪು ಹಾಕಬಾರದೆಂದು ನಿರ್ಧರಿಸಿ ''ಲೋ ಕಂತ್ರಿ ಸ್ವಾಮಿ, ಇಲ್ಲಿ ಕೇಳು, ನೀನು ನಿನ್ನ ಬೊಗಳೆಗಳಿಂದ ಈ ಪಾಪದ ಇರ್ಲರನ್ನು ದಿಗಿಲಿಕ್ಕಿಸಿ ಸುಲಿಯಬಹುದು. ಸ್ವಾಮಿ ಅಂತ ನಿನ್ನನ್ನು ಪೂಜ್ಯತೆಯಿಂದ ನೋಡಿ ಸತ್ಕರಿಸಿದ್ದಕ್ಕೆ ಇಂಥ ಪರಮ ನೀಚ ಪ್ರತ್ಯುಪಕಾರ ಮಾಡುತ್ತಿದ್ದೀಯ. ನಿನ್ನೆ ರಾತ್ರಿ ಘರ್ಜಿಸಿತಲ್ಲ ಆ ಹುಲಿ ನಿನಗಿಂತ ಸಾವಿರ ಪಾಲಿಗೆ ಮಾನ ಮರ್ಯಾದೆ ಇರುವ ಗೌರವಸ್ಥ ಪ್ರಾಣಿ. ನಿನ್ನಹಾಗೆ ಕಳ್ಳಾಟ ನಡೆಸುತ್ತಾ ಮುಗ್ಧರಿಗೆ ಮೋಸ ಮಾಡಿ ಹೊಟ್ಟೆ ಹೊರೆಯುತ್ತಿಲ್ಲ. ನೀನೊಬ್ಬ ಕಂತ್ರಿ ನಾಯಿ, ಸುಳ್ಳ, ವಂಚಕ, ಧೂರ್ತ್'' ಎಂದು ಕೋಪದಿಂ ಭುಸುಗುಟ್ಟಿದೆ.

ಅವನು ಅಪಹಾಸ್ಯದ ನಗೆ ನಗುತ್ತಾ ''ಯಾಕೆ ಬೇಟೆಗಾರನಿಗೆ ಬಹಳ ಕೋಪ ಬಂದಹಾಗೆ ಕಾಣುತ್ತಿದೆಯಲ್ಲಾ! ನಿನ್ನ ನಿಸ್ಸಹಾಯಕತೆಯ ಅರಿವಾಗಿದೆ ಎಂದು ಕಾಣುತ್ತದೆ.''ಎಂದ.

ಅನಂತರ ಅವನ ಮುಖದ ಮಂದಹಾಸ ಇದ್ದಕ್ಕಿದ್ದಂತೆ ಮಾಯವಾಗಿ ಮುಖ ಗಂಟಿಕ್ಕಿತು. ''ಕರ್ಕಶ ಧ್ವನಿಯಲ್ಲಿ. ನಿನ್ನ ಕೆಲಸ ನೀನು ನೋಡು. ನಿನಗೆ ಸಂಬಂಧಪಡದಿದ್ದಕ್ಕೆಲ್ಲ ಮೂಗು ತೂರಿಸಿ ತಲೆಹರಟೆ ಮಾಡಬೇಡ. ಅರ್ಥವಾಯ್ತೋ ನಾನು ಹೇಳಿದ್ದು ? ಅರ್ಥ ಮಾಡಿಕೊಳ್ಳದಿದ್ದರೆ ಅದಕ್ಕೆ ನೀನು ತೆರಬೇಕಾದ ಬೆಲೆ ಅಪಾರ. ಸ್ಪಷ್ಟವಾಗಿ ಹೇಳುತ್ತಿದ್ದೇನೆ ಕೇಳು'' ಎಂದು ಹುಲಿ ಗುರುಗುಟ್ಟಿದಂತೆ ಗುರುಗುಟ್ಟಿದ.

ಈಗಿಂದೀಗಲೆ ನುಗ್ಗಿ ಮುಷ್ಟಿಯಿಂದ ಅವನ ಮೋರೆಗೆ ಅಪ್ಪಳಿಸಬೇಕೆಂಬ ಅದಮ್ಯ ಒತ್ತಡವನ್ನು ಹೇಗೋ ತಡೆದುಕೊಂಡೆ. ನಾನೊಬ್ಬ ಒಳ್ಳೆಯ ಮರ್ಯಾದಸ್ತನೆಂದು ಇರ್ಲರೆಲ್ಲರೂ ನನ್ನ ಬಳಿ ಸಲುಗೆಯಿಂದ ಇದ್ದರು. ಇಲ್ಲಿ ರೌಡಿಯಂತೆ ಈಗ

ಹೊಡೆದಾಟಕ್ಕಿಳಿದರೆ ನನ್ನ ಮರ್ಯಾದೆಗೇ ಕುಂದೆಂದು ಬಗೆದು " ಲೋ ಬೊಗಳೆ ಸಾಧು! ನೀನು ಹುಲಿ ವೇಷ ಹಾಕುತ್ತೀಯಾ? ಒಂದು ಮಾತ್ರ ತಿಳಿದುಕೋ ಹುಲಿಯಾಗಿ ನೀನು ನನ್ನೆದುರು ಬಂದ ಕ್ಷಣ ನೀನು ಸತ್ತು ಹೆಣವಾಗುತ್ತೀಯ. ಇದು ಬರೀ ಹೆದರಿಕೆ ಮಾತಲ್ಲ. ನಾನು ಇಲ್ಲಿಗೆ ಬಂದಿರುವುದೇ ಅದಕ್ಕೆ. ನನ್ನ ಕೆಲಸವೇ ಅದು"

"ಹುಲಿ ಹೆಣವಾಗುತ್ತದೋ! ನೀನು ಹೆಣವಾಗುತ್ತೀಯೋ ಕಾದು ನೋಡು" ಎಂದು ನಾನು ಮಾತು ಮುಗಿಸುತ್ತಿದ್ದಂತೆಯೇ ಉತ್ತರಿಸಿ ಗುಡಿಸಿಲು ಕಡೆ ತಿರುಗಿ ಬಾಗಿಲು ಮುಚ್ಚಿಕೊಂಡ ಸಾಧು.

ನಾನು ಹಿಂದಕ್ಕೆ ತಿರುಗಿದೆ. ದಾರಿಯಲ್ಲಿ ಅವನ ಗುಡಿಸಿಲಿನ ಬಳಿಯೇ ಹುಲಿಯ ಹೊಚ್ಚ ಹೊಸ ಹೆಜ್ಜೆ ಗುರುತುಗಳು ಬಿದ್ದಿರುವುದನ್ನು ಬೋರ ನನಗೆ ತೋರಿಸಿದ. ನಾನು ನೆಟ್ಟಗೆ ಕಾಡುಮಾವಿನಮರದ ಬುಡಕ್ಕೆ ಬಂದು ನನ್ನ ಬೆಡ್ಡಿಂಗಿನ ಕಟ್ಟು ಬಿಚ್ಚಿ ಕೊಂಚ ಹೊತ್ತು ನಿದ್ದೆ ಮಾಡಲು ನಿರ್ಧರಿಸಿದೆ. ಸರಿಯಾಗಿ ನಿದ್ದೆಯೇ ಬರಲಿಲ್ಲ. ಸಾಧುವಿನ ತಲೆಯ ಹುಲಿ ಕನಸಿನಲ್ಲಿ ಸುಳಿದಾಡಿತು.

ಮಧ್ಯಾನ್ಹದ ಹೊತ್ತಿಗೆ ಎಚ್ಚರಾಯ್ತು. ಎದ್ದು ನನ್ನಬಳಿ ಮಿಕ್ಕಿದ್ದ ಹಳೇ ಚಪಾತಿಗಳನ್ನೂ ಡಬ್ಬಿ ಒಡೆದು ಸಾರ್ಡಿನ್ ಮೀನನ್ನೂ ತಿಂದೆ. ಟೀಗೆಂದು ಬಿಸಿನೀರು ಕಾಯಲು ಇಟ್ಟು ಮಾವಿನ ಮರಕ್ಕೆ ಒರಗಿ ಹಾಗೇ ಯೋಚಿಸಿದೆ.

ಆ ಸಾಧು ಬಗ್ಗೆ ಇವರೆಲ್ಲಾ ಹೇಳಿದ್ದನ್ನೂ, ಆ ಸಾಧು ಹೇಳಿದ್ದನ್ನೂ ನಾನು ನಂಬುವುದಿರಲಿ ಗಣನೆಗೂ ತಗೊಂಡಿರಲಿಲ್ಲ. ಸಾಧು, ನಾನೂ ಬೋರನೂ ಮಾವಿನ ಮರದ ಕೆಳಗೆ ಮಾತಾಡುತ್ತಾ ಕುಳಿತಿದ್ದನ್ನು ಅವನು ಹುಲಿ ರೂಪದಲ್ಲಿ ನೋಡಿದೆನೆಂದೂ, ಸುಲಭದಲ್ಲಿ ಆ ಕಡವೆ ಸಿಕ್ಕಿಬೀಳದಿದ್ದರೆ ನಮ್ಮಿಬ್ಬರಲ್ಲಿ ಒಬ್ಬನನ್ನು ಮುಗಿಸಬೇಕೆಂದಿದ್ದೆನೆಂದೂ ಹೇಳಿದನಲ್ಲಾ! ಹೇಗೆ ಈ ಮುದಿ ಕುತಂತ್ರಿಗೆ ಈ ವಿಷಯ ಗೊತ್ತಾಯ್ತು? ಅವನೇನು ನಿಜಕ್ಕೂ ಹುಲಿಯಾಗಿ ಬರಲು ಸಾಧ್ಯವೆ? ಈ ಪ್ರಶ್ನೆಗೆ ಮೂರು ಸಾಧ್ಯತೆಗಳು ಹೊಳೆದುವು. ಮೊದಲನೆಯದು ಅವನಿಗೆ ನಿನ್ನೆ ನಡೆದಿದ್ದನ್ನೆಲ್ಲಾ ಯಾರೋ ಹೇಳಿರಬೇಕು. ಇಲ್ಲಾ ಅವನೇ ಯಾರಿಗೂ ಗೊತ್ತಾಗದಂತೆ ಕದ್ದು ಬಂದು ನಾವು ಬೆಂಕಿ ಬಳಿ ಕುಳಿತು ಮಾತಾಡುತ್ತಿದ್ದುದನ್ನೂ, ಆಗ ಹುಲಿ ಘರ್ಜಿಸಿದ್ದನ್ನೂ, ಹುಲಿ ಹಿಡಿದ ಕಡವೆಯ ಆರ್ತನಾದವನ್ನೂ ಕೇಳಿಸಿ ಕೊಂಡಿರಬೇಕು. ಮೂರನೆಯದು ಎಂದೆಂದೂ ಸಾಧ್ಯವಿಲ್ಲದ, ಹುಲಿ ಸಾಧುವಿಗೆ ವಶವಾಗಿ ಗೂಢಚರ್ಯೆ ಮಾಡುವ ಸಾಧ್ಯತೆ.

ಯಾರೂ ಸಾಧುವಿಗೆ ಅಲ್ಲಿ ನಡೆದಿದ್ದನ್ನು ಕೇಳಿಸಿಕೊಂಡು ವರದಿ ಮಾಡಲು ಸಾಧ್ಯವೇ ಇರಲಿಲ್ಲ. ಏಕೆಂದರೆ ನರಭಕ್ಷಕ ಘರ್ಜಿಸುತ್ತಾ ತಿರುಗುತ್ತಿರಬೇಕಾದರೆ ಜೀವದ ಆಸೆ ಬಿಟ್ಟ ಯಾವನಾದರೂ ಮೂರ್ಖ ಅಲ್ಲಿಗೆ ರಾತ್ರಿ ಕದ್ದು ಬರುವ ಧೈರ್ಯ ಮಾಡಿಯಾನು.

ಇದಕ್ಕಿರುವ ಸರಳ ಸಾಮಾನ್ಯ ಉತ್ತರ ಎಂದರೆ ಸಾಧುವೇ ರಾತ್ರಿ ಕದ್ದು ಬಂದಿದ್ದಾನೆ.

ನಾವು ಕೇಳಿದ್ದೆಲ್ಲವನ್ನೂ ಅವನೂ ಕೇಳಿದ್ದಾನೆ. ನಾವು ಏನೇನು ನಡೆಯಿತು ಎಂದು ಸದ್ದಿನಿಂದಲೇ ಕೇಳಿ ಊಹಿಸಿದೆವೋ ಹಾಗೇ ಅವನೂ ಊಹಿಸಿ ತಾನೇ ಹುಲಿ ರೂಪದಲ್ಲಿ ತಿರುಗುತ್ತಿದ್ದೆ ಎಂದು ನಂಬಿಸಲು ಬೊಗಳೆ ಬಿಟ್ಟಿದ್ದಾನೆ. ಆದರೆ ಆ ರಾತ್ರಿಯಲ್ಲಿ ನರಭಕ್ಷಕ ಗುರುಗುಟ್ಟುತ್ತಾ ನಮ್ಮನ್ನು ಸುತ್ತಿಬರುತ್ತಿರಬೇಕಾದರೆ, ಅಲ್ಲಿ ಕದ್ದು ಕುಳಿತು ಗೂಢಚರ್ಯೆ ನಡೆಸುವುದಕ್ಕೆ ವಿಪರೀತ ಧೈರ್ಯ ಬೇಕು. ಅಳ್ಳೆದೆಯ ಸಾಧಾರಣರಿಗಂತೂ ಸಾಧ್ಯವೇ ಇಲ್ಲ.

ನನ್ನ ಸರಳ ಚಿಂತನೆಗೆ ಹೊಳೆದ ಈ ಉತ್ತರವೇ ಸರಿಯಾದುದೆನ್ನಿಸಿತು. ಈ ಸಾಧು ಒಬ್ಬ ಅವಕಾಶವಾದಿ, ಆದರೆ ಮಹಾ ಕುತಂತ್ರಿ ಮತ್ತು ಧೈರ್ಯಸ್ಥ. ಅವನು ಬಂದಾಗಲೇ ಅಲ್ಲಿಗೆ ಆಗಮಿಸಿದ ಈ ಹೆಬ್ಬುಲಿ ಒದಗಿಸಿದ ಅವಕಾಶವನ್ನು ಅದ್ಭುತವಾಗಿ ತನ್ನ ಏಳಿಗೆಗೆ ಉಪಯೋಗಿಸಿದ್ದಾನೆ. ಮುಗ್ಧ ಇರ್ಲಾಗಳ ಅಂಧಶ್ರದ್ಧೆಯನ್ನರಿತು ಹುಲಿಯ ನಡವಳಿಕೆಗೂ ತನ್ನ ನಡವಳಿಕೆಗಳಿಗೂ ಅವರೇ ಸಂಬಂಧ ಕಲ್ಪಿಸಿಕೊಳ್ಳುವಂತೆ ನಡೆದುಕೊಂಡು ಅಲ್ಲಿ ಬಿಟ್ಟಿ ಊಟ, ಇರಲು ವಸತಿ, ಜೀವನ ಪರ್ಯಂತ ಸುಲಭವಾಗಿ ದೊರೆಯಲು ಏರ್ಪಾಡು ಮಾಡಿಕೊಂಡಿದ್ದಾನೆ. ಬಹಳ ಒಳ್ಳೆ ಯೋಜನೆಯೇ ಸರಿ!

ಈಗ ಆ ಹುಲಿ ನರಭಕ್ಷಕನಾಗಿ ಖಾಯಂ ವಸತಿ ಹೂಡಿ ಸಾಧುವೇ ಹುಲಿ, ಹುಲಿಯೇ ಸಾಧು ಎಂದುಸಹ ಇರ್ಲಾಗಳ ಅಂಧಶ್ರದ್ಧೆ ಬೆಳೆಯುವಂತೆ ಮಾಡಿದ್ದಾನೆ. ಕಾಂತ ಹುಲಿಗೆ ಗುಂಡು ಹೊಡೆದಾಗ ಸಾಧುವಿಗೂ ಕೈ ಗಾಯವಾಗಿದ್ದು ಕೇವಲ ಕಾಕತಾಳೀಯವಿರಬೇಕು. ಅಥವಾ ಸಾಧುವೇ ಸಣ್ಣ ಗಾಯ ಮಾಡಿಕೊಂಡು ಅಲ್ಲೆಲ್ಲಾ ರಕ್ತ ಸುರಿಸಿ ರಕ್ತಮಯವಾದ ಬ್ಯಾಂಡೇಜು ಕಟ್ಟಿಕೊಂಡು ಹುಲಿಗಾದ ಗಾಯ ತನಗೇ ಆಗಿದ್ದು ಎಂದು ನಾಟಕ ಮಾಡಿದ್ದಾನೆ! ಈಗ ಬೇಕಾದಾಗ ಬೇಕಾದ ರೂಪ ಧರಿಸಬಲ್ಲ ಮಾಯಾವಿಯಾಗಿ ಮೆರೆಯುತ್ತಿದ್ದಾನೆ!

ಹುಲಿ ನರಭಕ್ಷಕನಾದ ಸದವಕಾಶವನ್ನು ಉಪಯೋಗಿಸಿಕೊಂಡು ದುಡ್ಡನ್ನೂ ಕೀಳಲು ಹೊಂಚು ಹಾಕಿ, ತಿಂಗಳಿಗೆ ನೂರು ರೂಪಾಯಿ ತಲೆಗಂದಾಯ ವಸೂಲಿ ಮಾಡಲು ಯೋಜನೆ ಹಾಕಿದ್ದಾನೆ. ಹುಲಿ ಹೆಚ್ಚು ಹೆಚ್ಚು ಇರ್ಲಾಗಳನ್ನು ಕೊಂದು ತಿಂದಹಾಗೂ ಇವನ ತಲೆಗಂದಾಯದ ಮೊತ್ತ ಹೆಚ್ಚುತ್ತಾ ಹೋಗುತ್ತದೆ. ಈ ಅಂಧಶ್ರದ್ಧೆಯ ಮಂಕುಗಳ ಹತ್ತಿರ ಸರಿಯಾಗಿ ದುಡ್ಡು ಕಾಸು ವಸೂಲು ಮಾಡಿಯೇ ಇಲ್ಲಿಂದ ಹೋಗುತ್ತಾನೆ. ಎಂಥ ಪ್ರಚಂಡ ಬುದ್ಧಿಯ ಕೇಡಿ ಇವನು!

ಈಗ ನಾನು ಇಲ್ಲಿಗೆ ವಕ್ಕರಿಸಿಕೊಂಡು ಇವನ ಅಭಿವೃದ್ಧಿಯ ಸುಗಮ ಮಾರ್ಗಕ್ಕೆ ಮುಳ್ಳಾಗಿದ್ದೇನೆ. ಏಕೆಂದರೆ ಈಗ ಅವನ ಬಂಡವಾಳವೆಲ್ಲಾ ಆ ನರಭಕ್ಷಕನ ನರಹತ್ಯೆಗಳೇ ಅಲ್ಲವೆ? ಅವನು ಬದುಕಿರುವಂತೆಯೇ ನಾನೇನಾದರೂ ಆ ನರಭಕ್ಷಕನನ್ನು ಹೊಡೆದರೆ ಅವನ ಪ್ರಭಾವ ವರ್ಚಸ್ಸು ಎಲ್ಲ ಢಮಾರೆಂದು ಒಂದೇ ಏಟಿಗೆ ಸಿಡಿದುಹೋಗುತ್ತದೆ.

ಮುಗ್ಧ ಇರ್ಲಾಗಳಿಗೆ ಹುಲಿಯೂ ಇವನೂ ಒಂದೇ ಅಲ್ಲವೆನ್ನುವುದಕ್ಕೆ ಅದು ಪ್ರತ್ಯಕ್ಷ ಪ್ರಮಾಣವಾಗುತ್ತದೆ. ಅವನ ಊಟವಸತಿಗೂ ಸಂಚಕಾರ ಬರುತ್ತದೆ. ಬಾಳೆತೋಟದ ರೈತ ಕಾಂತ ಸಾಧುವಿನ ಬಂಡವಾಳ ಬಯಲಾದ ಕೂಡಲೆ ಧೈರ್ಯ ತಗೊಂಡು ಅವನನ್ನು ತೋಟದ ಪರ್ಣಕುಟಿಯಿಂದ ಒದ್ದೋಡಿಸುತ್ತಾನೆ. ಇಲ್ಲಿಂದ ಗುಡಾರ ಕಿತ್ತರೆ ಆ ಸ್ವಾಮಿಗೆ ಇನ್ನೆಲ್ಲಿ ತಾನೆ ಕೆನೆಹಾಲಿನಿಂದೊಡಗೂಡಿದ ಬಾಳೆಹಣ್ಣಿನ ರಸಾಯನ ದೊರೆಯುತ್ತದೆ!

ಆದ್ದರಿಂದಲೇ ಆ ಸಾಧು ಏನಾದರೂ ಮಾಡಿ ನನ್ನನ್ನು ಇಲ್ಲಿಂದ ನಿರ್ಗಮಿಸುವಂತೆ ಮಾಡುವುದು ಅನಿವಾರ್ಯವಾಗಿದೆ. ಇವತ್ತು ಬೆಳಗ್ಗೆ ಅವನನ್ನು ಸಂಧಿಸಿದಾಗ ನಾನಾಡಿದ ಮಾತುಗಳಿಂದ ಆ ಕಳ್ಳಫಕೀರನಿಗೆ ನನ್ನನ್ನು ಮಾಟ ಮಂತ್ರಗಳಿಂದ ಹೆದರಿಸಿ ಕಳಿಸಲು ಅಸಾಧ್ಯ ಎನ್ನುವುದು ಚೆನ್ನಾಗಿ ಗೊತ್ತಾಗಿರುತ್ತದೆ. ಆದ್ದರಿಂದ ಇನ್ನು ಏನಾದರೂ ನನ್ನ ವಿರುದ್ಧ ನೇರ ಕ್ರಮಕ್ಕೆ ಯೋಚಿಸುತ್ತಾನೆ.

ಹೇಗಾದರೂ ಮಾಡಿ ನನಗೇನಾದರೂ ಆಗುವಂತೆ ಮಾಡಿದರೆ ಅವನ ಕೀರ್ತಿ ಪ್ರತಿಷ್ಠೆಗಳು ಗಗನಕ್ಕೇರುವುದರಲ್ಲಿ ಸಂಶಯವೇ ಇರಲಿಲ್ಲ. ಬಾಳೆತೋಟ ಇರಲಿ, ಇಡೀ ಜಿಲ್ಲೆಯ ಜನಗಳೆಲ್ಲಾ, ಇಷ್ಟಬಂದಾಗ ಹುಲಿಯಾಗಿ ರೂಪಾಂತರಗೊಳ್ಳುವ, ಬಿಳಿಯ ಶಿಕಾರಿದಾರನಿಗೂ ಚಳ್ಳೆಹಣ್ಣು ತಿನ್ನಿಸಿದ ಇವನ ತಪಃಶಕ್ತಿಯ ಬಗ್ಗೆ ಆಶ್ಚರ್ಯಪಟ್ಟು ಶರಣಾಗುವುದು ಖಂಡಿತವಾಗಿತ್ತು.

ನನಗೀಗ ಇಬ್ಬರು ವೈರಿಗಳನ್ನೆದುರಿಸಬೇಕಾಗಿದೆ ಎನ್ನುವುದು ಅರಿವಿಗೆ ಬಂತು. ಮೊದಲನೆಯದು ನರಭಕ್ಷಕ ಹುಲಿಯಾದರೆ ಮತ್ತೊಂದು ಅದಕ್ಕಿಂತಲೂ ಕುತಂತ್ರಿಯಾದ ಕಳ್ಳಸ್ವಾಮಿ. ಇವರನ್ನು ಹೇಗೆ ಎದುರಿಸಬೇಕೆಂಬ ವ್ಯೂಹವನ್ನು ಯಾರನ್ನೂ ನೆಚ್ಚದೆ ಯಾರಿಗೂ ಹೇಳದೆ ನಾನೊಬ್ಬನೇ ಗೋಪ್ಯವಾಗಿ ನಿರ್ವಹಿಸಬೇಕಿತ್ತು. ಯಾವ ಇರ್ಲನನ್ನೂ, ಬೋರನನ್ನೂ ಸಹ ನಾನು ಆಪ್ತನೆಂದು ಅಂತರಂಗಕ್ಕೆ ತೆಗೆದುಕೊಳ್ಳುವಂತಿರಲಿಲ್ಲ. ಏಕೆಂದರೆ ಯಾವ ಗುಟ್ಟನ್ನೂ ತಮ್ಮಲ್ಲೇ ಇಟ್ಟುಕೊಳ್ಳದ ಹರಕುಬಾಯಿ ಈ ಇರ್ಲರದು, ಇದರೊಡನೆ ಅವರಿಗೆ ಸಾಧುವಿನ ಮಂತ್ರಶಕ್ತಿಯಬಗ್ಗೆ ಇರುವ ಅಂಧಶ್ರದ್ಧೆಯೂ ಸೇರಿದರೆ ನಾನು ಯೋಚಿಸುವುದಕ್ಕಿಂತ ಮೊದಲೇ ನನ್ನ ವ್ಯೂಹಗಳೆಲ್ಲ ಎಲ್ಲರ ಮನೆಮಾತಾಗುವುದರಲ್ಲಿ ಸಂಶಯವಿಲ್ಲ. ಅಲ್ಲಿಂದ ಅದು ಆ ಕಳ್ಳಸಾಧುವಿನ ಕಿವಿ ತಲುಪುವುದಕ್ಕೆ ಸಮಯವೇ ಬೇಡ.

ಅದೇನೇ ಇರಲಿ ಈಗ ಮೊದಲು ನರಭಕ್ಷಕನನ್ನು ನಿವಾರಿಸಬೇಕು. ಏಕೆಂದರೆ ಅದನ್ನು ಹೊಡೆಯುವುದರಲ್ಲಿ ನಾನು ಸಫಲನಾದರೆ ಈ ಫಕೀರನ ಶಕ್ತಿಯೆಲ್ಲ ತಂತಾನೆ ಹಾರಿಹೋಗುತ್ತದೆ ಎಂದು ನಿಶ್ಚೈಸಿದೆ.

ಟೀಗಿಟ್ಟಿದ್ದ ನೀರು ಕುದಿಯುತ್ತಾ ಇತ್ತು. ಟೀ ಸೊಪ್ಪು ಹಾಕಿ ಟೀ ಮಾಡಿಕೊಂಡು ಕುಡಿದು ಬೋರನನ್ನು ಕರೆದುಕೊಂಡು ಇರ್ಲರ ಕೂಡುಹಟ್ಟಿ ಕಡೆಗೆ ನಡೆದೆ. ಕೆಲವು

ಹೋರಿಗಳನ್ನೋ ದನಗಳನ್ನೋ ಕೊಂಡು ಹುಲಿಯನ್ನಾಕರ್ಷಿಸಲು ಕಾಡಿನಲ್ಲಿ ಕಟ್ಟಬೇಕೆಂದು.

ನನಗೆ ಆಗಲೇ ಸರಿಯಾಗಿ ಗೊತ್ತಾಗಿದ್ದು, ಈ ಕಾವಿಧಾರಿ ಕುತಂತ್ರಿಯ ಪ್ರಭಾವ ಆ ಮುಗ್ಧ ಇರ್ಲಾ ಜನಗಳ ಮೇಲೆ ಎಷ್ಟು ಪ್ರಬಲವಾಗಿದೆ ಎಂದು. ನಾನು ಮುಂದೇನು ಮಾಡಬಹುದೆಂದರಿತು, ಇರ್ಲಾಗಳ ಅಂಧಶ್ರದ್ಧೆಯನ್ನೇ ಉಪಯೋಗಿಸಿಕೊಂಡು ಆಗಲೇ ಈ ಖೇಡಿ ಮುಂಜಾಗ್ರತೆ ಕ್ರಮ ಕೈಗೊಂಡಿದ್ದ. ಯಾಕೆಂದರೆ ಗಿರಿಜನರೆಲ್ಲಾ ನನಗೆ ಒಂದೇ ಒಂದು ಕರುವನ್ನಾಗಲಿ, ಕುರಿ ಅಥವಾ ಮೇಕೆಯನ್ನಾಗಲಿ, ಮಾರಲು ಅಥವಾ ಬಾಡಿಗೆ ಕೊಡಲು ಸುತರಾಂ ಒಪ್ಪಲಿಲ್ಲ.

ನಾನು ಅವರ ಕ್ಷೇಮಕ್ಕಾಗಿಯೇ ಆ ನರಭಕ್ಷಕನನ್ನು ಹೊಡೆಯಲು ಸಹಾಯ ಕೇಳುತ್ತಿದ್ದೇನೆಂದು ಮನವರಿಕೆ ಮಾಡಿಕೊಡಲು ಬಹಳ ಪ್ರಯತ್ನಿಸಿದೆ. ಅವರು ನೇರವಾಗಿ ನನ್ನ ಬೇಡಿಕೆಯನ್ನು ತಿರಸ್ಕರಿಸದಿದ್ದರೂ ಆ ರೂಪಾಂತರ ಹೊಂದಿದ ಮನುಷ್ಯನಾಗಿರುವ ಹುಲಿ ಕೊಲ್ಲಲು ಸಹಾಯ ಮಾಡಿದರೆ ತಾವೇ ತಲೆದಂಡ ತೆರಬೇಕಾಗುತ್ತದೆಂದು ದಿಗಿಲಿನಿಂದ ಹೇಳಿದರು.

ಇನ್ನು ಇವರ ಮನವೊಲಿಸಲು ಪ್ರಯತ್ನಿಸುವುದು ವ್ಯರ್ಥವೆಂದೆನ್ನಿಸಿತು. ನಾವು ಇನ್ನೂ ಐದಾರು ಕೂಡುಹಟ್ಟಿಗಳ ಬಳಿಗೆ ಹೋಗಿ ಕೇಳಿದೆವು. ಆದರೆ ಎಲ್ಲ ಕೂಡುಹಟ್ಟಿಯ ದನಗಾಹಿಗಳೂ ಇದೊಂದೇ ಕಾರಣವನ್ನೊಡ್ಡಿ ಹಿಂದೆಗೆದರು. ಕೊನೆಯ ಹಟ್ಟಿ ಬಳಿ ಒಬ್ಬ ಮುದುಕ, ನಾನು ಕೋಪದಿಂದ ಹಿಂದಿರುಗುತ್ತಿದ್ದಾಗ ನನ್ನ ಪಾಡು ನೋಡಲಾರದೆ ಏನೋ ಗುಟ್ಟು ಹೇಳುವವನಂತೆ ನನ್ನನ್ನು ದೂರಕ್ಕೆ ಕರೆದು ಕಿವಿಯಲ್ಲಿ "ದೊರೆ, ನಿನಗೆ ನಿಜವಾಗಿಯೂ ಹುಲಿಗೆ ಕಟ್ಟಲು ದನಗಳೋ ಕರುಗಳೋ ಬೇಕಾದರೆ ಇದೇ ದಾರಿಯಲ್ಲಿ ಮುಂದೆ ಐದು ಮೈಲು ಹೋದರೆ ಮಷ್ಣಿಗುಂಡಿ ಎಂದು ಒಂದು ಹಳ್ಳಿ ಇದೆ, ಅಲ್ಲಿ ನಿಮಗೆ ಸಿಕ್ಕುತ್ತದೆ. ನಮಗೆಲ್ಲಾ ನಿಮಗೆ ಸಹಾಯ ಮಾಡಬೇಕೆಂದು ಆಸೆ ಇದೆಯಾದರೂ, ಇಲ್ಲಿ ನಿಮಗೆ ಒಬ್ಬರೇ ಒಬ್ಬರೂ ಸಹಾಯ ಮಾಡಲು ಮುಂದಾಗುವುದಿಲ್ಲ. ಯಾಕೆಂದು ನಿಮಗೇ ಗೊತ್ತು" ಎಂದ.

ಅವರ ಉಭಯ ಸಂಕಟ ನನಗೆ ಚೆನ್ನಾಗಿ ಅರಿವಾಗಿತ್ತು. ಆದರೂ ಕೋಪವನ್ನು ನಟಿಸುತ್ತಾ ಬೋರನೊಡನೆ ಅಲ್ಲಿಂದ ನಿರ್ಗಮಿಸಿದೆ. ಆ ಮುದುಕನ ಸಲಹೆ ಪ್ರಕಾರ ನಡೆಯದೆ ನನಗೆ ಬೇರೆ ವಿಧಿಯೇ ಇರಲಿಲ್ಲ.

ಆದರೆ ಆಗಲೇ ಕತ್ತಲಾಗತೊಡಗಿತ್ತು. ಮಷ್ಣಿಗುಂಡಿಗೆ ಹೋಗಿ ಬರುವಷ್ಟು ಸಮಯವೇ ಇರಲಿಲ್ಲ. ಆ ದಿನವೂ ನಿನ್ನೆಯಂತೆಯೇ ಸೋಮಾರಿಯಾಗಿ ಕಳೆಯುವುದು ಅನಿವಾರ್ಯವಾಯ್ತು. ನಾನು ಶಿಕಾರಿಗೆ ಬಂದ ಗಳಿಗೆಯೇ ಸರಿಯಿರುವಹಾಗೆ ಕಾಣಲಿಲ್ಲ. ಏಕೆಂದರೆ ಅಮಾವಾಸ್ಯೆ ಮುಗಿದು ಹುಣ್ಣಿಮೆಯತ್ತ ದಿನ ಸರಿಯುತ್ತಿತ್ತು. ಬೆಳಗಾಗುವ ಮೊದಲಷ್ಟೆ ಚಂದ್ರೋದಯವಾಗುತ್ತಿತ್ತು. ಆ ಕಗ್ಗತ್ತಲ ರಾತ್ರಿಯಲ್ಲಿ ಕಟ್ಟಲು ಒಂದು ಮೇಕೆ

ಸಹ ಇಲ್ಲದೆ ಮರದ ಮೇಲೆ ಹತ್ತಿ ಹುಲಿಗಾಗಿ ಕಾಯುತ್ತ ಕೂರುವುದು ವ್ಯರ್ಥಪ್ರಯತ್ನವಷ್ಟೆ. ಆದ್ದರಿಂದ ಮಷ್ಣಿಗುಂಡಿಯಿಂದ ಒಂದು ಕರುವನ್ನೋ ಮೇಕೆಯನ್ನೋ ತರುವವರೆಗೂ ಆ ಕಾಡುಮಾವಿನ ಮರದಡಿ ಬೆಂಕಿ ಕಾಯಿಸುತ್ತಾ ರಾತ್ರಿ ಕಳೆಯುವುದೊಂದೇ ಉಳಿದ ದಾರಿ.

ಈ ಸಾರಿ ನಾನೂ ಬೋರನೂ ತುಂಬಾ ಹೊತ್ತಿರುವಾಗಲೇ ರಾತ್ರಿಗೆಲ್ಲಾ ಸಾಕಾಗಿ ಮಿಗುವಷ್ಟು ಕಾಡಿನಿಂದ ಒಣಸೌದೆ ಸಂಗ್ರಹಿಸಬೇಕೆಂದು ತರಾತುರಿಯಲ್ಲಿ ಸೌದೆ ಆಯ ತೊಡಗಿದೆವು.

ಸಂಜೆಯ ನಸುಕು ಕವಿಯುತ್ತಿದ್ದಂತೆಯೇ ನಮ್ಮ ಕ್ಯಾಂಪ್‌ಫೈರ್ ಹೊತ್ತಿಸಬೇಕಾಗಿತ್ತು. ಆ ನಸುಕಿನಲ್ಲೇ ನರಭಕ್ಷಕ ಶಿಕಾರಿ ಹುಡುಕಿಕೊಂಡು ಹೊರಟಿದ್ದರೂ ಹೊರಟಿರಬಹುದು. ಸುತ್ತಮುತ್ತ ಬೆಳೆದಿದ್ದ ಹೆಬ್ಬಿದಿರು, ಹುಣಸೆ, ನೇರಿಳೆ, ಮತ್ತಿ ಮರಗಳ ದಟ್ಟ ನೆರಳಿನಲ್ಲಿ ಕಣ್ಣಿಗೆ ಕಾಣದಂತೆ ನುಸಿದು ಬಂದು ನಮ್ಮ ಮೇಲೆ ಹಾರುವುದು ಹುಲಿಗೇನೂ ಕಷ್ಟಸಾಧ್ಯದ ಕೆಲಸವಲ್ಲ.

ಸಂಜೆಗತ್ತಲಲ್ಲಿ ನಿದ್ದೆಗೆ ಹೋಗುವ ಹಕ್ಕಿಗಳ ಉಲಿಗಳಾಗಲೀ, ಬೆಳಗ್ಗೆ ಎಲ್ಲಾ ನಿದ್ದೆಮಾಡುತ್ತಿದ್ದು ರಾತ್ರಿ ಸಂಚಾರ ಹೊರಡುವ ನಿಶಾಚರ ಹಕ್ಕಿಗಳ ಉಲಿಗಳಾಗಲೀ, ನನ್ನ ಮನಸ್ಸಿನಲ್ಲಿ ದಾಖಲಾಗಲೇ ಇಲ್ಲ. ಅದಕ್ಕೆ ಕಾರಣ ಅದನ್ನು ಕೇಳಿ ಆನಂದಿಸುವ ಮನಃಸ್ಥಿತಿಯಲ್ಲೇ ನಾನು ಇರಲಿಲ್ಲ. ಒಂದೇಸಮ ರಾತ್ರಿಗೆ ಕಟ್ಟಿಗೆ ಹೆರಕುತ್ತ, ಆ ಕಳ್ಳ ಸಾಧು ನನಗೆ ಚಳ್ಳೆಹಣ್ಣು ತಿನ್ನಿಸಿ, ಹುಲಿಗೆ ಕಟ್ಟಲು ದನ ಸಿಕ್ಕದಂತೆ ಮಾಡಿ, ಮತ್ತೊಂದು ರಾತ್ರಿ ಕೆಲಸವಿಲ್ಲದೆ ಕಳೆಯುವಂತೆ ಮಾಡಿದನಲ್ಲಾ ಎಂದು ಚಿಂತಿಸುತ್ತಿದ್ದೆ.

'ತೆಕ್ ತೆಕ್ ತೆಕ್ ತೆಕೋೀ' ದೂರದಲ್ಲಿ ಕಾಡು ಕೋಳಿಗಳು ದಿನದ ಕೊಟ್ಟಕೊನೆಯ ಕೇಕೆ ಹಾಕಿದುವು. 'ಚಕ್ ಚಕ್ ಚ್ರೀೀ' ಎಂದು ಸಂಪೂರ್ಣ ಕತ್ತಲಾದಕೂಡಲೆ ಕುರಡುಗಪ್ಪಟ ಹಕ್ಕಿಗಳು ಹಳ್ಳದ ಆಚೆದಂಡೆಯಿಂದ ಕೂಗಿದುವು. ಅದರ ಕೂಗಿನೊಂದಿಗೇ ಇಪ್ಪತ್ತಾರುತರದ ಹಕ್ಕಿ, ಹುಳುಹಪ್ಪಟೆ ಕಾಡಿನ ಮೌನಕ್ಕೆ ಕಲ್ಲೆಸೆದಂತೆ ತರತರದ ಸದ್ದಿನ ಗಲಾಟೆ ಶುರುಮಾಡಿದುವು. ಕಾಡಿನ ತರಗೆಲೆಗಳ ಮೇಲೂ ಹರಿದಾಡುತ್ತ ಜರಜರ ಸದ್ದು ಮಾಡಿದುವು. ಕತ್ತಲಗುಪ್ಪಿಗಳು ದೂರದಲ್ಲಿ ಚೀರಿದಂತೆ ಕೂಗಿದುವು. ಹಾಲಕ್ಕಿಗಳು ದನ ಕಾಯುವವರ ಕೂಗನ್ನು ತದ್ವತ್ತಾಗಿ ಅನುಕರಿಸಿ 'ಹೂಯ್‌ಷ್ ಹೂಯ್‌ಷ್ ಯೂಹೋ' ಎಂದು ಕೂಗಿದುವು. ಸೂರ್ಯ ನೀಲಗಿರಿ ಬೆಟ್ಟಗಳಾಚೆ ಮುಳುಗಿ ಎಷ್ಟೋ ಹೊತ್ತಾಗಿತ್ತು. ಗಾಢಾಂಧಕಾರ ಕವಿಯತೊಡಗಿತ್ತು.

ರಾತ್ರಿ ಸುಮಾರು ಎಟುಘಂಟೆ ಇರಬಹುದು. ಇದ್ದಕ್ಕಿದ್ದಹಾಗೆ ಕಾಡೆಲ್ಲಾ ಅಸಾಧಾರಣವಾಗಿ ಮೌನವಾಯ್ತು. ಅಕ್ಕಪಕ್ಕದಲ್ಲೆಲ್ಲಾ ಚಿರುಗುಡುತ್ತಿದ್ದ ಮಿಡತೆಗಳು ಸಹ ಗಪ್‌ಚಿಪ್ಪಾದುವು. ಕಾಡೆಲ್ಲಾ ಖಾಲಿಯಾಗಿ ನಾನು ಬೋರ ಇಬ್ಬರನ್ನುಳಿದು ಕಾಡಿನಲ್ಲಿ ಸಜೀವ ವಸ್ತುವೇ ಇಲ್ಲವೇನೋ ಎನ್ನಿಸಿತು.

ಈ ಅಸಾಧಾರಣ ಮೌನ ಮುಂದೆ ಸಂಭವಿಸಿದ ಆಘಾತಕರ ಘಟನಾವಳಿಗಳಿಗೆ ಮುನ್ನುಡಿಯಾಯ್ತು. ಒಂದೆರಡು ಕ್ಷಣಗಳಲ್ಲೇ ನರಭಕ್ಷಕ ಹಳ್ಳದ ಆಚೆದಡದಿಂದ ಮೂರುಸಾರಿ ಕಾಡೆಲ್ಲಾ ನಡುಗುವಂತೆ 'ಆ್ರೀಹ್ ಆ್ರೀಹ್ ಆ್ರೀಹ್ ಹುಫ್ ಹುಫ್ ' ಎಂದು ಬಲವಾಗಿ ಘರ್ಜಿಸಿತು.

ಒಂದು ಕ್ಷಣ ನಿಃಶಬ್ದ! ಅನಂತರ ನಮ್ಮ ಪಶ್ಚಿಮಕ್ಕೆ, ಮಷ್ಣಿಗುಂಡಿಕಡೆ ಹೋಗುವ ಉದಕಮಂಡಲ ರಸ್ತೆಯತ್ತಣಿಂದ ಇದ್ದಕ್ಕಿದ್ದಂತೆ ಆ್ರೀಹ್ ಆ್ರೀಹ್ ಆಹಹಹಹ ಎಂದು ಅಸಹಜವಾದ ಅಟ್ಟಹಾಸಧ್ವನಿಯೊಂದು ಕೇಳಿತು. ಬೋರ ಭಯಭೀತನಾಗಿ ಮರಗಟ್ಟಿ ಹೋದ. ಅವನ ದಿಗಿಲು ನನ್ನಲ್ಲೂ ದಿಗಿಲೆಬ್ಬಿಸಿತು.

ಮರುಕ್ಷಣ ದಿಗಿಲಿನ ಪೊರೆ ಹರಿದು ಹೊರಬಂದ ನಾನು ಪಕ್ಕದಲ್ಲಿಟ್ಟಿದ್ದ ಟಾರ್ಚನ್ನು ತುಡುಕಿ ಕೈಗೆತ್ತಿಕೊಂಡು ಕತ್ತಲಲ್ಲಿ ನೆಗೆದು ಓಡಿದೆ. ದೆವ್ವ ಭೂತಗಳ ಕುರುಡು ದಿಗಿಲೆಲ್ಲಾ ಧೂಳೀಪಟವಾಯ್ತು. ಈ ಸಾಧುವಿನ ಕಿಡಿಗೇಡಿತನ ಈಸಾರಿ ನನಗೆ ಚಕ್ಕನೆ ಹೊಳೆಯಿತು. ಹಳ್ಳದ ಆಚೆ ಘರ್ಜಿಸಿದ ಹುಲಿ ಮರುಕ್ಷಣವೇ ಅದರ ವಿರುದ್ಧ ದಿಕ್ಕಿನಿಂದ ಕೂಗಲು ಸಾಧ್ಯವೇ ಇರಲಿಲ್ಲ.

ಈ ಕಳ್ಳಸ್ವಾಮಿ ನನ್ನನ್ನೂ ಬೋರನನ್ನೂ ದಿಗಿಲು ಬೀಳಿಸಲೆಂದೇ ಈ ಕಳ್ಳಾಟ ಹೂಡಿದ್ದಾನೆ, ಹುಲಿಯಂತೆ ಕೂಗಿ ಅನಂತರ ಮನುಷ್ಯನ ಅಟ್ಟಹಾಸವನ್ನು ಅನುಕರಿಸಿದರೆ ಹುಲಿ ಮಾನವನಾಗಿ ರೂಪಾಂತರ ಹೊಂದುತ್ತಿದೆಯೆಂದು ನಾವು ಊಹಿಸಲೆಂದೇ ಇವನ ಉಪಾಯ! ಅವನನ್ನು ಹಿಡಿದು ಈ ಅಯೋಗ್ಯನ ಕಪಟನಾಟಕ ಬಯಲು ಮಾಡಲೆಂದೇ ನಾನು ನೆಗೆದು ಓಡಿದ್ದು. ಜನ ಓಡಾಡಿ ಸವೆದು ಆಗಿದ್ದ ಕಾಲುದಾರಿಯಲ್ಲಿ ಆಗೀಗ ಟಾರ್ಚ್ ಬೆಳಕು ಬೀರುತ್ತ, ಹತ್ತಿರದಲ್ಲೇ ಇದ್ದ ಆ ಸಾಧುವಿನ ಗುಡಿಸಿಲ ಕಡೆಗೆ, ಅವನು ಗುಡಿಸಲು ಸೇರುವುದಕ್ಕೂ ಮೊದಲೇ ತಲುಪಲು ಆದಷ್ಟು ವೇಗವಾಗಿ ಓಡಿದೆ.

ಆದರೆ ಆ ಕಳ್ಳಸಾಧು ನನಗಿಂತ ವೇಗವಾಗಿ ಓಡಬಲ್ಲವನಾಗಿದ್ದ. ಏಕೆಂದರೆ ಕತ್ತಲು ಕವಿದಿದ್ದ ಗುಡಿಸಿಲ ಬಳಿಗೆ ನಾನು ತಲುಪುವವರೆಗೂ ದಾರಿಯಲ್ಲಿ ಯಾರೂ ಓಡಾಡಿದ್ದು ಕಾಣಲಿಲ್ಲ. ಅಲ್ಲಿ ತಲುಪಿದ ಬಳಿಕ ಅವನ ಗುಡಿಸಿಲಿನ ಬಾಗಿಲನ್ನು ತಳ್ಳಿ ತೆರೆಯಲು ಯತ್ನಿಸಿದೆ. ಆದರೆ ಅದನ್ನು ಒಳಗಿನಿಂದ ಭದ್ರಮಾಡಲಾಗಿತ್ತು. ಕೈಯಿಂದ ಬಾಗಿಲನ್ನು ಗುದ್ದಿದೆ.

೪



ಕೆಲ ನಿಮಿಷಗಳ ತರುವಾಯ ಬಿದಿರುತಡಿಕೆಯೊಳಗಿಂದ ಬೆಳಕು ಕಾಣಿಸಿತು. ಆಮೇಲೂ ಸ್ವಾಮಿ ಬಾಗಿಲು ತೆರೆಯಲು ಕೊಂಚ ಕಾಲ ಹಿಡಿಯಿತು. ತನ್ನ ವೇಷಭೂಷಣ ಬದಲಿಸುತ್ತಿದ್ದನೆಂದು ಕಾಣುತ್ತದೆ. ನಿಧಾನವಾಗಿ ಬಾಗಿಲು ತೆರೆದುಕೊಂಡು ಸಾಧು ಹೊರಬಂದ. ಈಸಾರಿ ಅವನ ಮೈಮೇಲೆ ಏನೂ ಇರಲಿಲ್ಲ. ಕುತ್ತಿಗೆಯಲ್ಲೊಂದು ರುದ್ರಾಕ್ಷಿಮಣಿ ಮಾಲೆ, ಸೊಂಟದಕೆಳಗೊಂದು ಲಂಗೋಟಿ.

ನಾನು ನೇರವಾಗಿ ಅವನ ಮುಖಕ್ಕೇ ಟಾರ್ಚ್ ಬಿಟ್ಟೆ.

ಟಾರ್ಚಿನ ಕಣ್ಣು ಕೋರೈಸುವ ಪ್ರಕಾಶಕ್ಕೂ ಕಣ್ಣು ಮಿಟುಕಿಸದೆ, ಮುಖದಲ್ಲಿ ಅಪಹಾಸ್ಯದ ನಗೆ ನಗುತ್ತಾ "ಬಿಳಿ ಮನುಷ್ಯ ಈ ವಯಸ್ಸಿನಲ್ಲೂ ಜೋರಾಗಿ ಓಡಬಲ್ಲ! ಆದರೆ ನಿನ್ನ ಕಡೆ ಗಹಗಹಿಸಿ ಅಟ್ಟಹಾಸ ಮಾಡಿದ ಹುಲಿಯ ಭೂತದಷ್ಟು ವೇಗವಾಗಿ ಓಡಲು ನಿನ್ನ ಕೈಲಾದೀತೆ?" ಎಂದ.

ಉಕ್ಕುತ್ತಿದ್ದ ಕೋಪವನ್ನು ಹೇಗೋ ಹತ್ತಿಕ್ಕಿ "ನೀನು ಎಷ್ಟೇ ಜೋರಾಗಿ ಓಡುವುದು ಕಲಿತಿದ್ದರೂ ಹುಷಾರಾಗಿರು, ನಿನ್ನ ಕಳ್ಳಾಟ ನರಭಕ್ಷಕನ ಹತ್ತಿರ ಆಡಲು ಹೋದೀಯಾ! ಅವತ್ತೇ ನಿನ್ನ ನಾಟಕದ ಕೊನೇ ಅಂಕ ತಿಳಿದಿರು" ಎಂದವನೇ ಅವನ ಪ್ರತ್ಯುತ್ತರಕ್ಕೆ

ಕಾಯದೆ ಮುಖದಿರುಹಿ ಹೊರಟೆ. ಬೆನ್ನಹಿಂದೆ ಬೋರ ನಿಂತಿದ್ದ. ಧಾಪುಗಾಲಿಟ್ಟ ನನ್ನ ಕಾಲಿಗೆ ತೊಡರಿಕೊಂಡ. ನಾನು ಟಾರ್ಚ್ ಸಮೇತ ಓಡಿದಾಗ ಹೆದರಿ ತಬ್ಬಿಬ್ಬಾಗಿದ್ದ ಅವನು ಒಬ್ಬನೇ ಕಾಡಿನಲ್ಲಿ ಕೂರಲಾರದೆ ನನ್ನ ಬೆನ್ನಿಗೇ ಓಡಿಬಂದಿದ್ದ. ಅವನೊಡನೆ ನೇರವಾಗಿ ಕಾಡಿನ ಮಾವಿನ ಮರದತ್ತ ಹೆಜ್ಜೆ ಹಾಕಿದೆ. ಈ ಕಳ್ಳ ಸಾಧು ಮತ್ತೊಮ್ಮೆ ನನಗೆ ಚಳ್ಳೆ ಹಣ್ಣು ತಿನ್ನಿಸಿದನಲ್ಲಾ ಎಂಬ ಸಿಟ್ಟಿನಲ್ಲಿ ಅಲ್ಲೇ ಆಸುಪಾಸಿನಲ್ಲಿ ಇರಬಹುದಾದ ನರಭಕ್ಷಕನ ಬಗ್ಗೆ ಒಂದು ಕ್ಷಣಸಹ ಯೋಚಿಸಲು ಸಾಧ್ಯವಾಗಲಿಲ್ಲ.

ಇನ್ನೊಂದು ನಿದ್ದೆಗೆಟ್ಟರಾತ್ರಿ ಕಳೆಯಬೇಕಾಯ್ತು. ನರಭಕ್ಷಕ ಹಳ್ಳದ ಆಚೆಯಿಂದ ಮೂರುಸಾರಿ ಘರ್ಜಿಸಿದ್ದೊಂದನ್ನುಳಿದರೆ ಮತ್ತೇನೂ ಸಂಭವಿಸಲಿಲ್ಲ. ಬೆಳಗಾಗುತ್ತಿದ್ದಂತೆಯೇ ನಮ್ಮ ಆಯಾಸ, ಬೇಸರಗಳನ್ನೆಲ್ಲಾ ಬದಿಗಿಕ್ಕಿ ಹೇಗಾದರೂ ಮಾಡಿ ಎಮ್ಮೆ ಕರುಗಳನ್ನೋ ದನಗಳನ್ನೋ ಸಂಪಾದಿಸಲು ಮಷ್ಣಿಗುಂಡಿಕಡೆಗೆ ಹೆಜ್ಜೆಹಾಕಿದೆವು. ಮಷ್ಣಿಗುಂಡಿಯಲ್ಲಿ ಅರ್ಧ ದಿನವೆಲ್ಲಾ ಚೌಕಾಶಿ ಮಾಡಿದ ಮೇಲೆ ಒಂದು ಕೆಂದು ಹೋರಿಗರುವೂ, ಎರಡು ಕೋಣಗರುಗಳೂ ಸಿಕ್ಕಿದುವು. ಅವನ್ನು  ನಾವು ಬೀಡುಬಿಟ್ಟಿದ್ದ ಮಾವಿನಮರದ ಕೆಳಕ್ಕೆ ನಡೆಸಿಕೊಂಡುಬಂದು ಕಟ್ಟಿಹಾಕುವುದರೊಳಗೆ ಮಧ್ಯಾಹ್ನ ಒಂದುಗಂಟೆಯಾಯ್ತು.  ಮತ್ತೆ ರಾತ್ರಿ ನಿದ್ದೆಗೆಡಬೇಕಿತ್ತು. ಎರಡುದಿನದಿಂದ ನಿದ್ದೆಯಿಲ್ಲದ ಆಯಾಸದಲ್ಲಿ ಸುಸ್ತಾಗಿ, ಅಲ್ಲೇ ಸುತ್ತಮುತ್ತ ಇರಬಹುದಾದ ನರಭಕ್ಷಕನ ಪರಿವೆಯನ್ನೂ ಅಲಕ್ಷಿಸಿ, ಆ ಕರುಗಳನ್ನು ಕಟ್ಟಿಹಾಕಿ ನಿದ್ದೆಹೋದೆವು.

ಮಧ್ಯಾಹ್ನ ನಾಲ್ಕುಗಂಟೆಗೆ ಸರಿಯಾಗಿ ನನಗೆ ಎಚ್ಚರಾಯ್ತು. ಮೂರುಗಂಟೆಯ ನಿದ್ದೆ ನನ್ನ ಮಾನಸಿಕ ಮತ್ತು ದೈಹಿಕ ಆಯಾಸವನ್ನೆಲ್ಲ ನೀಗಿದ್ದರಿಂದ ಹೊಸ ಲವಲವಿಕೆಯಿಂದ ಎದ್ದು ಕಾರ್ಯೋನ್ಮುಖನಾದೆ. ಹುಲಿ ಶಿಕಾರಿಗೆ ತಯಾರಿ ಮಾಡಿಕೊಳ್ಳಲು ನಮಗೆ ಎರಡೂವರೆ ಗಂಟೆ ಕಾಲಾವಕಾಶವಿತ್ತು.

ಈಗ ನಾನು ವಿವರಿಸುವ ಇಲ್ಲಿನ ಭೌಗೋಳಿಕ ಲಕ್ಷಣ ಮತ್ತು ದಿಕ್ಕುಗಳ ವಿವರಗಳನ್ನು ನೀವು ಕೊಂಚ ಗಮನವಿಟ್ಟು ಕೇಳಬೇಕು. ಏಕೆಂದರೆ ಮುಂದೆ ನಡೆದ ಘಟನಾವಳಿಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲು ಇದು ಬಹಳ ಅಗತ್ಯ.

ನೀಲಗಿರಿ ಪರ್ವತಗಳ ಮುಖ್ಯ ಗಿರಿಪಂಗ್ತಿಗಳು ನಮ್ಮ ದಕ್ಷಿಣಕ್ಕಿದ್ದುವು. ಆದರೆ ಆ ಪರ್ವತಗಳ ಹಲವಾರು ಉಪಶಿಖರಗಳು ನಮ್ಮ ಪಶ್ಚಿಮಕ್ಕೆ ಚೆಲ್ಲಾಪಿಲ್ಲಿಯಾಗಿ ಚದುರಿದಂತಿದ್ದುವು. ಈ ಗುಡ್ಡಗಳ ತಪ್ಪಲಿನಲ್ಲಿಯೇ ಉದಕಮಂಡಲಕ್ಕೆ ಹೋಗುವ ದಾರಿ ದಕ್ಷಿಣದಿಂದ ಉತ್ತರಕ್ಕೆ ಮಷ್ಣಿಗುಂಡಿಕಡೆಗೆ ಹೋಗುತ್ತಿತ್ತು. ನೀಲಗಿರಿಕಡೆಯಿಂದ ಬರುವ ಹಳ್ಳ ಈ ರಸ್ತೆಪಕ್ಕ ಅಂಕುಡೊಂಕಾಗಿ ಹರಿಯುತ್ತ ಕಾಡೊಳಗೆ ಮುಂದೆ ಸುಮಾರು ಹತ್ತು ಮೈಲಿ ದೂರದಲ್ಲಿ ಮೋಯಾರ್ ನದಿಯನ್ನು ಸೇರುತ್ತದೆ. ಈ ನದಿಗೂ ರಸ್ತೆಗೂ ನಡುವೆ ಕುರುಚಲು ಕಾಡು ಹಲವೆಡೆ ಒಂದು ಮೈಲಿ ಅಗಲಕ್ಕೂ, ಕೆಲವೆಡೆ ಹಲವು ಗಜಗಳ

ಅಗಲಕ್ಕೂ ರಸ್ತೆಗೂ ಹಳ್ಳಕ್ಕೂ ನಡುವೆ ಹಬ್ಬಿಕೊಂಡಿದೆ. ಈ ಹಳ್ಳದುದ್ದಕ್ಕೂ ಮತ್ತು ಆಚೆಗೂ ಮತ್ತೊಂದು ದಂಡೆಯಿಂದ ದಟ್ಟ ಕಾಡು ಆರಂಭವಾಗುತ್ತದೆ. ಬಾಳೆತೋಟ ಊರು ನೀಲಗಿರಿಯ ಮುಖ್ಯ ಪರ್ವತ ಶ್ರೇಣಿಗಳ ತಪ್ಪಲಲ್ಲಿ ಹಳ್ಳದ ದಂಡೆಗೆ ಕೊಂಚ ದೂರದಲ್ಲಿದೆ.

ನಾನು ಮೊದಲೇ ಹೇಳಿದಂತೆ ಈ ತಪ್ಪಲಲ್ಲೇ ನರಭಕ್ಷಕ ಎಲ್ಲೋ ಠಾಣ್ಯ ಹೂಡಿತ್ತು. ಹಿಂದಿನ ಎರಡು ರಾತ್ರಿಗಳಲ್ಲೂ ಹುಲಿಯ ಘರ್ಜನೆ ನಮಗೆ ಕೇಳಿಬಂದಿದ್ದು ಈ ದಿಕ್ಕಿನಿಂದಲೇ ಆದ್ದರಿಂದ ನಾನು ಹಾಗೆ ಊಹಿಸುತ್ತೇನೆ.

ಆದ್ದರಿಂದ ನಾನು ಒಂದು ಕರುವನ್ನು ಈ ರಸ್ತೆಗೆ ಸಮೀಪವಾದ ಕಾಡಿನೊಳಗೆ ಬಾಳೆತೋಟ ದಾಟಿದ ಕೂಡಲೆ ಎಲ್ಲಾದರೂ ಒಂದು ಕಡೆ ಕಟ್ಟಬೇಕು. ಇನ್ನೊಂದನ್ನು ಹಳ್ಳದ ದಂಡೆಯಲ್ಲೇ ಹುಲಿಯ ಕಣ್ಣಿಗೆ ಕಾಣುವಂತೆ ನನ್ನ ಮೊದಲನೆ ಕರು ಕಟ್ಟಿದ ಜಾಗಕ್ಕೆ ಪೂರ್ವದಲ್ಲಿ ಕಟ್ಟಬೇಕು. ಮೂರನೆಯದು ದಾರಿಯ ಪಶ್ಚಿಮಕ್ಕೆ ಸಮಾನಾಂತರವಾಗಿ ಹಬ್ಬಿದ್ದ ಗುಡ್ಡಗಳ ತಪ್ಪಲಲ್ಲಿ ಕಟ್ಟಬೇಕು. ಹುಲಿ ಯಾವ ದಿಕ್ಕಿನಿಂದ ಬಾಳೆತೋಟ ಸಮೀಪಿಸಿದರೂ ಒಂದಲ್ಲ ಒಂದು ಅದಕ್ಕೆ ಕಂಡೇ ಕಾಣುತ್ತದೆ ಎಂದು ನಾನು ಲೆಕ್ಕ ಹಾಕಿದೆ.

ನನ್ನ ಯೋಜನೆಗೆ ಸದ್ಯಕ್ಕಿದ್ದ ಒಂದೇ ತೊಂದರೆ ಎಂದರೆ ಇದನ್ನು ಕಾರ್ಯಗತ ಗೊಳಿಸಲು ಅಗತ್ಯವಿದ್ದ ಕನಿಷ್ಠ ಕಾಲಾವಕಾಶ ಸಹ ಇರಲಿಲ್ಲ. ಆದ್ದರಿಂದ ಎಲ್ಲಾದರೂ ಸೂಕ್ತ ಸ್ಥಳದಲ್ಲಿ ಒಂದೇ ಒಂದುಕಡೆ ಒಂದು ಕರು ಕಟ್ಟಿ ನಾನು ಮರದಮೇಲೆ ಕಾಯುವುದೊಂದೇ ಇವತ್ತು ನಾನು ಮಾಡಬಹುದಾಗಿದ್ದ ಕೆಲಸ. ಅದನ್ನೂ ನಾನು ಕೂಡಲೇ ಕೈಗೊಳ್ಳಬೇಕಿತ್ತು. ಮಿಕ್ಕವೆರಡನ್ನೂ ಒಯ್ದು ಮನೆಯ ಬಳಿ ಕಟ್ಟಿರು ಎಂದು ಬೋರನಿಗೆ ಹೇಳಲು ನಿರ್ಧರಿಸಿದೆ.

ಈಗ ಇರುವ ಪ್ರಶ್ನೆ ಎಂದರೆ ಈ ಮೂರು ಜಾಗಗಳಲ್ಲಿ ಯಾವುದನ್ನು ಆರಿಸಿ ಇವತ್ತು ಕುಳಿತುಕೊಳ್ಳುವುದು ಎಂದು?. ಏಕೆಂದರೆ ಹುಲಿ ಬರುವ ಸಾಧ್ಯತೆ ಅತ್ಯಂತ ಹೆಚ್ಚಿರುವ ಸ್ಥಳ ಊಹಿಸಿ ನಾನು ಕುಳಿತುಕೊಳ್ಳಬೇಕಿತ್ತು. ನಿನ್ನೆ ಮೊನ್ನೆ ಎರಡು ದಿನವೂ ಹುಲಿ ಹಳ್ಳದ ಆಚೆದಂಡೆಯಿಂದ ಘರ್ಜಿಸುತ್ತಾ ಬಂದಿತ್ತು. ಹುಲಿಗಳ ಶಿಕಾರಿ ಅಭ್ಯಾಸದ ಪ್ರಕಾರ ಅವು ಪ್ರತಿದಿನವೂ ಉಪಯೋಗಿಸಿದ ಮಾರ್ಗವನ್ನೇ ಮತ್ತೆ ಮತ್ತೆ ಉಪಯೋಗಿಸುವುದು ಅಸಂಭವವೆಂದು ನನಗೆ ಅನ್ನಿಸಿತು. ಆದ್ದರಿಂದ ಈಸಾರಿ ಅದು ರಸ್ತೆಗುಂಟ ಬಾಳೆತೋಟದತ್ತ ಬರಬಹುದು, ಇಲ್ಲವೇ ಪಶ್ಚಿಮದಲ್ಲಿದ್ದ ಗುಡ್ಡದ ತಪ್ಪಲಿನ ಮುಖಾಂತರ ಸಾಧು ಗುಡಿಸಿಲಿನ ಕಡೆಗೆ ಬರಬಹುದು ಎಂದು ಊಹಿಸಿದೆ.

ನಾನು, ಬೋರ, ಸಾಧು ಗುಡಿಸಿಲಿನ ಬಳಿ ಅರ್ಧ ಫರ್ಲಾಂಗು ದೂರದಲ್ಲಿ ಹುಲಿಯ ಹಳೆ ಹೆಜ್ಜೆ ಗುರುತುಗಳನ್ನು ನೋಡಿದ್ದೆವು. ಹಿಂದಿನ ದಿನ ಹುಲಿ ಅತ್ತಣಿಂದ ಬಂದಿರಲಿಲ್ಲ. ಇವನ್ನೆಲ್ಲಾ ಪರಿಗಣಿಸಿದರೆ ಹುಲಿ ಬಾಳೆತೋಟದ ಪಶ್ಚಿಮದಿಂದ ಬರಬಹುದೆಂದು ಲೆಕ್ಕ

ಹಾಕಿದೆ. ನನ್ನ ಲೆಕ್ಕಾಚಾರಕ್ಕೆ ಊಹೆಯಲ್ಲದೆ ಬೇರಾವ ಆಧಾರವೂ ಇರಲಿಲ್ಲವೆನ್ನಿ. ಅದು ನೆಟ್ಟಗೆ ದಾರಿಗುಂಟ ನಡೆದೇ ಸಾಧು ಗುಡಿಸಿಲನ್ನು ಸಮೀಪಿಸಿದರೂ ಸಮೀಪಿಸಿತೇ! ಏನಾದರಾಗಲಿ ಪಶ್ಚಿಮಕ್ಕಿದ್ದ ಗುಡ್ಡದ ತಪ್ಪಲಲ್ಲಿ ಕರು ಕಟ್ಟಿ ಒಂದು ಚಾನ್ಸ್ ನೋಡೇ ಬಿಡುವುದೆಂದು ನಿರ್ಧರಿಸಿದೆ.

ನನ್ನ ನಿರ್ಧಾರ ಬೋರನಿಗೆ ತಿಳಿಸಿ ಅವಸರದಲ್ಲಿ ಮೂರು ಕರುಗಳನ್ನೂ ಬಿಚ್ಚಿಕೊಂಡು ಬೋರನ ಹುಲ್ಲುಗುಡಿಸಿಲಿನತ್ತ ಹೊಡೆದುಕೊಂಡು ಹೋದೆವು. ಬಾಳೆ ತೋಟದಿಂದ ಎರಡು ಫರ್ಲಾಂಗ್ ದೂರದಲ್ಲಿ ನಾಲ್ಕಾರು ಅದೇರೀತಿಯ ಗುಡಿಸಿಲುಗಳ ಪಕ್ಕ ಅವನ ಗುಡಿಸಿಲು ಇತ್ತು. ಅಲ್ಲಿ ಕೋಣಗಳನ್ನು ಕಟ್ಟಿ ಹೋರಿಗರುವನ್ನು ಗುಡ್ಡದ ತಪ್ಪಲಿನತ್ತ ಹೊಡೆದುಕೊಂಡು ನಡೆದೆವು. ಗುಡ್ಡದ ತಪ್ಪಲಿನಿಂದ ಹಳ್ಳದ ಕಡೆಗೆ ಹರಿದು ಹೋಗುತ್ತಿದ್ದ ಸಣ್ಣ ಝರಿಯ ದಡಕ್ಕೆ ಹೋದೆವು. ಝರಿಯಲ್ಲಿ ನೀರೇನೂ ಹರಿಯುತ್ತಿರಲಿಲ್ಲ. ನೆಲ ಮಾತ್ರ ತೇವವಾಗಿತ್ತು. ಝರಿಯ ದಡದಲ್ಲಿ ಹುಲಿ ಹೆಜ್ಜೆ ಗುರುತುಗಳು ಯಥೇಚ್ಚವಾಗಿ ಕೆಸರಿನಲ್ಲಿ ಮೂಡಿದ್ದು ಗೋಚರಿಸಿತು. ಹುಲಿ ಆ ದಿಕ್ಕಿನಿಂದ ಆಗಮಿಸುವಾಗ ನಿರ್ಗಮಿಸುವಾಗ ಇದೇ ದಾರಿಯನ್ನು ಬಳಸುತ್ತದೆಂದು ನನ್ನ ಲೆಕ್ಕಾಚಾರಕ್ಕೆ ನನಗೇ ಬಹಳ ಖುಷಿಯಾಯ್ತು.

ಅಲ್ಲಿ ದಿಣ್ಣೆಯ ಮೇಲೊಂದು ಅಗಲವಾದ ದಟ್ಟ ಎಲೆಗಳಿದ್ದ ಮತ್ತಿ ಮರ ಇತ್ತು. ಹುಲಿಗೆ ಅರಿವಾಗದಂತೆ ಮಚಾನು ಕಟ್ಟಿ ಕೂರಲು ಅದರ ಎಲೆಗಳು ಸಾಕಷ್ಟು ದಟ್ಟವಾಗಿದ್ದ ಕಾರಣ ಅದನ್ನೇ ಆರಿಸಿಕೊಂಡೆ. ಅದರ ತೊಗಟೆ ಸಹ ಒರಟಾಗಿದ್ದು ಮಚಾನಿನ ದಾರ ಬಿಗಿಯಲು ಅನುಕೂಲವಾಗಿತ್ತು. ಆ ಮರದಿಂದ ಸುಮಾರು ಹದಿನೈದು ಅಡಿ ಆಚೆ ಝರಿಗೆ ಸಮೀಪದಲ್ಲಿ ಹೋರಿಗರುವನ್ನು ಕಟ್ಟಲು ನಿರ್ಧರಿಸಿದೆವು.

ಮತ್ತಿ ಮರದ ಎಲೆಗಳು ಸಾಕಷ್ಟು ವಿಸ್ತಾರವಾಗಿ ದಟ್ಟವಾಗಿದ್ದುದರಿಂದ ನಮಗೆ ಮರದಮೇಲೆ ಕೂರಲು ಅಂಥ ವ್ಯಾಪಕವಾದ ಏರ್ಪಾಡಿನ ಅಗತ್ಯವೇನೂ ಇರಲಿಲ್ಲ. ಅಲ್ಲದೆ ಮರದಲ್ಲಿ ಮೂರು ಕವಲಾಗಿ ಕೊಂಬೆಯೊಡೆದಿದ್ದರಿಂದ ಅದರ ಕವೆಗಳ ನಡುವೆ ಕುಳಿತುಕೊಳ್ಳಲು ಜಾಗ ಸಾಕಷ್ಟು ಇತ್ತು. ಅಲ್ಲೇ ಒಂದಷ್ಟು ಹಸಿ ಸೊಪ್ಪನ್ನೂ ಅಗಲವಾದ ಎಲೆಗಳನ್ನೂ ತುರುಕಿ ಕುಳಿತುಕೊಳ್ಳಲು ಜಾಗ ಮಾಡಿಕೊಂಡೆ. ಅದೇನೂ ಅತ್ಯುತ್ತಮವಾಗಿ ರಚಿಸಿದ ಮಚಾನೆಂದು ಹೇಳುವಂತಿರಲಿಲ್ಲ. ಆದರೆ ಅವತ್ತಿನ ರಾತ್ರಿ ನಿಭಾಯಿಸಲು ಏನೂ ಅಡ್ಡಿ ಇರಲಿಲ್ಲ.

ಅಷ್ಟೆಲ್ಲ ಮಾಡಿ ಮುಗಿಸುವಹೊತ್ತಿಗೆ ಸಂಜೆ ಐದೂವರೆ ಗಂಟೆಯಾಯ್ತು. ಇನ್ನು ತಡ ಮಾಡುವಂತಿರಲಿಲ್ಲ. ಆದರೆ ಬೋರ ಆ ಹೊತ್ತಿನಲ್ಲಿ ನಿರಾಯುಧನಾಗಿ ಹಟ್ಟಿಗೆ ಒಬ್ಬನೇ ಹಿಂದಿರುಗುವುದು ಹೇಗೆ? ಅಲ್ಲದೆ ಈಗಾಗಲೇ ಹುಲಿ ಗುಡ್ಡದ ನೆತ್ತಿಯಲ್ಲೆಲ್ಲೋ ಇದ್ದರೆ ಅದು ನಮ್ಮ ಓಡಾಟವನ್ನೆಲ್ಲಾ ಸುಲಭವಾಗಿ ನೋಡಬಹುದು. ಈ ಝರಿಯ

ಹತ್ತಿರ ನಮ್ಮ ಚಟುವಟಿಕೆಗಳನ್ನೆಲ್ಲಾ ಅದು ನೋಡಿದರೆ ಅನಂತರ ಈಕಡೆ ಬರುವ ಧೈರ್ಯ ಮಾಡುತ್ತದೆಯೆ? ಬೇರೆ ದಾರಿ ಹಿಡಿಯುವುದಿಲ್ಲವೆ? ಧೈರ್ಯಶಾಲಿಯಾಗಿದ್ದರೆ ಅದು ಈಗಲೇ ಅಲ್ಲಿಂದ ಬಂದು ನಮ್ಮಲ್ಲಿ ಯಾರಾದರೂ ಒಬ್ಬರ ರಕ್ತದ ರುಚಿ ನೋಡಲು ಹವಣಿಸುತ್ತಿದ್ದರೆ?

ಬೋರ ನಾವು ತಂದಿದ್ದ ಕೆಂದು ಹೋರಿಯನ್ನು ಅಲ್ಲೆ ಸನಿಹದಲ್ಲಿದ್ದ ಗಿಡ ಒಂದಕ್ಕೆ ಕಟ್ಟಿದ. ಹುಲಿಗೆ ಆಹಾರವಾಗಿ ಅದನ್ನು ಕಟ್ಟುತ್ತಿರುವುದಕ್ಕೆ ಅದಕ್ಕೆ ಸಾಷ್ಟಂಗ ಅಡ್ಡಬಿದ್ದು ಮೂರುಸಾರಿ ನಮಸ್ಕಾರ ಮಾಡಿ ಕ್ಷಮಾಪಣೆ ಕೇಳಿಕೊಂಡ. ಇದು ಇಲ್ಲಿನ ಕಾಡುಜನರೆಲ್ಲ ಪ್ರತಿಸಾರಿಯೂ ಮಾಡುತ್ತಿದ್ದ ಶಾಸ್ತ್ರ. ಬೋರ ಒಬ್ಬನೇ ಹಿಂದಿರುಗಲು ಅಡ್ಡಿ ಇಲ್ಲವೆಂದು ಹೇಳಿ ಅವಸರವಸರವಾಗಿ ಹಟ್ಟಿಕಡೆ ಹೊರಟುಹೋದ. ಸೂರ್ಯ ಬೆಟ್ಟದ ಆಚೆಮಗ್ಗುಲಲ್ಲಿ ಇಳಿದು ಸುಮಾರು ಹೊತ್ತಾಗಿತ್ತು. ಕತ್ತಲ ಮುನ್ಸೂಚನೆಯಂತೆ ಮರಗಿಡಗಳ ನೆರಳೆಲ್ಲಾ ಉದ್ದಾಗುತ್ತ ವಿಸ್ತಾರವಾಗುತ್ತ ಹೋಯ್ತು. ನಾನು ಮರ ಹತ್ತಿ ಹುಲಿ ಬರಬಹುದಾದ ಗುಡ್ಡದ ದಿಕ್ಕಿಗೆ ಮುಖ ಮಾಡಿಕೊಂಡು ಕುಳಿತೆ. ನನ್ನ ಹಿಂಭಾಗದ ಹಳ್ಳದ ತಡಿಯ ದಿಕ್ಕಿನಿಂದ ಆನೆಯೊಂದು ಸಂತೋಷದಿಂದ ಘೀಳಿಟ್ಟ ಸದ್ದು ಕೇಳಿಸಿತು. ಬಹುಶಃ ಹಳ್ಳದ ನೀರನ್ನು ಸೊಂಡಿಲಿಂದ ಮೈಮೇಲೆ ಸುರಿದುಕೊಳ್ಳುತ್ತ ಆನಂದದಿಂದ ಸ್ನಾನ ಮಾಡುತ್ತಿರಬಹುದು. ನಿರಪಾಯದ ಆನೆಯ ಸಾನ್ನಿಧ್ಯವನ್ನು ಗಣನೆಗೇ ತೆಗೆದುಕೊಳ್ಳದೆ ಕಾಡುಕೋಳಿಗಳೂ, ಚಿಟ್ಟುಕೋಳಿಗಳೂ, ನವಿಲುಗಳೂ ಒಂದರಹಿಂದೆ ಒಂದರಂತೆ ಕೇಕೆಹಾಕಿ ಕೂಗಿದುವು. ನನ್ನೆದುರಿದ್ದ ಗುಡ್ಡದ ತಪ್ಪಲಲ್ಲಿ ಒಂದು ಗುಂಪು ಸಿಂಗಳೀಕಗಳು ಆನಂದದಿಂದ ಕೊಂಬೆಯಿಂದ ಕೊಂಬೆಗೆ ಹಾರುತ್ತ ಆಟವಾಡುತ್ತಿದ್ದುವು.

ಊಂಪ್ ಊಂಪ್ ಊಂಪ್ ಗುಡ್ಡದತ್ತಣಿಂದ ಪ್ರತಿಧ್ವನಿಸುವಂತೆ ಸಿಂಗಳೀಕಗಳು ಖುಷಿಯಲ್ಲಿ ಕೂಗಿದುವು. ಮರಿಗಳೂ ಹೆಣ್ಣುಗಳೂ ಚೀಕ್ ಚೀಕ್ ಚೀಕ್ ಎನ್ನುವುದು ಸಹ ಅದರಲ್ಲಿ ಬೆರೆತಿತ್ತು. ಅವುಗಳ ಆನಂದೋಲ್ಲಾಸದ ಕೂಗಾಟ ಮರದ ಮೇಲೆ ಕದ್ದು ಕೌಚಿಕುಳಿತಿದ್ದ ನನಗೆ ಹೊಟ್ಟೆಕಿಚ್ಚಾಗುವಂತೆ ಮಾಡಿತು. ದೂರದ ಮರವೊಂದರ ತುತ್ತ ತುದಿಯಲ್ಲಿ ಒಂದು ಕಾವಲುಗಾರ ಸಿಂಗಳೀಕ ಕುಳಿತು ಕಾಡಿನ ತಳದಲ್ಲಿ ಹಿಡಿಯಲು ಹೊಂಚಿ ಹವಣಿಸುತ್ತಾ ತೆವಳಿಬರುವ ಆಜನ್ಮ ವೈರಿಗಳಾದ ಚಿರತೆ ಹುಲಿಗಳತ್ತ ಹದ್ದಿನ ಕಣ್ಣಿನಲ್ಲಿ ನೋಡುತ್ತಾ ಕಾವಲು ಕಾಯುತ್ತಿತ್ತು.

ನಾನು ಇದನ್ನೆಲ್ಲಾ ಮನದಲ್ಲೇ ಚಿತ್ರಿಸಿಕೊಳ್ಳುತ್ತಾ ನೋಡುತ್ತಿದ್ದಂತೆಯೇ ಇದ್ದಕ್ಕಿದ್ದಂತೆ ಆ ಕಾವಲುಗಾರ ಕೊಂಬೆಯ ಮೇಲೆ ಎದ್ದುನಿಂತು ಸಂಜೆಗತ್ತಲಿನ ತಂಗಾಳಿಯಲ್ಲಿ ಎಲ್ಲರೂ ಸ್ಪಷ್ಟವಾಗಿ ಆಲೈಸುವಂತೆ 'ಹರ್ ಹ್ಹಾಹ್ಹಾ ಹರ್ಹರ್ ಹರ್ ಹರ್ ಹ್ಹಾಹ್ಹಾ ಹರ್ಹರ್ ಹರ್' ಎಂದು ಎಚ್ಚರಿಕೆ ಗಂಟೆ ಮೊಳಗಿಸಿದ.

ಆ ಕಾವಲುಗಾರ ಕೋತಿಯ ಎಚ್ಚರಿಕೆ ಕಾಡಿನ ಮೌನದಲ್ಲಿ ಎಂಥ ಅದ್ಭುತವಾಗಿ

ಕೆಲಸ ಮಾಡಿತು ಎನ್ನುತ್ತೀರಿ! ಅದರ ಕೂಗು ಕೇಳಿದೊಡನೆ ಮರದಲ್ಲಿ ಹಾರಾಡುತ್ತಿದ್ದ ಸಿಂಗಳೀಕಗಳೆಲ್ಲ ಗಪ್‌ಚಿಪ್ಪಾಗಿ ಸದ್ದು ನಿಲ್ಲಿಸಿ ಮರದ ಸೊಪ್ಪಿನೆಡೆಗಳಲ್ಲಿ ಅಡಗಿದ್ದಲ್ಲದೆ, ಕೆಳಗೆ ಕಣಿವೆಯಲ್ಲಿ ಮೇಯುತ್ತಿದ್ದ ಜಿಂಕೆ ಹಿಂಡುಗಳು 'ಆವ್ ಆವ್ ಆವ್' ಎಂದು ತಾವೂ ಎಚ್ಚರಿಕೆ ಕೂಗು ಮೊಳಗಿಸುತ್ತ ಮಿಂಚಿನ ವೇಗದಲ್ಲಿ ಕಾಡಿನ ಕಡೆಗೆ ಪಲಾಯನ ಮಾಡಿದುವು.

ನನಗೆ ಅದು ಸ್ಪಷ್ಟವಾದ ಎಚ್ಚರಿಕೆ! ನನಗೆ ಗೊತ್ತಾಯ್ತು ನರಭಕ್ಷಕ ಬರುತ್ತಿದೆ ಎಂದು. ಅದು ಬರುವ ದಾರಿಯನ್ನು ಸರಿಯಾಗಿ ಊಹಿಸಿದ್ದಕ್ಕೆ ನನಗೆ ಬಹಳ ಖುಷಿಯಾಯ್ತು ಕೋವಿಯನ್ನು ಬಿಗಿಯಾಗಿ ಹಿಡಿದು ಬೆಟ್ಟದ ದಿಕ್ಕನ್ನು ನೋಡುತ್ತ ಕುಳಿತೆ.

ಅಷ್ಟರಲ್ಲಿ ನರಭಕ್ಷಕ ತನ್ನ ಆಗಮನವನ್ನು ಖಾತರಿಪಡಿಸಿತು.. 'ಆ್ರ್ರಹ್ ಆ್ರ್ರಹ್ ಆ್ರ್ರ್ರಹ್' ಎಂದು ನಾಲ್ಕಾರುಬ್ಬಾರಿ ನನ್ನ ಎದುರು ದಿಕ್ಕಿನ ಗುಡ್ಡದ ತಪ್ಪಲಿಂದ ನರಭಕ್ಷಕ ಘರ್ಜಿಸಿತು.

ಆದರೆ ಅದು ಕಾಣಿಸಲಿಲ್ಲ. ಹದಿನೈದು ನಿಮಿಷಗಳವರೆಗೆ ಸತತವಾಗಿ ಕೂಗು ಮೊಳಗಿಸುತ್ತಿದ್ದ ಕೋತಿ ಕಾವಲುಗಾರ ತನ್ನ ಉದ್ದೇಶ ನೆರವೇರಿದ್ದನ್ನು ನೋಡಿ ನಿಃಶಬ್ದವಾದ. ಜಿಂಕೆ ಗುಂಪು ಎಚ್ಚರಿಕೆ ಕೂಗು ಮೊಳಗಿಸುತ್ತ ದೂರಾಗಿದ್ದು ಕ್ಷೀಣವಾಗುತ್ತ ಬಂದ ಅದರ ದನಿಯಿಂದ ಗೊತ್ತಾಯ್ತು.

ವೇಗವಾಗಿ ಕತ್ತಲಾಗುತ್ತಿತ್ತು. ನಾನು ಆ ನಸುಗತ್ತಲಲ್ಲಿ ಗುಡ್ಡದ ಕಣಿವೆಯತ್ತ ಸದ್ದಿಲ್ಲದೆ ಹುಲಿ ನುಸುಳುತ್ತಿರಬಹುದೇ ಎಂದು ಸಂಶಯದಿಂದ ಯಾವುದಾದರೂ ಕ್ಷೀಣ ಚಲನೆ ಕಂಡೀತೆನೋ ಎಂದು ಎಲ್ಲೆಡೆ ದುರುಗುಟ್ಟಿ ನೋಡಿದೆ.

ಕೆಲವು ನಿಮಿಷಗಳಲ್ಲೇ ಏನೋ ಪ್ರಾಣಿ ಧಾವಿಸಿದ್ದು ಕಾಣಿಸಿತು! ನೋಡಿದರೆ ಅದೊಂದು ಕರಡಿ. ಕಣಿವೆಯ ಇಳುಕಲಲ್ಲಿದ್ದ ಬೋರೆಮರಗಳತ್ತ ಅದರ ಹಣ್ಣು ತಿನ್ನಲು ಅವಸರದಲ್ಲಿ ಓಡುತ್ತಿತ್ತು. ಅದಕ್ಕೆ ಆ ಹಾದಿಯಾಗಿ ಬರುತ್ತಿದ್ದ ನರಭಕ್ಷಕನ ಪರಿವೆಯಿದ್ದಂತೆ ಕಾಣಲಿಲ್ಲ. ಮರದ ಮೇಲೆ ಕೌಚಿ ಕುಳಿತಿದ್ದ ನನ್ನನ್ನಂತೂ ಲಕ್ಷಕ್ಕೂ ತಗೊಳ್ಳಲಿಲ್ಲ.

ಅನಂತರ ಸಂಪೂರ್ಣ ಕಗ್ಗತ್ತಲು ಕವಿಯಿತು. ಕಾಡಿನ ಕಡೆಯಿಂದ ಕೊರೆಯುವ ಚಳಿಗಾಳಿ ಬೀಸತೊಡಗಿತು. ನನ್ನ ಮೈಯ್ಯೆಲ್ಲಾ ಚಳಿಗೆ ಮರಗಟ್ಟಿದಂತಾಯ್ತು. ಹಲ್ಲು ಕಟಕಟ ಸದ್ದು ಮಾಡದಂತೆ ಅವಡುಗಚ್ಚಿ ಚಳಿಯನ್ನು ಪ್ರತಿರೋಧಿಸುತ್ತ ಕುಳಿತೆ.

ಅಷ್ಟರಲ್ಲಿ ಇದ್ದಕ್ಕಿದ್ದಂತೆ ನನ್ನ ಬೆನ್ನಹಿಂದೆ ಏನೋ ಚಲಿಸಿದಂತೆ ಭಾಸವಾಯ್ತು. ನಾನು ಅಲ್ಲಾಡದೆ ಏನಿರಬಹುದು ಎಂದುಯೋಚಿಸಿದೆ! ಅಷ್ಟರಲ್ಲಿ ಮತ್ತೊಮ್ಮೆ ಚಲನೆ! ನನ್ನ ಕುತ್ತಿಗೆಯ ಹತ್ತಿರ ಏನೋ ತೆಳ್ಳಗಿನ ನುಣುಪಾದ ರೋಮಮಯ ಬೆರಳುಗಳು ಸವರಿದಂತಾಯ್ತು. ನಾನು ಗಾಬರಿ ಬಿದ್ದು ನನ್ನ ಕುತ್ತಿಗೆ ಸವರಿದ ಕೈಗಳು ಯಾವೆಂದು ನೋಡಲು ಸಟ್ಟನೆ ಅತ್ತ ತಲೆ ತಿರುಗಿಸಿದೆ. ನನ್ನ ಭುಜದಿಂದ ಎರಡೇ ಇಂಚು ದೂರದಲ್ಲಿ

ಎರಡು ವಿಸ್ತಾರ ಕಣ್ಣುಗಳ ಒಂದು ಪುಟ್ಟ ಮನುಷ್ಯಾಕೃತಿ! ಆರೇಳು ಇಂಚುಗಳಷ್ಟು ಎತ್ತರದ ಉದ್ದುದ್ದ ಕಾಲು ಕೈಗಳ ಮನುಷ್ಯನನ್ನೇ ಹೋಲುವ ಕಾಡುಪಾಪ! ಕಾಡುಪಾಪಗಳು ಕತ್ತಲಲ್ಲಿ ಮಾತ್ರ ಹೊರಬರುವ ನಿಶಾಚರ ಜೀವಿಗಳು.

ಕರುಣಾಜನಕ ಮುಖಭಾವದ ಈ ಕೋತಿಗಳನ್ನು ಅವುಗಳ ಕಣ್ಣುಗಳಿಗೆ ಔಷಧೀಯ ಗುಣಗಳಿವೆಯೆಂಬ ಕಾರಣದಿಂದ ದಕ್ಷಿಣ ಭಾರತದ ಕಾಡುಜನಗಳು ಬೇಟೆಯಾಡಿ ಹಿಡಿಯುತ್ತಾರೆ. ಅವು ಜಿವಂತವಾಗಿರುವಾಗಲೇ ಕಣ್ಣು ಕಿತ್ತು ಔಷಧಿ ಮಾಡಬೇಕೆಂಬ ನಂಬುಗೆಯ ದೆಸೆಯಿಂದ ಈ ಕಾಡಿನ ಪುಟ್ಟ ನಿರಪಾಯದ ಜೀವಿಗಳು ಕ್ರೂರ ಮರಣವನ್ನಪ್ಪಬೇಕಾಗಿದೆ.

ನಾನು ತಲೆ ತಿರುಗಿಸಿದ ಕೂಡಲೆ ಬೆಚ್ಚಿಬಿದ್ದ ಕಾಡುಪಾಪ ಅಲ್ಲಿಂದ ನೆಗೆದು ಇನ್ನೊಂದು ಕೊಂಬೆಗೆ ಹಾರಿ ಮಾಯವಾಯ್ತು. ಆದರೆ ಅದು ತಪ್ಪಿಸಿಕೊಂಡು ಮರದ ನೆತ್ತಿಗೆ ಹತ್ತಿದ ಮೇಲೆ ಅದಕ್ಕೆ ಮುಂದಕ್ಕೆ ಬೇರೆ ಮರಕ್ಕೆ ದಾಟಿಕೊಳ್ಳಲು ಯಾವ ಮರದ ಕೊಂಬೆಯೂ ಈ ಮರಕ್ಕೆ ತಾಗಿಲ್ಲ ಎಂದು ಗೊತ್ತಾಗಿದೆ. ಮರ ಇಳಿಯಲು ನಾನು ನಡುವೆ ಕುಳಿತಿದ್ದರಿಂದ ಮುಂದೇನು ಮಾಡಬೇಕೆಂದು ತೋಚದೆ ಅದು ಕೀeee ಕೀeee ಎಂದು ನೀಳ್ದನಿಯಲ್ಲಿ ಕಿರಿಚುತ್ತಾ ಕುಳಿತುಕೊಂಡಿತು. ಕೊಂಚ ಹೊತ್ತಿನ ತರುವಾಯ ಅದು ಯಾವ ಕಡೆಯಿಂದ ನಿರ್ಗಮಿಸಿತೋ ಏನೋ! ಕೂಗಂತೂ ನಿಂತಿತು.

ಕಾಲ ನಿಧಾನವಾಗಿ ಸರಿಯಿತು. ಆಗಾಗ ಸುಯ್ಯೆಂದು ಬೆಟ್ಟದ ಕಡೆಯಿಂದ ಚಳಿಗಾಳಿ ಬೀಸುತ್ತಿತ್ತು. ಮಿಡತೆಗಳು ಆಗೀಗ ಅತಿ ತಾರಸ್ವರದಲ್ಲಿ ಚಿರಿಚಿರಿ ಎಂದು ಸದ್ದು ಮಾಡುತ್ತಿದ್ದುವು. ಒಂದು ಸಾರಿ ದೂರದಿಂದಲೇ ಕಾಡುಕೋಣ ಒಂದು ಬಸ್ ಬುಸ್ ಎಂದು ನನ್ನತ್ತ ಮೂಗು ತಿರುಗಿಸಿ ವಾಸನೆ ಹಿಡಿಯುತ್ತಿರುವ ಸದ್ದು ಕೇಳಿಸಿತು. ಆಕಾಶದಲ್ಲಿ ಮೋಡದ ತುಣುಕಿರಲಿಲ್ಲ. ಚದುರಿಬಿದ್ದ ಬೆಂಕಿಯ ಕಿಡಿಗಳಂತೆ ಆಕಾಶದಲ್ಲಿ ಕೋಟ್ಯಂತರ ನಕ್ಷತ್ರಗಳು ಕಿಕ್ಕಿರಿದಿದ್ದುವು. ಈ ನಕ್ಷತ್ರ ಕಾಂತಿಯ ಕ್ಷೀಣ ಬೆಳಕಲ್ಲಿ ಸುತ್ತಲಿನ ಮರ ಮಟ್ಟುಗಳನ್ನು ಊಹಾಮಾತ್ರ ಅಂದಾಜು ಮಾಡಬಹುದಿತ್ತು. ಅಲ್ಲಿನ ಮೌನವನ್ನು ಮುರಿದು ಬಾಳೆತೋಟದ ಕಡೆಯಿಂದ ನರಿಗಳು 'ಅಯ್ಯಯ್ಯೋeeee ಅಯ್ಯಯ್ಯೋeeee' ಎಂದು ದೀರ್ಘವಾಗಿ ಬಳ್ಳಿಕ್ಕುವುದು ಕೇಳಿಸಿತು. ಅದು ನರಿ ಗುಂಪಿನ ಯಜಮಾನನ ದನಿ ಇರಬೇಕು. ಏಕೆಂದರೆ ಅದು ಕೂಗಿದ ಕೂಡಲೇ ಅದರ ಮೇಲ್ಪಂಗ್ತಿಯನ್ನನುಸರಿಸಿ ಹತ್ತಾರು ನರಿಗಳು ಅಸ್ತವ್ಯಸ್ತವಾಗಿ ಅನೇಕ ದಿಕ್ಕಿನಿಂದ ಕೂಗತೊಡಗಿದುವು.

ಕೂಗುತ್ತಿದ್ದ ನರಿಗಳು ಯಾಕೋ ಇದ್ದಕ್ಕಿದ್ದಹಾಗೇ ಹಠಾತ್ತಾಗಿ ಅರ್ಧದಲ್ಲೇ ನಿಲ್ಲಿಸಿದುವು. ಒಂದು ನಿಮಿಷ ನಾನು ಆಶ್ಚರ್ಯಪಡುತ್ತ ಯೋಚಿಸುತ್ತಿರಬೇಕಾದರೆ ಇದ್ದಕ್ಕಿದ್ದಂತೆ ನರಿಗಳು ಬಾಯಿ ಬಿಗಿಹಿಡಿದಿದ್ದರ ಕಾರಣ ತಾನಾಗೇ ಗೊತ್ತಾಯ್ತು. ನರಿಗಳು ಕೂಗಿದ ಬಾಳೆತೋಟದ ದಿಕ್ಕಿನಿಂದಲೇ ಮತ್ತೊಮ್ಮೆ ಹುಲಿ 'ಆ್ರ್ರಹ್ ಆ್ರ್ರ್ರಹ್ ಆ್ರ್ರ್ರ್ರಹ್'

ಎಂದು ಮೂರುಬಾರಿ ಘರ್ಜಿಸಿತು.

ನನಗೆ ಆಘಾತ! ಹುಲಿ ನನಗೆ ಸುಳಿವೇ ಕೊಡದೆ ಯಾವ ಮಾಯದಲ್ಲೋ ನಾನು ಕುಳಿತಿದ್ದ ಮತ್ತಿ ಮರವನ್ನು ದಾಟಿ ಮುಂದೆ ಹೋಗಿದೆ! ನಾನು ಕಟ್ಟಿದ್ದ ಕರು ಅದರ ಕಣ್ಣಿಗೆ ಬಿದ್ದಿಲ್ಲ. ಈಗಾಗಲೇ ಬಾಳೆತೋಟದ ಹತ್ತಿರಕ್ಕೆ ಹೋಗಿದೆ! ಬಹುಶಃ ಆ ಕಳ್ಳ ಸಾಧು ಗುಡಿಸಲಿನ ಹತ್ತಿರವೇ ಇರಬಹುದು! ನಾನು ಸಮಯವಿಲ್ಲದೆ ದಾರಿ ಪಕ್ಕ ಕೋಣ ಕಟ್ಟದಿದ್ದುದಕ್ಕಾಗಿ ಪರಿತಪಿಸಿದೆ. ಇದಕ್ಕಾಗಿ ಬೇಸರಿಸುತ್ತಿದ್ದಾಗಲೇ ನನ್ನ ತಲೆಯಲ್ಲೊಂದು ಹುಚ್ಚು ಆಲೋಚನೆ ಬಂತು. ಯಾವ ಲೆಕ್ಕಾಚಾರದ ಮೇಲೆ ನಾನು ಹಾಗೆ ಆಲೋಚಿಸಿದೆನೋ ನನಗೆ ಇವತ್ತಿಗೂ ಸಮರ್ಪಕವಾದ ಕಾರಣ ಹೊಳೆದಿಲ್ಲ.

ಹುಲಿ ಆ ಸಾಧುವಿನ ಗುಡಿಸಿಲಿನ ಕಡೆಯಿಂದ ಘರ್ಜಿಸುತ್ತಿದ್ದುದರಿಂದ ಈ ಕೂಡಲೇ ಅಲ್ಲಿಗೆ ಹೋಗಬೇಕೆನ್ನಿಸಿತು. ಸ್ವಾಧುವಿಗೂ ಹುಲಿಗೂ ಸಂಬಂಧ ಕಲ್ಪಿಸಿದ್ದ ಬೋರನ ಅಂಧಶ್ರದ್ಧೆ ನನ್ನ ತಲೆಯೊಳಗೂ ಸುಪ್ತವಾಗಿ ಕೆಲಸ ಮಾಡುತ್ತಿತ್ತೋ ಏನೋ. ನಾನು ಸರಸರ ಮರ ಇಳಿದು ಆ ನಸುಬೆಳಕಿನಲ್ಲಿ ಎಡವುತ್ತಾ ತಡವುತ್ತಾ ಬಾಳೆ ತೋಟದತ್ತ ವೇಗವಾಗಿ ಕಾಲುಹಾಕಿದೆ. ಚಂದ್ರ ಆಗಲೇ ಬೆಟ್ಟದ ಅಂಚಿನಿಂದ ಮೇಲೆ ಬಂದಿದ್ದ. ಹುಲಿ ಘರ್ಜಿಸುತ್ತಿರುವವರೆಗೂ ನನಗೆ ಯಾವ ಅಪಾಯವೂ ಇಲ್ಲವೆಂದು ಗೊತ್ತಿದ್ದರಿಂದ ಧೈರ್ಯವಾಗೇ ಸಾಧು ಗುಡಿಸಿಲಿನತ್ತ ಓಡಿದೆ. ಸಂಜೆ ಮತ್ತಿಮರದ ಬಳಿಗೆ ಬಂದ ಕಾಲುಹಾದಿಯನ್ನು ಹಿಂದಿರುಗುವಾಗ ಚಂದ್ರನ ಬೆಳಕಿನಲ್ಲಿ ಗುರುತಿಸುವುದೇನೂ ನನಗೆ ಕಷ್ಟವಾಗಲಿಲ್ಲ.

ನಾನು ಸಾಧು ಗುಡಿಸಿಲನ್ನು ಪಶ್ಚಿಮದಿಂದ ಸಮೀಪಿಸಿದೆ. ಹುಲಿ ಅದರ ಆಚೆ ಪಾರ್ಶ್ವದಿಂದ, ಎಂದರೆ ಉದಕಮಂಡಲ ದಾರಿ ಕಡೆಯಿಂದ ಘರ್ಜಿಸುತ್ತಿತ್ತು. ಸಾಧು ಗುಡಿಸಿಲು ಕತ್ತಲಲ್ಲಿ ಮುಳುಗಿತ್ತು. ಯಾವ ಸದ್ದೂ ಇರಲಿಲ್ಲ.

ಸಾಧು ಗುಡಿಸಿಲಿನೊಳಗೆ ಇದ್ದಾನೋ ಎಂದು ಚಿಂತಿಸಿದೆ. ಮೆಲ್ಲಗೆ ಅವನ ಗುಡಿಸಿಲಿನ ತಡಿಕೆಗೆ ಕಿವಿ ಹಚ್ಚಿ ಒಳಗೇನಾದರೂ ಸದ್ದು ಕೇಳುತ್ತದೋ, ಕೋನೇಪಕ್ಷ ಗಾಢನಿದ್ರೆಯಲ್ಲಿರುವವರ ಉಸಿರಾಡುವ ಸದ್ದಾದರೂ ಕೇಳುತ್ತದೋ ಎಂದು ಆಲೈಸಿದೆ. ಗುಡಿಸಿಲು ಸಂಪೂರ್ಣ ಖಾಲಿಯಿದ್ದಂತೆ ಕಂಡಿತು.

ಆಗಲೇ ಇನ್ನೊಮ್ಮೆ ಹುಲಿ ಘರ್ಜಿಸಿದ್ದು ಕೇಳಿಸಿತು. ಹುಲಿ ಗುಡಿಸಿಲಿನ ತೀರಾ ಸಮೀಪಕ್ಕೆ ಬಂದಹಾಗೆನ್ನಿಸಿತು ಘರ್ಜನೆ ಕೇಳಿ. ಬಹುಶಃ ಈಗಾಗಲೇ ಅದು ದಟ್ಟವಾಗಿ ಬೆಳೆದಿದ್ದ ಬಾಳೆ ತೋಟದ ಬೇಲಿಯೊಳಗೇ, ಹೆಚ್ಚೆಂದರೆ ಅರ್ಧ ಫರ್ಲಾಂಗ್ ದೂರದಲ್ಲಿದ್ದೀತು. ಆ ರಾತ್ರಿ ನನಗೆ ಮತ್ತೊಮ್ಮೆ ಇನ್ನೊಂದು ಹುಚ್ಚು ಆಲೋಚನೆ ಮನಸ್ಸಿಗೆ ಬಂತು. ನನ್ನ ತಲೆಗೆ ಅದು ಹೊಳೆಯುತ್ತಲೇ ಅದರ ಸಾಧಕ ಭಾಧಕಗಳನ್ನು ಇನಿತೂ ಯೋಚಿಸದೆ ಜಾರಿಗೆ ತಂದೆ.

ಶ್ವಾಸಕೋಶದಲ್ಲಿ ಹಿಡಿಸಬಹುದಾದಷ್ಟೂ ಉಸಿರೆಳೆದುಕೊಂಡು, ನನ್ನ ಗುರು, ಹಳೇ ಸ್ನೇಹಿತ ಪೂಜಾರಿಬೈರನ ಹತ್ತಿರ ನೂರಾರುಸಾರಿ ಪುನರಾವರ್ತನೆ ಮಾಡಿಮಾಡಿ ಕಲಿತಿದ್ದ ಹುಲಿಯ ಘರ್ಜನೆಯನ್ನು ಮೂರು ಸಾರಿ ಕೂಗಿ ನರಭಕ್ಷಕನನ್ನು ಅನುಕರಿಸಿದೆ. ಬೈರನ ಶಿಕ್ಷಣ ಹೇಗಿತ್ತೆಂದರೆ ನಾನು ಆ ಕೂಗನ್ನು ಅನೇಕಸಾರಿ ಕಾಡಿನಲ್ಲಿ ಕೂಗಿಕೂಗಿ ಹುಲಿ ಕರೆದು ಬೈರನಷ್ಟೇ ಅದರಲ್ಲಿ ಪಳಗಿದ್ದೆ.

ಮೂರುಸಾರಿ ಕೂಗಿದನಂತರ ನಾನು ಸದ್ದು ಮಾಡಲಿಲ್ಲ. ಒಂದು ಕೈಯ್ಯಲ್ಲಿ ಟಾರ್ಚನ್ನೂ ಇನ್ನೊಂದು ಕೈಯ್ಯಲ್ಲಿ ೪೦೫ ರೈಫಲನ್ನೂ ಹಿಡಿದುಕೊಂಡು ಗುಡಿಸಿಲಿನ ತಡಿಕೆಯ ಹೊರಭಾಗದಲ್ಲೇ ಜರುಗುತ್ತಾ ಹುಲಿ ಕೂಗು ಕೇಳಿದ ಪಾರ್ಶ್ವದತ್ತ ನುಸುಳಿದೆ. ಹುಲಿ ನಾನು ಕೂಗಿದ ಮೇಲೆ ಮತ್ತೊಮ್ಮೆ ಕೂಗಲಿಲ್ಲ. ಅದು ನನ್ನಕೂಗು ಕೇಳಿದ ದಿಕ್ಕಿನ ಕಡೆಗೆ ಸೀದಾ ಬರುತ್ತಿದೆ ಎನ್ನುವುದು ನನಗೆ ಶತಸ್ಸಿದ್ಧವಾಗಿತ್ತು.

ಮುಂದಿನ ಹಲವು ಕ್ಷಣಗಳ ಗಾಢ ಮೌನದಲ್ಲಿ ನನ್ನ ಎದೆಯಲ್ಲೊಂದುರೀತಿ ಅವ್ಯಕ್ತ ಕಳವಳ ಶುರುವಾಯ್ತು. ಅದೇಕೆ ಹಾಗನ್ನಿಸಿತೋ ನಾನರಿಯೆ. ಏಕೆಂದರೆ ನಾನಂತೂ ಗುಡಿಸಿಲಿನ ಬಿದರುತಡಿಕೆ ಗೋಡೆಗೆ ಬೆನ್ನುಹಾಕಿ ನಿಂತಿದ್ದರಿಂದ ಅನಿರೀಕ್ಷಿತವಾಗಿ ನನ್ನ ಮೇಲೆ ಹುಲಿ ಹಾರಲಂತೂ ಸಾಧ್ಯವಿರಲಿಲ್ಲ. ಬೆಳದಿಂಗಳಿನ ಮಂದ ಪ್ರಕಾಶದಲ್ಲಿ ಕಾಡೆಲ್ಲ ಸಾಕಷ್ಟು ಗೋಚರವಾಗುತ್ತಿತ್ತು.

ಒಂದೆರಡು ನಿಮಿಷಗಳ ತರುವಾಯ ನಾನು ನಿರೀಕ್ಷಿಸಿದ್ದೇನೋ! ಆದದ್ದೇನೋ!! ನಾನು ಮುಖ ಹಾಕಿ ನಿಂತಿದ್ದ ದಿಕ್ಕಿನಿಂದಲೇ ಒಂದು ಮನುಷ್ಯಾಕೃತಿ ಬಡಲ್ಲನೆ ಬಾಳೆ ಗಿಡಗಳ ದಟ್ಟಣೆಯಿಂದ ಹಾರಿ ಹೊರಬಿತ್ತು. ನಾನು ನಿಂತಿದ್ದ ಕಡೆಗೇ ಓಡಿಬರುತ್ತಿತ್ತು. ಅದೊಬ್ಬ ಧಡೂತಿ ಗಂಡಸು. ಮೊದಲಲ್ಲಿ ಸಂಪೂರ್ಣ ಬೆತ್ತಲಾಗಿದ್ದಂತೆ ಕಂಡರೂ ಕೊಂಚ ಹತ್ತಿರಾದಾಗ ಕರಿ ಲಂಗೋಟಿ ತೊಟ್ಟಿರುವುದು ಕಾಣಿಸಿತು.

ಅಷ್ಟರಲ್ಲಿ ನನಗೆ ಅವನು ನನ್ನ ಕಡೆಗೆ ಓಡಿಬರುತ್ತಿಲ್ಲ, ಗುಡಿಸಿಲ ಕಡೆಗೆ ಬರುತ್ತಿದ್ದಾನೆ ಎಂದು ಹೊಳೆಯಿತು. ಏಕೆಂದರೆ ನಾನು ನಿಂತಿದ್ದ ಜಾಗದಿಂದ ಯಾರ ಕಣ್ಣಿಗೂ ಬೀಳಲು ಸಾಧ್ಯವಿರಲಿಲ್ಲ. ಓಡಿಬರುತ್ತಿದ್ದವನು ಇನ್ಯಾರೂ ಆಗಿರಲಿಲ್ಲ, ಆ ಕಳ್ಳ ಸ್ವಾಮಿ!

ನನ್ನ ಕಣ್ಣೆದುರು ನಡೆಯುತ್ತಿರುವುದೇನು ಎಂದು ನನಗೆ ಅರಿವಾಗದಷ್ಟು ಗೊಂದಲಗೊಂಡೆ. ಏಕೆಂದರೆ ಕೆಲವೇ ಕ್ಷಣಗಳ ಹಿಂದಷ್ಟೆ ದಾರಿಕಡೆಯಿಂದ ನರಭಕ್ಷಕ ಘರ್ಜಿಸಿದ್ದು ಕೇಳಿದ್ದೆ. ಈಗ ನೋಡಿದೆ ಈ ಸಾಧು ಅದೇ ದಿಕ್ಕಿನಿಂದ ಅದೇ ಜಾಗದಿಂದ ದೌಡಾಯಿಸಿ ಓಡಿಬರುತ್ತಿದ್ದಾನೆ! ನನ್ನ ಕಣ್ಣೆದುರು ನಡೆಯುತ್ತಿರುವುದೇನು ಭ್ರಮೆಯೋ ವಾಸ್ತವವೋ ಎಂದು ಕಂಗಾಲಾಗಿ ನಿಂತೆ. ಹಾಗಿದ್ದರೆ ಸಾಧು ನಿಜಕ್ಕೂ ಹುಲಿಯಾಗಿ ರೂಪಾಂತರಗೊಳ್ಳುತ್ತಿದ್ದನೆ!

ಅಷ್ಟರಲ್ಲಿ ನನ್ನ ಭ್ರಾಂತಿ ಅನುಮಾನಗಳೆಲ್ಲ ಸಿಡಿದೊಡೆಯುವಂತೆ ಆ ಓಡಿಬರುತ್ತಿದ್ದ

ಮನುಷ್ಯಾಕೃತಿಯ ಹಿಂದಿನಿಂದ ಮಿಂಚಿನಂತೆ ಎರಡೇ ಜಿಗಿತಕ್ಕೆ ನರಭಕ್ಷಕ ಜಿಗಿದು ಸಮೀಪಿಸುತ್ತಿರುವುದು ಕಾಣಿಸಿತು. ಆ ಸಾಧು ಮಾಡಿದ 'ಅಯ್ಯೋೕೕೕೕ' ನೀಳ ಆರ್ತನಾದ ಇಂದಿಗೂ ನನ್ನ ಕಿವಿಯಲ್ಲಿ ಅನುರಣಿಸುತ್ತಿದೆ. ಹುಲಿ ಮನುಷ್ಯನನ್ನು ಹಿಡಿದಿದ್ದು ನಾನು ಆವರೆಗೂ ಕಂಡಿರಲಿಲ್ಲ.

ಹುಲಿ ಹಿಡಿದಕೂಡಲೆ ಬಿದ್ದ ಮನುಷ್ಯ ಮತ್ತು ಹುಲಿ ಇಬ್ಬರೂ ಅಲ್ಲಿ ಬೆಳೆದಿದ್ದ ಮೊಣಕಾಲೆತ್ತರದ ಹುಲ್ಲಿನಲ್ಲಿ ಮಾಯವಾದರು. ನಾನು ಕನಸಿನಲ್ಲೂ ಎಣಿಸದಿದ್ದ ಈ ಭೀಕರ ಘಟನಾವಳಿಯಿಂದ ಮರವಟ್ಟಂತೆ ನಿಂತಿದ್ದೆ. ಚೇತರಿಸಿಕೊಂಡು ಹುಲಿಗೆ ಗಾಬರಿ ಮಾಡಲು ಅಬ್ಬರಿಸಿ ಕೂಗುತ್ತ ಅದು ಸಾಧು ಹಿಡಿದ ಜಾಗದತ್ತ ನುಗ್ಗಿದೆ. ನನ್ನ ಕೂಗಿಗೆ ಬೆಚ್ಚಿ ಹುಲಿ ಒಂದು ಕ್ಷಣ ತಡೆಯಬಹುದು, ಆ ಸಾಧುವನ್ನು ಉಳಿಸಲು ಇನ್ನೂ ಸಮಯ ಮಿಂಚಿಲ್ಲ ಎಂದು ತಿಳಿದು ಕೈಲಾದಷ್ಟು ವೇಗವಾಗಿ ಓಡಿದೆ.

ಆ ಜಾಗ ನನ್ನಿಂದ ಸುಮಾರು ನಲವತ್ತು ಗಜ ದೂರವಿತ್ತು. ಓಡುತ್ತ ನನ್ನ ಟಾರ್ಚ್ ಹತ್ತಿಸಿ ಆ ಜಾಗದತ್ತ ಬೆಳಕು ಬಿಟ್ಟೆ. ಟಾರ್ಚ್ ಬೆಳಕಿನಲ್ಲಿ ಹುಲಿಯ ಹೊಳೆಯುವ ನೀಲಿ ಕಣ್ಣು ಕಾಣಬೇಕಾದರೆ ನಾನು ಸುಮಾರು ಹದಿನೈದು ಗಜದಷ್ಟು ಹತ್ತಿರ ಹೋಗಿದ್ದೆ. ಹುಲಿ ಸಾಧುವನ್ನು ಬೀಳಿಸಿಕೊಂಡು ಅವನ ಮೇಲೆ ಕೌಚಿ ಕುಳಿತಿತ್ತು.

ಹಿಂದುಮುಂದು ನೋಡದೆ ನಿಂತ ನಾನು ಆ ಎರಡು ಹೊಳೆಯುವ ಕಣ್ಣುಗಳ ನಡುವಿಗೆ ಗುರಿಯಿಟ್ಟು ಗುಂಡು ಹಾರಿಸಿದೆ. ಹುಲಿ ಅರ್ಧಂಬರ್ಧ ಎದ್ದು ನಿಲ್ಲುತ್ತಿರಬೇಕಾದೆ ಮತ್ತೆಮತ್ತೆ ಅದರ ಭಯಾನಕ ಮುಖಕ್ಕೇ ಎಡರಡು ಗುಂಡು ಹೊಡೆದೆ. ಮೂರು ಗುಂಡುಗಳೂ ಹುಲಿ ಮಂಡೆಯನ್ನು ಪುಡಿಪುಡಿ ಮಾಡಿದ್ದುವು. ಹುಲಿಯ ಇಡೀ ದೇಹ ಸಾಧು ಮೇಲೆ ಮಲಗಿತು.

ಹತ್ತಿರ ಹೋದಾಗಲೇ ನನಗೆ ಸಾಧು ಹುಲಿಯಡಿ ಸಿಕ್ಕಿಬಿದ್ದಿದ್ದಾನೆಂದು ಗೊತ್ತಾಗಿದ್ದು. ಅದಕ್ಕಿಂತಲೂ ನನಗೆ ದಿಗಿಲಾಗಿದ್ದೆಂದರೆ ನನ್ನ ಹೈ ವೆಲಾಸಿಟಿ ಗುಂಡುಗಳು ಅಪ್ಪಿತಪ್ಪಿ ಸಾಧುವಿಗೂ ತಾಗಿದೆಯೋ ಎಂದು. ಹುಲಿಗೇ ಗುರಿ ಬಿದ್ದಿದ್ದರೂ ಗುಂಡುಗಳು ತಲೆಯನ್ನು ತೂರಿ ಸಾಧುವಿಗೆ ತಾಗಿದ್ದರೆ ಏನು ಗತಿ ಎಂದು ತುಂಬಾ ಗಾಬರಿಯಾಯ್ತು. ನಾನು ಹುಲಿ ಹತ್ತಿರ ಹೋದಾಗ ಅದರ ಮೈ ಇನ್ನೂ ಅದುರುತ್ತಿತ್ತು. ಜೀವ ಸಂಪೂರ್ಣ ಹೋಗಿರಲಿಲ್ಲ. ಅದು ಸತ್ತ ತರುವಾಯ ಹುಲಿಯನ್ನು ಸಾಹಸದಿಂದ ಅಡಿಯಿದ್ದ ಮನುಷ್ಯನಿಂದ ಅತ್ತ ಸರಿಸಿದೆ.

ಸಾಧುವಿನ ದೇಹ ರಕ್ತದಲ್ಲಿ ಅದ್ದಿಹೋಗಿತ್ತು. ಅದನ್ನು ನೋಡಿಯಂತೂ ನನಗೆ ಝುಂಗಾಬಲವೇ ಉಡುಗಿತು. ಸಾಧುವಿಗೂ ಹುಲಿಗೂ ಸೇರಿಸಿಯೇ ಗುಂಡು ಹೊಡೆದಿದ್ದೇನೆಂದು ಭಾವಿಸಿದೆ. ಮುಖ ಅಡಿಯಾಗಿ ಸಾಧು ಬಿದ್ದಿದ್ದ. ನನ್ನ ರೈಫಲ್ಲಿಗೆ ಜೋಡಿಸಿದ್ದ ಟಾರ್ಚನ್ನು ಕಳಚಿ ಸಾಧುವಿನ ಮೈಯ್ಯಲ್ಲಿ ಏನಾದರೂ ಗುಂಡಿನ

ಗಾಯಗಳಿವೆಯೇ ಎಂದು ನಡುಗುವ ಕೈಯ್ಯಲ್ಲಿ ಪರೀಕ್ಷಿಸಿದೆ. ಗುಂಡು ಸಾಧುವಿಗೆ ತಗುಲಿರಲಿಲ್ಲ. ಮುಖ ಅಡಿಯಾಗಿ ಬಿದ್ದಿದ್ದ ಅವನನ್ನು ಅಂಗಾತ ಮಾಡಿದೆ.

ಆಗಲೇ ಸಾಧು ನಿಧಾನವಾಗಿ ಕಣ್ತೆರೆದ. ನನಗೆ ಅಸಹ್ಯವಾಗಿದ್ದೆಂದರೆ ಆ ಸಮಯದಲ್ಲೂ ಅವನ ಮುಖದಲ್ಲಿ ಕಂಡ ದ್ವೇಷ, ತಿರಸ್ಕಾರ. ಅವನು ತುಟಿ ಅಲ್ಲಾಡಿದುವು. ಮೆಲ್ಲಗೆ ಕ್ಷೀಣ ದನಿಯಲ್ಲಿ 'ನೀನು ಗೆದ್ದೆ ಬಿಳಿಯ, ಹುಲಿ ನನ್ನ ಪ್ರಾಣ ತೆಗೆಯಿತು. ಇವತ್ತು ನನ್ನ ಗ್ರಹಚಾರ ಚೆನ್ನಾಗಿರಲಿಲ್ಲ. ಆದರೆ ನನ್ನ ಹಾಗೇ ನೀನೂ ಇನ್ನೊಂದು ಹುಲಿ ಬಾಯಲ್ಲಿ ಸಿಕ್ಕು ಸಾಯುತ್ತೀಯ! ಅಲ್ಲಿವರೆಗೂ ನಾನು ಕಾಯುತ್ತೇನೆ'

ಅನಂತರ ಬಾಳೇತೋಟದ ಸ್ವಾಮಿ, ಕೆಲವು ಕ್ಷಣಗಳ ಹಿಂದೆ ಪ್ರಾಣಬಿಟ್ಟ ಅವನ ರೂಪಾಂತರವೆಂದು ಎಲ್ಲರೂ ನಂಬಿದ್ದ ಹುಲಿಯಂತೆಯೇ ಸತ್ತು ನಿಶ್ಚಲವಾದ.

ಅಲ್ಲಿ ನಡೆದದ್ದೆಲ್ಲಾ ಬಹಳ ರಹಸ್ಯಮಯ ಘಟನೆಗಳಂತೆ ಕಂಡರೂ ನಿಜಕ್ಕೂ ಅದಕ್ಕಿರುವುದು ಸರಳ ವಿವರಣೆ. ನನ್ನ ಅನಿರೀಕ್ಷಿತ ನಡವಳಿಕೆಗಳಿಂದ ಸಾಧುವಿಗೆ ನನ್ನ ಅವತ್ತಿನ ಚಲನವಲನಗಳನ್ನು ಸರಿಯಾಗಿ ಊಹಿಸಲಾಗಿರಲಿಲ್ಲ. ನರಭಕ್ಷಕ ರಸ್ತೆಕಡೆಯಿದ ಘರ್ಜಿಸುವುದನ್ನು ಕೇಳಿದ ಕೂಡಲೇ ಈ ಕಳ್ಳಸಾಧು ಮೆಲ್ಲಗೆ ಗುಡಿಸಿಲಿನಿಂದ ಹೊರಬಿದ್ದಿದ್ದಾನೆ. ಹುಲಿ ಘರ್ಜಿಸುತ್ತಿರುವವರೆಗೂ ಅದರ ಓಡಾಟವನ್ನು ಸುಲಭವಾಗಿ ಅಂದಾಜು ಮಾಡಬಹುದಾದ್ದರಿಂದ, ನಾನೆಲ್ಲಿದ್ದೇನೆಂದು ಪತ್ತೆ ಮಾಡಿ ಹಿಂದಿನೆರಡು ರಾತ್ರಿಗಳಂತೆಯೇ ಏನೋ ಕುತಂತ್ರ ನಡೆಸಿ ನನ್ನನ್ನು ಹೆದರಿಸಲು ಉಪಾಯ ಹೂಡಿದ್ದ.

ಈ ನಡುವೆ ನಾನು ಮಚಾನಿನಿಂದ ಇಳಿದು ಅವನಿಗೆ ಅರಿವಿಲ್ಲದಂತೆ ಅವನ ಗುಡಿಸಿಲಿನ ಹತ್ತಿರವೇ ಬಂದಿದ್ದೇನೆ. ಬಹುಶಃ ಸಾಧು ಆ ಸಮಯದಲ್ಲಿ ಉದಕಮಂಡಲ ರಸ್ತೆಯ ಹತ್ತಿರ ಎಲ್ಲೋ ಇದ್ದನೆಂದು ಕಾಣುತ್ತದೆ. ನಾನು ಅವನ ಗುಡಿಸಿಲಿನ ಹತ್ತಿರ ಹುಲಿಯನ್ನು ಅನುಕರಿಸಿ ಮೂರುಸಾರಿ ಕೂಗಿದ್ದೇ ಸ್ವಾಮಿಗೆ ಪ್ರಾಣ ಕಂಟಕವಾಗಿದ್ದು. ಹುಲಿ ನನ್ನ ಕೂಗನ್ನು ಕೇಳಿದ್ದೇ ಘರ್ಜಿಸುವುದನ್ನು ನಿಲ್ಲಿಸಿ ನೇರ ಗುಡಿಸಿಲಿನ ಕಡೆಗೆ ಬರತೊಡಗಿತು. ಇತ್ತ ನನ್ನ ಕೂಗನ್ನು ಕೇಳಿದ ಸಾಧುಗೆ ಎರಡು ಹುಲಿಗಳು ಎರಡು ದಿಕ್ಕಿನಿಂದ ಕೂಗಿದ್ದನ್ನು ಕೇಳಿ, ಇದರಲ್ಲಿ ಯಾವುದು ನರಭಕ್ಷಕ ಎಂದು ತಿಳಿಯದೆ ಗೊಂದಲಗೊಂಡು ಹೆದರಿ ಗುಡಿಸಿಲಿನತ್ತ ಓಡಿಬರುತ್ತಿದ್ದಾಗ ಅವನನ್ನು ನಿಜವಾದ ನರಭಕ್ಷಕ ನೋಡಿಬಿಟ್ಟಿದೆ! ಅವನ ಕುತಂತ್ರಗಳೇ ಅವನಿಗೆ ಮುಳಿವಾಯ್ತು.

ನಾನು ಬೋರನ ಗುಡಿಸಿಲಿನತ್ತ ನಡೆದೆ. ಹುಲಿಯ ಘರ್ಜನೆ ಕೇಳಿ ಚಿಂತಾಕ್ರಾಂತನಾಗಿ ನಿದ್ದೆಬರದೆ ಅವನು ಎಚ್ಚರಾಗಿಯೇ ಇದ್ದ.

"ಹುಲಿ ಹೊಡೆದೆ ಕಣೋ ಬೋರ!"ಎಂದೆ.

"ಅದು ಸರಿ, ಆ ಸ್ವಾಮಿ ಎಲ್ಲಿ ?" ಉಸಿರು ಬಿಗಿ ಹಿಡಿದು ಅವನು ಕೇಳಿದ.

"ಅವನೂ ಸತ್ತ" ಎಂದು ನಾನು ಗೊಣಗಿದೆ.

ಬೋರ ಒಂದು ನೆಮ್ಮದಿಯ ನಿಟ್ಟುಸಿರು ಬಿಟ್ಟು "ನೋಡಿದಿರಾ! ಈಗಲಾದರೂ ನಂಬುತ್ತೀರಾ ಆ ಸ್ವಾಮಿಯೇ ಹುಲಿಯಾಗುತ್ತಿದ್ದಾ ಅಂತ!" ಎಂದ

ಅವನ ಮಾತಿಗೂ ಮೂಢನಂಬುಗೆಗೂ ನಕ್ಕು "ಇಲ್ಲವೋ, ಅವನನ್ನು ನಾನೇನೂ ಕೊಲ್ಲಲಿಲ್ಲ, ನಾನು ಹುಲಿ ಹೊಡೆಯುವುದಕ್ಕೂ ಮೊದಲೇ ಹುಲಿ ಅವನನ್ನು ಹಿಡಿದು ಕೊಂದು ಹಾಕಿತು"

ನಾನು ಹಾಗೆಂದ ಕೂಡಲೆ ಬೈರನ ಕಣ್ಣುಗಳು ಆಶ್ಚರ್ಯ ಅಪನಂಬುಗೆಗಳಿಂದ ಕಿರಿದಾದುವು. ಒಂದು ನಿಮಿಷ ಮಾತಾಡದೆ ನನ್ನ ಮುಖವನ್ನೇ ನಿಟ್ಟಿಸಿದ. "ಏನೆಂದಿರಿ? ಹಾಗಾದರೆ ಅಲ್ಲಿ ಎರಡು ಹೆಣ ಬಿದ್ದಿದೆಯಾ? ಒಂದು ಸ್ವಾಮೀದು ಒಂದು ಹುಲೀದು?"ಎಂದು ಕೇಳಿದ.

"ಹೌದೋ"

"ಲೆಕ್ಕದಲ್ಲಿ ಒಂದೇ ಹೆಣ ಬಿದ್ದಿರಬೇಕಲ್ಲವ? ಇಲ್ಲಾ ಹುಲೀದು, ಇಲ್ಲಾ ಸ್ವಾಮೀದು! ಅಲ್ಲಿ ಎರಡಿದೆಯಾಂತ ಸರಿಯಾಗಿ ನೋಡಿದಿರಾ?"

"ಖಂಡಿತವಾಗಿ. ಇಲ್ಲಿ ನಾನು ನೀನು ಇಬ್ಬರೂ ನಿಂತು ಮಾತಾಡ್ತಿದ್ದೀವಲ್ಲ ಹಾಗೇ!" ಎಂದು ಅಸಹನೆಯಿಂದ ಗಡುಸಾಗಿ ಹೇಳಿದೆ.

ಬೋರನಿಗೆ ಖುಷಿ ತಾಳಲಾಗಲಿಲ್ಲ. ಹೆದರಿ ಹಿಪ್ಪೆಯಾಗಿ ಬದುಕುತ್ತಿದ್ದ ಇರ್ಳಾಗಳೆಲ್ಲರಿಗೂ ಕೇಳುವಂತೆ ಗಟ್ಟಿಯಾಗಿ ಕೂಗಿದ. "ಲೇ ನೋಡ್ರೋ, ನಮ್ಮ ಧೊರೆ ಎರಡನ್ನೂ ಹೊಡೆದಿದ್ದಾರಂತೆ ಕಣ್ರೋ, ಹುಲೀನೂ, ಸ್ವಾಮಿನೂ!"

"ಏಯ್! ಸ್ವಾಮೀನ ನಾನು ಹೊಡೆಯಲಿಲ್ಲ, ಹುಲಿ ಸ್ವಾಮೀನ ಕೊಂದುಹಾಕಿತು ಅಂತ ಹೇಳಲಿಲ್ಲೇನೋ, ನಾನು ಹೊಡೆದಿದ್ದು ಹುಲೀನ ಮಾತ್ರ"ಎಂದು ಬಯ್ದು ಅವನ ತಪ್ಪು ತಿದ್ದಿದೆ.

"ಎಲ್ಲಿ ನಡೀರಿ ನೋಡೋಣ" ಎಂದು ಎಲ್ಲರೂ ಲಗುಬಗೆಯಿಂದ ಹೊರಟರು. ಕೊಂಚ ಹೊತ್ತಿನೊಳಗೇ ನಾವು ಆ ದುರಂತ ನಡೆದ ರುದ್ರಭೂಮಿಯಲ್ಲಿದ್ದೆವು. ಇರ್ಳಾಗಳೆಲ್ಲ ಆನಂದದಿಂದ ನರ್ತಿಸಿದರು. ಇಬ್ಬರು ಅವರ ಭಯಾನಕ ವೈರಿಗಳು ಅಲ್ಲಿ ಸತ್ತಿದ್ದರು. ಒಂದು ಅವರನ್ನೆಲ್ಲಾ ಕೊಂದು ತಿನ್ನುತ್ತಿದ್ದ ನರಭಕ್ಷಕ, ಇನ್ನೊಂದು ಅದರಷ್ಟೇ ಭಯಾನಕವಾಗಿ ಹೆದರಿಸಿ ನಡುಗಿಸಿದ್ದ ಆ ಕಳ್ಳ ಸಾಧು.

ಇನ್ನೂ ಬಿಡುಗಣ್ಣು ಬಿಟ್ಟೇ ಇದ್ದ ಸಾಧುವಿನ ಹೆಣದ ಮುಖ ನೋಡಿ ಬೋರ ತಿರಸ್ಕಾರದಿಂದ "ಧೂರ್ತೇರಿ "ಎಂದ ಅವನ ಮುಖಕ್ಕೆ ತುಪ್ಪಿ ಆಮೇಲೆ ಇಲ್ಲಿ ಬರೆಯಲಾಗದ ಕೆಲವು ಬೈಗುಳ ಬಯ್ದು.

# ರಾಂಪುರದ ಒಕ್ಕಣ್ಣ

೧



ಈ ಕಥೆಯ ಹುಲಿ ಮಾಡಿದ ಅನಾಹುತಗಳ ಕಾಲಾವಧಿ ಬಹಳ ಕ್ಷಿಪ್ರವಾದುದಾದರೂ ಸುಮಾರು ಅರವತ್ತು ಮೈಲು ಅಗಲಕ್ಕೂ ಅಷ್ಟೇ ಉದ್ದಕ್ಕೂ, ನಾಲ್ಕುಸಾವಿರ ಚದರಮೈಲಿ ಉದ್ದಳತೆಯ ವಿಸ್ತೀರ್ಣದಲ್ಲಿ ಹಳ್ಳಿಗಳನ್ನೆಲ್ಲಾ ಗಡಗಡ ನಡುಗುವಂತೆ ಮಾಡಿತ್ತು. ಅರ್ಧ ಕೊಯಮತ್ತೂರು ಜಿಲ್ಲೆಯೇ ಈ ಹುಲಿಯ ಭಯದಲ್ಲಿ ತತ್ತರಿಸಿತು. ಅಲ್ಲದೆ ಮನುಷ್ಯನೇ ಮೂಲತಃ ಇಂತಹ ನರಭಕ್ಷಕಗಳಿಗೆ ಕಾರಣ ಎನ್ನುವುದಕ್ಕೆ ಈ ನರಭಕ್ಷಕನ ಕತೆ ಒಳ್ಳೆಯ ಉದಾಹರಣೆ.

ಕೊಯಮತ್ತೂರು ಜಿಲ್ಲೆಯ ಉತ್ತರಭಾಗ ದಟ್ಟವಾದ ಕಾಡುಗಳಿಂದಲೂ ಕಿಕ್ಕಿರಿದ ಪರ್ವತಗಳಿಂದಲೂ ಕೂಡಿದೆ. ಕೊಯಮತ್ತೂರಿನಿಂದ ದಕ್ಷಿಣಕ್ಕೆ ಸಮತಟ್ಟಾದ ಬಯಲುಸೀಮೆ. ಪಶ್ಚಿಮಕ್ಕೆ ನೀಲಗಿರಿ ಪರ್ವತ ಶ್ರೇಣಿಗಳೂ, ಕಾಡೂ ಬರುತ್ತದೆ. ಉತ್ತರಕ್ಕೆ ಮೈಸೂರಿನ ಕಾಡುಗಳು, ಬಿಳಿಗಿರಿರಂಗನಬೆಟ್ಟದ ಕಾಡುಗಳೂ ಬರುತ್ತವೆ. ಸೇಲಂ ಜಿಲ್ಲೆ ಕಡೆಯಿಂದ ಆಗ್ನೇಯ ದಿಕ್ಕಿಗೆ ಕಾವೇರಿ ನದಿ ಹರಿಯುತ್ತ ಅನಂತರ

ದಕ್ಷಿಣ ದಿಕ್ಕಿಗೆ ತಿರುಗುತ್ತದೆ.

ಕೊಯಮತ್ತೂರಿನಿಂದ ಉತ್ತರಕ್ಕೆ ಊರು ಎಂದು ಕರೆಸಿಕೊಳ್ಳಬಹುದಾದ ದೊಡ್ಡ ಹಳ್ಳಿ ಎಂದರೆ ಕೊಳ್ಳೇಗಾಲ ಎನ್ನುವ ಹೆಸರಿನ ಊರು ಎಂದು ಹೇಳಬಹುದು. ಕಾವೇರಿನದಿ ದಡದಿಂದ ಸುಮಾರು ಎಂಟು ಮೈಲು ದೂರದಲ್ಲಿ ಕೊಳ್ಳೇಗಾಲ ಇದೆ. ಈ ಊರಿನ ಹತ್ತಿರ ರಸ್ತೆ ನಾಲ್ಕು ಕವಲಾಗಿದೆ. ಒಂದು ರಸ್ತೆ ಮೈಸೂರಿನತ್ತ ನಂಜನಗೂಡಿನ ಮುಖಾಂತರ ಹೋಗುತ್ತದೆ. ನನ್ನ ಕತೆಯಲ್ಲಿ ಈ ರಸ್ತೆಗೆ ಯಾವ ಪ್ರಾಮುಖ್ಯತೆಯೂ ಇಲ್ಲ. ಈ ಕವಲುಗಳ ಮೂರನೆ ರಸ್ತೆ ನೆಟ್ಟಗೆ ಬಿಳಿಗಿರಿರಂಗನ ಬೆಟ್ಟಗಳ ದಿಕ್ಕಿಗೆ ಸಾಗುತ್ತದೆ. ಈ ರಸ್ತೆಯಲ್ಲಿ ಹದಿನೇಳನೆ ಮೈಲಿ ಹತ್ತಿರ ಲೊಕ್ಕನ ಹಳ್ಳಿ ಎನ್ನುವ ತಕ್ಕಮಟ್ಟಿಗೆ ದೊಡ್ಡದಾದ ಹಳ್ಳಿ ಇದೆ. ಲೊಕ್ಕನಹಳ್ಳಿಯಿಂದ ಮುಂದೆ ಹದಿಮೂರು ಮೈಲು ಹೋದರೆ ಬೈಲೂರು ಎನ್ನುವ ಚಿಕ್ಕ ಹಳ್ಳಿ ಸಿಕ್ಕುತ್ತದೆ. ಅಲ್ಲಿಂದ ಮುಂದೆ ನಲವತ್ತೆಂಟನೆ ಮೈಲಿಕ್ಕಲ್ಲಿನ ಹತ್ತಿರ ಹನ್ನಾಪುರ ಎನ್ನುವ ಹಳ್ಳಿಯೂ, ಅಲ್ಲಿಂದ ಮುಂದೆ ದಿಂಬಂ ಊರೂ ಇದೆ. ದಿಂಬಂ ಕೊಳ್ಳೇಗಾಲದಿಂದ ಐವತ್ತೆರಡು ಮೈಲು ದೂರದಲ್ಲಿದೆ.

ನಾಲ್ಕನೆಯ ಕವಲು ರಸ್ತೆ ಪೂರ್ವದಿಕ್ಕಿನತ್ತ ಮುಂದುವರಿಯುತ್ತಾ ಕೊಳ್ಳೇಗಾಲದಿಂದ ಇಪ್ಪತ್ತೈದು ಮೈಲು ದೂರದಲ್ಲಿರುವ ರಾಂಪುರ ಎಂಬ ಚಿಕ್ಕ ಹಳ್ಳಿಯ ಮುಖಾಂತರ ಸಾಗಿ ಅನಂತರ ಎಡಕ್ಕೆ ತಿರುಗಿ ದಿಂಬಂ ಹತ್ತಿರದ ಎಡೆಯೂರು ಎನ್ನುವಲ್ಲಿ ಅದು ಬಯಲು ಸೀಮೆಯನ್ನು ಪ್ರವೇಶಿಸುತ್ತದೆ. ಕೊಳ್ಳೇಗಾಲದಿಂದ ಇಲ್ಲಿಯವರೆಗೆ ದಾರಿ ಸುಮಾರು ಎಂಭತ್ತೊಂದು ಮೈಲು ಉದ್ದವಿದೆ.

ಈ ಕೊಳ್ಳೇಗಾಲ - ಲೊಕ್ಕನಹಳ್ಳಿ - ಬೈಲೂರು - ದಿಂಬಂ - ರಸ್ತೆಯಲ್ಲಿ ಲಾರಿ ಬಸ್ಸು ಮೊದಲಾದ ವಾಹನಗಳ ಓಡಾಟ ತೀರಾ ಕಡಿಮೆ. ರಾಂಪುರದಿಂದ ಅಡಿಯೂರು ವರೆಗಿನ ರಸ್ತೆಯಲ್ಲಂತೂ ಜೀಪು ಮತ್ತು ಎತ್ತಿನ ಗಾಡಿಗಳಲ್ಲಿ ಮಾತ್ರ ಓಡಾಡಲು ಸಾಧ್ಯ. ಅದು ಎತ್ತಿನ ಗಾಡಿ ಇತ್ಯಾದಿಗಳು ಓಡಾಡಿರುವುದರಿಂದ ಆಗಿರುವ ರಸ್ತೆಯೇ ಹೊರತು ಅದನ್ನು ಸರ್ಕಾರೀ ರಸ್ತೆ ಎಂದು ಕರೆಯುವುದು ಬಹಳ ಕಷ್ಟ. ಎತ್ತಿನಗಾಡಿ ಹರಿದ ಜಾಡಿನಲ್ಲಿ ಮಳೆ ನೀರು ಹರಿದು ಆಳವಾದ ಕೊರಕಲುಗಳು ನಿರ್ಮಾಣವಾಗಿವೆ. ಮಳೆ ಕೊಚ್ಚಿ ಅಲ್ಲಲ್ಲಿ ಬಂಡೆಗಳು ಮೇಲೆದ್ದಿವೆ. ಸೇತುವೆಗಳಿಲ್ಲದ ಹಲವಾರು ಹಳ್ಳಗಳನ್ನು ರಸ್ತೆ ದಾಟುತ್ತದೆ. ಈ ರಸ್ತೆಯಲ್ಲಿ ಮುಂದುವರಿದಂತೆ ಬಹು ದಟ್ಟವಾದ ಬಿದಿರು ಕಾಡು ಸಿಕ್ಕುತ್ತದೆ. ಕಾರಿನ ರೇಡಿಯೇಟರ್‌ವರೆಗೆ ಬಗ್ಗಿರುವ ಕೊಂಬೆಗಳು, ಆನೆಗಳು ತಳ್ಳಿ ಬೀಳಿಸಿರುವ ಬಿದಿರು ಹಿಂಡಲುಗಳು ದಾರಿಯಲ್ಲಿ ಬೇಕಾದಷ್ಟು ನಿಮಗೆ ಎದುರಾಗುತ್ತವೆ. ಇಲ್ಲಿ ಪ್ರಯಾಣ ಮಾಡುವವರು ಒಂದು ಕತ್ತಿಯನ್ನೋ ಚಿಕ್ಕ ಕೊಡಲಿಯನ್ನೋ ಇಟ್ಟುಕೊಂಡು ಹೆಜ್ಜೆ ಹೆಜ್ಜೆಗೆ ಇದಿರಾಗುವ ಇವನ್ನೆಲ್ಲಾ ಕಡಿದು

ಕೊಚ್ಚಿ ದಾರಿ ಮಾಡಿಕೊಂಡು ಮುಂದುವರಿಯಬೇಕಾಗುತ್ತದೆ. ಇಂಥ ಜಾಗಗಳಲ್ಲಿ ಆನೆ ಮತ್ತು ಕಾಡು ಕೋಣಗಳಿರುತ್ತವೆಯೇ ಹೊರತು ಹುಲಿಗಳು ಸಾಧಾರಣವಾಗಿ ತುಂಬಾ ದಟ್ಟ ಕಾಡುಗಳಲ್ಲಿ ವಾಸ ಮಾಡುವುದಿಲ್ಲ. ಅವು ಹೆಚ್ಚಾಗಿ ಅರೆ ಕುರುಚಲು ಕಾಡುಗಳಲ್ಲೇ ಇರುತ್ತವೆ. ಹುಲಿಗಳಿಗೆ ಬಹು ನಿಬಿಡ ಕಾಡುಗಳಾದರೆ ಪ್ರಾಣಿಗಳನ್ನು ಅಟ್ಟಿ ಶಿಕಾರಿ ಮಾಡುವುದು ಕಷ್ಟ. ಅಲ್ಲದೆ ತೀರ ದಟ್ಟ ಕಾಡುಗಳಲ್ಲಿ ಹುಲಿಗಳ ಸ್ವಾಭಾವಿಕ ಆಹಾರವಾದ ಜಿಂಕೆ, ಕಾಡುಕುರಿ, ಕಾಡು ಹಂದಿ, ಕಡವೆ ಇತ್ಯಾದಿಗಳು ಕಡಿಮೆ. ಆನೆ ಮತ್ತು ಕಾಟಿಗಳನ್ನು ಹುಲಿ ಸಾಧಾರಣವಾಗಿ ಹಿಡಿದು ತಿನ್ನುವುದಿಲ್ಲ. ತಿರುಗಿ ನಿಂತು ಹುಲಿಗೆ ಸಮಸ್ಪರ್ಧಿಯಾಗಿ ಅವು ಕಾದಾಡುವುದರಿಂದ ಹುಲಿ ಇವುಗಳ ತಂಟೆಗೆ ಹೋಗಲು ಯಾವಾಗಲೂ ಹಿಂದುಮುಂದು ನೋಡುತ್ತದೆ. ಇದಲ್ಲದೆ ಇನ್ನೊಂದು ಪ್ರಮುಖ ಕಾರಣವೆಂದರೆ ದಟ್ಟಕಾಡುಗಳಲ್ಲಿರುವ ಜಿಗಣೆ, ನಾಯಿನೊಣ, ಒಣಗು, ಉಣ್ಣೆ ಮೊದಲಾದ ಉಪದ್ರಮಾರಿ ಕ್ರಿಮಿಕೀಟಗಳು. ಮೈಯ್ಯೆಲ್ಲಾ ಹತ್ತಿಕೊಂಡು ಕಚ್ಚುವ ಇವುಗಳಿಗೆ ಹುಲಿಗಳು ತುಂಬಾ ಹೆದರುತ್ತವೆ.

ರಾಂಪುರದ ನರಭಕ್ಷಕ ಕಾವೇರಿನದಿ ದಡದಲ್ಲಿರುವ ಸುಮಾರು ಆರುಸಾವಿರ ಅಡಿ ಎತ್ತರದ ಪೊನ್ನಾಚಿಮಲ್ಯೆ ಬೆಟ್ಟಗಳ ಕಡೆಯಿಂದ ಬಂತು ಎಂದು ಹೇಳುತ್ತಾರೆ. ಪೊನ್ನಾಚಿಮಲ್ಯೆ ಬೆಟ್ಟಗಳ ಇಳಿಜಾರಿನಲ್ಲಿ ಒಂದೆರಡು ಚಿಕ್ಕ ಕಾಫಿ ತೋಟಗಳಿವೆ. ಇಲ್ಲಿ ರಾಂಪುರದ ನರಭಕ್ಷಕ, ಮೇಯಲು ಹೋದ ದನ ಎಮ್ಮೆಗಳನ್ನು ಆಗೀಗ ಹಿಡಿಯುತ್ತ ಉಪಟಳ ಶುರು ಮಾಡಿತು. ಇದರ ಕಾಟಕ್ಕೆ ಬೇಸತ್ತ ಒಬ್ಬ ಪ್ಲಾಂಟರ್ ಕೊಯಮತ್ತೂರಿಗೆ ಹೋಗಿ, ನಮ್ಮ ಇಲಿ ಕತ್ತರಿಯನ್ನೇ ಹೋಲುವ ಬೃಹದಾಕಾರದ ಜಿನ್ ಕತ್ತರಿಯೊಂದನ್ನು ಮಾಡಿಸಿದ. ಬಲವಾದ ಸ್ಪ್ರಿಂಗ್‌ಗಳಿದ್ದ ಈ ಕತ್ತರಿಯನ್ನು ಇಬ್ಬರು ಹಿಡಿದು ಎಳೆದು ಬಿಲ್ಲೇರಿಸಬೇಕಿತ್ತು. ಚೂಪಾದ ಗರಗಸದಂಥ ಹಲ್ಲುಗಳಿದ್ದ ಈ ಜಿನ್ ಕತ್ತರಿ ನಡುವಿನ ಕೀಲನ್ನು ಯಾವುದಾದರೂ ಪ್ರಾಣಿ ತುಳಿದರೆ ಧಡೀರನೆ ಅದರ ಗರಗಸದ ಹಲ್ಲುಗಳ ಬಾಯಿ ಮುಚ್ಚಿಕೊಳ್ಳುತ್ತಿತ್ತು. ಸಿಕ್ಕಿಕೊಂಡ ಪ್ರಾಣಿಯ ಕಾಲು ಸುಲಭವಾಗಿ ಕತ್ತರಿಸಿಹೋಗುವಷ್ಟು ಹರಿತವಾಗಿಯೂ ಭಯಾನಕವಾಗಿಯೂ ಇತ್ತು ಆ ಕತ್ತರಿ.

ಹುಲಿ ಮತ್ತೊಂದು ಒಳ್ಳೆ ಹಾಲು ಕೊಡುವ ದನವನ್ನೇ ಹಿಡಿದು ಅದನ್ನು ಸಮೀಪದಲ್ಲಿದ್ದ ಹಳ್ಳದವರೆಗೆ ಎಳೆದುಕೊಂಡು ಹೋಗಿ ಅರ್ಧ ತಿಂದು ಇನ್ನರ್ಧವನ್ನು ಮತ್ತೆ ತಿನ್ನಲು ಸೊಪ್ಪು ಸೆದೆಗಳ ಜಿಗ್ಗಿನಲ್ಲಿ ಮುಚ್ಚಿಟ್ಟಿತ್ತು. ಅಲ್ಲಿಯ ಪ್ಲಾಂಟರೂ ಆಳುಗಳೂ ಸೇರಿ ಹುಡುಕಾಡಿ ಹುಲಿ ಮುಚ್ಚಿಟ್ಟಿದ್ದ ಜಾಗ ಪತ್ತೆ ಮಾಡಿ, ಜಿಗ್ಗಿನ ನಡುವೆ ಜಿನ್ ಕತ್ತರಿಯನ್ನು ಬಾಯಿ ಕಳೆಸಿ, ಹುಲಿಗೆ ಸುಳಿವು ಗೊತ್ತಾಗದಂತೆ ತರಗೆಲೆಗಳನ್ನು ಹೊದ್ದಿಸಿ ಮುಚ್ಚಿಟ್ಟರು. ಹುಲಿಯ ದುರಾದೃಷ್ಟಕ್ಕೆ ಮತ್ತು ಅದು ಮುಂದೆ ಕೊಂದ

ಅನೇಕರ ದುರಾದೃಷ್ಟಕ್ಕೆ, ಮಿಕ್ಕಿದ್ದ ದನವನ್ನು ತಿನ್ನಲು ರಾತ್ರಿ ಅಲ್ಲಿಗೆ ಬಂತು. ಅದು ಯಾವರೀತಿ ಅಲ್ಲಿ ಕಾಲಿಟ್ಟಿತೋ ಏನೋ! ಜಿನ್ ಕತ್ತರಿಯ ಹಿಡಿತಕ್ಕೆ ಸರಿಯಾಗಿ ಕಿವಿಬಳಿ ಅದರ ತಲೆಯೇ ಸಿಕ್ಕಿಕೊಂಡಿತು.

ಹಳ್ಳಿಯವರು ಆ ಭಯಾನಕವಾದ ಜಿನ್ ಕತ್ತರಿಯನ್ನು ಒಂದು ಗೂಟ ಹೊಡೆದು ದಾರದಿಂದ ಬಿಗಿದಿದ್ದರು. ಹುಲಿಯ ಎಳೆದಾಟಕ್ಕೆ ಆ ಗೂಟ ಕಿತ್ತು ಬಂತೇ ಹೊರತು ಕತ್ತರಿ ಹಿಡಿತ ಮಾತ್ರ ಸಡಿಲಾಗಲಿಲ್ಲ. ಕತ್ತರಿ ಸಮೇತ ಹುಲಿ ಕಾಡಿನತ್ತ ಪರಾರಿಯಾಯ್ತು. ಆದರೆ ಆ ಜಾಗದಿಂದ ಸುಮಾರು ಎರಡು ಮೈಲು ದೂರದಲ್ಲಿ ಹುಲಿಯ ಕುತ್ತಿಗೆಯನ್ನು ಅಡ್ಡಲಾಗಿ ಕಚ್ಚಿ ಹಿಡಿದಿದ್ದ ಅಗಲವಾದ ಉಕ್ಕಿನ ಕತ್ತರಿ ಎರಡು ಬಂಡೆಗಳ ನಡುವೆ ಅಲ್ಲಾಡದಂತೆ ಸಿಕ್ಕಿಕೊಂಡಿತು. ಹುಲಿ ಅದರಿಂದ ತಪ್ಪಿಸಿಕೊಳ್ಳಲು ಕೊಸರಾಡಿದಹಾಗೂ ಅದರ ಹಿಡಿತ ಬಿಗಿಯಾಯ್ತೇ ವಿನಃ ಸಡಿಲವಾಗಲಿಲ್ಲ.

ಅನ್ನ ನೀರಿಲ್ಲದೆ ಅಲ್ಲಿ ಸಿಕ್ಕಿಬಿದ್ದ ಹುಲಿ ನೋವಿನಿಂದ ಎರಡು ದಿನಗಳ ಪರ್ಯಂತ ಕಾಡಿನಲ್ಲಿ ಘರ್ಜಿಸುತ್ತಿದ್ದುದನ್ನು ಹೆದರಿ ಗಡಗಡ ನಡುಗುತ್ತ ಅಲ್ಲಿನ ಪ್ಲಾಂಟರುಗಳೂ ಕೆಲಸದವರೂ ಕೇಳಿದರು. ಹುಲಿ ಅಂತೂ ಇಂತೂ ಜಗ್ಗಾಡಿ ಎಳೆದಾಡಿ ಆ ಕತ್ತರಿಯಿಂದ ಬಿಡಿಸಿಕೊಂಡಿತು. ಆದರೆ ಈ ಪ್ರಯತ್ನದಲ್ಲಿ ಅದು ಒಂದು ಕಣ್ಣನ್ನೂ ಕಿವಿಯನ್ನೂ ಕಳಕೊಂಡಿದ್ದಲ್ಲದೆ ಮುಖದ ಅನೇಕ ಭಾಗದಲ್ಲಿ ಚರ್ಮ ಸುಲಿದೇ ಹೋಯ್ತು. ಅನಂತರ ಆ ಹುಲಿ ಗಾಯಗಳ ನೋವಿನಿಂದಾಗಿ ನರಳುತ್ತಾ ಹೂಂಕರಿಸುತ್ತಾ ಆ ಕಾಡಿನಲ್ಲಿ ತಿರುಗುತ್ತಿದ್ದುದನ್ನು ಎಲ್ಲರೂ ಸದ್ದಿನಿಂದಲೇ ಅರಿತರು.

ಆಮೇಲಿಂದ ಒಂದೆರಡು ತಿಂಗಳವರೆಗೆ ಕಾಡೆಲ್ಲ ನಿಃಶಬ್ದವಾಯ್ತು. ಎಲ್ಲರೂ ಜಿನ್ ಕತ್ತರಿಯ ಗಾಯಗಳಿಂದ ಆ ಹುಲಿ ಸತ್ತಿತೆಂದು ತಿಳಿದರು. ಹದ್ದುಗಳು ಎಲ್ಲಿ ಆಕಾಶದಲ್ಲಿ ಸುತ್ತಿದರೂ ಸಾಕು, ಸತ್ತ ಹುಲಿ ತಿನ್ನಲು ಸುತ್ತುತ್ತಿವೆಯೆಂದು ತಿಳಿದು ಹಳ್ಳಿಯವರು ಅಲ್ಲಿಗೆ ಹೋಗಿ ನೋಡುತ್ತಿದ್ದರು. ಆದರೆ ಸತ್ತ ಹುಲಿ ಎಲ್ಲೂ ಅವರ ಕಣ್ಣಿಗೆ ಬೀಳಲಿಲ್ಲ. ಏಕೆಂದರೆ ಹುಲಿ ಸತ್ತಿರಲಿಲ್ಲ.

ಹೀಗೇ ಪ್ರತೀಕ್ಷೆಯಲ್ಲೇ ಒಂದೆರಡು ತಿಂಗಳು ಕಳೆಯಿತು. ಅಲ್ಲೊಂದು ಚಿಕ್ಕ ತೋಟದಲ್ಲಿ ಜೈಕೆನ್ ಎಂಬೊಬ್ಬ ಸೋಲಿಗ ತರುಣ ಕೆಲಸಕ್ಕಿದ್ದ. ಅವನು ತನ್ನ ಹದಿನೆಂಟುವರ್ಷದ ಹೆಂಡತಿಯೊಡನೆ ತೋಟದ ದಾರಿಯಲ್ಲಿ ಬರುತ್ತಿರಬೇಕಾದರೆ ಅನಿರೀಕ್ಷಿತ ಆಘಾತ ಜರುಗಿತು. ಜೈಕೆನ್ ಸಾಮಾನು ಹೊತ್ತು ಮುಂದೆ ಬರುತ್ತಿದ್ದ. ಹಿಂದೆ ಅವನ ಹೆಂಡತಿಯೂ ಒಂದು ಚಿಕ್ಕ ಅಕ್ಕಿ ಮೂಟೆ ತಲೆ ಮೇಲೆ ಹೊತ್ತು ಬರುತ್ತಿದ್ದಳು. ಅವರು ಹಳ್ಳ ಒಂದನ್ನು ದಾಟಿ ನಾಲ್ಕು ಹೆಜ್ಜೆ ಮುಂದೆ ಬಂದಿದ್ದಾಗ ಅಲ್ಲಿ ದಟ್ಟವಾಗಿ ಬೆಳೆದಿದ್ದ ಹುಲ್ಲಿನಿಂದ ಒಂದು ಹುಲಿ ಧಢ್ಡನೆ ಅವಳ ಮೇಲೆ ನೆಗೆದು

ಅವಳನ್ನು ಬೀಳಿಸಿತು.

ಆ ಸದ್ದಿಗೆ ಹಿಂದಿರುಗಿ ನೋಡಿದ ಜೈಕೆನ್ ಕಣ್ಣುಗಳಿಗೆ ಹುಲಿಯ ಬಾಯಲ್ಲಿ ಬಾಯಿಕಳೆದು ಆರ್ತನಾದ ಮಾಡುತ್ತಿದ್ದ ಹೆಂಡತಿ ಕಾಣಿಸಿದಳು! ಅವಳನ್ನು ಕಚ್ಚಿ ಹಿಡಿದಿದ್ದ ಹುಲಿಗೆ ಎಡಕಿವಿಯೂ ಕಣ್ಣೂ ಇರಲಿಲ್ಲ. ಮುಖದಲ್ಲಿದ್ದ ಗಾಯಗಳು ಯಾವೂ ಮಾಯ್ದಿರಲಿಲ್ಲ. ಈ ಅನಿರೀಕ್ಷಿತ ಆಘಾತಕ್ಕೆ ಜೈಕೆನ್ ಭಯಭೀತಿಯಲ್ಲಿ ಮರಗಟ್ಟಿ ಕಲ್ಲಾಗಿಹೋದ. ಅವಳನ್ನು ಕಾಲಲ್ಲಿ ಒತ್ತಿಹಿಡಿದಿದ್ದ ಹುಲಿ ಒಮ್ಮೆ ಇವನತ್ತ ಭೀಕರವಾಗಿ ಘರ್ಜಿಸಿದ್ದೇ ಅವಳನ್ನು ಮತ್ತೆ ಭುಜದಬಳಿ ಕಚ್ಚಿ ಎತ್ತಿಕೊಂಡು ಕಾಡೊಳಗೆ ಹೋಯ್ತು.. ಆ ಹೆಂಗಸು ಭಯದಲ್ಲಿ ಆಗಲೇ ಮೂರ್ಛಿತಳಾಗಿದ್ದಳೆಂದು ತೋರುತ್ತದೆ. ಹುಲಿ ಒಯ್ಯುವಾಗ ಅವಳಿಂದ ಯಾವ ಸೊಲ್ಲೂ ಬರಲಿಲ್ಲ. ಅಥವಾ ಹುಲಿ ಹೊಡೆತಕ್ಕೆ ಸತ್ತೇ ಹೋಗಿದ್ದಳೋ ಏನೋ!

ಜೈಕೆನ್ ಅವನ ಹೆಂಡತಿಯನ್ನು ನೋಡಿದ್ದು ಅದೇ ಕೊನೆ. ಆಮೇಲೆ ಕಾಡಿನಲ್ಲಿ ಎಲ್ಲಿ ಹುಡುಕಿದರೂ ಅವಳ ಅವಶೇಷ ಸಹ ಸಿಕ್ಕಲಿಲ್ಲ. ಇದಾದ ಎರಡು ತಿಂಗಳನಂತರ ಒಬ್ಬ ದನ ಕಾಯುವ ಹುಡುಗನನ್ನು ರಾಂಪುರದ ಬಳಿ ಹುಲಿ ಹಿಡಿದು ತಿಂದುಹಾಕಿತು. ಅನಂತರ ಹಳ್ಳಿಯವರೆಲ್ಲಾ ಸೇರಿ ಹುಡುಕಿದಾಗ ಹುಲಿ ತಿಂದು ಬಿಟ್ಟಿದ್ದ ದನ ಕಾಯುವವನ ಅವಶೇಷಗಳು ಕಾಡಿನಲ್ಲಿ ಸಿಕ್ಕಿದುವು. ಹಳ್ಳಿಯವರು ಅದನ್ನೇ ಹುಡುಕಿ ಸಂಗ್ರಹಿಸಿ ಅವನ ಅಪರ ಕರ್ಮ ನೆರವೇರಿಸಿದರು. ಈ ಕೊಲೆಯನಂತರ ಸರಿಯಾಗಿ ಎರಡುವಾರಕ್ಕೆ ಹುಲಿ ಇನ್ನೊಂದು ನರಹತ್ಯೆ ನಡೆಸಿತು. ಕೊಳ್ಳೇಗಾಲ ಲೊಕ್ಕನಹಳ್ಳಿ ರಸ್ತೆಯಲ್ಲಿ ಇಪ್ಪತ್ತೊಂದನೇ ಮೈಲಿಕಲ್ಲಿನ ಹತ್ತಿರ ರಸ್ತೆ ಕೆಲಸ ಮಾಡುತ್ತಿದ್ದವರ ಪೈಕಿಯ ನಡುವಯಸ್ಸಿನ ಹೆಂಗಸೊಬ್ಬಳು ಆಹುತಿಯಾದಳು. ಅವಳು ಕೆಲಸ ಮಾಡುತ್ತಿದ್ದವಳು ಕೆಲಸ ನಿಲ್ಲಿಸಿ ಎರಡೇ ಎರಡು ಹೆಜ್ಜೆ ಕಾಡೊಳಗೆ ಹೋಗಿದ್ದಳು. ಹುಲಿ ಅಲ್ಲಿಗೆ ಹೇಗೆ ಬಂತೋ! ಯಾರಿಗೂ ಕಾಣದಂತೆ ಅಲ್ಲಿ ಎಲ್ಲಿ ಹುದುಗಿತ್ತೋ! ಎಷ್ಟು ಹೊತ್ತಿನಿಂದ ಸಮಯಕಾದು ಹೊಂಚಿತ್ತೋ ಯಾರಿಗೂ ಗೊತ್ತಿಲ್ಲ. ಇದ್ದಕ್ಕಿದ್ದಂತೆ ಅವಳ ಮೈಮೇಲೆ ಹಾರಿ ಅವಳು ಕೂಗಿಕೊಳ್ಳುತ್ತಿದ್ದಂತೆಯೇ ಕಚ್ಚಿಕೊಂಡು ಕಾಡೊಳಗೆ ದೌಡಾಯಿಸಿಬಿಟ್ಟಿತು. ಬಹುದೂರದವರೆಗೂ ಅವಳ ಅರಚಾಟ ರಸ್ತೆಕೆಲಸ ಮಾಡುತ್ತಿದ್ದ ಅವಳ ಸಹೋದ್ಯೋಗಿಗಳಿಗೆ ಕೇಳಿಸುತ್ತಲೇ ಇತ್ತು. ಆ ಹುಲಿಗೆ ಒಂದು ಕಣ್ಣೂ ಕಿವಿಯೂ ಇಲ್ಲದ್ದನ್ನೂ ಭೀತರಾಗಿ ಈ ದೃಶ್ಯ ನೋಡಿದ ಎಲ್ಲರೂ ಸ್ಪಷ್ಟವಾಗಿ ಕಂಡಿದ್ದರು.

ಉತ್ತರ ಕೊಯಮತ್ತೂರು ವಿಭಾಗದ ಅರಣ್ಯಾಧಿಕಾರಿ, ಈ ಹುಲಿಯ ಕಾಟ ಭೀಕರವಾಗಿ ಅಲ್ಲಿದ್ದ ಕೆಲಸದವರೆಲ್ಲಾ ಕೆಲಸಕ್ಕೆ ಬರಲು ನಿರಾಕರಿಸಿ, ಎಲ್ಲ ಕಾಮಗಾರಿಗಳೂ ಸ್ಥಗಿತಗೊಳ್ಳುತ್ತಲೂ ನನಗೆ ಕಾಗದ ಬರೆದು ಈ ಹುಲಿಯ ಪಿಡುಗನ್ನು ಹೇಗಾದರೂ ಕೊನೆಗಾಣಿಸುವಂತೆ ಕೇಳಿಕೊಂಡರು. ಕೊಳ್ಳೇಗಾಲ ವಿಭಾಗಕ್ಕೆ ನನಗಿದ್ದ

ಶಿಕಾರಿ ಲೈಸನ್ಸ್‌ನ್ನು ನಾನು ನವೀಕರಿಸಬೇಕಿತ್ತು. ಇಲ್ಲದಿದ್ದರೆ ಸರ್ಕಾರದ ಸಾವಿರಾರು ಪ್ರಶ್ನೆಗಳಿಗೆ ವಿವರಣೆ ಕೊಟ್ಟು ಸಾಕುಬೇಕಾಗುತ್ತದೆಂದು ನಾನು ಹತ್ತು ದಿನ ರಜೆ ತೆಗೆದುಕೊಂಡು ನನ್ನ ಶಿಕಾರಿ ಲೈಸನ್ಸನ್ನು ನವೀಕರಿಸಲು ಎಂಭತ್ತೇಳು ಮೈಲಿ ಹೋಗಿ ಕೊಳ್ಳೇಗಾಲದ ಅರಣ್ಯ ಇಲಾಖೆಯಲ್ಲಿ ನವೀಕರಿಸಿಕೊಂಡೆ. ತುರ್ತಾಗಿ ಹುಲಿ ಹೊಡೆಯಬೇಕಾದ ಅಗತ್ಯವಿದ್ದುದರಿಂದಲೋ ಏನೋ ನನ್ನ ಕೆಲಸ ಬೇಗಬೇಗ ಮಾಡಿಕೊಟ್ಟರು. ಹಾಗೇ ಆ ಹುಲಿ ಕಾಟಕ್ಕೆ ಸಂಬಂಧಿಸಿದ ಸಾಕಷ್ಟು ಮಾಹಿತಿಗಳನ್ನೂ ಒದಗಿಸಿದರು.

ನಾನು ಕೆಲಸ ಮಾಡಬೇಕಾಗಿದ್ದ ಜಾಗ ಅಪರಿಚಿತ ಪ್ರದೇಶ. ಆದ್ದರಿಂದ ರಾಂಪುರದಲ್ಲಿದ್ದ ಚಿಕ್ಕ ಅರಣ್ಯಗೃಹದಲ್ಲಿ ಉಳಿದುಕೊಂಡು ಆ ಹುಲಿಯ ಇತ್ಯೋಪರಿಗಳನ್ನು ತಿಳಿದು ಕೆಲಸ ಶುರುಮಾಡೋಣ ಎಂದು ನಿರ್ಧರಿಸಿದೆ. ರಾಂಪುರದ ವಿಶ್ರಾಂತಿಗೃಹ ಇಪ್ಪತ್ತೈದು ಮೈಲು ದೂರದಲ್ಲಿತ್ತು. ಆ ಹಾಳಾದ ರಸೆಯಲ್ಲಿ ಕುಕ್ಕುತ್ತಾ ಕುಲುಕುತ್ತಾ ಅಲ್ಲಿಗೆ ತಲುಪಬೇಕಾದರೆ ಒಂದುವರೆಗಂಟೆ ಹಿಡಿಯಿತು.

ನಾನು ಮಾಡಬೇಕಾಗಿದ್ದ ಮೊದಲ ಕೆಲಸವೆಂದರೆ ಹೆದರಿ ಹೌಹಾರಿದ್ದ ಹಳ್ಳಿಯವರಿಗೆಲ್ಲಾ ಧೈರ್ಯ ಹೇಳಿ ಅವರಲ್ಲಿ ಆತ್ಮವಿಶ್ವಾಸ ಮೂಡಿಸಬೇಕಾದ್ದು. ಅಲ್ಲಿಯವರಿಗೆ ನನ್ನ ಯಾವ ಪರಿಚಯವೂ ಇರಲಿಲ್ಲ. ಹಾಗಾಗಿ ಹುಲಿಯಬಗ್ಗೆ ನಿರ್ದಿಷ್ಟವಾಗಿ ಏನನ್ನೂ ಹೇಳದೆ ಅವರು ಪೊನ್ನಾಚಿಮಲೈ ಬೆಟ್ಟಗಳಿಂದ ಹಿಡಿದು ಈಚೆಗೆ ನರಬಲಿ ತೆಗೆದುಕೊಂಡ ಬೈಲೂರಿನವರೆಗೆ ಎಲ್ಲಿ ಬೇಕಾದರೂ ಹುಲಿ ಇರಬಹುದು ಎಂದು ಹೇಳಿದರು. ಸುಮಾರು ಅರುವತ್ತು ಮೈಲಿ ಉದ್ದಗಲದ ಈ ಭಯಂಕರಾರಣ್ಯದಲ್ಲಿ ಅಷ್ಟು ಅಸ್ಪಷ್ಟ ಅಭಿಪ್ರಾಯಗಳ ಆಧಾರದ ಮೇಲೆ ಹುಲಿ ಹುಡುಕುವುದು ಸಾಧ್ಯವೇ ಇರಲಿಲ್ಲ.

ಕೊಳ್ಳೇಗಾಲದಿಂದ ಸರ್ಕಾರಿರಸ್ತೆಯಲ್ಲಿ ಬೈಲೂರು ಮುವ್ವತ್ತು ಮೈಲಿ ದೂರದಲ್ಲಿತ್ತು. ನಾನು ಕೊಳ್ಳೇಗಾಲಕ್ಕೆ ಕಾರಿನಲ್ಲಿ ಹೋಗಿ ಅಲ್ಲಿಂದ ಬೈಲೂರಿಗೆ ಹೋಗಬಹುದಿತ್ತು. ಇಲ್ಲವೇ ರಾಂಪುರದಿಂದ ಒಳದಾರಿಯಲ್ಲಿ ನಡೆದು ಹತ್ತೊಂಬತ್ತು ಮೈಲು ದೂರದಲ್ಲಿರುವ ಬೈಲೂರು ತಲುಪಬಹುದಿತ್ತು. ನಾನು ಒಳದಾರಿಯಲ್ಲಿ ನಡೆದುಹೋಗಲು ನಿರ್ಧರಿಸಿದೆ. ಏಕೆಂದರೆ ಅಲ್ಲಿ ಸಿಕ್ಕುವ ಕಾಡೊಳಗಿನ ಚಿಕ್ಕಚಿಕ್ಕ ಹಳ್ಳಿಗಳಲ್ಲಿ ಹುಲಿಯಬಗ್ಗೆ ವಿಚಾರಿಸುತ್ತ ಉಪಯುಕ್ತ ಮಾಹಿತಿಯನ್ನು ಸಂಗ್ರಹಿಸಬಹುದಿತ್ತು.

ಮಾರನೆದಿನ ಬೆಳಗಿನಝಾವಕ್ಕೇ ಎದ್ದು ಕೋವಿ ಟಾರ್ಚು ಇತ್ಯಾದಿಗಳೊಡನೆ ಬೈಲೂರಿನ ಒಳದಾರಿ ಹಿಡಿದೆ. ದಾರಿ ಮನ್ನಾಜಂಗ್ಲಿಯ ಅಂಚಿನಲ್ಲೇ ಕುರುಚಲು ಕಾಡಿಗೂ ಮನ್ನಾಜಂಗ್ಲಿಗೂ ನಡುವೆ ಸಾಗುತ್ತದೆ. ನಡುನಡುವೆ ಹೊಲಗದ್ದೆಗಳೂ ಕೃಷಿ

ಭೂಮಿಯೂ ಸಿಕ್ಕುತ್ತದೆ. ಪರ್ವತ ಪಂಗ್ತಿಗಳೂ ಬೇಕಾದಷ್ಟು ಇದಿರಾಗುತ್ತದೆ.

ನಾನು ಕಂಡ ಹಳ್ಳಿಗಳಲ್ಲೆಲ್ಲಾ ಜನ ಯಾರೂ ಅಡ್ಡಾಡುತ್ತಿರಲಿಲ್ಲ. ಕಾಡಿಗೆ ದನ ಮೇಯಿಸಲೂ ಹೋಗುತ್ತಿರಲಿಲ್ಲ. ಮನೆಯೆದುರೇ ಬೆಳೆದಿದ್ದ ಹುಲ್ಲನ್ನು ಅಲ್ಪಸ್ವಲ್ಪ ಮೇಯಲು ಬಿಟ್ಟು ಮತ್ತೆ ಕೊಟ್ಟಿಗೆಗೆ ಕೂಡಿಬಿಡುತ್ತಿದ್ದರು. ವಾರವಾರವೂ ನರಭಕ್ಷಕನ ಹೊಸಹೊಸ ನರಬಲಿಗಳ ವಾರ್ತೆ ಕೇಳಿದಂತೆಲ್ಲಾ ಮುಂದಿನದು ತಮ್ಮ ಸರದಿಯೇ ಇದ್ದರೂ ಇರಬಹುದೆಂದು ಊಹಿಸಿ ಎಲ್ಲರೂ ಚಿಂತಾಕ್ರಾಂತರಾಗಿ ಜಾಗರೂಕತೆ ವಹಿಸಿದ್ದರು.

ನಾನು ಬಹಳ ನಿಧಾನವಾಗಿ ನಡೆದೆ. ಮನೆಯಿಂದ ಹೊರಗೆ ಜನ ಕಂಡಲ್ಲೆಲ್ಲಾ ನಿಂತು ಆ ಸೋಲಿಗರ ಹತ್ತಿರ ಹುಲಿಯ ಸಮಾಚಾರ ವಿಚಾರಿಸಿದೆ. ನಾನು ಮಾತಾಡಿಸಿದ ಪ್ರತಿಯೊಬ್ಬ ಸೋಲಿಗನೂ ಒಂದು ದಿನದ ಹಿಂದೆಯೋ ಎರಡು ದಿನದ ಹಿಂದೆಯೋ ಕಾಡಿನಲ್ಲಿ ಹುಲಿ ಘರ್ಜಿಸುತ್ತಾ ತಿರುಗಿದ್ದನ್ನು ಹೇಳುತ್ತಿದ್ದ. ಒಂದು ಕಡೆ ಒಬ್ಬ ಸೋಲಿಗ ಹುಲಿ ಅವರ ಹಾಡಿಯಿಂದ ನೂರು ಗಜದಷ್ಟು ಹತ್ತಿರ ನಡೆದುಹೋಗಿದ್ದ ಹೆಜ್ಜೆ ಗುರುತುಗಳನ್ನು ತೋರಿಸಿದ. ಅದು ಹೊಸದಾಗಿ ಉತ್ತ ಹೊಲವಾದ್ದರಿಂದ ಹುಲಿಯ ಹೆಜ್ಜೆಗುರುತುಗಳು ಬಹಳ ಸ್ಪಷ್ಟವಾಗಿ ಅಚ್ಚೊತ್ತಿದ್ದುವು. ನಾನು ಅದರ ಹೆಜ್ಜೆ ಗುರುತುಗಳ ಉದ್ದಗಲಗಳನ್ನೂ ಆಕಾರವನ್ನೂ ಮುಂದೆ ಬೇಕಾಗುತ್ತದೆಂದು ಗುರುತು ಮಾಡಿಕೊಂಡೆ. ಆದರೆ ಅವರೆಲ್ಲಾ ತುಂಬಾ ಗಾಬರಿಯಾಗಿದ್ದರಿಂದ ಉತ್ಪ್ರೇಕ್ಷೆ ಮಾಡುತ್ತಿದ್ದರೋ, ಅಥವಾ ಅಲ್ಲಿ ಹಲವಾರು ಹುಲಿಗಳು ತಿರುಗಾಡುತ್ತಿದ್ದುವೋ, ಅಂತೂ ಪ್ರತಿಯೊಬ್ಬರೂ ತಮ್ಮ ಹಾಡಿ ಹತ್ತಿರವೇ ಹುಲಿ ಸುಳಿದಾಡುತ್ತಿದೆ ಎಂದು ಹೇಳುತ್ತಿದ್ದರು. ಅವರ ಹೇಳಿಕೆಗಳು ನಿಜವಾಗಿದ್ದಲ್ಲಿ ಕಳೆದ ಮೂರು ದಿನದಲ್ಲಿ ಹುಲಿ ಅಲ್ಲಿದ್ದಷ್ಟೂ ಹಾಡಿಗಳ ಹತ್ತಿರ ಸುಳಿದಾಡಿರಬೇಕು.

ಸುಮಾರು ಐದುಗಂಟೆ ಹೊತ್ತಿಗೆ ನಾನು ಬೈಲೂರು ತಲುಪಿದೆ. ಅದೊಂದು ಇಪ್ಪತ್ತು ಗುಡಿಸಿಲುಗಳ ಚಿಕ್ಕ ಹಳ್ಳಿ. ಅಲ್ಲಿ ಇಪ್ಪತ್ತೊಂದನೇ ಮೈಲಿಕಲ್ಲಿನ ಹತ್ತಿರ ರಸ್ತೆ ಕೆಲಸ ಮಾಡುತ್ತಿದ್ದ ಕೂಲಿಗಳ ಗುಂಪು ಭೇಟಿಯಾದರು. ಕೆಲಸ ಮಾಡುತ್ತಿದ್ದ ಹೆಂಗಸನ್ನು ಅವರ ಕಣ್ಣೆದುರೇ ಹೊತ್ತುಕೊಂಡುಹೋಗಿತ್ತು ಹುಲಿ. ಚೀರಾಡುತ್ತಿದ್ದ ಹೆಂಗಸನ್ನು ಕಚ್ಚಿಹಿಡಿದು ಹೊತ್ತುಕೊಂಡು ಹೋದಾಗ ಹುಲಿಗೆ ಒಂದು ಕಣ್ಣೂ ಕಿವಿಯೂ ಇಲ್ಲದ್ದನ್ನೂ, ಮುಖವೆಲ್ಲಾ ಗಾಯಗಳಿಂದ ವಿರೂಪಗೊಂಡಿರುವುದನ್ನೂ ಅವರು ಬಹಳ ಸ್ಪಷ್ಟವಾಗಿ ನೋಡಿದ್ದರು.

ಬೈಲೂರಿನ ಹತ್ತಿರದಲ್ಲಿದ್ದ ಅರಣ್ಯವಿಶ್ರಾಂತಿ ಗೃಹ ಅಲ್ಲಿಂದ ಮೂರೂವರೆ ಮೈಲು ದೂರದಲ್ಲಿತ್ತು. ಆಗಲೇ ಕತ್ತಲಾಗತೊಡಗಿತ್ತು. ನರಭಕ್ಷಕನ ಓಡಾಟ ಅಲ್ಲಿರುವಂತೆ ತೋರಿದ್ದರಿಂದ ನಾನು ಹಿಂದಿರುಗದೆ ಸರಸರ ದಾರಿ ಕ್ರಮಿಸಿ ಆ ಚಿಕ್ಕ

ವಿಶ್ರಾಂತಿ ಗೃಹ ಸೇರಿಕೊಂಡೆ. ಅಲ್ಲಿಗೆ ನಾನು ತಲುಪುವಾಗಾಗಲೇ ಕತ್ತಲು ಕವಿದಿತ್ತು.

ದಿಗಂತದಲ್ಲಿ ಬಿಳಿಗಿರಿರಂಗನಬೆಟ್ಟದ ಸಾಲುಗಳು ಗೋಡೆ ಕಟ್ಟಿದಂತೆ ನೀಲಿಯಾಗಿ ಹಬ್ಬಿದ್ದು ಕಾಣುತ್ತಿತ್ತು. ನಿದ್ದೆಗೆ ಸರಿಯುವ ಮೊದಲು ನವಿಲುಗಳೂ ಕಾಡುಕೋಳಿಗಳೂ ಹಾಕುವ ಕೇಕೆ ಕೂಗು ಕೇಳಿಸುತ್ತಿತ್ತು. ಕೆಳಗಿನ ಕಣಿವೆಯ ದಟ್ಟ ಕಾಡಿನ ಮೇಲ್ಭಾಗ ಗುಡ್ಡಕ್ಕೆ ಕಂಬಳಿ ಹೊದ್ದಿಸಿದ ಹಾಗೆ ಕಾಣುತ್ತಿತ್ತು.

ಕತ್ತಲು ದಟ್ಟವಾಗುತ್ತಿದ್ದಹಾಗೇ ಕಾಡಿನ ಕೋಟ್ಯಂತರ ಮಿಣುಕುಹುಳುಗಳು ದೀಪ ಮಿನುಗಿಸುತ್ತಾ ಹಾರಾಡತೊಡಗಿದುವು. ಪ್ರತಿಯೊಂದು ಮರ ಗಿಡ ಪೊದೆಗಳ ಎಲೆ ಎಲೆಗಳ ಮೇಲೆಲ್ಲಾ ಅಸಂಖ್ಯ ಮಿಣುಕು ಹುಳುಗಳು ಕುಳಿತಿದ್ದುವೆಂದು ಕಾಣುತ್ತದೆ. ಯರ್‍ರಾಬಿರ್‍ರಿಯಾಗಿ ಮಿನುಗುತ್ತಿದ್ದ ಅಷ್ಟು ಹುಳುಗಳೂ ತಮ್ಮ ಬೆಳಕನ್ನು ಒಮ್ಮೊಮ್ಮೆ ಒಮ್ಮೆಲೇ ಸಂಯೋಜಿಸಿಬಿಡುತ್ತಿದ್ದುವು. ಅದೊಂದು ಕಾಡಿನ ಸ್ಮರಣೀಯ ಅನುಭವ. ಎಲ್ಲ ಮರಗಿಡಗಳೂ ಪೊದೆಪೊದೆಗಳೂ ಮಿಂಚಿನಲ್ಲಿ ಎರಕ ಹುಯ್ದುಹಾಗೆ ಕಾಣುತ್ತಿದ್ದುವು. ಇಡೀ ಕಾಡೇ ದೇದೀಪ್ಯಮಾನವಾಗುತ್ತಿತ್ತು.

ನಾನು ಆ ವಿಶ್ರಾಂತಿಗೃಹದ ನಡುಕೋಣೆಯಲ್ಲಿ ನೆಲದಮೇಲೇ ಮಲಗಿದೆ. ರಾತ್ರಿ ಎರಡುಗಂಟೆ ಹೊತ್ತಿಗೆ ಫಕ್ಕನೆ ಎಚ್ಚರಾಯ್ತು. ಕಿವಿಗೊಟ್ಟು ಆಲಿಸಿದೆ. ಹುಲಿ ಕಾಡೊಳಗೆ ಗುರುಗುಟ್ಟುತ್ತಾ ಇತ್ತು. ಆಗಾಗ ಕೇಳುತ್ತಿದ್ದ ಸದ್ದು ನಿಧಾನವಾಗಿ ಕಾಡಿನ ಮೌನದಲ್ಲಿ ಕರಗಿಹೋಯ್ತು. ಹುಲಿ ದೂರಾಯ್ತೆಂದು ತೋರುತ್ತದೆ.

ಬೆಳಗ್ಗೆ ಎದ್ದು ಮತ್ತೆ ಬೈಲೂರಿನ ಕಡೆ ಹೊರಟೆ.. ಅಲ್ಲಿ ಇಬ್ಬರು ಸ್ಥಳೀಯ ಶಿಕಾರಿಯವರು ನನಗೆ ಸಿಕ್ಕರು. ಅವರ ಸಹಾಯದಿಂದ ನಾನು ಮೂರು ಹೋರಿಗಳನ್ನು ಕೊಂಡೆ. ಒಂದನ್ನು ವಿಶ್ರಾಂತಿಗೃಹದ ಪಶ್ಚಿಮಕ್ಕೆ ಹರಿಯುತ್ತಿದ್ದ ಹಳ್ಳದ ತಡಿಯಲ್ಲಿ ಕಟ್ಟಿದೆ. ಇನ್ನೊಂದನ್ನು ನಾನು ಬಂದ ದಾರಿಯಲ್ಲಿ ರಸ್ತೆಯಿಂದ ನೂರುಗಜ ದೂರದಲ್ಲಿ ಹರಿಯುತ್ತಿದ್ದ ಹಳ್ಳದ ತಡಿಯಲ್ಲಿ ಕಟ್ಟಿದೆವು. ಮೂರನೆಯದನ್ನು ರಸ್ತೆ ಕೆಲಸದವಳನ್ನು ಹುಲಿ ಹೊತ್ತೊಯ್ದ ಇಪ್ಪತ್ತೊಂದನೇ ಮೈಲಿ ಕಲ್ಲಿನ ಬಳಿ ಕಟ್ಟಲು ಒಯ್ದೆವು. ಅಲ್ಲಿ ಹತ್ತಿರದಲ್ಲೇ ಒಂದು ಚಿಕ್ಕ ಹಳ್ಳ ಹರಿಯುತ್ತಿತ್ತು. ರಸ್ತೆ ಅಕ್ಕಪಕ್ಕದಲ್ಲಿ ಬಿದಿರು ಬಹು ದಟ್ಟವಾಗಿತ್ತು. ಅಲ್ಲೊಂದುಕಡೆ ಅರಣ್ಯ ಇಲಾಖೆಯವರು ಕೊಂಚ ಕಾಡನ್ನು ಕಡಿದು ಬಯಲು ಮಾಡಿ ನರ್ಸರಿ ಮಾಡಿದ್ದರು. ಕಾಡಿನ ಅನೇಕಜಾತಿ ಮರಗಳ ಸಸಿಗಳನ್ನು ಅಲ್ಲಿ ಪ್ರಾಯೋಗಿಕವಾಗಿ ಬೆಳೆಸಿದ್ದರು. ಆ ಹಳ್ಳದ ತಡಿಯಲ್ಲಿ ಹುಲಿಗಳು ಯಾವಾಗಲೂ ತಿರುಗುತ್ತವೆ ಎಂದು ಶಿಕಾರಿಯರು ಹೇಳಿದರು. ಹಳ್ಳದ ಕೆಸರಿನಲ್ಲಿ ಅವರು ತಿಳಿಸಿದಂತೆ ಅನೇಕ ಹುಲಿಯ ಹಳೆ ಮತ್ತು ಹೊಸ ಹೆಜ್ಜೆಗಳಿದ್ದುವು. ನಾನು ನಿನ್ನೆ ಬರುತ್ತಾ ಗುರುತುಮಾಡಿಕೊಂಡಿದ್ದ ಹುಲಿ ಹೆಜ್ಜೆ ಗುರುತುಗಳ ಉದ್ದಗಲಗಳನ್ನು ಇತರ ಚಹರೆಗಳನ್ನು ಅಲ್ಲಿದ್ದ ಹೊಸ ಹುಲಿ ಹೆಜ್ಜೆ ಗುರುತುಗಳೊಡನೆ ತಾಳೆನೋಡಿದೆ. ಎರಡೂ

ಗಂಡು ಹುಲಿಗಳದೇ ಆದರೂ ಇಲ್ಲಿದ್ದಿದ್ದು ನಾನು ಮೊದಲು ನೋಡಿದ್ದ ಹಜ್ಜೆ ಗುರುತಿಗಿಂತ ವಯಸ್ಸಾದ ದೊಡ್ಡ ಹುಲಿಯದು. ಹಳ್ಳಿಗರು ಹೇಳುವಂತೆ ಅಲ್ಲಿ ಹಲವಾರು ಹುಲಿಗಳು ಓಡಾಡುತ್ತಿದ್ದರೂ ಇರಬಹುದೆನ್ನಿಸಿತು. ಅಲ್ಲಿದ್ದ ಹಳ್ಳದ ತಡಿಯಲ್ಲೆ ಕೊಂಚ ಬಯಲು ಜಾಗದಲ್ಲಿ ಮೂರನೆಯ ಹೋರಿಯನ್ನು ಕಟ್ಟಿದೆವು.

ಎಲ್ಲಾ ಹೋರಿಗಳನ್ನೂ ಸರಿಯಾದ ಜಾಗ ಹುಡುಕಿ ಕಟ್ಟಿ ಮುಗಿಸುವ ಹೊತ್ತಿಗೆ ಸಂಜೆ ಐದುಗಂಟೆಯಾಗಿತ್ತು. ಹುಲಿಯ ಮುಂದಿನ ಚಲನವಲನಗಳನ್ನು ಕಾದು ಕ್ರಮ ನಿರ್ಧರಿಸೋಣೆಂದು ತೀರ್ಮಾನಿಸಿ ಬೈಲೂರಿನ ವಿಶ್ರಾಂತಿಗೃಹಕ್ಕೆ ಹಿಂದಿರುಗಿದೆ. ಬೈಲೂರಿನಲ್ಲೊಬ್ಬ ದೃಢಕಾಯನಾದ ಯುವಕ ನನಗಾಗಿ ಕಾಯುತ್ತಾ ಇದ್ದ. ತನ್ನ ಹೆಸರು ಜೈಕೆನ್ ಎಂದೂ, ಹುಲಿಗೆ ಮೊಟ್ಟಮೊದಲು ಬಲಿಯಾದ ಹುಡುಗಿಯ ಗಂಡ ತಾನೆಂದೂ ತನ್ನನ್ನು ಪರಿಚಯಿಸಿಕೊಂಡ. ಅವನು ಕೆಲಸ ಮಾಡುತ್ತಿರುವ ಪೊನ್ನಾಚಿ ಗುಡ್ಡಕ್ಕೆ ಕೆಲಸಕ್ಕೆ ಬಂದ ಆಳುಗಳು ಆ ನರಭಕ್ಷಕನನ್ನು ಹೊಡೆಯಲು ಒಬ್ಬ ಬಿಳಿಯ 'ಸಾಹಿಬ್' ಬಂದಿರುವುದನ್ನು ತಿಳಿಸಿದರೆಂದೂ, ತನ್ನ ಹೆಂಡತಿಯನ್ನು ಕೊಂದ ಆ ಪಾತಕಿ ಹುಲಿಯನ್ನು ಕೊಲ್ಲಲು ತನ್ನ ಕೈಲಾದ ಸಹಾಯ ಮಾಡುವ ಸಲುವಾಗಿಯೇ ತೋಟದ ಮಾಲೀಕರ ಹತ್ತಿರ ರಜೆ ಪಡೆದು ಬಂದಿರುವುದಾಗಿ ಹೇಳಿದ. ರಾಂಪುರದಲ್ಲಿ ನಾನು ಬೈಲೂರಿಗೆ ಹೋಗಿರುವುದನ್ನು ತಿಳಿದು ಅಲ್ಲಿಂದ ನೇರವಾಗಿ ಇಲ್ಲಿಗೆ ಬಂದಿದ್ದ.

ನನಗಾಗಿ ಕಷ್ಟ ತಗೊಂಡು ಇಲ್ಲಿಯವರೆಗೆ ಹುಡುಕಿ ಬಂದಿದ್ದಕ್ಕೆ ಅವನಿಗೆ ಕೃತಜ್ಞತೆ ವ್ಯಕ್ತಪಡಿಸಿ ಅವನನ್ನು ಕೂಡಲೆ ನನ್ನ ಸಹಾಯಕರ ಮೇಲ್ವಿಚಾರಕನನ್ನಾಗಿ ಮಾಡಿದೆ. ಅವನ ತಣ್ಣಗಿನ ದೃಢನಿರ್ಧಾರ, ಕಾಡನ್ನು ವಿವರವಾಗಿ ಪರಿಶೀಲಿಸುವ ಸೂಕ್ಷ್ಮಜ್ಞತೆ, ಛಲ ಇವೆಲ್ಲಾ ನನಗೆ ತುಂಬ ಹಿಡಿಸಿದುವು. ನಾನು ಅವನ ಸಹಾಯ ಒಪ್ಪಿಕೊಂಡಿದ್ದಕ್ಕೆ ಖುಷಿಯಾಗಿ ನಸುನಕ್ಕ. ಅವನು ಮೊದಲಿಗೇ ಸಂಬಳಕ್ಕಾಗಿ ತಾನು ಬಂದಿಲ್ಲವೆಂದೂ, ಯಾವರೀತಿಯ ಧನಸಹಾಯವನ್ನೂ ತಾನು ಸ್ವೀಕರಿಸುವುದಿಲ್ಲೆಂದೂ ಸ್ಪಷ್ಟವಾಗಿ ಹೇಳಿಬಿಟ್ಟ. ಈ ನಿಬಂಧನೆಗೆ ಸಮ್ಮತಿಸಿದರೆ ಮಾತ್ರ ತಾನು ಸಹಾಯ ಮಾಡುವುದಾಗಿ ಕರಾರು ಹಾಕಿದ.

ಜೈಕೆನ್‌ಗೂ ಅವನ ಇಬ್ಬರು ಸಹಾಯಕರಿಗೂ ನಾಳೆ ಬೆಳಗ್ಗೆ ಆದಷ್ಟು ಮುಂಚೆ ಎದ್ದು ಇಪ್ಪತ್ತೊಂದನೇ ಮೈಲಿಕಲ್ಲಿನಬಳಿ ಕಟ್ಟಿರುವ ಹೋರಿ ನೋಡಿಕೊಂಡು ಬನ್ನಿ, ನಾನು ಮಿಕ್ಕೆರಡನ್ನು ನೋಡಿರುತ್ತೇನೆ ಎಂದು ಕೆಲಸ ಹೇಳಿ, ನಾನು ವಸತಿ ಗೃಹಕ್ಕೆ ತೆರಳಿದೆ. ಮಾರನೆ ದಿನ ಬೆಳಗ್ಗೆ ಏಳುತ್ತಲೂ ನಾನು ವಸತಿ ಗೃಹದ ಹತ್ತಿರ ಕಟ್ಟಿದ್ದ ಹೋರಿಯನ್ನೂ, ವಸತಿ ಗೃಹಕ್ಕೂ ಬೈಲೂರಿಗೂ ನಡುವೆ ಕಾಡಿನಲ್ಲಿ ಕಟ್ಟಿದ್ದ ಹೋರಿಯನ್ನೂ ಹೋಗಿ ನೋಡಿದೆ. ಎರಡಕ್ಕೂ ಏನೂ ಆಗಿರಲಿಲ್ಲ. ಅಲ್ಲದೆ ಅಲ್ಲೆಲ್ಲೂ ಹುಲಿಯ ಹೆಜ್ಜೆಗುರುತುಗಳೂ ಸಹ ಕಂಡುಬರಲಿಲ್ಲ. ಅಲ್ಲಿಂದ ಬೈಲೂರಿಗೆ ಹೋಗಿ

ನನ್ನ ಮೂವರು ಸಹಾಯಕರನ್ನೂ ಕಾಯುತ್ತ ಕುಳಿತೆ. ಸ್ವಲ್ಪ ಹೊತ್ತಿನೊಳಗೇ ಜೈಕೆನ್ ಮತ್ತು ಅವನ ಸಹಾಯಕರಿಬ್ಬರೂ ಬಂದು ಅಲ್ಲಿ ಕಟ್ಟಿದ್ದ ಹೋರಿಯನ್ನೂ ಯಾವ ಹುಲಿಯೂ ಮುಟ್ಟಿಲ್ಲವೆಂದು ಸುದ್ದಿ ತಿಳಿಸಿದರು.

ಒಬ್ಬ ಸೋಲಿಗನನ್ನೂ ಜೈಕೆನ್‌ನನ್ನೂ ಬೈಲೂರಿನಲ್ಲೇ ಬಿಟ್ಟು ಆ ಕಾಡಿನ ಪರಿಚಯ ಚೆನ್ನಾಗಿದ್ದ ಒಬ್ಬ ಸೋಲಿಗನನ್ನು ಕರೆದುಕೊಂಡು ನಾನು ಪಶ್ಚಿಮಕ್ಕೆ ಬಿಳಿಗಿರಿರಂಗನಬೆಟ್ಟದ ತಪ್ಪಲಿನ ಕಾಡುಗಳತ್ತ ಹೊರಟೆ. ನನ್ನ ಜೊತೆಗಾರನಿಗೆ ಕಾಡಿನ ಪರಿಚಯ ಚೆನ್ನಾಗಿದ್ದರಿಂದ ಅವನನ್ನೇ ಮುಂದೆ ಬಿಟ್ಟೆ. ಅವನ ಹಿಂದೆ ನಾನು ರೈಫಲ್ ಕೈಯ್ಯಲ್ಲಿ ಸಿದ್ಧವಾಗಿ ಹಿಡಿದು ಮುಂದುವರಿಯುತ್ತಿದ್ದೆ. ಆ ಸೋಲಿಗ ಕಾಡು ಮತ್ತು ಶಿಕಾರಿಗಳಲ್ಲಿ ತುಂಬಾ ಪಳಗಿದವನಿರಬೇಕು. ನರಭಕ್ಷಕನ ಅಂಜಿಕೆಯೇ ಇಲ್ಲದೆ ನಿರ್ಭೀತನಾಗಿ ಮುಂದುವರಿಯುತ್ತಿದ್ದ. ಕಾಡು ಪ್ರಾಣಿಗಳು ಓಡಾಡಿ ಮಾಡಿಕೊಂಡಿದ್ದ ಜಾಡಿನಿಂದ ಜಾಡಿಗೆ ದಿಕ್ಕು ಬದಲಿಸುತ್ತಾ ಹುಲಿ ಹೆಜ್ಜೆಗುರುತುಗಳನ್ನು ಅರಸುತ್ತಾ ಮುಂದುವರಿದೆವು. ನಾವು ಕಂಡದ್ದೆಲ್ಲಾ ಹಲವಾರು ದಿನಗಳ ಹಳೆಯದಾದ ಹುಲಿ ಹೆಜ್ಜೆ ಗುರುತುಗಳು. ಈಚೆಗೆ ಯಾವ ಹುಲಿಯೂ ಅಲ್ಲಿ ಓಡಾಡಿದ್ದು ಕಂಡುಬರಲಿಲ್ಲ.

ಒಂದುಕಡೆ ದೊಡ್ಡ ಗಂಡು ಚಿರತೆಯೊಂದು ಹಳ್ಳ ದಾಟಿತ್ತು. ಇನ್ನೊಂದು ಕಡೆ ಒಂದು ಹೆಣ್ಣು ಚಿರತೆಯ ಹೆಜ್ಜೆ ಗುರುತುಗಳು ಕಂಡವು. ಆ ಗುರುತುಗಳ ಪಕ್ಕ ಅದರ ಎರಡು ಮರಿಗಳ ಚಿಕ್ಕಚಿಕ್ಕ ಹೆಜ್ಜೆಗುರುತುಗಳೂ ಬಿದ್ದಿದ್ದುವು.

ನಾವು ಅರಣ್ಯವಿಶ್ರಾಂತಿ ಗೃಹಕ್ಕೆ ಹಿಂದಿರುಗಿ ಬಂದಾಗ ಮಧ್ಯಾನ್ಹ ಮೂರೂವರೆಯಾಗಿತ್ತು. ಊಟ ಎಲ್ಲ ತಣ್ಣಗಾಗಿತ್ತು. ಸೋಲಿಗರು ಸೌದೆ ತಂದು ಬೆಂಕಿ ಮಾಡಿದರು. ಒಂದು ಬಕೆಟ್ಟಿನಷ್ಟು ಟೀ ಮಾಡಿ ಎಲ್ಲರೂ ಹೊಟ್ಟೆ ತುಂಬಾ ಟೀ ಕುಡಿದೆವು. ಅನಂತರ ನಾನು ಅಲ್ಲೇ ಸಮೀಪದಲ್ಲಿದ್ದ ಬಾವಿಯಿಂದ ನೀರು ಸೇದಿ ತಣ್ಣೀರು ಸ್ನಾನ ತೆಗೆದುಕೊಂಡೆ.

ಐದು ಗಂಟೆ ಹೊತ್ತಿಗೆ ಬೈಲೂರಿಗೆ ಹೋದೆವು. ಜೈಕೆನ್‌ಗೂ ಅವನ ಜೊತೆಗಾರರಿಗೂ ಮತ್ತೆ ಮಾರನೆದಿನ ಬೆಳಗ್ಗೆ ಇಪ್ಪತ್ತೊಂದನೇ ಮೈಲಿ ಕಲ್ಲಿನ ಬಳಿಯ ಹೋರಿಯನ್ನು ನೋಡಿಬಂದು ವರದಿ ಮಾಡುವಂತೆ ಹೇಳಿ ಮತ್ತೆ ಹಿಂದಿರುಗಿ ಬಂದು ನಿದ್ದೆ ಮಾಡಿದೆ. ಅವತ್ತು ರಾತ್ರಿ ಹುಲಿಯ ಘರ್ಜನೆಯಾಗಲೀ ಗುರುಗುಟ್ಟುವಿಕೆಯಾಗಲೀ ಕೇಳಲಿಲ್ಲ. ಕಾಡು ನಿಃಶಬ್ದವಾಗಿತ್ತು.

## ೨



ಬೆಳಗ್ಗೆ ಎದ್ದವನೇ ಬಂಗಲೆ ಹತ್ತಿರ ಕಟ್ಟಿದ್ದ ಹೋರಿಯನ್ನೂ, ಬೈಲೂರಿನ ದಾರಿಯಲ್ಲಿ ಕಟ್ಟಿದ್ದ ಹೋರಿಯನ್ನೂ ನೋಡಿಬಂದೆ. ಯಾವಕ್ಕೂ ಏನೂ ಆಗಿರಲಿಲ್ಲ. ಹುಲಿ ಹೆಜ್ಜೆ ಗುರುತುಗಳು ಸಹ ಸಮೀಪದಲ್ಲಿ ಎಲ್ಲೂ ಕಾಣಲಿಲ್ಲ.

ಬಂಗಲೆಗೆ ಬಂದು ತಿಂಡಿ ತಿಂದು ಮತ್ತೆ ಬೈಲೂರಿಗೆ ಹೋಗಿ ನಮ್ಮ ಆಸಾಮಿಗಳು ಬರುವುದನ್ನೇ ಕಾಯುತ್ತ ಕುಳಿತೆ. ಅವರು ಬರುವುದು ಕೊಂಚ ತಡವಾಯ್ತು. ಇಪ್ಪತ್ತೊಂದನೇ ಮೈಲಿಕಲ್ಲಿನ ಹತ್ತಿರ ಕಟ್ಟಿದ್ದ ಹಸುವನ್ನು ಹುಲಿಯೊಂದು ಹಿಡಿದಿತ್ತು. ಅಷ್ಟೇ ಅಲ್ಲದೆ ಹುಲಿ ದನಕ್ಕೆ ಕಟ್ಟಿದ್ದ ಹಗ್ಗವನ್ನು ದಬಾಯಿಸಿ ಜಗ್ಗಿ ತುಂಡುಮಾಡಿ ಹೋರಿ ಸಮೇತ ನಾಪತ್ತೆಯಾಗಿತ್ತು. ಅದನ್ನೆಲ್ಲ ಸರಿಯಾಗಿ ತಪಾಸಣೆ ಮಾಡಿ ಬರಬೇಕಾದ್ದರಿಂದಲೇ ಅವರು ಬರುವುದು ನಿಧಾನವಾಗಿದ್ದು.

ಅದೃಷ್ಟವಶಾತ್ ನಾನು ನನ್ನ ರೈಫಲ್, ಟಾರ್ಚು ಇತ್ಯಾದಿಗಳನ್ನೆಲ್ಲ ಇಟ್ಟುಕೊಂಡು ಸಿದ್ಧನಾಗೇ ಬಂದಿದ್ದರಿಂದ ಮತ್ತೆ ಹಿಂದಿರುಗಿ ಬಂಗಲೆಗೆ ಹೋಗಿ ತರಬೇಕಾದ ಪ್ರಮೇಯ ಇರಲಿಲ್ಲ. ಮಧ್ಯಾಹ್ನದ ಹೊತ್ತಿಗೆ ನಾವು ಆ ಜಾಗ ತಲುಪಿದೆವು. ಅಲ್ಲೆಲ್ಲಾ ಹುಲಿ ಹೆಜ್ಜೆ ಗುರುತುಗಳೂ ರಕ್ತವೂ ಬಿದ್ದಿತ್ತು. ನಾನು ಆ ಹೆಜ್ಜೆ ಗುರುತುಗಳನ್ನು ವಿವರವಾಗಿ ಪರಿಶೀಲಿಸಿದಾಗ ಅವು ಹೆಣ್ಣು ಹುಲಿಯದೆಂದು ಗೊತ್ತಾಯ್ತು. ನರಭಕ್ಷಕ ಯಾವುದೆಂದು ನಮಗೆ ಗೊತ್ತಿರಲಿಲ್ಲ. ಇದು ನರಭಕ್ಷಕನೇ ಅಲ್ಲವೇ ಹೇಳಲು ನಮ್ಮಬಳಿ ಯಾವ ಪುರಾವೆಯೂ ಇರಲಿಲ್ಲ.

ಅದು ಸತ್ತ ಹೋರಿಯನ್ನು ಎಲ್ಲಿಗೆ ಒಯ್ದಿದೆ, ಎಷ್ಟು ದೂರ ಒಯ್ದಿದೆ ಗೊತ್ತಿರಲಿಲ್ಲ. ನನ್ನ ಜೊತೆಗಾರರು ಮೂವರಿಗೂ ಅಲ್ಲೇ ರಸ್ತೆಯಲ್ಲೇ ಮೂರುಗಂಟೆ ವರೆಗೂ ಕಾಯಿರಿ, ಅಕಸ್ಮಾತ್ ದನವನ್ನು ದೂರದಲ್ಲಿ ಎಲ್ಲಾದರೂ ಬಚ್ಚಿಟ್ಟು ಹುಲಿ ಹೋಗಿದ್ದರೆ ಅದು ಹಿಂದಿರುಗುವವರೆಗೂ ನಾನು ಮರದಮೇಲೆ ಹತ್ತಿ ಕಾಯುತ್ತೇನೆ. ರಾತ್ರಿಯೆಲ್ಲಾ ಕಾದುಕೂರಬೇಕಾಗಿ ಬಂದರೂ ಬರಬಹುದು. ಮೂರು ಗಂಟೆಯ ಮೇಲೆ ನಾನು ಬಾರದಿದ್ದರೆ ನೀವು ನನಗಾಗಿ ಕಾಯದೆ ಬೈಲೂರಿಗೆ ಹಿಂದಿರುಗಿ ಎಂದು ಹೇಳಿದೆ. ಹುಲಿ ಹತ್ತಿರದಲ್ಲೆ ದನ ಮುಚ್ಚಿಟ್ಟಿದ್ದರೆ ನಿಮ್ಮನ್ನು ಕರೆಯುತ್ತೇನೆ. ಮಚಾನು ಕಟ್ಟಲು ಸಹಾಯ ಮಾಡಿ ಎಂದು ಹೇಳಿ ಹುಲಿ ಜಾಡು ಹಿಡಿದು ಮುಂದುವರಿದೆ.

ಹುಲಿ ಸತ್ತ ಹೋರಿಯನ್ನು ಮೊದಲ ಮುನ್ನೂರ ಗಜ ಹಳ್ಳದ ದಡದಲ್ಲಿ ನೆಲದ ಮೇಲೆ ಎಳೆದೊಯ್ದಿತ್ತು. ಅನಂತರ ಅದಕ್ಕೆ ದಟ್ಟವಾದ ಲಂಟಾನದ ಜಿಗ್ಗು ಅಡ್ಡಾಗಿದ್ದರಿಂದ ಸತ್ತ ಹೋರಿಯನ್ನು ನೆಲದಮೇಲೆ ಎಳೆಯುವುದು ದುಸ್ತರವಾಗಿದೆ. ಹುಲಿಗಳು ಹಲವೊಮ್ಮೆ ಮಾಡುವಂತೆ ಹೋರಿಯ ಕುತ್ತಿಗೆ ಕಚ್ಚಿಕೊಂಡು ದೇಹವನ್ನು ಹೆಗಲ ಮೇಲೆ ಹಾಕಿಕೊಂಡು ಲಂಟಾನದ ಅಡಿಯಲ್ಲಿ ಮುಂದುವರಿದಿತ್ತು. ಹಾಗಾಗಿ ಅದರ ಜಾಡು ಪತ್ತೆ ಮಾಡಿ ಮುಂದುವರಿಯುವುದು ಕಡುಕಷ್ಟವಾಯ್ತು.

ಆದರೂ ಹೋರಿಯ ಕೊಂಬುಗಳಿಗೋ, ಜೊತಾಡುತ್ತಿರುವ ಗೊರಸುಗಳಿಗೋ ತಾಗಿ ಮುರಿದಿದ್ದ ಲಂಟಾನದ ಜಿಗ್ಗು ಕೊಂಬೆಗಳಿಂದ ಅದು ನುಗ್ಗಿ ಹೋಗಿದ್ದ ಜಾಡನ್ನು ಪತ್ತೆ ಮಾಡಬೇಕಾಗಿತ್ತು. ಕೆಳಗೆ ಜಮಖಾನ ಹಾಸಿದಂತೆ ಬಿದ್ದಿದ್ದ ತರಗೆಲೆಗಳ ರಾಶಿಯಲ್ಲಿ ಅದರ ಹೆಜ್ಜೆ ಗುರುತಂತೂ ಕಾಣುತ್ತಿರಲಿಲ್ಲ. ಅಲ್ಲದೆ ಹುಲಿ ಅಲ್ಲೆ ಎಲ್ಲಾದರೂ ಇದ್ದು ಮೈಮೇಲೆ ಜಿಗಿದಿದ್ದರಂತೂ ನಾನು ಬೋನಿನಲ್ಲಿ ಸಿಕ್ಕಿಬಿದ್ದ ಪ್ರಾಣಿಯಂತಾಗುತ್ತಿದ್ದೆ. ಕೊಂಚ ದೂರ ಲಂಟಾನದ ಅಡಿಯಲ್ಲಿ ಚತುಷ್ಪಾದಿಯಾಗಿ ತೆವಳಿದ ಮೇಲೆ ಲಂಟಾನ ಮುಗಿದು ಅಡಿಯ ಹಳು ಕಡಮೆಯಿರುವ ಎತ್ತರದ ಮರಗಳ ಕಾಡು ಪ್ರಾರಂಭವಾಯ್ತು. ಇಲ್ಲಿ ಜಾಡು ಹಿಡಿಯುವುದು ಅಷ್ಟು ಕಷ್ಟವಾಗಲಿಲ್ಲ. ಅಲ್ಲಿ ಎರಡುಕಡೆ ಹುಲಿ ತನ್ನ ಭಾರವನ್ನು ಇಳಿಸಿ ಮತ್ತೆ ಕಚ್ಚಿಕೊಂಡು ಹೋಗಿದ್ದು ಕಾಣಿಸಿತು. ಅದರ ನಡವಳಿಕೆ ನೋಡಿದರೆ ಸತ್ತ ಹೋರಿಯನ್ನು ಯಾವುದೋ ನಿಶ್ಚಿತ ಜಾಗಕ್ಕೆ ಹೊತ್ತೊಯ್ಯುತ್ತಿದೆ ಎಂದು ನನಗನ್ನಿಸಿತು. ಬಹುಶಃ ಇದಕ್ಕೆ ಎಲ್ಲೋ ಮರಿಗಳಿರಬೇಕು. ಅವಕ್ಕಾಗಿ ಇದು ಶಿಕಾರಿಯನ್ನು ಎಲ್ಲೂ ಇಳಿಸಿ ತಿನ್ನದೆ ಒಯ್ಯುತ್ತಿದೆಯೇನೋ ಎಂದು ಚಿಂತಿಸಿದೆ.

ಹುಲಿಯ ಜಾಡು ಬೆಟ್ಟದತ್ತ ತಿರುಗಿತು. ಕಲ್ಲುಗಳಿಂದಲೂ ಬಂಡೆಗಳಿಂದಲೂ ಕೂಡಿದ್ದ ಆ ಜಾಗ ಅಪಾಯಕರ ಎನ್ನಿಸಿತು. ಆ ಬೆಟ್ಟದ ತುದಿಯನ್ನು ಹತ್ತಿದಾಗ ಅಲ್ಲಿಂದ ಕೊಂಚ ದೂರದಲ್ಲಿ ಇನ್ನೊಂದು ಶಿಖರ ಸುಮಾರು ಕಾಲು ಮೈಲಿ ದೂರದಲ್ಲಿ ನಾನು ನಿಂತಲ್ಲಿಂದ ಇನ್ನೂರು ಅಡಿ ಎತ್ತರಕ್ಕಿದ್ದಿದ್ದು ಕಾಣಿಸಿತು. ಹುಲಿಯ ಜಾಡು

ನೇರವಾಗಿ ಆ ಶಿಖರದತ್ತ ಸಾಗಿತ್ತು. ಈ ವೇಳೆಗಾಗಲೇ ನನಗೆ ಹುಲಿ ನರಭಕ್ಷಕನಲ್ಲವೆಂದು ಸಾಕಷ್ಟು ದೃಢವಾಗಿ ಅನ್ನಿಸುತ್ತಿತ್ತು. ಏಕೆಂದರೆ ನರಭಕ್ಷನ ಬಗ್ಗೆ ಮಾತಾಡಿದವರು ಯಾರೂ ಅದು ಹೆಣ್ಣು ಹುಲಿ ಎಂದು ಹೇಳಿರಲಿಲ್ಲ. ಆದರೆ ಗಂಡು ಹುಲಿಯೇ ಎಂದೂ ದೃಢಪಡಿಸಿರಲಿಲ್ಲ. ಅವರೆಲ್ಲ ಹೇಳಿದ್ದರಲ್ಲಿ ಅದನ್ನು ಗುರುತಿಸುವ ಮುಖ್ಯ ಚಹರೆ ಎಂದರೆ ಅದಕ್ಕೆ ಒಂದು ಕಿವಿ ಮತ್ತು ಕಣ್ಣು ಇಲ್ಲದ್ದು. ನಾನು ಹಿಂಬಾಲಿಸುತ್ತಿದ್ದ ಪ್ರಾಣಿ ಒಮ್ಮೆಯಾದರೂ ನೋಡ ಸಿಕ್ಕರೆ ಮಾತ್ರ ಅದು ನರಭಕ್ಷಕನೇ ಅಲ್ಲವೇ ಎಂದು ನಾನು ನಿರ್ಧರಿಸಬಹುದು. ಅಂದರೆ ಜಾಡು ಹಿಡಿದು ಅದು ಕಾಣುವವರೆಗೂ ಮುಂದುವರಿಯದೆ ಬೇರೆ ಮಾರ್ಗ ಇರಲಿಲ್ಲ.

ಅದು ಮರಿಹುಲಿಯಾಗಿದ್ದರೆ ಮಾತ್ರ ಅದು ಇದ್ದಲ್ಲಿಗೆ ಹೋಗಿ ಕದ ತಟ್ಟಿದರೆ ಪ್ರಾಣಾಪಾಯ ಆಹ್ವಾನಿಸಿದಂತೆಯೇ ಸರಿ!

ನಾನು ಸದ್ದು ಮಾಡದೆ ಆದಷ್ಟು ಜಾಗರೂಕನಾಗಿ ಮುಂದುವರಿದೆ. ಅದು ಹೋದ ಜಾಡು ಈಗ ಸುಲಭವಾಗಿ ಕಾಣುತ್ತಿತ್ತು. ಬಂಡೆಗಳ ಮೇಲೆ ಅಲ್ಲಲ್ಲಿ ಸತ್ತ ಹೋರಿಯ ರಕ್ತ ಧಾರಾಕಾರವಾಗಿ ಸುರಿದಿತ್ತು.

ಶಿಖರದ ನೆತ್ತಿಗೆ ಹತ್ತಿರ ಹತ್ತಿರಾಗುತ್ತಿದ್ದೆ. ಹುಲಿ ಬಂಡೆಗಳನ್ನು ಬಳಸಿ ಬಳಸಿ ಸಾಗಿತ್ತು. ಮಧ್ಯಾಹ್ನ ಮೂರುಗಂಟೆ ಹೊತ್ತು. ಬಿಸಿಲಿನ ಝಳ ಇನ್ನೂ ಧಗಧಗ ಎನ್ನುತ್ತಿತ್ತು. ಬಟ್ಟೆಯೆಲ್ಲಾ ನೆನೆದು ಬೆನ್ನಿಗಂಟಿತ್ತು. ನೆತ್ತಿಯ ಮೇಲಿಂದ ಹರಿಯುತ್ತಿದ್ದ ಬೆವರು ಒಮ್ಮೊಮ್ಮೆ ಕಣ್ಣಿಗೂ ಇಳಿಯುತ್ತಿತ್ತು.

ಕ್ಯಾನ್‌ವಾಸ್ ಷೂ ಹಾಕಿಕೊಂಡಿದ್ದರಿಂದ ಹೆಜ್ಜೆ ಸದ್ದು ಚೂರೂ ಇರಲಿಲ್ಲ. ಒಂದಾದಮೇಲೊಂದು ಬಂಡೆಯನ್ನು ಬಳಸಿ ದಾಟುತ್ತಾ ಮುಂದುವರಿದೆ. ಅಲ್ಲೊಂದುಕಡೆ ಶಿಖರದ ನೆತ್ತಿಯಲ್ಲಿ ಗುಹೆಯಲ್ಲದಿದ್ದರೂ ಗುಹೆಯಂತೆ ಮುಂದಕ್ಕೆ ಬಾಗಿರುವ  ಕಲ್ಲು ಜಾಗ ಕಾಣಿಸಿತು. ಅಷ್ಟರಲ್ಲಿ ಬಂಡೆಯೊಂದರ ನಡುವಿಂದ ಪಟ್ಟೆಪಟ್ಟೆಯ ಉಣ್ಣೆಯ ಚಂಡುಗಳಂತಿದ್ದ ಎರಡು ಪುಟ್ಟ ಹುಲಿ ಮರಿಗಳು ಒಂದನ್ನೊಂದು ಅಟ್ಟಾಡುತ್ತಾ ಆಟವಾಡುತ್ತಾ ನನ್ನೆದುರು ಪ್ರತ್ಯಕ್ಷವಾಗಿಬಿಟ್ಟುವು! ಆಟದ ಭರಾಟೆಯಲ್ಲಿದ್ದ ಅವಕ್ಕೆ ಮೊದಲಿಗೆ ನಾನು ಅಲ್ಲಿರುವುದು ಗಮನಕ್ಕೆ ಬರಲಿಲ್ಲ.

ನಾನು ಸಟ್ಟನೆ ಕಲ್ಲಿನಲ್ಲಿ ಕಲ್ಲಾಗಿ ನಿಂತೆ. ನನ್ನ ರೈಫಲಿನ ಬಿಲ್ಲೇರಿಸಿಕೊಂಡ ಅತ್ಯಂತ ಕ್ಷೀಣ ಶಬ್ದ ಒಂದನ್ನುಳಿದರೆ ಮತ್ತೊಂದು ಸದ್ದಿಲ್ಲದ ನಿಃಶಬ್ದ! ಆದರೆ ಆ ಚಿಟಿಕ್ ಎಂದ ಕ್ಷೀಣ ಸದ್ದೆ ಆ ನಿಃಶಬ್ದದಲ್ಲಿ ಅವಕ್ಕೆ ಸಾಕಾಯ್ತು. ಅವು ಚಿಕ್ಕ ಮರಿಗಳಾದರೂ ತಲೆತಲಾಂತರದ ಎಚ್ಚರಿಕೆಯ ಪ್ರವೃತ್ತಿ ಆ ಮರಿಗಳಲ್ಲಿ ಸುಪ್ತವಾಗಿದ್ದಿದ್ದು ಎಚ್ಚರಿಕೆ ಗಂಟೆ ಬಾರಿಸಿಯೇ ಬಿಟ್ಟಿತು. ಎರಡೂ ಆಟ ನಿಲ್ಲಿಸಿ ಒಂದನ್ನೊಂದು ನೋಡಿಕೊಳ್ಳುತ್ತಾ ನನ್ನತ್ತ ಒಮ್ಮೆ ಮುಗ್ಧ ದೃಷ್ಟಿ ಬೀರಿದುವು.

ಆ ಹುಲಿ ಮರಿಗಳು ನನ್ನತ್ತ ನೋಡುತ್ತಾ ಮುಂದೇನು ಮಾಡಬೇಕೆಂದು ತೋಚದೆ ಪಿಳಿ ಪಿಳಿ ಕಣ್ಣು ಬಿಡುತ್ತ ನಿಂತಿದ್ದ ದೃಶ್ಯ ಈಗಲೂ ನನ್ನ ಕಣ್ಣಿಗೆ ಕಟ್ಟುತ್ತದೆ. ಒಂದು ಮರಿ ಅಸಹನೆಯಿಂದೆಂಬಂತೆ ನನ್ನತ್ತ 'ಕೆಸ್ಸ್ಸ್' ಎಂದು ಕೆಸಗುಟ್ಟಿತು.

ಅಷ್ಟು ಸಾಕಾಯ್ತು ಅಲ್ಲೇ ಪಕ್ಕದಲ್ಲಿ ನನ್ನ ಕಣ್ಣಿಂದ ಮರೆಯಾಗಿ ನಿದ್ರಿಸುತ್ತಿದ್ದ ತಾಯಿ ಹುಲಿಯನ್ನು ಎಚ್ಚರಿಸಲು! ಆಸ್ಫೋಟಿಸಿದಂತೆ ಸರಣಿಯಾಗಿ ಘರ್ಜಿಸುತ್ತ ಹುಲಿ ಆ ಮರಿಗಳನ್ನು ಒತ್ತರಿಸಿ ನನ್ನೆದುರು ಹಾರಿ ಬಂತು. ನನ್ನನ್ನು ನೋಡಿದ್ದೆ ಮೈಮೇಲೆ ಜಿಗಿಯುವ ಕೊನೆಯ ಹಂತವಾಗಿ ನೆಲಮೇಲೆ ಕೌಚಿತು. ಕಣ್ಣಿನಲ್ಲಿ ಬೆಂಕಿ ಕಾರುತ್ತಿದ್ದ ಅದರ ಕೋರೆದಾಡೆಗಳ ಮುಖ ನನ್ನೆದುರು! ಅದು ನರಭಕ್ಷಕನಲ್ಲವೆಂಬುದಕ್ಕೆ ಪ್ರತ್ಯಕ್ಷ ಪ್ರಮಾಣವಾಗಿ ಅದರ ಮುಖ ಇತ್ತು. ಕಣ್ಣು ಕಿವಿ ಎಲ್ಲವೂ ಸರಿಯಾಗಿದ್ದುವು. ಆದರೆ ಯಾಕೋ ಏನೋ ಅದು ನನ್ನ ಮೇಲೆ ನೆಗೆಯಲು ಹಿಂದುಮುಂದು ನೋಡುತ್ತ ಭೀಕರವಾಗಿ ಘರ್ಜಿಸುತ್ತ ಎಚ್ಚರಿಕೆ ಕೊಡಲಾರಂಭಿಸಿತು. ನಾನಂತೂ ಅದು ನೆಗೆದರೆ ಗುಂಡು ಹೊಡೆಯಲೇಬೇಕಾಗುತ್ತದೆಂದು ಅದರ ಹಣೆಗೆ ರೈಫಲ್ ಗುರಿ ಹಿಡಿದು ಟ್ರಿಗ್ಗರಿನ ಮೇಲೆ ಬೆರಳಿಟ್ಟುಕೊಂಡು ನಿಂತಿದ್ದೆ. ಅದು ಮುನ್ನೆಗೆಯದೆ ತಡ ಮಾಡಿದ್ದು ನೋಡಿ ನನಗೆ ಉಸಿರು ಬಂತು. ಕೋವಿ ಗುರಿ ಹಿಡಿದೇ ಒಂದೊಂದೇ ಹೆಜ್ಜೆ ಹಿಂದೆ ಸರಿಯತೊಡಗಿದೆ.

ಬಹುಶಃ ಹುಲಿಗೂ ಅಸ್ಪಷ್ಟವಾಗಿ ನಾನು ಅಪಾಯ ಮಾಡಲು ಬಂದಿಲ್ಲವೆಂದು ಅನ್ನಿಸಿತೇನೋ! ಮುಂದುವರಿಯದೆ ಭೀಕರವಾಗಿ ಘರ್ಜಿಸುತ್ತ ಬಾಲ ಮೇಲೆತ್ತಿಕೊಂಡು ಕುಳಿತಲ್ಲೇ ಕೌಚಿ ಕುಳಿತಿತ್ತು. ಹುಲಿಗೆ ಕೋವಿ ಗುರಿಹಿಡಿದು ನಿಧಾನವಾಗಿ ಹಿಂದುಹಿಂದಕ್ಕೆ ಸರಿಯುತ್ತ ಬೆಟ್ಟ ಇಳಿಯುವ ಬವಣೆ ನನ್ನ ವೈರಿಗೂ ಬೇಡ. ಕೆಲವಾರು ಬಂಡೆಗಳಾಚೆ ಹೋದನಂತರ, ಹುಲಿ ಕಣ್ಮರೆಯಾದ ಮೇಲೆ, ನಾನು ಪದೇ ಪದೇ ಹಿಂದಕ್ಕೆ ನೋಡುತ್ತಾ ಗುಡ್ಡ ಇಳಿಯತೊಡಗಿದೆ. ಹುಲಿ ಈಗ ಘರ್ಜಿಸುವುದನ್ನು ನಿಲ್ಲಿಸಿ ಅಸಮಾಧಾನದಿಂದ ಗುರುಗುಟ್ಟುವುದನ್ನಷ್ಟೆ ಮಾಡುತ್ತಿತ್ತು. ಅದು ಅಲ್ಲಿಂದ ಗುರುಗುಟ್ಟುವವರೆಗೂ ಅದು ಬೆಟ್ಟದ ನೆತ್ತಿಯ ಮೇಲೇ ಇದೆಯೆನ್ನುವುದು ಖಾತ್ರಿಯಾದ್ದರಿಂದ ನನಗೆ ಅದರ ಭಯವಿರಲಿಲ್ಲ. ನಾನು ವೇಗವಾಗಿ ಬರುತ್ತಾ ಹಾದು ಬಂದಿದ್ದ ಈಚಲು ಬಯಲನ್ನೂ, ಕಾಡನ್ನೂ ದಾಟಿ ಲಂಟಾನದ ಜಿಗ್ಗಿನ ಹತ್ತಿರಾದೆ. ಹುಲಿಯೆಲ್ಲಾದರೂ ಮನಸ್ಸು ಬದಲಿಸಿ ಮತ್ತೆ ಬೆನ್ನು ಹತ್ತಿದರೆ! ಎಂದು ಹೆಜ್ಜೆ ಹೆಜ್ಜೆಗೂ ಹಿಂದಿರುಗಿ ನೋಡುತ್ತಲೇ ಇದ್ದೆ.. ಕೊಂಚ ಹೊತ್ತಿನೊಳಗೆ ನಾನು ರಸ್ತೆ ಹತ್ತಿರದ ನರ್ಸರಿ ಹತ್ತಿರ ಇದ್ದೆ.

ರಸ್ತೆಯಲ್ಲಿ ಕಾಯಲು ಹೇಳಿದ್ದ ನನ್ನ ಸಹಾಯಕರು ಮೂವರೂ ನನಗಾಗಿ ಕಾದು ಕಾದು ಅನಂತರ ನಾನು ಹೇಳಿದ್ದಂತೆ ಬೈಲೂರಿನತ್ತ ನಡೆದಿದ್ದರು. ಆಗಲೇ ಸಂಜೆ ನಾಲ್ಕೂವರೆ ಗಂಟೆಯಾಗಿತ್ತು. ಬೈಲೂರಿಗೆ ವಾಪಸ್ ಒಂಬತ್ತುವರೆ ಮೈಲು

ನಡೆದು ಹೋಗಬೇಕಾಗಿತ್ತು. ಏನಾದರಾಗಲಿ ಎಂದು ರಸ್ತೆ ಬದಿ ಕುಳಿತು ಪೈಪಿಗೆ ಹೊಗೆಸೊಪ್ಪು ತುಂಬಿ ಸೇದುತ್ತ ಕುಳಿತೆ. ಮರಿಹುಲಿಯನ್ನು ಮುಖಾಮುಖಿಯಾಗಿ ಇದಿರುಗೊಂಡು ಅದಕ್ಕೂ ಅಪಾಯ ಮಾಡದೆ, ನಾನೂ ಅಪಾಯಕ್ಕೊಳಗಾಗದೆ ಪಾರಾಗಿದ್ದು ತೀರಾ ಸಮಾಧಾನ ತಂದಿತ್ತು. ಆ ಪುಟ್ಟ ಮರಿಗಳು ಮುಗ್ಧದೃಷ್ಟಿಯಿಂದ ನನ್ನತ್ತ ನೋಡಿದ್ದು ಇನ್ನೂ ನನ್ನ ಮನಸ್ಸಿನಲ್ಲಿ ಮಿಂಚುತ್ತಿತ್ತು. ಮೈಮೇಲೆ ನೆಗೆಯದೆ ತಾಳ್ಮೆ ತಗೊಂಡ ತಾಯಿಹುಲಿಗೆ ಮನಸ್ಸಿನಲ್ಲೇ ವಂದಿಸಿದೆ.

ನಾನು ಬೈಲೂರು ತಲುಪಬೇಕಾದರೆ ಆಗಲೇ ಸಂಜೆ ಆರೂವರೆಯಾಗಿತ್ತು. ನನ್ನ ಸಂಗಾತಿಗಳು ಮೂರು ಜನರೂ ನಾನು ಹೋಗಿ ಬಂದ ಸಮಾಚಾರ ಕೇಳಲು ಉತ್ಸುಕರಾಗಿದ್ದರು. ಮರಿಗಳಿರುವ ತಾಯಿಹುಲಿಯನ್ನು ಸಂಧಿಸಿ ಹಿಂದಿರುಗಿ ಬಂದೆನೆಂಬುದನ್ನು ಮೊದಲಿಗೆ ನಂಬಲು ಅವರು ತಯ್ಯಾರೇ ಇರಲಿಲ್ಲ. ಮರಿಗಳಿರುವ ಹುಲಿ ಹತ್ತಿರ ಹೋದವನು ಇಲ್ಲಾ ಅದನ್ನು ಹೊಡೆಯಬೇಕು, ಇಲ್ಲವೇ ಸಾಯಬೇಕು, ಇವೆರಡೂ ಆಗದೆ ನಾನು ಹಿಂದಿರುಗಿ ಬಂದಿದ್ದು ಅವರಿಗೆ ಪರಮಾಶ್ಚರ್ಯವಾಗಿತ್ತು.

ಅವರಿಗೆ ವಿದಾಯ ಹೇಳಿ ನಾನು ಅರಣ್ಯಗೃಹದತ್ತ ಹೊರಟಾಗ ಸಂಜೆ ಆರೂವರೆ ಗಂಟೆ. ಕತ್ತಲು ಕವಿಯಲು ಶುರುವಾಗಿತ್ತು. ನಾನು ಆ ದಾರಿಯಲ್ಲಿ ನಡೆದು ಬರುತ್ತಾ ಬೈಲೂರಿಗೂ ಅರಣ್ಯ ಗೃಹಕ್ಕೂ ನಡುವೆ ಹುಲಿಯನ್ನಾಕರ್ಷಿಸಲು ಕಟ್ಟಿದ್ದ ಹೋರಿಯ ಜ್ಞಾಪಕ ಬಂತು. ಅದೇನೂ ದಾರಿಯಿಂದ ಬಹಳ ದೂರವಿರಲಿಲ್ಲ. ಯಾಕೋ ಏನೋ ಅದನ್ನೊಮ್ಮೆ ಹೋಗಿ ನೋಡೋಣ ಎನ್ನಿಸಿತು. ಯಾವ ಕಾರಣಕ್ಕೆ ಎಂದು ವಿವರಿಸಲಾರೆ. ಆದರೆ ಶಿಕಾರಿಯಲ್ಲಿ ಬಹಳಷ್ಟು ಸಾರಿ ಹೀಗೆ ನಾನು ನನ್ನ ಒಳಮನಸ್ಸಿನ ಅನ್ನಿಸಿಕೆಗಳಿಗೆ ಅನುಸಾರವಾಗಿ ನಡೆದುಕೊಂಡಿದ್ದೇನೆ. ನಾನು ಹಳ್ಳದ ಬಳಿ ಎಡಕ್ಕೆ ತಿರುಗಿ ಹೋರಿ ಕಟ್ಟಿದ್ದ ಕಡೆ ಹೋಗಿದ್ದ ಕಾಲುದಾರಿ ಹಿಡಿದೆ. ರಾತ್ರಿಯ ನಸುಕಿನಲ್ಲಿ ಗಿಡ ಪೊದೆಗಳು ತಮ್ಮ ಸಹಜ ಸ್ವರೂಪವನ್ನು ಕಳೆದುಕೊಂಡು ದೆವ್ವಗಳಾಗುತ್ತಿದ್ದುವು. ರಸ್ತೆ ಬದಿಯಲ್ಲಿ ಹಾಕಿದ್ದ ಸರ್ವೆಮರಗಳ ನಡುವೆ ಮೆಲುಗಾಳಿ ನಿಟ್ಟುಸಿರು ಬಿಟ್ಟಂತೆ ಸದ್ದು ಮಾಡುತ್ತಾ ಬೀಸುತ್ತಿತ್ತು.

ನಾನು ಹೋರಿ ಕಟ್ಟಿದ್ದ ಬಸರಿ ಮರದ ಬಳಿಸಾರಿದೆ. ಅಲ್ಲಿ ದಟ್ಟವಾದ ಮರದ ನೆರಳು ಕರ್ರಗೆ ಬಿದ್ದಿತ್ತು. ಹೋರಿ ಕಂದು ಬಣ್ಣಕ್ಕಿದ್ದುದರಿಂದ ಅದೆಲ್ಲಿದೆಯೋ ಕಣ್ಣಿಗೆ ಕಾಣಲಿಲ್ಲ. ಮಲಗಿದ್ದ ಅದರ ಕಾಲನ್ನು ಎಡವಿದ್ದಾಗಲೇ ಅದು ಬೆಚ್ಚಿ ಎಚ್ಚತ್ತು ಎದ್ದು ನಿಂತಿತು. ನಾನು ಅದಕ್ಕೆ ಕಟ್ಟಿದ್ದ ಹಗ್ಗ ಅದರ ಓಡಾಟದಲ್ಲಿ ಎಲ್ಲಾದರೂ ತಿರುಚಿ ನುಲಿದುಕೊಂಡಿದೆಯೋ ನೋಡಲು ಹೋರಿಯನ್ನು ದಾಟಿ ಆಚೆಗೆ ಹೋದೆ.

ಆ ಕ್ಷಣ ನರಭಕ್ಷಕ ಘರ್ಜಿಸಿ ನನ್ನ ಮೇಲೆ ನೆಗೆಯಿತು.

ನಾನು ಹೋರಿಯ ಆ ಕಡೆ ಹೋದುದು ನನ್ನ ಅದೃಷ್ಟವೆಂದೇ ಹೇಳಬೇಕು. ಆದರೆ ನಾನು ಇವನ್ನೆಲ್ಲಾ ಊಹಿಸಿ ಜಾಗರೂಕನಾಗಿಲ್ಲದಿದ್ದುದು ಬಹಳ ದೊಡ್ಡ ತಪ್ಪು. ಹುಲಿಯ ಆಕ್ರಮಣ ಅತ್ಯಂತ ಅನಿರೀಕ್ಷಿತವಾಗಿತ್ತು. ಭೀಕರವಾಗಿ 'ವ್ರೋೞ್ರಫ್' ಎಂದು ಘರ್ಜಿಸುತ್ತ ಅದು ಪೊದೆಯಿಂದ ಹೊರಬಂತು. ಅದರ ಸದ್ದಿಗೆ ಗಾಬರಿಯಾದ ಹೋರಿ ಅತ್ತ ಕಡೆಗೆ ತಿರುಗಿತು. ನಾನು ಹೋರಿಯ ಹಿಂದಕ್ಕೆ ಜಿಗಿದೆ. ನನ್ನ ಬೆನ್ನಿಗೆ ಬಸರಿಮರ ಇತ್ತು. ಒಂದು ದೊಡ್ಡ ಕಂದು ಆಕೃತಿ ಕಾಡಿನಿಂದ ಜಿಗಿದು ದೊಪ್ಪನೆ ಹೋರಿಯ ಬೆನ್ನಮೇಲೆ ಬಿತ್ತು. ಹಠಾತ್ತಾಗಿ ಬಿದ್ದ ತೂಕಕ್ಕೆ ಹೋರಿ ನೆಲಕ್ಕೆ ಕುಸಿಯಿತು. ಹುಲಿ ಹೋರಿಯ ಕುತ್ತಿಗೆಯನ್ನಾಗಲೀ ಗಂಟಲನ್ನಾಗಲೀ ಹಿಡಿಯಲು ಹಾರಿರಲಿಲ್ಲ. ಅದರ ಗುರಿ ನಾನೇ ಹೊರತು ಹೋರಿಯಾಗಿರಲಿಲ್ಲ. ಕೊನೇ ಗಳಿಗೆಯಲ್ಲಿ ಹೋರಿ, ನಾನು ಅತ್ತಿತ್ತ ಆಗಿದ್ದರಿಂದ ಅದು ಗುರಿತಪ್ಪಿ ಹೋರಿಯ ಬೆನ್ನಮೇಲೆ ಬಿದ್ದಿತ್ತು. ಹುಲಿಯೂ ಹೋರಿಯೂ ತೊಡಕಿಕೊಂಡು ಹುಲಿ ಫಕ್ಕನೆ ಮೇಲೇಳಲು ಒಂದೇ ಒಂದು ಸೆಕೆಂಡು ತಡವಾಯ್ತು. ಅದು ಮೇಲೇಳುತ್ತಿರಬೇಕಾದರೆ ನನ್ನ ಕೋವಿಯ ಮೊದಲ ಗುಂಡು ಅದರ ಕಣ್ಣುಗಳೆರಡರ ಮಧ್ಯಕ್ಕೆ ಬಿತ್ತು. ಅಷ್ಟು ಹೊತ್ತಿಗೆ ಸರಿಯಾಗಿ ಹೋರಿ ಹುಲಿಯ ತೂಕದ ಸಮೇತ ಗಾಬರಿಯಲ್ಲಿ ಎದ್ದು ನಿಂತಿತು.

ಹಿಂದುಮುಂದು ಯೋಚಿಸದೆ ಹುಲಿಯ ಎಡ ಭುಜಕ್ಕೆ ರೈಫಲ್ ನಳಿಗೆ ತಾಗಿಸಿದಂತೆಯೇ ಹಿಡಿದು ಎರಡನೆ ಗುಂಡು ಹೊಡೆದೆ. ಹುಲಿ ಹೋರಿ ಎರಡೂ ನನ್ನತ್ತ ಉರುಳಿದುವು. ಒದ್ದಾಡುತ್ತಿದ್ದ ಹುಲಿಯ ಕುತ್ತಿಗೆಗೆ ಮತ್ತೊಂದು ಗುಂಡು ಹೊಡೆದೆ. ಹೋರಿ ಬಿದ್ದಿದ್ದು ಅಲ್ಲಾಡಲಿಲ್ಲ. ಹುಲಿ ಹೊರಳಾಡಿ ಸತ್ತುಹೋಯಿತು.

ನನ್ನ ರೈಫಲಿನ ಟಾರ್ಚ್ ಬೆಳಕಿನಲ್ಲಿ ನೋಡಿದಾಗ ಮೊದಲ ಗುಂಡು ಹುಲಿಯ ತಲೆಯನ್ನು ಛಿದ್ರ ಮಾಡಿದ್ದು ಕಾಣಿಸಿತು. ಅದಕ್ಕೆ ವಾಸ್ತವವಾಗಿ ಇನ್ನೆರಡು ಗುಂಡುಗಳನ್ನು ಹೊಡೆಯುವ ಅಗತ್ಯವೇ ಇರಲಿಲ್ಲ. ನನ್ನ ಎರಡನೆ ಗುಂಡು ಹುಲಿಯ ಪಕ್ಕೆ, ಹೃದಯ, ಶ್ವಾಸಕೋಶಗಳನ್ನು ಭೇದಿಸಿಕೊಂಡು ಹೊರಹೊರಟು ಹೋರಿಯ ಹೃದಯವನ್ನೂ ಚೂರು ಮಾಡಿ ತೂರಿ ಆಚೆ ಹೊರಟುಹೋಗಿತ್ತು. ಮೂರನೆ ಗುಂಡು ಹುಲಿಯ ಕುತ್ತಿಗೆ ಮೂಳೆಯನ್ನು ಚೂರುಚೂರು ಮಾಡಿ ನೆಲ ಹೊಕ್ಕಿತ್ತು. ಗಡಿಬಿಡಿ ಗಾಬರಿಗಳಲ್ಲಿ ನನ್ನ ಪ್ರಾಣ ರಕ್ಷಣೆ ಮಾಡಿದ ಹೋರಿಯನ್ನೂ ನಾನು ಕೊಂದಿದ್ದಕ್ಕೆ ವ್ಯಸನವಾಯ್ತು.

ಹಠಾತ್ತಾಗಿ ಆದ ಘಟನೆಗಳ ಉದ್ವೇಗಕ್ಕೆ ನನ್ನ ಕಾಲುಗಳು ತರಗೆಲೆಯಂತೆ ನಡುಗುತ್ತಿದ್ದುವು. ತಲೆ ಮೇಲೆ ಕೈಯ್ಯಿಟ್ಟುಕೊಂಡು ಬಸರಿ ಮರದ ಬುಡದಲ್ಲಿ ಕುಳಿತು ಸುಧಾರಿಸಿಕೊಂಡೆ.

ಎಷ್ಟುಹೊತ್ತು ಹಾಗೇ ಕುಳಿತಿದ್ದೆನೋ ಗೊತ್ತಿಲ್ಲ. ಆಮೇಲೆ ನನ್ನ ಪೈಪ್ ತೆಗೆದು ಹೊಗೆಸೊಪ್ಪು ತುಂಬಿ ಒಂದೆರಡು ದಮ್ ಎಳೆದೆ. ನಿಧಾನವಾಗಿ ಗೊಂದಲಗೊಂಡಿದ್ದ

ನನ್ನ ಮನಸ್ಸು ಪುನಶ್ಚೈತನ್ಯ ಪಡೆಯಿತು. ಅಲ್ಲಿಂದ ಎದ್ದು ದಾರಿಗೆ ಬಂದು ಬೈಲೂರಿನ ದಾರಿ ಹಿಡಿದೆ. ನನ್ನ ಮೂರು ಗುಂಡಿನ ಸದ್ದೂ ಸುತ್ತಲಿನ ಬೆಟ್ಟಗಳಿಂದೆಲ್ಲಾ ಪ್ರತಿಧ್ವನಿಯಾಗಿ ಮೊಳಗಿತ್ತು. ಹಳ್ಳಿಯವರೆಲ್ಲಾ ಗುಂಪಾಗಿ ಹೊರಬಂದು ಗಾಬರಿ, ಕಾತರ, ನಿರೀಕ್ಷೆಯಲ್ಲಿ ಅಲ್ಲಲ್ಲಿ ಗುಂಪು ಸೇರಿ, ವಸತಿಗೃಹಕ್ಕೆ ಹೋಗುವ ದಾರಿಯಲ್ಲಿ ಏನೋ ನನ್ನ ಮೇಲೆರಗಿದೆ! ಆದರೆ ಅದು ನರಭಕ್ಷಕನೋ, ಕರಡಿಯೋ, ಆನೆಯೋ ಯಾವುದಿರಬಹುದು? ಈಗ ತಾವು ಮುಂದೇನು ಮಾಡಬೇಕು ಎಂದು ಸಮಾಲೋಚನೆ ಮಾಡುತ್ತಾ ನಿಂತಿದ್ದರು.

ನಾನು ಅಲ್ಲಿಗೆ ಹೋದ ಕೂಡಲೇ ನನ್ನ ಮೂವರು ಸಹಾಯಕರನ್ನೂ ಮುಂದಿಟ್ಟುಕೊಂಡು ಎಲ್ಲರೂ ಓಡೋಡುತ್ತಾ ಬಂದರು. ನಾನು ಅಲ್ಲೇ ರಸ್ತೆಬದಿಯಲ್ಲಿ ಕುಳಿತು ನಡೆದ ಅತ್ಯನಿರೀಕ್ಷಿತ ಸಂಗತಿಗಳನ್ನೆಲ್ಲಾ ಹೇಳಿದೆ. ನನ್ನ ಮೇಲೆ ಹಾರಿದ್ದು ನರಭಕ್ಷಕ ಎಂದು ಕೇಳಿದಾಗ ಅವರು ಹೆದರಿ ಹೌಹಾರಿಹೋದರು. ಕೆಲವರು ನಾನು ಕ್ಷೇಮವಾಗಿರುವುದಕ್ಕೆ ದೇವರಿಗೆ ಹರಕೆ ಹೊತ್ತರು. ಎಲ್ಲರಲ್ಲೂ ನನ್ನ ಬಗ್ಗೆ ಕೃತಜ್ಞತೆ ತುಂಬಿ ತುಳುಕುತ್ತಿತ್ತು. ನಾನು ಜನಗಳಿಗೆ ಸಿಂಹಸ್ವಪ್ನವಾಗಿದ್ದ ಎಷ್ಟೋ ನರಭಕ್ಷಕಗಳನ್ನು ಹೊಡೆದಿದ್ದೇನೆ. ಪ್ರತಿಸಾರಿಯೂ ಹೀಗೇ ಜನ ತಮ್ಮ ಜೀವ ಉಳಿಸಿದವನೆಂದು ನನ್ನ ಮೇಲೆ ಕೃತಜ್ಞತೆಯ ಮಳೆ ಸುರಿಸುವುದನ್ನು ನೋಡಿ ಸಂತುಷ್ಟನಾಗಿ ಕೃತಾರ್ಥನಾಗಿದ್ದೇನೆ. ಎಲ್ಲರೂ ಓಡೋಡಿಹೋಗಿ ಒಂದು ದೊಡ್ಡ ಮಡಕೆಯಲ್ಲಿ ಹಾಲನ್ನೂ ನಾಲ್ಕಾರು ಚಿಪ್ಪು ಬಾಳೆ ಹಣ್ಣುಗಳನ್ನೂ ತಂದು ನನ್ನೆದುರಿಟ್ಟು ಸ್ವೀಕರಿಸಬೇಕೆಂದು ಹೇಳಿ ಕೈಮುಗಿದರು.

ಅರ್ಧ ಗಂಟೆಯೊಳಗೆ ಇಡೀ ಊರಿಗೆ ಊರೇ ಸೇರಿ ಬೊಂಬು ಹಗ್ಗ ಇತ್ಯಾದಿಗಳನ್ನೆಲ್ಲಾ ರೆಡಿ ಮಾಡಿಕೊಂಡು ನನ್ನೊಡನೆ ಹುಲಿ ಹೊಡೆದ ತಾಣದತ್ತ ಹೊರಟರು. ಅಲ್ಲೂ ಸಹ ಹುಲಿ ನನ್ನ ಮೇಲೆ ಆಕ್ರಮಣ ಮಾಡಿದ ಪರಿ ಇತ್ಯಾದಿಗಳನ್ನೆಲ್ಲಾ ಅವರಿಗೆ ಮತ್ತೊಮ್ಮೆ ಅಭಿನಯಪೂರ್ವಕವಾಗಿ ವಿವರಿಸಬೇಕಾಯ್ತು. ಸಲ್ಪದರಲ್ಲಿ ನನ್ನ ಪ್ರಾಣ ಉಳಿಸಿಕೊಂಡಿರುವದನ್ನು ನೋಡಿ ಅವರೆಲ್ಲಾ ಮತ್ತೆ ಮತ್ತೆ ದೇವರಿಗೆ ಕೃತಜ್ಞತೆ ಸಲ್ಲಿಸಿದರು. ಹುಲಿಯನ್ನು ನೋಡಿದ್ದೇ ಭಾವೋದ್ವೇಗ ತಾಳಲಾರದೆ ಜೈಕೆನ್ ಅದಕ್ಕೆ ಮುಯ್ಯಿ ತೀರಿಸುವಂತೆ ಸೊಂಟದಿಂದ ಚೂರಿ ತೆಗೆದು ಹಲವಾರು ಕಡೆ ಚುಚ್ಚಿದ. ಅವನನ್ನು ಹೀಗೇ ಬಿಟ್ಟರೆ ಅದರ ಚರ್ಮವನ್ನೆಲ್ಲಾ ಹರಿದು ಹಾಳು ಮಾಡುತ್ತಾನೆಂದು ಅವನನ್ನು ಬಲಾತ್ಕಾರದಿಂದ ಆಚೆಗೆ ಎಳೆದುಕೊಂಡು, ಸತ್ತ ಹುಲಿಗೆ ಚೂರಿ ಹಾಕಿ ಏನು ಪ್ರಯೋಜನ ಎಂದು ಸಮಾಧಾನ ಹೇಳಿದೆ. ಅವನು ಆ ಹುಲಿಯ ಬಾಯಲ್ಲಿ ಸತ್ತ ತನ್ನ ಹೆಂಡತಿಯನ್ನು ನೆನೆದು ಗೋಳೋ ಎಂದು ಅಳತೊಡಗಿದ.


ಇನ್ನು ಹೆಚ್ಚು ಹೇಳುವುದಕ್ಕೇನೂ ಇಲ್ಲ. ನಾನು ಮಾರನೆ ದಿನ ರಾಂಪುರಕ್ಕೆ

ನಡೆದು ಹೋಗಬೇಕಿತ್ತು. ಜೈಕೆನ್ ಅಲ್ಲಿಯವರೆಗೆ ತಾನೂ ಬರುತ್ತೇನೆಂದು ಹೇಳಿದ. ಮಾರನೆ ದಿನ ಬೆಳಗ್ಗೆ ಅರಣ್ಯಗೃಹಕ್ಕೆ ಬಾ, ಅಲ್ಲಿಂದ ಇಬ್ಬರೂ ಹೋಗೋಣೆಂದು ಮಾತಾಡಿಕೊಂಡು ನಾನು ಮಲಗಲು ಹಿಂದಿರುಗಿದೆ.

ಬೆಳಗ್ಗೆ ಅರಣ್ಯ ಗೃಹಕ್ಕೆ ಬರುತ್ತಾ ಜೈಕೆನ್ ನಾವು ಹೋರಿ ಕಟ್ಟಿದ್ದ ಕಾಲುದಾರಿ ದಾಟಿ ಕೊಂಚದೂರ ಬಂದವನು ಮೂತ್ರವಿಸರ್ಜನೆಗೆ ದಾರಿ ಪಕ್ಕಕ್ಕೆ ಹೋದ. ಅಲ್ಲಿ ಒಂದು ಲಂಟಾನ ಗಿಡದ ಹಿಂದೆ ಹಿಂದಿನ ದಿನ ಹುಲಿ ಅಡಗಿಕುಳಿತು ದಾರಿಯಲ್ಲಿ ಬರುತ್ತಿದ್ದ ನನಗಾಗಿ ಕಾಯುತ್ತಿದ್ದ ಗುರುತುಗಳನ್ನು ನೋಡಿ ಅರಣ್ಯಗೃಹಕ್ಕೆ ಬಂದವನೇ ನನಗೆ ವರದಿ ಮಾಡಿದ. ನಾನು ಅವನ ಹೇಳಿಕೆಯ ಸತ್ಯಾಸತ್ಯ ಪರೀಕ್ಷಿಸಲು ಖುದ್ದಾಗಿ ಹೋಗಿ ನೋಡಿದೆ. ಲಂಟಾನ ಗಿಡದ ಹಿಂದೆ ಹುಲಿಯ ಹೆಜ್ಜೆ ಗುರುತುಗಳೂ, ಅದು ಕೌಚಿ ಕುಳಿತಿದ್ದರಿಂದ ಮುರಿದು ಬಾಗಿದ್ದ ಹಳುವೂ ಇನ್ನೂ ಹಾಗೇ ಇತ್ತು. ನಾನು ಹೋರಿ ನೋಡಿಕೊಂಡುಬರಲು ನಿರ್ಧರಿಸಿ ಅನಿರೀಕ್ಷಿತವಾಗಿ ಎಡಕ್ಕೆ ತಿರುಗದೆ ನೇರವಾಗಿ ನಡೆದು ನೂರುಗಜ ಮುಂದೆ ಬಂದಿದ್ದರೆ ನೇರವಾಗಿ ಹುಲಿ ಬಾಯಿಗೇ ಬೀಳುತ್ತಿದ್ದೆನೋ ಏನೋ!

ಎಷ್ಟೋ ಜನ ಒಳ ಮನಸ್ಸಿನ ಅನ್ನಿಸಿಕೆಗಳು, ಆರನೆಯ ಇಂದ್ರಿಯ, ಅತೀಂದ್ರಿಯ ವಿವೇಕ ಇತ್ಯಾದಿಗಳೆಲ್ಲಾ ಸುಳ್ಳು ಎಂದೆನ್ನುತ್ತಾರೆ. ನನ್ನ ಶಿಕಾರಿಯ ಅನುಭವಗಳಲ್ಲಂತೂ ಈ ರೀತಿ ಪ್ರಜ್ಞಾತೀತ ಅನ್ನಿಸಿಕೆಗಳು ಎಷ್ಟೋಸಾರಿ ನನ್ನನ್ನು ಅನಾಹುತದ ಅಂಚಿನಿಂದ ಪಾರುಮಾಡಿರುವ ಉದಾಹರಣೆ ಕೊಡಬಲ್ಲೆ. ಆದರೆ ವಿವರಣೆ ಕೊಡಲಾರೆ.





ನರಭಕ್ಷಕ ಹುಲಿಗಳ ಜೊತೆ
ಸಾಹಸಗಳಲ್ಲಿ ದಂತಕತೆಗಳಾಗಿರು
ವವರು ಭಾರತದಲ್ಲಿ ಇಬ್ಬರು.
ಒಬ್ಬರು ಜಿಮ್ ಕಾರ್ಬೆಟ್
ಇನ್ನೊಬ್ಬರು ಕೆನತ್ ಆಂಡರ್ಸನ್.
ಅವರ ಕತೆ ಹೇಳುವ
ಕಲೆಗಾರಿಕೆಯಲ್ಲಿ ಆಂಡರ್ಸನ್ನರನ್ನು
ಯಾರೂ ಸರಿಗಟ್ಟಲಾರರು. ಅವರ
ಕಲೆಗಾರಿಕೆಯು ವಿನೋದ, ಹಾಸ್ಯ,
ರೋಮಾಂಚಕತೆಗಳಿಗೆ ಹೆಸರು
[illegible] ತೇಜಸ್ವಿಯವರು
ಈ ನಾಲ್ಕು ಕತೆಗಳನ್ನು
ಕನ್ನಡಿಸಿದ್ದಾರೆ. ಇವನ್ನು ಓದಿದರೆ
ಕನ್ನಡದ ಈ ಕತೆಗಳನ್ನು
ಆಂಡರ್ಸನ್ನರೇ ಇಂಗ್ಲಿಷಿಗೆ ತರ್ಜುಮೆ
ಮಾಡಿದರೇ ಎನ್ನುವ ಅನುಮಾನ
ಉಂಟಾಗುತ್ತದೆ.

— ಪ್ರಕಾಶಕ

